ಕೋವಿಡ್–19 ನಿಂದ ಸತ್ತವರ ಅಂತ್ಯಕ್ರಿಯೆಗೆ ಎದುರಾಗಿದೆ ಸವಾಲು ● ಸಿಬ್ಬಂದಿ ಪಾಲಿಗೆ ಸುರಕ್ಷತೆ, ಸವಲತ್ತುಗಳು ಮರೀಚಿಕೆ

ತಡರಾತ್ರಿವರೆಗೂ ಶವ ಸುಡುವ ಚಿತಾಗಾರ ಕಾರ್ಮಿಕರು

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯ ತಳ ಹಂತದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ನಗರದಲ್ಲಿ ಒಂದೇ ಸಮನೆ ಹೆಚ್ಚುತ್ತಿರುವ ಕೋವಿಡ್ ಪ್ರಕರಣಗಳಿಂದಾಗಿ ಹೈರಾಣಾಗಿದ್ದಾರೆ. ಇಲ್ಲಿ ಸಾಯುವವರನ್ನು ಉಳಿಸಿಕೊಳ್ಳುವುದು ಒಂದು ರೀತಿಯ ಸವಾಲಾದರೆ, ಸತ್ತವರ ಅಂತ್ಯಕ್ರಿಯೆಗೆ ಇನ್ನಷ್ಟು ಕಠಿಣ ಸಮಸ್ಯೆ ಎದುರಾಗಿದೆ.

ಕೋವಿಡ್‌ನಿಂದ ಸಾಯುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಬಿಬಿಎಂಪಿಯು ಕೋವಿಡ್‌ನಿಂದಾಗಿ ಸತ್ತವರ ಅಂತ್ಯಕ್ರಿಯೆ ನಡೆಸುವ ಚಿತಾಗಾರಗಳ ಸಂಖ್ಯೆಯನ್ನು 7ಕ್ಕೆ ಹೆಚ್ಚಿಸಿದೆ. ಈ ಹಿಂದೆ ಬಿಬಿಎಂಪಿ ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಮೇಡಿ ಅಗ್ರಹಾರ, ಪಣತೂರು, ಕೆಂಗೇರಿ ಹಾಗೂ ಕೂಡ್ಲು ಚಿತಾಗಾರಗಳಲ್ಲಿ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಸುಮನಹಳ್ಳಿ, ಪೀಣ್ಯ ಹಾಗೂ ಬನಶಂಕರಿಯ ವಿದ್ಯುತ್ ಚಿತಾಗಾರಗಳಲ್ಲೂ ಗುರುವಾರದಿಂದ ಅವಕಾಶ ಕಲ್ಪಿಸಲಾಗಿದೆ. ಇಷ್ಟಾಗಿಯೂ ಕೆಲವು ಚಿತಾಗಾರಗಳಲ್ಲಿ ನಿತ್ಯವೂ 20ಕ್ಕೂ ಅಧಿಕ ಶವಗಳ ಅಂತ್ಯಕ್ರಿಯೆ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆರು ದಿನಗಳಲ್ಲಿ ಕೋವಿಡ್‌ನಿಂದ ಸತ್ತ 380ಕ್ಕೂ ಅಧಿಕ ಮಂದಿಯ ಅಂತ್ಯಕ್ರಿಯೆ ನಡೆಸಲಾಗಿದೆ.

ಪ್ರತಿಯೊಂದು ವಿದ್ಯುತ್ ಚಿತಾಗಾರದಲ್ಲೂ ಶವ ಸುಡಲು ತಲಾ ಎರಡು ಯಂತ್ರಗಳಿರುತ್ತವೆ. ಒಂದು ಶವದ ಅಂತ್ಯಕ್ರಿಯೆಗೆ ಸರಾಸರಿ ಎರಡು ಗಂಟೆ ಬೇಕು. ಹಾಗಾಗಿ ಚಿತಾಗಾರದ ಕಾರ್ಮಿಕರು ಬೆಂಕಿಯ ಬೇಗೆ ನಡುವೆ ಹಗಲೂ ರಾತ್ರಿ ಕೆಲಸ ಮಾಡಬೇಕಾದ ಸ್ಥಿತಿ ಒದಗಿಬಂದಿದೆ ಎಂದು ಸುಮನಹಳ್ಳಿ ಚಿತಾಗಾರದ ಸಿಬ್ಬಂದಿ ಎನ್.ರವಿ 'ಪ್ರಜಾವಾಣಿ'ಗೆ ತಿಳಿಸಿದರು.

ನಗರದ ಬೊಮ್ಮನಹಳ್ಳಿ ವಲಯದ ಕೂಡ್ಲು ಚಿತಾಗಾರದ ಬಳಿ ಸಾಲುಗಟ್ಟಿ ನಿಂತಿರುವ ಕೋವಿಡ್ ಮೃತದೇಹ ಹೊತ್ತ ಆಂಬುಲೆನ್ಸ್‌ಗಳು

ಪ್ರತಿ ಚಿತಾಗಾರದಲ್ಲಿ ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಶವಗಳ ಅಂತ್ಯಕ್ರಿಯೆ ನಡೆಸುವಂತೆ ಬಿಬಿಎಂಪಿ ವಿಶೇಷ ಆಯುಕ್ತರು (ಆರೋಗ್ಯ) ರಾಜೇಂದ್ರ ಚೋಳನ್ ಗುರುವಾರ (ಇದೇ 15ರಂದು) ಆದೇಶ ಮಾಡಿದ್ದಾರೆ. ಶವ ಸಾಗಿಸುವ ವಾಹನದ ವೆಚ್ಚ ಹಾಗೂ ಅಂತ್ಯಕ್ರಿಯೆಗೆ ತಗಲುವ ವೆಚ್ಚಗಳಿಗೆ ಸಂಪೂರ್ಣ ವಿನಾಯಿತಿ ನೀಡಿದ್ದಾರೆ. ಮೃತರ ಸಂಬಂಧಿಕರಿಂದ ಯಾವುದೇ ಶುಲ್ಕ ಪಡೆಯಬಾರದು ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಿದ್ದಾರೆ.

ಜೀವವನ್ನೇ ಪಣಕ್ಕಿಟ್ಟು ಕೆಲಸ ಮಾಡುತ್ತಿರುವ ಚಿತಾಗಾರ ಸಿಬ್ಬಂದಿಯ ಸೇವೆಯನ್ನು ಬಿಬಿಎಂಪಿ ಕಾಯಂಗೊಳಿಸಬೇಕು. ಅವರ ಸುರಕ್ಷತೆಗೂ ಕ್ರಮ ಕೈಗೊಳ್ಳಬೇಕು

ಅ.ಸುರೇಶ, ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ

ಪ್ರಜಾವಾಣಿ ವಿಶೇಷ

'ಆದೇಶದ ಪ್ರಕಾರ ನಾವು ರಾತ್ರಿ ಎಂಟು ಗಂಟೆ ಬಳಿಕ ಯಾವುದೇ ಶವಗಳ ಅಂತ್ಯಕ್ರಿಯೆ ನಡೆಸಬೇಕಿಲ್ಲ. ಆದರೆ, ಇಲ್ಲಿಗೆ ಮೃತದೇಹವನ್ನು ತಂದವರನ್ನು ಮರಳಿ ಕಳುಹಿಸುವುದು ಸಾಧುವೇ. ಸುಮನಹಳ್ಳಿ ಚಿತಾಗಾರದಲ್ಲಿ ಶನಿವಾರ ರಾತ್ರಿ 8ಗಂಟೆವರೆಗೆ ಒಟ್ಟು 14 ಮೃತದೇಹಗಳ ಅಂತ್ಯಸಂಸ್ಕಾರ ನಡೆಸಿದ್ದೇವೆ. ಇನ್ನೂ ಆರು ಮೃತದೇಹಗಳ ಅಂತ್ಯ ಸಂಸ್ಕಾರ ನಡೆಸಬೇಕಿದೆ. ಇವೆಲ್ಲವನ್ನೂ ಮುಗಿಸುವಾಗ ರಾತ್ರಿ 1.30 ದಾಟುತ್ತದೆ. ನಾಳೆ ಬೆಳಿಗ್ಗೆ ಮತ್ತೆ ಕೆಲಸಕ್ಕೆ ಬರಬೇಕು' ಎಂದು ಅವರು ತಮ್ಮ ಸಂಕಷ್ಟ ತೋಡಿಕೊಂಡರು.

'ಮೇಡಿ ಅಗ್ರಹಾರದ ಚಿತಾಗಾರದಲ್ಲಿ ರಾತ್ರಿ 8ರವರೆಗೆ 9 ಶವಗಳ ಅಂತ್ಯಕ್ರಿಯೆ ಬಾಕಿ ಇತ್ತು. ಮತ್ತೆರಡು ಶವಗಳನ್ನು ತಂದಿದ್ದಾರೆ. ಇವುಗಳ ಅಂತ್ಯಕ್ರಿಯೆ ಮುಗಿಯುವಷ್ಟರಲ್ಲಿ ಬೆಳಿಗ್ಗೆ ಆಗುತ್ತದೆ. ಒಂದಷ್ಟು ಶವಗಳ ಅಂತ್ಯಕ್ರಿಯೆಯನ್ನು ಬೇರೆ ಕಡೆ ನಡೆಸುವಂತೆ ಕೋರಿದರೂ ಕೇಳುತ್ತಿಲ್ಲ' ಎಂದು ಕಾರ್ಮಿಕರೊಬ್ಬರು ಅಳಲು ತೋಡಿಕೊಂಡರು.

'ಪಿಪಿಇ ಕಿಟ್ ಇಲ್ಲ, ಯಾವ ಸುರಕ್ಷತೆಯೂ ಇಲ್ಲ'

ಕೋವಿಡ್ ಶವಗಳ ಅಂತ್ಯಕ್ರಿಯೆ ನಡೆಸುವ ಕಾರ್ಮಿಕರು ಪಿಪಿಇ ಕಿಟ್ ಧರಿಸಬೇಕು ಎಂದು ಸರ್ಕಾರ ನಿಯಮ ರೂಪಿಸಿದೆ. ಆದರೆ, ಚಿತಾಗಾರ ಸಿಬ್ಬಂದಿಗೆ ಪಿಪಿಇ ಕಿಟ್ ಪೂರೈಸುತ್ತಿಲ್ಲ.

'ಪಿಪಿಇ ಕಿಟ್ ಬೇಕಾದರೆ ನಾವೇ ಆರ್.ಆರ್.ನಗರದ ಕಚೇರಿಗೆ ಹೋಗಿ ತರಬೇಕಂತೆ. ಅಲ್ಲಿಗೆ ಹೋಗಿಬಂದರೆ ಇಲ್ಲಿ ಶವಗಳ ಸಾಲು ಇನ್ನಷ್ಟು ಉದ್ದ ಬೆಳೆಯುತ್ತದೆ. ಹಾಗಾಗಿ ಮಾಸ್ಕ್ ಮಾತ್ರ ಧರಿಸಿ ನಾವು ಶವ ಸಂಸ್ಕಾರ ಮಾಡಿದ್ದೇವೆ' ಎಂದು ಸುಮನಹಳ್ಳಿ ಚಿತಾಗಾರ ಸಿಬ್ಬಂದಿಯೊಬ್ಬರು ತಿಳಿಸಿದರು.

'ಪ್ರತಿ ಮೃತ ದೇಹದ ಜೊತೆಗೂ ಹತ್ತಿಪ್ಪತ್ತು ಬಂಧುಗಳಾದರೂ ಬರುತ್ತಾರೆ. ಅವರ ಬಳಕೆಗೆ ಇಲ್ಲಿ ಸ್ಯಾನಿಟೈಸರ್ ಒದಗಿಸಿಲ್ಲ. ಪ್ರತಿ ಶವದ ಅಂತ್ಯಕ್ರಿಯೆ ಬಳಿಕವೂ ಪರಿಸರ ಸ್ವಚ್ಛಗೊಳಿಸಬೇಕು. ಆ ಕಾರ್ಯವೂ ನಡೆಯುತ್ತಿಲ್ಲ' ಎಂದರು.

ಚಿತಾಗಾರ ಸಿಬ್ಬಂದಿ ಮನುಷ್ಯರಲ್ಲವೇ?

'ಚಿತಾಗಾರ ಸಿಬ್ಬಂದಿಗೆ ತಿಂಗಳಾನುಗಟ್ಟಲೆ ಸಂಬಳ ಪಾವತಿಸದ ಬಿಬಿಎಂಪಿ ಕಷ್ಟಕಾಲದಲ್ಲಿ ಅವರನ್ನು ರಾತ್ರಿ ಹಗಲೂ ದುಡಿಸಿಕೊಳ್ಳುತ್ತಿದೆ. ಅವರು ಮನುಷ್ಯರಲ್ಲವೇ' ಎಂದು ಪ್ರಶ್ನಿಸುತ್ತಾರೆ ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅ.ಸುರೇಶ.

'ತನ್ನ ವ್ಯಾಪ್ತಿಯ ಚಿತಾಗಾರಗಳಲ್ಲಿ ಹಾಗೂ ಸ್ಮಶಾನಗಳಲ್ಲಿ 360 ಸಿಬ್ಬಂದಿ ಕೆಲಸ ಮಾಡುತ್ತಿದ್ದು, ಅವರಲ್ಲಿ 148 ಮಂದಿಯನ್ನು ಮಾತ್ರ ಬಿಬಿಎಂಪಿ ಸ್ಮಶಾನ ಕಾರ್ಮಿಕರು ಎಂದು ಪರಿಗಣಿಸಿದೆ. ಇವರು ನಿರ್ವಹಿಸುವ ಕಾರ್ಯವನ್ನು ಬೇರೆಯವರು ನಿರ್ವಹಿಸುವುದಿಲ್ಲ. ಇವರಿಗೆ ಕೋವಿಡ್ ಲಸಿಕೆಯನ್ನೂ ನೀಡಿಲ್ಲ. ಆರೋಗ್ಯ ಸುರಕ್ಷತಾ ಸಾಧನಗಳನ್ನೂ ಒದಗಿಸಿಲ್ಲ. ಇವರ ಜೀವನಕ್ಕೂ ಯಾವುದೇ ಭದ್ರತೆಯನ್ನೂ ಕಲ್ಪಿಸಿಲ್ಲ. ಯಾವುದೇ ಸವಲತ್ತು ನೀಡದೇ ಕೋವಿಡ್‌ನಿಂದ ಸತ್ತವರ ಹೆಣ ಸುಡಲು ಇವರನ್ನು ಬಳಸಿಕೊಳ್ಳುವ ಮೂಲಕ ಇವರ ಜೀವವನ್ನು ಪಣಕ್ಕಿಡುವುದು ಸರಿಯಲ್ಲ' ಎಂದರು.

ಯೋಗಕ್ಷೇಮ ಕೇಳುವವರಿಲ್ಲ: 'ಹೆಬ್ಬಾಳದ ಸ್ಮಶಾನದಲ್ಲಿ ಕಾರ್ಯನಿರ್ವಹಿಸುವ ಕೃಷ್ಣಪ್ಪ ಅವರಿಗೆ ಕೋವಿಡ್ ಕಾಣಿಸಿಕೊಂಡಿದೆ. ಅವರು ಚಿಕಿತ್ಸೆಗೆ ಹಾಸಿಗೆ ಪಡೆಯಲು ಸಮಸ್ಯೆ ಎದುರಿಸಬೇಕಾಯಿತು. ಅಂತ್ಯಕ್ರಿಯೆ ನಡೆಸುವಾಗ ಸುರಿದಿದ್ದ ತುಪ್ಪವನ್ನು ಮೆಟ್ಟಿ ಮೇಡಿ ಅಗ್ರಹಾರ ಚಿತಾಗಾರದ ಕಾರ್ಮಿಕ ರುದ್ರ ಬಿದ್ದುಬಿಟ್ಟರು. ಅವರ ಮೂಳೆ ಮುರಿದು ಚಿಕಿತ್ಸೆಗೆ ₹ 2.75 ಲಕ್ಷ ವೆಚ್ಚವಾಗಿದೆ. ಅದನ್ನು ಭರಿಸಲು ಬಿಬಿಎಂಪಿ ಮೀನಮೇಷ ಎಣಿಸುತ್ತಿದೆ. ಇದು ವಾಸ್ತವದ ಸ್ಥಿತಿ' ಎಂದು ಅವರು ಬೊಟ್ಟುಮಾಡಿದರು.

ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆ ವಿವರ (ವಾರದಿಂದೀಚೆಗೆ)

ಚಿತಾಗಾರ :ಸುಮನಹಳ್ಳಿ ಸಿಬ್ಬಂದಿ: 5
ಕೋವಿಡ್:120, ಇತರೆ: 21

ದಿನಾಂಕ	ಕೋವಿಡ್ ಮೃತದೇಹ	ಇತರ ಮೃತದೇಹ	ದಿನದ ಕೊನೆಯ ಅಂತ್ಯಕ್ರಿಯೆ
ಏ.11	22	4	ರಾತ್ರಿ 12.30 ಗಂಟೆ
ಏ.12	23	5	ರಾತ್ರಿ 1.00 ಗಂಟೆ
ಏ.13	20	3	ರಾತ್ರಿ 12 ಗಂಟೆ
ಏ.14	08	5	ಸಂಜೆ 6 ಗಂಟೆ
ಏ15	22	02	ರಾತ್ರಿ 12 ಗಂಟೆ
ಏ16	25	2	ರಾತ್ರಿ 1.30 ಗಂಟೆ

ಚಿತಾಗಾರ :ಕೆಂಗೇರಿ ಸಿಬ್ಬಂದಿ: 5
ಕೋವಿಡ್:85, ಇತರೆ: 4

ದಿನಾಂಕ	ಕೋವಿಡ್ ಮೃತದೇಹ	ಇತರ ಮೃತದೇಹ	ದಿನದ ಕೊನೆಯ ಅಂತ್ಯಕ್ರಿಯೆ
ಏ.11	ದುರಸ್ತಿಯಲ್ಲಿತ್ತು		
ಏ.12	ದುರಸ್ತಿಯಲ್ಲಿತ್ತು		
ಏ.13	20	3	ರಾತ್ರಿ 1.30 ಗಂಟೆ
ಏ.14	20	01	ರಾತ್ರಿ 12 ಗಂಟೆ
ಏ15	23	00	ರಾತ್ರಿ 12 ಗಂಟೆ
ಏ16	22	1	ರಾತ್ರಿ 11.30 ಗಂಟೆ

ಚಿತಾಗಾರ :ಮೇಡಿ ಅಗ್ರಹಾರ ಸಿಬ್ಬಂದಿ: 6
ಕೋವಿಡ್:108, ಇತರೆ: 0

ದಿನಾಂಕ	ಕೋವಿಡ್ ಮೃತದೇಹ	ಇತರ ಮೃತದೇಹ	ದಿನದ ಕೊನೆಯ ಅಂತ್ಯಕ್ರಿಯೆ
ಏ.11	16	0	ರಾತ್ರಿ 8.00 ಗಂಟೆ
ಏ.12	13	0	ರಾತ್ರಿ 10.00 ಗಂಟೆ
ಏ.13	16	0	ರಾತ್ರಿ 11 ಗಂಟೆ
ಏ.14	24	0	ಸಂಜೆ 1 ಗಂಟೆ
ಏ15	19	0	ರಾತ್ರಿ 12 ಗಂಟೆ
ಏ16	20	0	ರಾತ್ರಿ 1.30 ಗಂಟೆ

ಚಿತಾಗಾರ :ಕೂಡ್ಲು (ಬೊಮ್ಮನಹಳ್ಳಿ) ಸಿಬ್ಬಂದಿ: 5
ಕೋವಿಡ್:58, ಇತರೆ: 21

ದಿನಾಂಕ	ಕೋವಿಡ್ ಮೃತದೇಹ	ಇತರ ಮೃತದೇಹ	ದಿನದ ಕೊನೆಯ ಅಂತ್ಯಕ್ರಿಯೆ
ಏ.11	9	1	ರಾತ್ರಿ 9.00 ಗಂಟೆ
ಏ.12	10	7	ರಾತ್ರಿ 10.00 ಗಂಟೆ
ಏ.13	6	2	ರಾತ್ರಿ 7 ಗಂಟೆ
ಏ.14	9	4	ರಾತ್ರಿ 7 ಗಂಟೆ
ಏ15	12	2	ರಾತ್ರಿ 7 ಗಂಟೆ
ಏ16	12	5	ರಾತ್ರಿ 9 ಗಂಟೆ

ಚಿತಾಗಾರ :ಪಣತ್ತೂರು ಸಿಬ್ಬಂದಿ: 6
ಕೋವಿಡ್:45, ಇತರೆ: 22

ದಿನಾಂಕ	ಕೋವಿಡ್ ಮೃತದೇಹ	ಇತರ ಮೃತದೇಹ	ದಿನದ ಕೊನೆಯ ಅಂತ್ಯಕ್ರಿಯೆ
ಏ.11	4	3	ರಾತ್ರಿ 8.00 ಗಂಟೆ
ಏ.12	10	4	ರಾತ್ರಿ 10.20 ಗಂಟೆ
ಏ.13	5	3	ರಾತ್ರಿ 7.30 ಗಂಟೆ
ಏ.14	4	5	ರಾತ್ರಿ 11 ಗಂಟೆ
ಏ15	11	3	ರಾತ್ರಿ 11 ಗಂಟೆ
ಏ16	11	4	ರಾತ್ರಿ 11 ಗಂಟೆ

- ಬನಶಂಕರಿ ಮತ್ತು ಪೀಣ್ಯ ಚಿತಾಗಾರಗಳಲ್ಲಿ ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆ ಶುಕ್ರವಾರದಿಂದ ಆರಂಭವಾಗಿದೆ
- ಬನಶಂಕರಿ ಚಿತಾಗಾರದಲ್ಲಿ ಶುಕ್ರವಾರ ಕೋವಿಡ್‌ನಿಂದ ಸತ್ತವರ 16 ಹಾಗೂ ಇತರ 7 ಮೃತದೇಹಗಳ ಅಂತ್ಯಕ್ರಿಯೆಯನ್ನು ರಾತ್ರಿ 10.30ರವರೆಗೆ ನಡೆಸಲಾಗಿದೆ.
- ಪೀಣ್ಯ ಚಿತಾಗಾರದಲ್ಲಿ ಶುಕ್ರವಾರ ಕೋವಿಡ್‌ನಿಂದ ಸತ್ತವರ 15 ಹಾಗೂ ಇತರ 8 ಮೃತದೇಹಗಳ ಅಂತ್ಯಕ್ರಿಯೆಯನ್ನು ರಾತ್ರಿ 2.30ರವರೆಗೆ ನಡೆಸಲಾಗಿದೆ.

ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯ ವೈದ್ಯರ ಕಿವಿಮಾತು

'ಆರೋಗ್ಯ ಕಾಳಜಿ ಜತೆಗೆ ಸುರಕ್ಷತೆಗಿರಲಿ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ಕಾಣಿಸಿಕೊಂಡ ಬಳಿಕ ಹಿರಿಯ ನಾಗರಿಕರು ಹೆಚ್ಚಿನ ಸಮಸ್ಯೆ ಎದುರಿಸಿದರು. ಈಗ ಎರಡನೇ ಅಲೆ ಪ್ರಾರಂಭವಾದ ಕಾರಣ ವೃದ್ಧರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಜತೆಗೆ ಸುರಕ್ಷತೆಗೆ ಆದ್ಯತೆ ನೀಡಬೇಕು. ಈ ನಿಟ್ಟಿನಲ್ಲಿ ಕೋವಿಡ್ ಪ್ರಕರಣಗಳು ಇಳಿಕೆ ಕಾಣುವವರೆಗೂ ಆದಷ್ಟು ಮನೆಯಲ್ಲಿಯೇ ಇರಬೇಕು' ಎಂದು ಮಣಿಪಾಲ್ ಆಸ್ಪತ್ರೆಯ ವೈದ್ಯರು ತಿಳಿಸಿದರು.

ವಿಶ್ವ ಆರೋಗ್ಯ ದಿನದ ಪ್ರಯುಕ್ತ ಮಲ್ಲೇಶ್ವರದ ಮಣಿಪಾಲ ಆಸ್ಪತ್ರೆಯು 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಸಹಯೋಗದಲ್ಲಿ ಆಯೋಜಿಸಿದ ವೆಬಿನಾರ್‌ನಲ್ಲಿ 'ಕೋವಿಡ್ ಸಂದರ್ಭದಲ್ಲಿ ಹಿರಿಯರ ಆರೈಕೆ' ಎಂಬ ವಿಷಯದ ಮೇಲೆ ತಜ್ಞರು ಚರ್ಚಿಸಿದರು.

'ಸದ್ಯದ ಪರಿಸ್ಥಿತಿಯಲ್ಲಿ ಹಿರಿಯ ನಾಗರಿಕರು ಮನೆಯಿಂದ ಹೊರಗಡೆ ಓಡಾಡುವುದನ್ನು ಕಡಿಮೆ ಮಾಡಬೇಕು. ಅನಿವಾರ್ಯವಿದ್ದಲ್ಲಿ ಮುಖಗವಸು ಧರಿಸುವುದು ಮತ್ತು ಅಂತರ ಕಾಯ್ದುಕೊಳ್ಳುವುದನ್ನು ಮರೆಯಬಾರದು. ಕೋವಿಡೇತರ ಕಾಯಿಲೆಗಳಿಗೆ ತೆಗೆದುಕೊಳ್ಳುತ್ತಿರುವ ಔಷಧ ಮುಂದುವರಿಸಬೇಕು. ಜ್ವರ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಯ ಲಕ್ಷಣಗಳು ಗೋಚರಿಸಿದ ತಕ್ಷಣ ವೈದ್ಯರನ್ನು ಸಂಪರ್ಕಿಸಿ, ಅಗತ್ಯ ಮಾರ್ಗದರ್ಶನ ಪಡೆದುಕೊಳ್ಳಬೇಕು. ಉತ್ತಮ ಪೌಷ್ಟಿಕ ಆಹಾರ ಸೇವಿಸುವ ಜತೆಗೆ ವ್ಯಾಯಾಮ, ಯೋಗ, ಧ್ಯಾನದಂತಹ ಚಟುವಟಿಕೆಗಳಲ್ಲಿ ನಿಯಮಿತವಾಗಿ ತೊಡಗಿಕೊಳ್ಳಬೇಕು' ಎಂದು ತಿಳಿಸಿದರು.

ಹಿರಿಯ ನಾಗರಿಕರಿಗೆ ತಜ್ಞರ ಸಲಹೆಗಳು

- ಕೋವಿಡ್ ಪ್ರಕರಣಗಳ ಸಂಖ್ಯೆ ಇಳಿಕೆ ಆಗುವವರೆಗೂ ಆದಷ್ಟು ಮನೆಯಲ್ಲಿಯೇ ಇರಿ.
- ಸಾರ್ವಜನಿಕ ಸ್ಥಳಗಳಿಗೆ ತೆರಳುವುದು ಅನಿವಾರ್ಯವಾದಲ್ಲಿ ಅಂತರ ಕಾಯ್ದುಕೊಳ್ಳಿ.
- ಒಬ್ಬಂಟಿಯಾಗಿ ವಾಸಿಸುತ್ತಿದ್ದಲ್ಲಿ ಅಗತ್ಯ ಸಾಮಗ್ರಿಗಳಿಗೆ ಆರೋಗ್ಯವಂತ ನೆರೆಹೊರೆಯವರ ನೆರವು ಪಡೆಯಿರಿ.
- ಔಷಧ ಸೇರಿದಂತೆ ವಿವಿಧ ಅಗತ್ಯ ವಸ್ತುಗಳು ಬೇಕಾದಲ್ಲಿ ಮನೆಯ ಕಿರಿಯ ಸದಸ್ಯರ ಸಹಾಯ ಪಡೆಯಿರಿ.
- ನಿತ್ಯ ಶಾರೀರಿಕವಾಗಿ ಸಕ್ರಿಯವಾಗಿರಿ.
- ಮನೆಯಲ್ಲಿಯೇ ತಯಾರಿಸಲಾದ ಆರೋಗ್ಯಕರ ಆಹಾರ ಸೇವಿಸಿ.
- ದಿನನಿತ್ಯದ ಮಾತ್ರೆಗಳನ್ನು ತಪ್ಪದೇ ಸೇವಿಸಿ.
- ನೆಗಡಿ, ಕೆಮ್ಮು, ಜ್ವರ ಕಾಣಿಸಿಕೊಂಡ ತಕ್ಷಣವೇ ಹತ್ತಿರದ ಆರೋಗ್ಯ ಕೇಂದ್ರವನ್ನು ಸಂಪರ್ಕಿಸಿ.
- ತುರ್ತಾಗಿ ಹೊರಗಡೆ ಹೋಗಬೇಕಾದರೆ ಮುಖಗವಸು ಧರಿಸಿ.
- ವೈದ್ಯರ ಸಲಹೆ ಇಲ್ಲದೆ ಹೊಸ ಔಷಧಿಗಳನ್ನು ಸೇವಿಸಬೇಡಿ.
- ಜನಸಂದಣಿ ಇರುವ ಮಾರುಕಟ್ಟೆ, ಧಾರ್ಮಿಕ ಸ್ಥಳಗಳಿಗೆ ಹೋಗಬೇಡಿ.

ಆಸ್ಪತ್ರೆಯ ಆಂತರಿಕ ಔಷಧ ಸಲಹೆಗಾರ ಡಾ. ದಿನೇಶ್ ವಿ. ಕಾಮತ್ ಮಾತನಾಡಿ, 'ಮಲ್ಲೇಶ್ವರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಿರಿಯ ನಾಗರಿಕರಿದ್ದಾರೆ. ಕಳೆದ ವರ್ಷ ಕೋವಿಡ್ ಚಿಕಿತ್ಸೆಯ ನಡುವೆಯೂ ಅವರ ಆರೈಕೆಗೆ ಆದ್ಯತೆ ನೀಡಲಾಯಿತು. ಈಗ ಮತ್ತೆ ಸೋಂಕು ವ್ಯಾಪಿಸಿಕೊಳ್ಳುತ್ತಿರುವುದರಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸಬೇಕಿದೆ. ಫಲಾನುಭವಿಗಳು ಲಸಿಕೆ ಪಡೆದುಕೊಳ್ಳಬೇಕು. ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ವಿವಿಧ ಸಮಸ್ಯೆಗಳು ಇದ್ದಲ್ಲಿ ವೈದ್ಯಕೀಯ ತಪಾಸಣೆ ಮಾಡಿಸಿಕೊಂಡು, ಸಮಸ್ಯೆ ನಿಯಂತ್ರಣಕ್ಕೆ ಬಂದ ಬಳಿಕ ಲಸಿಕೆ ಹಾಕಿಸಿಕೊಳ್ಳಬೇಕು' ಎಂದರು.



ಆಸ್ಪತ್ರೆಯ ಆಂತರಿಕ ಔಷಧ ಸಲಹೆಗಾರ ಡಾ. ಬಸವರಾಜ್ ಕುಂಟೋಜಿ, 'ಕೋವಿಡ್ ಬಗ್ಗೆ ಭಯಪಡುವ ಬದಲು ಅಗತ್ಯ ಮುನ್ನೆಚ್ಚರಿಕೆ ವಹಿಸಬೇಕು. ಮನೆಯ ಕಿರಿಯ ಸದಸ್ಯರು ವೃದ್ಧರಿಗೆ ನೆರವಾಗಬೇಕು. ಕೋವಿಡ್ ಕಾಣಿಸಿಕೊಂಡ ಬಳಿಕ ಹಿರಿಯ ನಾಗರಿಕರು ಹೆಚ್ಚಿನ ಸಮಸ್ಯೆ ಎದುರಿಸಿದ್ದಾರೆ. ಅವರಿಗೆ ಸಮಸ್ಯೆಯಾಗಬಾರದು ಎಂಬ ಕಾರಣಕ್ಕೆ ಮೊಬೈಲ್ ವ್ಯಾನ್ ಮೂಲಕ ಅವರು ಇದ್ದಲ್ಲಿಯೇ ತೆರಳಿ, ವೈದ್ಯಕೀಯ ಸೇವೆ ಒದಗಿಸಿದೆವು. ಜ್ವರ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳಿದ್ದಲ್ಲಿ ಕೋವಿಡ್ ಲಸಿಕೆ ಪಡೆಯುವಿಕೆಯನ್ನು ಮುಂದೂಡಬೇಕು' ಎಂದು ಹೇಳಿದರು.

ಜೀವನ ವಿಧಾನ ಬದಲಾಯಿಸಿಕೊಳ್ಳಿ: ಸ್ತ್ರೀ ರೋಗ ತಜ್ಞೆ ಡಾ. ಮೀನಾಕ್ಷಿ ಭರತ್, 'ಮನೆಯಲ್ಲಿನ ಹಿರಿಯ ಸದಸ್ಯರಿಗೆ ಒಬ್ಬಂಟಿ ಭಾವ ಮೂಡದಂತೆ ನೋಡಿಕೊಳ್ಳಬೇಕು. ಯಾವುದೇ ರೀತಿಯ ಸಮಸ್ಯೆಗಳು ಕಾಣಿಸಿಕೊಂಡಲ್ಲಿ ಸ್ವಯಂ ಆರೈಕೆಯ ಬದಲು ಕೂಡಲೇ ವೈದ್ಯರನ್ನು ಸಂಪರ್ಕಿಸಬೇಕು. ಸರಿಯಾಗಿ ಊಟ-ತಿಂಡಿ, ನಿದ್ದೆ ಮಾಡುವ ಜತೆಗೆ ಉತ್ತಮವಾದ ಜೀವನ ವಿಧಾನ ಅಳವಡಿಸಿಕೊಳ್ಳಬೇಕು. ಧಾರ್ಮಿಕ ಸ್ಥಳಗಳು, ದೇವಸ್ಥಾನಗಳಿಗೆ ತೆರಳಲು ಇದು ಸೂಕ್ತ ಸಮಯವಲ್ಲ. ಹಾಗಾಗಿ, ಮನೆಯಲ್ಲಿಯೇ ದೇವರನ್ನು ಪ್ರಾರ್ಥಿಸುವುದು ಉತ್ತಮ' ಎಂದರು.

'ಮಲ್ಲೇಶ್ವರದಲ್ಲಿನ ನಿವಾಸಿಗಳಲ್ಲಿ ಶೇ 50ರಷ್ಟು ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಮಕ್ಕಳು ವಿದೇಶದಲ್ಲಿ ಇರುವ ಕಾರಣ ಏಕಾಂಗಿಯಾಗಿ ಕೆಲವರು ಜೀವನ ಸಾಗಿಸುತ್ತಿದ್ದಾರೆ. ಹೀಗಾಗಿ, ಮನೆ ಆರೈಕೆ ಸೇವೆಗಳು ಅಗತ್ಯವಿದೆ. ವೃದ್ಧರು ಮಾನಸಿಕ ಒತ್ತಡ ನಿವಾರಿಸಿಕೊಳ್ಳಲು ಒಡನಾಡಿಗಳು ಹಾಗೂ ಆಪ್ತರ ಜತೆಗೆ ಚರ್ಚಿಸಬೇಕು. ಇಲ್ಲವಾದಲ್ಲಿ ವೈದ್ಯರ ಜತೆಗೆ ಸಮಾಲೋಚನೆ ನಡೆಸಬೇಕು' ಎಂದು ಮಲ್ಲೇಶ್ವರಮ್ ಸ್ವಾಭಿಮಾನ ಇನಿಷಿಯೇಟಿವ್ ಕಾರ್ಯದರ್ಶಿ ಸುಭಾಷಿಣಿ ಜಗನ್ನಾಥ ಹೇಳಿದರು.

'ಭಯ ಬೇಡ, ನಿಯಮ ಪಾಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೊರೊನಾ ಸೋಂಕು ಹರಡುತ್ತಿರುವ ಬಗ್ಗೆ ಯಾರೊಬ್ಬರೂ ಹೆದರುವುದು ಬೇಡ. ಸರ್ಕಾರ ರೂಪಿಸಿರುವ ನಿಯಮಗಳನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಿ. ಎಲ್ಲರೂ ಒಗ್ಗಟ್ಟಾಗಿ ಹೋರಾಡಿ ಪರಿಸ್ಥಿತಿ ಎದುರಿಸೋಣ' ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಹೇಳಿದರು.

ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ನೇರಪ್ರಸಾರದಲ್ಲಿ ಶನಿವಾರ ಮಾತನಾಡಿದ ಅವರು, 'ಕೊರೊನಾ ಸೋಂಕು ತಡೆಗಾಗಿ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಸಾರ್ವಜನಿಕರಲ್ಲಿ ಲಾಕ್‌ಡೌನ್ ಬಗ್ಗೆ ಆತಂಕವಿದೆ. ಆ ಬಗ್ಗೆ ಯಾರೂ ಚಿಂತಿಸಬೇಡಿ. ಸರ್ಕಾರ ಹಾಗೂ ತಜ್ಞರ ಸಮಿತಿ ಸಲಹೆಯಂತೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದರು.

ರಾತ್ರಿ ಕರ್ಫ್ಯೂ ಹಾಗೂ ಲಾಕ್‌ಡೌನ್ ಬಗ್ಗೆ ಸಾರ್ವಜನಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸಿದ ಕಮಲ್ ಪಂತ್, 'ನಿರ್ಲಕ್ಷ್ಯ ಬೇಡ. ಪ್ರತಿಯೊಬ್ಬರು ಮಾಸ್ಕ್ ಧರಿಸಿ ಅಂತರ ಕಾಯ್ದುಕೊಂಡು ಓಡಾಡಿ. ಲಸಿಕೆ ಪಡೆದುಕೊಳ್ಳಿ' ಎಂದರು.

ಸಹನೆಯಿಂದ ವರ್ತಿಸಲು ಸೂಚನೆ: 'ಪೊಲೀಸರು ಏಕವಚನದಲ್ಲೇ ಮಾತನಾಡುತ್ತಾರೆ. ಠಾಣೆಗೆ ಹೋದರೆ ಸಮರ್ಪಕವಾಗಿ ಸ್ಪಂದಿಸುವುದಿಲ್ಲ' ಎಂದು ಜನರು ದೂರಿದರು.

'ಸಾರ್ವಜನಿಕರ ಜತೆ ಸಹನೆಯಿಂದ ವರ್ತಿಸುವಂತೆ ಪೊಲೀಸರಿಗೆ ಸೂಚಿಸಲಾಗಿದೆ. ಪ್ರತಿ ಠಾಣೆಯಲ್ಲಿ ಸಹಾಯ ಘಟಕ ಸ್ಥಾಪಿಸಲಾಗಿದೆ. ಅಲ್ಲಿಯ ಸಿಬ್ಬಂದಿಯನ್ನು ಸಂಪರ್ಕಿಸಿ ಸಾರ್ವಜನಿಕರು ಸಮಸ್ಯೆ ಹೇಳಿಕೊಳ್ಳಬಹುದು. ಯಾರಾದರೂ ಅನುಚಿತವಾಗಿ ವರ್ತಿಸಿದರೆ ನನಗೆ ದೂರು ನೀಡಬಹುದು' ಎಂದರು.

ಕಾನ್‌ಸ್ಟೆಬಲ್ ಸಹೋದರ ಕರೆ: ಕಾನ್‌ಸ್ಟೆಬಲ್ ವರ್ಗಾವಣೆ ಕೋರಿ ಕರೆ ಮಾಡಿದ ಸಹೋದರ, 'ನಗರ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಹೋದರ ಕೆಲಸ ಮಾಡುತ್ತಿದ್ದಾರೆ. ಮನೆಯಿಂದ 50 ಕಿ.ಮೀ ದೂರದಲ್ಲಿ ಠಾಣೆ ಇದ್ದು, ನಿತ್ಯವೂ ಹೋಗಿ ಬರುತ್ತಾರೆ. ಸಮೀಪದ ಠಾಣೆಗೆ ಅವರನ್ನು ವರ್ಗಾವಣೆ ಮಾಡಿಸಿ' ಎಂದರು.

ಕಮಲ್ ಪಂತ್, 'ಕೇಂದ್ರ ಕಚೇರಿಯಲ್ಲಿ ಕೆಲಸ ಮಾಡುವವರು ಸಮೀಪದಲ್ಲೇ ವಾಸವಾಗಿಬೇಕು. ಅವರು ಏಕೆ 50 ಕಿ.ಮೀ ದೂರದಿಂದ ಬರುತ್ತಾರೆ ಎಂಬುದು ಗೊತ್ತಿಲ್ಲ. ನನ್ನನ್ನು ಭೇಟಿಯಾಗಲು ಹೇಳಿ' ಎಂದರು.

'ಟೋಯಿಂಗ್ ವಾಹನ ಸಿಬ್ಬಂದಿಗೆ ಎಚ್ಚರಿಕೆ'

'ಟೋಯಿಂಗ್ ಸಿಬ್ಬಂದಿ ಅನುಚಿತವಾಗಿ ವರ್ತಿಸುತ್ತಾರೆ' ಎಂದು ಜನ ದೂರಿದರು. ಕಮಲ್ ಪಂತ್, 'ಟೋಯಿಂಗ್ ವಾಹನದ ಕೆಲ ಸಿಬ್ಬಂದಿ ನಿಯಮ ಪಾಲಿಸುತ್ತಿಲ್ಲವೆಂಬ ಬಗ್ಗೆ ದೂರುಗಳು ಬರುತ್ತಿವೆ. ಇದನ್ನು ಗಂಭೀರವಾಗಿ ಪರಿಣಿಸಲಾಗಿದೆ. ಸಾರ್ವಜನಿಕರು ತಮ್ಮ ದೂರುಗಳು ಇದ್ದರೆ ಸಂಬಂಧಪಟ್ಟ ಸಂಚಾರ ಠಾಣೆ ಇನ್‌ಸ್ಪೆಕ್ಟರ್‌ಗೆ ನೀಡಬೇಕು' ಎಂದರು.

ಚಿತ್ರಾವಳಿ

ನಗರದ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ವೈದ್ಯಕೀಯ ಸಿಬ್ಬಂದಿ ಬಾಲಕನೊಬ್ಬನಿಗೆ ಉಚಿತವಾಗಿ ಕೋವಿಡ್ ಪರೀಕ್ಷೆಯನ್ನು ಶನಿವಾರ ನಡೆಸಿದರು –ಪ್ರಜಾವಾಣಿ ಚಿತ್ರ

ಆರೋಗ್ಯ ಕಾರ್ಯಕರ್ತರು ಕೋವಿಡ್ ರೋಗಿಯೊಬ್ಬರ ಮೃತದೇಹವನ್ನು ವಾರ್ಡ್‌ನಿಂದ ಶವಾಗಾರಕ್ಕೆ ಸಾಗಿಸುತ್ತಿದ್ದ ದೃಶ್ಯ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿ ಶನಿವಾರ ಕಂಡು ಬಂತು –ಪ್ರಜಾವಾಣಿ ಚಿತ್ರ

ಕೊರೊನಾ: ಪಾಲಿಕೆ ಮಾಜಿ ಸದಸ್ಯೆ ಪತಿ ಸಾವು

ಬೆಂಗಳೂರು: ಪಾಲಿಕೆಯ ವಿ.ವಿ.ಪುರ ವಾರ್ಡ್‌ನ ನಿಕಟಪೂರ್ವ ಸದಸ್ಯೆ ವಾಣಿ.ವಿ.ರಾವ್ ಅವರ ಪತಿ ಕುಮಾರ್ ಪಿ.ಕೆ.(54) ಅವರು ಕೋವಿಡ್‌ನಿಂದ ಶನಿವಾರ ಮುಂಜಾನೆ ಕೊನೆಯುಸಿರೆಳೆದರು.

'ಉಸಿರಾಟದ ತೊಂದರೆ ಕಾಣಿಸಿಕೊಂಡಿದ್ದರಿಂದ ಅವರನ್ನು ಮೂರು ದಿನಗಳ ಹಿಂದೆ ಮಾವಳ್ಳಿಯ ಸೌತ್‌ಸಿಟಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಬಳಿಕ ಚೇತರಿಸಿಕೊಂಡಿದ್ದರು. ರಕ್ತದಲ್ಲಿ ಆಮ್ಲಜನಕದ ಪ್ರಮಾಣವೂ ಶುಕ್ರವಾರ ರಾತ್ರಿ ವೇಳೆ ಶೇ 92ಕ್ಕೆ ಏರಿಕೆ ಕಂಡಿತ್ತು. ಆದರೆ, ಮಧ್ಯ ರಾತ್ರಿ ರಕ್ತದಲ್ಲಿ ಆಮ್ಲಜನಕರ ಪ್ರಮಾಣ ಏಕಾಏಕಿ ಕುಸಿತ ಕಂಡಿತ್ತು' ಎಂದು ಅವರ ಕುಟುಂಬಸ್ಥರೊಬ್ಬರು ಮಾಹಿತಿ ನೀಡಿದರು.

ಅಂತ್ಯಕ್ರಿಯೆಯನ್ನು ಬನಶಂಕರಿಯ ಚಿತಾಗಾರದಲ್ಲಿ ಶನಿವಾರ ನೆರವೇರಿಸಲಾಯಿತು.

ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

'ಕೋವಿಡ್ ಚಿಕಿತ್ಸೆ: 600 ಹಾಸಿಗೆ ಲಭ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಿತ್ಯ ಹೆಚ್ಚೂ ಕಡಿಮೆ 10 ಸಾವಿರ ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಗಂಭೀರ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಕೋವಿಡ್ ರೋಗಿಗಳ ಚಿಕಿತ್ಸೆಗೆ ನಗರದಲ್ಲಿ ಹಾಸಿಗೆಗಳ ತೀವ್ರ ಕೊರತೆ ಎದುರಾಗಿದೆ. ಈ ಸಮಸ್ಯೆ ನೀಗಿಸಲು ಬಿಬಿಎಂಪಿ ಹರಸಾಹಸ ಪಡುತ್ತಿದೆ.

ಗೌರವ್ ಗುಪ್ತಾ

'ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ನೋಂದಾಯಿಸಿರುವ ಖಾಸಗಿ ಆಸ್ಪತ್ರೆಗಳು ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿರುವ ಹಾಸಿಗೆಗಳು ಸೇರಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಒಟ್ಟು 4,300 ಹಾಸಿಗೆಗಳನ್ನು ವ್ಯವಸ್ಥೆ ಮಾಡಲಾಗಿದೆ. ಈಗಲೂ 600 ಹಾಸಿಗೆಗಳು ಕೋವಿಡ್ ರೋಗಿಗಳ ಚಿಕಿತ್ಸೆಗೆ ಲಭ್ಯ ಇವೆ. ಹಾಸಿಗೆಗಳ ಕೊರತೆ ಸದ್ಯಕ್ಕಂತೂ ಇಲ್ಲ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ಪಾಲಿಕೆ ಕೇಂದ್ರ ಕಚೇರಿಯ 'ಕೇಂದ್ರೀಕೃತ ವಾರ್ ರೂಂ' ಹಾಗೂ ಎಲ್ಲ ವಲಯಗಳಲ್ಲಿನ ವಿಕೇಂದ್ರಿಕೃತ ವಾರ್ ರೂಂಗಳ ಮೂಲಕ ಕೋವಿಡ್ ರೋಗಿಗಳ ಚಿಕಿತ್ಸೆಗೆ ಹಾಸಿಗೆ ಹಂಚಿಕೆ ಮಾಡಲಾಗುತ್ತಿದೆ. ಐಸಿಎಂಆರ್ ಪೋರ್ಟಲ್‌ನಲ್ಲಿ ಸೋಂಕಿತರ ಮಾಹಿತಿ ಲಭ್ಯವಾದ ಬಳಿಕ ಇಂಡೆಕ್ಸ್ ತಂತ್ರಾಂಶದ ಮೂಲಕ ಸೋಂಕಿತರ ಮಾಹಿತಿ ಪಡೆದು ಅವರಿಗೆ ಕರೆ ಮಾಡಿ ಪರಿಸ್ಥಿತಿ ತಿಳಿದುಕೊಂಡು ಅವಶ್ಯಕತೆಗೆ ತಕ್ಕಂತೆ ಹಾಸಿಗೆ ವ್ಯವಸ್ಥೆ ಮಾಡಲಾಗುತ್ತಿದೆ. ಕೋವಿಡ್ ಚಿಕಿತ್ಸೆಗೆ ಹಾಸಿಗೆ ಅಗತ್ಯ ಇರುವವರು ಸಹಾಯವಾಣಿ (1912) ಮೂಲಕ ಸಂಪರ್ಕ ಮಾಡಬಹುದು. ನೇರವಾಗಿ ಆಸ್ಪತ್ರೆಗೆ ಹೋಗುವುದರಿಂದ ಪ್ರಯೋಜನವಾಗುವುದಿಲ್ಲ. ಸರ್ಕಾರದ ವತಿಯಿಂದ ನಡೆಸುವ ಹಾಸಿಗೆ ಹಂಚಿಕೆ ವ್ಯವಸ್ಥೆಯನ್ನು ಬಳಸಿಕೊಳ್ಳಿ' ಎಂದು ಮುಖ್ಯ ಆಯುಕ್ತರು ತಿಳಿಸಿದರು.

'1912ಕ್ಕೆ ಕರೆ ಮಾಡಿದರೂ ಹಾಸಿಗೆ ಲಭಿಸುತ್ತಿಲ್ಲ. ಹಾಸಿಗೆ ವ್ಯವಸ್ಥೆ ಕಲ್ಪಿಸುವುದಾಗಿ ಬಿಬಿಎಂಪಿ ಸಿಬ್ಬಂದಿ ಭರವಸೆ ನೀಡುತ್ತಾರೆ, ಆದರೆ, ದಿನವಿಡೀ ಕಾದರೂ ಹಾಸಿಗೆ ಲಭಿಸುತ್ತಿಲ್ಲ' ಎಂದು ಕೋವಿಡ್ ರೋಗಿಗಳ ಬಂಧುಗಳು ದೂರುತ್ತಿದ್ದಾರೆ ಎಂದರು.

ತಾತ್ಕಾಲಿಕ ಆಸ್ಪತ್ರೆ ರಚನೆ: 'ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಾಮರ್ಥ್ಯ ಹೆಚ್ಚಿಸಲಾಗುತ್ತಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹಾಸಿಗೆ ಸಾಮರ್ಥ್ಯವನ್ನು 150 ಹಾಸಿಗೆಗಳಿಂದ 500ಕ್ಕೆ ಹೆಚ್ಚಳ ಮಾಡಲಾಗುತ್ತಿದೆ. ತಾತ್ಕಾಲಿಕ ಆಸ್ಪತ್ರೆಗಳನ್ನು ತೆರೆಯಲು ಕ್ರಮ ಕೈಗೊಳ್ಳಲಾಗುತ್ತಿದೆ. ದೊಡ್ಡ ಆಸ್ಪತ್ರೆಗಳ ಮೇಲುಸ್ತುವಾರಿಯಲ್ಲಿ ತಾತ್ಕಾಲಿಕ ಆಸ್ಪತ್ರೆಗಳಿಗೆ ಹಾಸಿಗೆಗಳ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಕಾಯಿಲೆಯ ಗಂಭೀರತೆ ಕಡಿಮೆ ಇರುವವರಿಗೆ ಇಂತಹ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುತ್ತದೆ' ಎಂದೂ ಅವರು ತಿಳಿಸಿದರು.

ಎಲ್ಲ ಆಸ್ಪತ್ರೆಗಳಲ್ಲಿ ಲಭ್ಯ ಇರುವ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಮೀಸಲಿಡುವಂತೆ ಸರ್ಕಾರ ಸೂಚನೆ ನೀಡಿ ಬಳಿಕವೂ ಕೆಲವು ಆಸ್ಪತ್ರೆಗಳು ಈ ಆದೇಶ ಪಾಲಿಸುತ್ತಿಲ್ಲ. ಇಂತಹ ಆಸ್ಪತ್ರೆಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಬಿಬಿಎಂಪಿ ಎಚ್ಚರಿಕೆ ನೀಡಿದೆ.

ರೋಗ ಲಕ್ಷಣ ಗಂಭೀರವಾಗಿಲ್ಲದವರು ಕೂಡಾ ಅಪಾಯ ತಂದೊಡ್ಡಿಕೊಳ್ಳುವುದು ಬೇಡ ಎಂಬ ಕಾರಣಕ್ಕೆ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಇದರಿಂದಾಗಿ ಯಾರಿಗೆ ತುರ್ತು ಅಗತ್ಯವಿದೆಯೋ ಅವರ ಚಿಕಿತ್ಸೆಗೆ ಹಾಸಿಗೆಗಳು ಲಭಿಸುತ್ತಿಲ್ಲ ಎಂಬ ದೂರುಗಳಿವೆ.

'ಕೋವಿಡ್ ಸೋಂಕು ದೃಢಪಟ್ಟವರೆಲ್ಲರೂ ಆಸ್ಪತ್ರೆಗೆ ದಾಖಲಾಗುವ ಅವಶ್ಯಕತೆಯಿಲ್ಲ. ರೋಗ ಲಕ್ಷಣಗಳಿಲ್ಲದ ಕೋವಿಡ್ ಸೋಂಕಿತರು ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗಿ ಆರೈಕೆ ಪಡೆಯಬಹುದು. ಕೋವಿಡ್ ಸೋಂಕಿತರಲ್ಲಿ ಶೇ 80 ರಷ್ಟು ಮಂದಿ ಮನೆಯಲ್ಲೇ ಆರೈಕೆಗೆ ಒಳಗಾಗುತ್ತಿದ್ದಾರೆ. ಮನೆಯಲ್ಲಿ ಪ್ರತ್ಯೇಕ ವಾಸಕ್ಕೆ ಒಳಗಾಗುವಂತಹ ಸೌಕರ್ಯ ಇಲ್ಲದವರು ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಉಳಿದುಕೊಳ್ಳಬಹುದು' ಎಂದು ಗೌರವ್ ಗುಪ್ತ ತಿಳಿಸಿದರು.

'ಖಾಸಗಿ ಆಸ್ಪತ್ರೆಗಳಲ್ಲಿ ಹಾಗೂ ಹೋಟೆಲ್‌ಗಳಲ್ಲಿಯೂ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸುತ್ತಿದ್ದೇವೆ. ನಗರದಲ್ಲಿ ಇನ್ನೂ 10 ಕಡೆ ಹೊಸ ಕೋವಿಡ್ ಆರೈಕೆ ಕೇಂದ್ರಗಳನ್ನು ತೆರೆಯಲು ಕ್ರಮವಹಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಚರಕ ಆಸ್ಪತ್ರೆಯಲ್ಲಿ 150 ಐಸಿಯು ಹಾಸಿಗೆ'

'ಐಸಿಯು ಹಾಗೂ ವೆಂಟಿಲೇಟರ್ ಸೌಲಭ್ಯದ ಇರುವ ಹಾಸಿಗೆಗಳೂ ಕೋವಿಡ್ ರೋಗಿಗಳ ಚಿಕಿತ್ಸೆಗೆ ಲಭ್ಯ ಇವೆ. ಶಿವಾಜಿನಗರದ ಚರಕ ಆಸ್ಪತ್ರೆಯಲ್ಲಿ ಐಸಿಯು ಮತ್ತು ವೆಂಟಿಲೇಟರ್ ಸೌಕರ್ಯ ಹೊಂದಿರುವ 150 ಹಾಸಿಗೆಗಳನ್ನು ಕೋವಿಡ್ ಚಿಕಿತ್ಸೆಗೆ ಶನಿವಾರದಿಂದ ಒದಗಿಸಲಾಗುತ್ತಿದೆ. ಹಾಸಿಗೆ ಹಂಚಿಕೆ ವ್ಯವಸ್ಥೆ ಮೂಲಕವೇ ಇವುಗಳ ಹಂಚಿಕೆ ಮಾಡಲಾಗುತ್ತದೆ' ಎಂದು ಗೌರವ್ ಗುಪ್ತ ಮಾಹಿತಿ ನೀಡಿದರು.

'60 ಹೊಸ ಆಂಬುಲೆನ್ಸ್'

ಕೋವಿಡ್ ರೋಗಿಗಳು ಆಸ್ಪತ್ರೆಗೆ ದಾಖಲಾಗುವುದಕ್ಕೆ ಸಮಸ್ಯೆ ಆಗಬಾರದು ಎಂಬ ಕಾರಣಕ್ಕೆ ನಗರದಲ್ಲಿ ಶುಕ್ರವಾರದಿಂದ 60 ಹೊಸ ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗಿದೆ. ಪ್ರತಿ ವಾರ್ಡ್‌ನಲ್ಲಿ ತಲಾ ಎರಡು ಆಂಬುಲೆನ್ಸ್ ಲಭ್ಯ ಇರಲಿವೆ ಎಂದು ಗೌರವ್ ಗುಪ್ತ ತಿಳಿಸಿದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,33,842 ಒಟ್ಟು ಸೋಂಕಿತರು

4,41,054 ಗುಣಮುಖರಾದವರು

87,724 ಸಕ್ರಿಯ ಪ್ರಕರಣ

5,063 ಸಾವು

ಶನಿವಾರದ ಏರಿಕೆ

11,404 ದೃಢಪಟ್ಟ ಪ್ರಕರಣ

3,253 ಗುಣಮುಖ

43 ಸಾವು

'ಲಾಕ್‌ಡೌನ್ ಪರಿಹಾರವಲ್ಲ'

ಹುಬ್ಬಳ್ಳಿ: 'ಕೋವಿಡ್ ನಿಯಂತ್ರಣಕ್ಕೆ ಲಾಕ್‌ಡೌನ್ ಪರಿಹಾರವಲ್ಲ. ಸಾರ್ವಜನಿಕರು ಸ್ವಯಂನಿಯಂತ್ರಣ ಹೇರಿಕೊಂಡು ಕೋವಿಡ್ ನಿಯಂತ್ರಿಸಬಹುದು' ಎಂದು ಸಚಿವ ಜಗದೀಶ ಶೆಟ್ಟರ್ ಅಭಿಪ್ರಾಯಪಟ್ಟರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದಲ್ಲಿ ಕೋವಿಡ್ ನಿಯಂತ್ರಣಕ್ಕೆ ರಾಜ್ಯಮಟ್ಟದಲ್ಲಿ ತಜ್ಞರ ಸಮಿತಿ ನಿಯಮಾವಳಿ ರೂಪಿಸುತ್ತದೆ. ಅದನ್ನು ಎಲ್ಲರೂ ಪಾಲಿಸಲೇಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಿ, ಅಂತರ ಕಾಯ್ದುಕೊಂಡರೆ ಲಾಕ್‌ಡೌನ್ ಅವಶ್ಯಕತೆ ಇಲ್ಲ' ಎಂದು ಹೇಳಿದರು.

ಮಲ್ಲೇಶ್ವರ ಕ್ಷೇತ್ರದ ಮುಖಂಡರ ಸಭೆ ನಡೆಸಿದ ಉಪ ಮುಖ್ಯಮಂತ್ರಿ ಅಶ್ವತ್ಥನಾರಾಯಣ

'ಕರಪತ್ರಗಳ ಮೂಲಕ ಅರಿವು ಮೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಲ್ಲೆಲ್ಲಿ ಕೋವಿಡ್ ಪರೀಕ್ಷಾ ಕೇಂದ್ರಗಳಿವೆ, ಯಾವ ಕೇಂದ್ರಗಳಲ್ಲಿ ಲಸಿಕೆ ಹಾಕುತ್ತಾರೆ ಎಂಬುದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಒದಗಿಸಬೇಕು. ಈ ಸಂಬಂಧ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಮನೆಗಳಿಗೂ ಕರಪತ್ರಗಳನ್ನು ಹಂಚಬೇಕು. ಜೊತೆಗೆ ವಾರ್ಡ್‌ವಾರು ವಾಟ್ಸ್‌ಆ್ಯಪ್ ಗುಂಪುಗಳನ್ನು ರಚಿಸಿ ಅದರ ಮೂಲಕವೂ ಮಾಹಿತಿ ವಿನಿಮಯ ಮಾಡಬೇಕು' ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಸೂಚಿಸಿದರು.

ಕೋವಿಡ್ ಎರಡನೇ ಅಲೆ ತೀವ್ರ ಸ್ವರೂಪ ಪಡೆದುಕೊಂಡಿರುವ ಕಾರಣ ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ಜನರಿಗೆ ನೆರವಾಗಲು ಶನಿವಾರ ಆಯೋಜಿಸಿದ್ದ ಸಭೆಯಲ್ಲಿ ಅವರು ಮಾತನಾಡಿದರು.

ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಚರ್ಚಿಸಿದರು

'ಸಾರ್ವಜನಿಕರಿಗೆ ಪಕ್ಷದಿಂದ ನೆರವಿನ ಹಸ್ತ ಚಾಚುವುದರ ಜೊತೆಗೆ ಜನರು ಮತ್ತು ಆಸ್ಪತ್ರೆಗಳ ನಡುವೆ ಸಂಪರ್ಕ ಸೇತುವೆಯಾಗಿ ಕೆಲಸ ಮಾಡಬೇಕು. ಪಕ್ಷದ ಕಾರ್ಯಕರ್ತರು ಮನೆಮನೆಗೂ ಭೇಟಿ ನೀಡಿ ಕೆಮ್ಮು, ನೆಗಡಿ ಇತ್ಯಾದಿ ಯಾವುದೇ ರೋಗ ಲಕ್ಷಣಗಳಿದ್ದವರನ್ನು ಪತ್ತೆ ಹಚ್ಚಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವಂತೆ ಅವರ ಮನವೊಲಿಸಬೇಕು. ಲಸಿಕೆಯ ಮಹತ್ವವನ್ನು ಎಲ್ಲರಿಗೂ ಮನವರಿಕೆ ಮಾಡಿಕೊಡಬೇಕು' ಎಂದರು.

'ಕ್ಷೇತ್ರದಲ್ಲಿರುವ ಹಿರಿಯ ನಾಗರಿಕರು, ಅಂಗವಿಕಲರು ಹಾಗೂ ಆರ್ಥಿಕವಾಗಿ ದುರ್ಬಲರಾಗಿರುವ ಜನರಿಗೆ ನೆರವಾಗಬೇಕು. ಅವರಿಗೆ ವೈದ್ಯಕೀಯ ಸೇವೆ ಹಾಗೂ ಔಷಧ ಸುಲಭವಾಗಿ ಸಿಗುವಂತೆ ನೋಡಿಕೊಳ್ಳಬೇಕು. ಕೋವಿಡ್‌ನಿಂದ ಯಾರೂ ಪ್ರಾಣ ಕಳೆದುಕೊಳ್ಳಬಾರದು. ಇದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಕೊರೊನಾ ಸೋಂಕು ತಗುಲಿದ ಕೂಡಲೇ ಚಿಕಿತ್ಸೆ ಪಡೆಯಬೇಕು. ಸಮಸ್ಯೆ ಹೆಚ್ಚಾದಾಗ ಅದನ್ನು ನಿಯಂತ್ರಿಸುವುದು ಕಷ್ಟ ಎಂಬುದನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕು' ಎಂದು ತಿಳಿಸಿದರು.

ಸಭೆಯಲ್ಲಿ ಪಕ್ಷದ ಉತ್ತರ ವಿಭಾಗದ ಉಪಾಧ್ಯಕ್ಷ ಡಾ.ವಾಸು, ಮಲ್ಲೇಶ್ವರ ಕ್ಷೇತ್ರದ ಮಂಡಲ ಅಧ್ಯಕ್ಷ ಕಾವೇರಿ ಕೇದಾರನಾಥ್ ಪಾಲ್ಗೊಂಡಿದ್ದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಸಾಹಿತ್ಯ ಸದಾಕಾಲ ಇನ್ನೊಬ್ಬನಿಗಾಗಿ ಮಿಡಿಯುವ ವಸ್ತು. ಮನುಕುಲದ ಇತಿಹಾಸದಲ್ಲಿ ಮಾನವೀಯ ಅಂತಃಕರಣದ ಹೊನಲೊಂದು ಹರಿಯುತ್ತಾ ಬಂದಿರುವ ಹಿಂದಿನ ಪ್ರೇರಣೆ ಕೂಡ ಸಾಹಿತ್ಯವೇ.

ಒಂದೇ ದಿನ 2,443 ಸಿಬ್ಬಂದಿ ಅಮಾನತು 4
ಕಲ್ಲು ಹೊಡೆದು ಚಾಲಕ ನಬಿ ರಸೂಲ್ ಕೊಲೆ ಪ್ರಕರಣ
‘ಲಸಿಕೆಯನ್ನು ಮುಕ್ತ ಮಾರುಕಟ್ಟೆಗೆ ಬಿಡಿ’ 5
ಪ್ರಮುಖ ಆರೋಪಿ ಅದೇ ಬಸ್‌ನಲ್ಲಿದ್ದ! 4

ಆರ್‌ಟಿಪಿಎಸ್‌ನಿಂದ ಸಂಕಷ್ಟ • ಕೃಷಿ ಕಷ್ಟ, ಬದುಕು ದುಸ್ತರ • ವಿಷವಾಗುತ್ತಿದೆ ಪ್ರಾಣವಾಯು

‘ಪರಿಸರ ಮಾಲಿನ್ಯ ಸ್ಥಾವರ’!

ಒಳನೋಟ

ಅಪಾಯಕಾರಿ ವಿದ್ಯುತ್ ಸ್ಥಾವರ

ಪ್ರತಿಕ್ರಿಯಿಸಿ: 9606038256

• ನಾಗರಾಜ ಚಿನಗುಂಡಿ

ರಾಯಚೂರು: ನಾಲ್ಕು ದಶಕಗಳನ್ನು ಪೂರೈಸಿರುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್) ಸುತ್ತಲಿನ ಜನರಿಗೆ ಮಾರಕವಾಗಿ ಪರಿಣಮಿಸಿದೆ. ಆರೋಗ್ಯದ ಮೇಲಷ್ಟೇ ಅಲ್ಲ, ಭೂಮಿ ಮತ್ತು ಬೆಳೆಯ ಮೇಲೂ ದುಷ್ಪರಿಣಾಮ ಬೀರುತ್ತಿದೆ.

ಆರ್‌ಟಿಪಿಎಸ್ ಹಾಗೂ ಯರಮರಸ್ ಶಾಖೋತ್ಪನ್ನ ವಿದ್ಯುತ್ ಸ್ಥಾವರಗಳ (ವೈಟಿಪಿಎಸ್) ಸುತ್ತಲಿನ ದೇವಸುಗೂರು, ಕಾಡ್ಲೂರು, ಗಂಜಳ್ಳಿ, ವಡ್ಲೂರು, ಯದ್ಲಾಪುರ, ಯರಮರಸ್, ಚಿಕ್ಕಸುಗೂರು ಗ್ರಾಮಗಳ ಜನರು ಹಾರುಬೂದಿಯ ಸೂಕ್ಷ್ಮಕಣ ಮಿಶ್ರಿತ ಗಾಳಿ ಸೇವಿಸುತ್ತಿದ್ದು ಅವರಲ್ಲಿ ಅಸ್ತಮಾ ತೀರಾ ಸಾಮಾನ್ಯವಾಗಿದೆ. ಶುದ್ಧಗಾಳಿ ಇಲ್ಲದೆ ಇತರೆ ಕಾಯಿಲೆಗಳಿಂದ ಬಳಲುವವರ ಸಂಖ್ಯೆಯೂ ಹೆಚ್ಚಿದೆ.

ಹಾರುಬೂದಿ ಬೆಳೆಯ ಮೇಲೆ ಬೀಳುವುದರಿಂದ ಹತ್ತಿ ಕಪ್ಪುವರ್ಣಕ್ಕೆ ತಿರುಗುತ್ತದೆ ಎನ್ನುವ ಕಾರಣಕ್ಕೆ ಬಹುಪಾಲು ರೈತರು ಹತ್ತಿ ಬೆಳೆಯುವುದನ್ನೇ ಬಿಟ್ಟಿದ್ದಾರೆ.

ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ವಿದ್ಯುತ್ ಸ್ಥಾವರಗಳಲ್ಲಿ ಕಲ್ಲಿದ್ದಲು ಉರಿಸಿದಾಗ ಹೊರಬರುವ ಹಾರುಬೂದಿ ಹಾಗೂ ಹೊಗೆಯಿಂದಾಗಿ ವಾಯು ಮತ್ತು ಜಲ ಮಾಲಿನ್ಯ ಆಗುತ್ತಿದೆ. 2018ರಲ್ಲಿ ಹಸಿಬೂದಿ ಹರಿದುಹೋಗಿ ನೇರವಾಗಿ ಕೃಷ್ಣಾ ನದಿ ಸೇರಿತ್ತು.

2005ರವರೆಗೂ ಗುಡ್ಡೆ ಹಾಕಿರುವ ಹಾರುಬೂದಿ ಹಾಗೂ ಹಸಿಬೂದಿ ವಿಲೇವಾರಿಯಾಗಿಲ್ಲ. ಶಕ್ತಿನಗರದ ಬಳಿ ಕೃಷ್ಣಾನದಿಗೆ ಹೊಂದಿಕೊಂಡು ನಿರ್ಮಾಣ ಮಾಡಿರುವ 192 ಹೆಕ್ಟೇರ್ ಮತ್ತು 215 ಹೆಕ್ಟೇರ್ ವ್ಯಾಪ್ತಿಯ ಎರಡು ಬೃಹತ್ ಹೊಂಡಗಳಲ್ಲಿ ಒಟ್ಟು 4.09 ಕೋಟಿ ಟನ್ (2020 ಡಿಸೆಂಬರ್‌ವರೆಗೆ) ಬೂದಿ ಸಂಗ್ರಹವಿದೆ.

ವಿಲೇವಾರಿ ಸಮರ್ಪಕವಾಗಿಲ್ಲ: ಹಾರುಬೂದಿ, ಹಸಿಬೂದಿ ವಿಲೇವಾರಿ ಮತ್ತು ಸಾಗಣೆಯು ಸಮರ್ಪಕವಾಗಿಲ್ಲ. ‘ತೆರೆದ ವಾಹನಗಳಲ್ಲಿ ಬೂದಿ ಸಾಗಿಸುವುದರಿಂದ ವಾಯು ಮಾಲಿನ್ಯ ಉಂಟಾಗುತ್ತಿದ್ದು ಕೂಡಲೇ ಕಂಪನಿಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಶಕ್ತಿನಗರ ಉಳಿಸಿ ಹೋರಾಟ ಸಮಿತಿ ಮೂಲಕ ಜನರು ರಾಯಚೂರು ಜಿಲ್ಲಾಡಳಿತಕ್ಕೆ ಮೇಲಿಂದ ಮೇಲೆ ಮನವಿ ಸಲ್ಲಿಸುತ್ತಾ ಬಂದಿದ್ದಾರೆ.

ಬೂದಿಹೊಂಡದ ಸಮೀಪವಿರುವ ಹಗರಿ–ಜಡಚರ್ಲಾ (ಸಂಖ್ಯೆ 167) ರಾಷ್ಟ್ರೀಯ ಹೆದ್ದಾರಿಯಲ್ಲಿ ಬೂದಿ ಹರಡಿದ್ದರಿಂದ ಅದು ಕಚ್ಚಾರಸ್ತೆಯಾಗಿ ಬದಲಾಗಿದೆ.

‘ಪ್ರತಿದಿನ ಸುಮಾರು ಎರಡು ಸಾವಿರ ಟನ್‌ಗೂ ಹೆಚ್ಚು ಹೊಂಡದ ಬೂದಿ ವಿಲೇವಾರಿ ಆಗುತ್ತಿದೆ. ಪ್ರತಿದಿನ ಸರಾಸರಿ ಎಂಟು ಸಾವಿರ ಟನ್ ವಿಲೇವಾರಿ ಆರಂಭಿಸಿದರೆ, ಅದು ಖಾಲಿಯಾಗುವುದಕ್ಕೆ ಆರು ವರ್ಷ ಬೇಕಾಗುತ್ತದೆ’ ಎನ್ನುತ್ತಾರೆ ಆರ್‌ಟಿಪಿಎಸ್ ಎಂಜಿನಿಯರುಗಳು.

ಮಾಲಿನ್ಯದ ಮೇಲೆ ನಿಗಾ ವಹಿಸಲು ರಾಯಚೂರಿನಲ್ಲಿ ಆನ್‌ಲೈನ್ ಎಮಿಷನ್ ಮಾನಿಟರಿಂಗ್ ಸಿಸ್ಟಂ (ವಾಯುಗುಣ ಪರೀಕ್ಷಣಾ ವ್ಯವಸ್ಥೆ) ಅಳವಡಿಸಲಾಗಿದೆ. ಮಾಲಿನ್ಯ ಪ್ರಮಾಣ ಹೆಚ್ಚಾದರೆ ಕೂಡಲೇ ನೋಟಿಸ್ ಜಾರಿಮಾಡಲಾಗುತ್ತದೆ. ಆರ್‌ಟಿಪಿಎಸ್ ಮುಖ್ಯದ್ವಾರದ ಎದುರು ಮತ್ತು ಜಿಲ್ಲಾಧಿಕಾರಿ ಕಚೇರಿ ಎದುರು ಪರದೆಗಳನ್ನು ಅಳವಡಿಸಿದ್ದು, ವಾಯುಗುಣ ಪ್ರಮಾಣ ಬಿತ್ತರವಾಗುತ್ತದೆ.

ಬೂದಿಯಿಂದ ಆದಾಯ: 2005ರ ನಂತರ ಸಿಮೆಂಟ್ ಮತ್ತು ಇಟ್ಟಿಗೆ ಕಂಪನಿಗಳಿಂದ ಹಾರುಬೂದಿಗೆ ಭಾರಿ ಬೇಡಿಕೆ ಬಂದಿದ್ದರಿಂದ, ಅದು ಆದಾಯದ ಮೂಲವಾಗಿ ಬದಲಾಗಿದೆ. 2020ರ ಲಾಕ್‌ಡೌನ್ ಅವಧಿಯಲ್ಲಿ ವಿದ್ಯುತ್ ಸ್ಥಾವರಗಳೆಲ್ಲವೂ ದೀರ್ಘಾವಧಿವರೆಗೆ ಸ್ಥಗಿತಗೊಂಡಿದ್ದರಿಂದ ಸಿಮೆಂಟ್ ಕಂಪನಿಗಳಿಗೆ ಹಾರುಬೂದಿ ಪೂರೈಕೆ ಆಗಲಿಲ್ಲ. ಸಿಮೆಂಟ್ ಕಂಪನಿಗಳು ಇದೀಗ ಹಸಿಬೂದಿ ಎತ್ತುವಳಿ ಆರಂಭಿಸಿವೆ. ಒಂದು ವರ್ಷದಲ್ಲಿ ಸಿಮೆಂಟ್ ಕಂಪನಿಗಳಿಗೆ ಒಟ್ಟು 2.15 ಲಕ್ಷ ಟನ್ ಹೊಂಡದ ಹಸಿಬೂದಿ ಪೂರೈಕೆಯಾಗಿದೆ.

ಎಸಿಸಿ, ರಾಜಶ್ರೀ ಸಿಮೆಂಟ್ ಹಾಗೂ ವಾಸವದತ್ತ ಸಿಮೆಂಟ್ ಕಾರ್ಖಾನೆಗಳು ಒಟ್ಟಾಗಿ ‘ಎಆರ್‌ವಿ ಸಿಮೆಂಟ್ ಸೊಸೈಟಿ’ ಹೊಸ ಸಂಸ್ಥೆ ಸ್ಥಾಪಿಸಿಕೊಂಡು ನಿಗದಿತ ದರದಲ್ಲಿ ಹಾರುಬೂದಿ ಖರೀದಿಸಲು ಒಪ್ಪಂದ ಮಾಡಿಕೊಂಡಿವೆ. ಆರ್‌ಟಿಪಿಎಸ್‌ನಿಂದ ಸಣ್ಣ ಕೈಗಾರಿಕೆಗಳಿಗೆ ಉಚಿತವಾಗಿ ಹಾರುಬೂದಿ ಹಂಚಿಕೆ ಮಾಡುವುದನ್ನು 2019ರ ನಂತರ ಸ್ಥಗಿತಗೊಳಿಸಲಾಗಿದೆ. ಸಮಸ್ಯೆಯಾಗಿದ್ದ ಹಾರುಬೂದಿ, ಹಸಿಬೂದಿ ಇದೀಗ ಆದಾಯದ ಮೂಲಗಳಾಗಿ ಬದಲಾಗಿವೆ. ಬೂದಿ ಮಾರಾಟದಿಂದ ಪ್ರತಿವರ್ಷ ₹ 60 ಕೋಟಿಗೂ ಅಧಿಕ ಆದಾಯ ಆರ್‌ಟಿಪಿಎಸ್‌ಗೆ ಬರುತ್ತಿದೆ.

ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರ

ರಾಯಚೂರಿನ ಶಕ್ತಿನಗರದ ಬಳಿ ಕೃಷ್ಣಾನದಿಗೆ ಹಸಿಬೂದಿ ಹರಿದುಹೋಗಿದ್ದ ನೋಟ (2018ರ ಸಂಗ್ರಹ ಚಿತ್ರ)

ದುಷ್ಪರಿಣಾಮದ ಅಧ್ಯಯನವಿಲ್ಲ

ಆರ್‌ಟಿಪಿಎಸ್, ವೈಟಿಪಿಎಸ್‌ನಿಂದಾಗಿ ಜನರ ಆರೋಗ್ಯ, ಪರಿಸರ ಹಾಗೂ ಜೀವಜಲದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವ ಬಗ್ಗೆ ಇದುವರೆಗೂ ವೈಜ್ಞಾನಿಕ ಅಧ್ಯಯನಗಳಾಗಿಲ್ಲ. ಶಕ್ತಿನಗರದಲ್ಲಿರುವ ಕೆಪಿಸಿಎಲ್ ಆಸ್ಪತ್ರೆಯ ವೈದ್ಯರು ಈ ಬಗ್ಗೆ ಮಾಹಿತಿ ನೀಡುವುದಕ್ಕೆ ನಿರಾಕರಿಸುತ್ತಾರೆ. ಜಿಲ್ಲಾ ಆರೋಗ್ಯಾಧಿಕಾರಿ ಕಚೇರಿಯಲ್ಲೂ ಈ ಬಗ್ಗೆ ವಿಶ್ಲೇಷಿಸುವ ಪರಿಣತರಿಲ್ಲ.

ಆರ್‌ಟಿಪಿಎಸ್ ಸುತ್ತಲಿನ ಪ್ರದೇಶದಲ್ಲಿದೂಳಿನ ಕಣಗಳಿಂದಾಗಿ ಕೆಲವೊಮ್ಮೆ ಹಗಲು ಹೊತ್ತಿನಲ್ಲಿಯೇ ರಾತ್ರಿಯಾದ ಅನುಭವ ಆಗುತ್ತಿದೆ. ಆರ್‌ಟಿಪಿಎಸ್ ಘಟಕಗಳ ಬಾಳಿಕೆ ಅವಧಿ ಮುಗಿದಿದ್ದರೂ ಅವುಗಳನ್ನು ಸ್ಥಗಿತಗೊಳಿಸಿಲ್ಲ

ಎಚ್.ಧರ್ಮರಾಜ
ಭಾರತ ದಲಿತ ಸಂಘರ್ಷ ಸಮಿತಿ, ಶಕ್ತಿನಗರ

ಮಣ್ಣಿನ ಫಲವತ್ತತೆ ಕಡಿಮೆಯಾಗಿದೆ. ಬೆಳೆ ಎತ್ತರವಾಗಿ ಬೆಳೆದರೂ ಇಳುವರಿ ಬರುವುದಿಲ್ಲ. ಕೆಲ ರೈತರು ಹತ್ತಿ ಬೆಳೆಯುವುದನ್ನೇ ಬಿಟ್ಟಿದ್ದಾರೆ

ಎನ್.ಬಿ.ಶರಣು, ಯದ್ಲಾಪುರ ರೈತ

ಇನ್ನಷ್ಟು ಸುದ್ದಿಗಳು 8

ಪಾಸ್ ಇದ್ದರಷ್ಟೇ ಪ್ರವೇಶ

ಮದುವೆ ಸಮಾರಂಭಕ್ಕೆ ಜಿಲ್ಲಾಧಿಕಾರಿ ಅನುಮತಿ ಕಡ್ಡಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಹರಡುವಿಕೆ ನಿಯಂತ್ರಿಸಲು ಮತ್ತಷ್ಟು ಬಿಗಿ ಕ್ರಮಕ್ಕೆ ಮುಂದಾಗಿರುವ ರಾಜ್ಯ ಸರ್ಕಾರ, ಮದುವೆ ಸಮಾರಂಭಕ್ಕೆ ಜಿಲ್ಲಾಧಿಕಾರಿಯ ಅನುಮತಿ ಕಡ್ಡಾಯಗೊಳಿಸಿದೆ. ಅಷ್ಟೇ ಅಲ್ಲ, ಅನುಮತಿ ನೀಡುವಾಗಲೇ ಒಳಾಂಗಣ ಕಾರ್ಯಕ್ರಮಕ್ಕೆ 100, ಹೊರಾಂಗಣಕ್ಕೆ 200 ಜನರಿಗೆ ಪಾಸ್ ನೀಡಲಾಗುವುದು.

ರಾಜ್ಯದಲ್ಲಿ ಕೋವಿಡ್ ಪರಿಸ್ಥಿತಿಯನ್ನು ಅವಲೋಕಿಸಲು ಗೃಹ ಸಚಿವ ಬಸವರಾಜ ಬೊಮ್ಮಾಯಿ ಮತ್ತು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಜೊತೆ ಎಲ್ಲ ಜಿಲ್ಲಾಧಿಕಾರಿಗಳೊಂದಿಗೆ ವಿಡಿಯೊ ಸಂವಾದ ನಡೆಸಿದ ಬಳಿಕ ಕಂದಾಯ ಸಚಿವ ಆರ್. ಅಶೋಕ, ಈ ವಿಷಯ ತಿಳಿಸಿದರು.

‘ಸೋಂಕು ಹರಡುವಿಕೆ ತಡೆಯಲು ಜನಸಂದಣಿ ಹೆಚ್ಚಿರುವ ಕಾರ್ಯಕ್ರಮಗಳಿಗೆ ಕಠಿಣ ನಿಯಮ ಜಾರಿಗೊಳಿಸಲು ನಿರ್ಧರಿಸಲಾಗಿದೆ. ಈಗಾಗಲೇ ಕಲ್ಯಾಣ ಮಂಟಪ ಬುಕ್ ಆಗಿರುವ ಮದುವೆಗಳಿಗೆ ಪಾಸ್ ನಿಯಮ ಅನ್ವಯಿಸುವುದಿಲ್ಲ. ರಾಜಕೀಯ, ಧಾರ್ಮಿಕ ಕಾರ್ಯಕ್ರಮಗಳಿಗೂ ಪಾಸ್ ಪಡೆಯಬೇಕು’ ಎಂದರು.

‘ನಿಯಮ ಉಲ್ಲಂಘಿಸಿದರೆ ಕಲ್ಯಾಣ ಮಂಟಪಗಳ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗುವುದು. ಅಲ್ಲದೆ, ಅವುಗಳನ್ನು ಮುಚ್ಚಿ, ಸೀಲ್ ಮಾಡಲಾಗುವುದು’ ಎಂದೂ ಎಚ್ಚರಿಕೆ ನೀಡಿದರು.

‘ಯಾವುದೇ ಕಾರಣಕ್ಕೂ ಕೊರೊನಾ ಸೋಂಕಿತರಿಗೆ ಆಸ್ಪತ್ರೆಗಳಲ್ಲಿ ಬೆಡ್, ಆಕ್ಸಿಜನ್ ಕೊರತೆ ಆಗಬಾರದು. ಕೋವಿಡ್ ನಿರ್ವಹಣೆಗೆ ಅಗತ್ಯ ಹಣ ಬಿಡುಗಡೆ ಮಾಡಲಾಗುವುದು. ಸೋಂಕಿನಿಂದ ಮೃತಪಟ್ಟವರ ಗೌರವಯುತ ಅಂತ್ಯಸಂಸ್ಕಾರಕ್ಕೆ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

‘ಬೆಂಗಳೂರು ನಗರದಲ್ಲಿ ಸೋಂಕು ಹರಡುವಿಕೆ ತಡೆಯಲು ಬಿಗಿ ಕ್ರಮ ಕೈಗೊಳ್ಳಲಾಗುವುದು. ಅದಕ್ಕೂ ಮೊದಲು ಬೆಂಗಳೂರು ವ್ಯಾಪ್ತಿಯ ಸಚಿವರು, ಶಾಸಕರು, ಸಂಸದರ ಜತೆ ಚರ್ಚಿಸಲಾಗುವುದು’ ಎಂದು ಬಸವರಾಜ ಬೊಮ್ಮಾಯಿ ತಿಳಿಸಿದರು.

‘ಏಳು ಜಿಲ್ಲೆಗಳ ನಗರಗಳು ಮತ್ತು ಮಣಿಪಾಲದಲ್ಲಿ ಈಗಾಗಲೇ ಇದೇ 20ರವರೆಗೆ ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಕೊರೊನಾ ಸೋಂಕಿತರಾಗಿ ಚಿಕಿತ್ಸೆ ಪಡೆಯುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಗುಣಮುಖರಾದ ಬಳಿಕ ಮತ್ತೆ ಸಭೆ ನಡೆಸಿ, ರಾಜ್ಯದಾದ್ಯಂತ ಮತ್ತಷ್ಟು ಬಿಗಿ ಕ್ರಮ ತೆಗೆದುಕೊಳ್ಳುವ ಬಗ್ಗೆ ನಿರ್ಧರಿಸಲಾಗುವುದು’ ಎಂದರು.

‘ಬೇರೆ ದೇಶಗಳಲ್ಲಿ ಕೋವಿಡ್ ಮೂರನೇ ಅಲೆ ಕಾಣಿಸಿಕೊಂಡಿದೆ. ನಾವು ಆ ಹಂತಕ್ಕೆ ಹೋಗಬಾರದೆಂದು ಸಮರೋಪಾದಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಎರಡನೇ ಅಲೆ ನಿಯಂತ್ರಿಸಲು ಯಾವುದೇ ಸಮಸ್ಯೆ ಆಗಬಾರದು. ಡೇಟಾ ಎಂಟ್ರಿ, ಸಿಬ್ಬಂದಿ ವೇತನ ಸಮಸ್ಯೆ ಆಗದಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದರು.

ಸುಧಾಕರ್ ಮಾತನಾಡಿ, ‘7,500 ಜಂಬೋ ಆಕ್ಸಿಜನ್ ಸಿಲಿಂಡರ್ ಪೂರೈಕೆಗೆ ಕೇಂದ್ರ ಸಚಿವರ ಜೊತೆಗೆ ಮಾತುಕತೆ ನಡೆಸಲಾಗಿದೆ’ ಎಂದರು.

ಇನ್ನಷ್ಟು ಸುದ್ದಿಗಳು 3, 5

ರಾಜ್ಯ ಕೋವಿಡ್ ಅಂಕಿ–ಅಂಶ

11,41,998	ಒಟ್ಟು ಸೋಂಕಿತರು (11,24,509 ನಿನ್ನೆಯ ವಿವರ)
1,19,160	ಸಕ್ರಿಯ ಪ್ರಕರಣಗಳು
10,09,549	ಗುಣಮುಖರಾದವರು
13,270	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	17,489
ಗುಣಮುಖ	5,565
ಸಾವು	80

589 ಐಸಿಯುನಲ್ಲಿ ಇರುವವರು

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಜಾತ್ರೆ ನಡೆದರೆ ಜಿಲ್ಲಾಧಿಕಾರಿ ಹೊಣೆ’

‘ಈಗಾಗಲೇ ಜಾತ್ರೆಗಳಿಗೆ ನಿರ್ಬಂಧ ಹೇರಲಾಗಿದೆ. ಜಾತ್ರೆಗಳು ನಡೆದರೆ ಆಯಾ ಜಿಲ್ಲಾಧಿಕಾರಿಗಳೇ ಹೊಣೆ’ ಎಂದು ಆರ್. ಅಶೋಕ ಎಚ್ಚರಿಕೆ ನೀಡಿದರು.

‘ಸೋಂಕು ಹೆಚ್ಚಳವಾಗುತ್ತಿರುವುದರಿಂದ ಯಾವುದೇ ಕಾರಣಕ್ಕೂ ಜಾತ್ರೆಗಳಿಗೆ ಅವಕಾಶವಿಲ್ಲ. ಯಾವುದೇ ಜಾತ್ರೆ ನಡೆಯುವುದಕ್ಕೆ ಮೊದಲು ಆ ಸ್ಥಳಗಳಿಗೆ ಒಂದು ತಿಂಗಳು ಮುಂಚಿತವಾಗಿ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿ ಅವಲೋಕಿಸಿ ಮುಂದಿನ ಕ್ರಮ ಕೈಗೊಳ್ಳುವುದು ಸೂಕ್ತ’ ಎಂದರು.

ದೇಶದಲ್ಲಿ 2.34 ಲಕ್ಷ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಶುಕ್ರವಾರ ಬೆಳಿಗ್ಗೆಯಿಂದ ಶನಿವಾರ ಬೆಳಿಗ್ಗೆ 8ರವರೆಗೆ ಕೋವಿಡ್‌ನ 2.34 ಲಕ್ಷ ಹೊಸ ಪ್ರಕರಣಗಳು ಪತ್ತೆಯಾಗಿವೆ. ಈವರೆಗೆ ದಿನವೊಂದರಲ್ಲಿ ಪತ್ತೆಯಾದ ಗರಿಷ್ಠ ಪ್ರಕರಣಗಳಾಗಿವೆ. ಇದೇ ಅವಧಿಯಲ್ಲಿ ಒಟ್ಟು 1,341 ಜನರು ಮೃತಪಟ್ಟಿದ್ದಾರೆ.

ಕಳೆದ 38 ದಿನಗಳಿಂದ ಪ್ರತಿದಿನ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ದೇಶದ ಒಟ್ಟು ಪ್ರಕರಣಗಳಲ್ಲಿ ಈಗ ಸಕ್ರಿಯ ಪ್ರಕರಣಗಳ ಸಂಖ್ಯೆ ಶೇ 11.56ಕ್ಕೆ ಏರಿಕೆಯಾಗಿದೆ. ಗುಣಮುಖರಾದವರ ಪ್ರಮಾಣವು ಶೇ 87.23ಕ್ಕೆ ಕುಸಿದಿದೆ. ಕೋವಿಡ್‌ನಿಂದ ಸತ್ತವರ ಪ್ರಮಾಣ ಶೇ 1.21ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಈಗ ಸಕ್ರಿಯ ಪ್ರಕರಣಗಳ ಸಂಖ್ಯೆ 16 ಲಕ್ಷ ದಾಟಿದೆ.

30 ಲಕ್ಷ ಸಾವು: ವಿಶ್ವದಾದ್ಯಂತ ಕೋವಿಡ್-19ಗೆ ಈವರೆಗೆ ಮೃತಪಟ್ಟವರ ಸಂಖ್ಯೆ ಶುಕ್ರವಾರ ರಾತ್ರಿ 30 ಲಕ್ಷ ದಾಟಿದೆ.

ಇಲಾಖಾ ಸಭೆ: ಕಡಿವಾಣಕ್ಕೆ ಸೂಚನೆ

‘ಕೋವಿಡ್ ಹೆಚ್ಚುತ್ತಿರುವುದರಿಂದ ಮುಂದಿನ ಒಂದೆರಡು ತಿಂಗಳ ಅವಧಿಗೆ ಸರ್ಕಾರದ ಇಲಾಖೆಗಳಲ್ಲಿ ಸಭೆಗಳಿಗೆ ಕಡಿವಾಣ ಹಾಕಬೇಕು’ ಎಂದು ಮುಖ್ಯ ಕಾರ್ಯದರ್ಶಿ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸೂಚಿಸಿದ್ದಾರೆ.

‘ಅನಿವಾರ್ಯವಾದರೆ ಮಾತ್ರ ಅಂತರ ಕಾಪಾಡಿಕೊಂಡು ಸಭೆಗಳನ್ನು ನಡೆಸಬೇಕು. ವಿಡಿಯೊ ಸಂವಾದದ ಮೂಲಕ ವರ್ಚುವಲ್ ಸಭೆಗಳನ್ನು ಆಯೋಜಿಸಲು ಕ್ರಮ ವಹಿಸಬೇಕು’ ಎಂದು ತಿಳಿಸಿದ್ದಾರೆ.

ಒಳ ಪುಟಗಳು

ವೇದಿಕೆಯಲ್ಲಿ ಸಚಿವ – ಶಾಸಕ ವಾಗ್ವಾದ 4
ಹಣದಾಸೆಗೆ ಜ್ಯೋತಿಷ ಶಾಸ್ತ್ರದ ದುರುಪಯೋಗ: ಸೋಮಣ್ಣ 4
ಕೋವಿಡ್: ಕುಂಭಮೇಳ ಅರ್ಧಕ್ಕೇ ಮೊಟಕು 6
ತಮಿಳು ನಟ ವಿವೇಕ್ ನಿಧನ 9
ಆರ್‌ಸಿಬಿಗೆ ‘ಹ್ಯಾಟ್ರಿಕ್’ ಕನಸು 14

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮಮತಾ ಕರೆ ಧ್ವನಿಮುದ್ರಣ ಬಿಡುಗಡೆ ಮಾಡಿದ ಬಿಜೆಪಿ

‘ಮೃತದೇಹದ ಮೆರವಣಿಗೆ ನಡೆಸಿ’

ಕೋಲ್ಕತ್ತ (ಪಿಟಿಐ): ‘ಸೀತಾಲಕುಚಿ ಗೋಲಿಬಾರ್‌ನಲ್ಲಿ ಮೃತಪಟ್ಟವರ ಶವಗಳ ಮೆರವಣಿಗೆ ಮಾಡಬೇಕು’ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಹೇಳುತ್ತಿರುವ ಆಡಿಯೊ ಕ್ಲಿಪ್ ಅನ್ನು ಬಿಜೆಪಿ ಶನಿವಾರ ಬಿಡುಗಡೆ ಮಾಡಿದೆ. ಇದನ್ನು ತನಿಖೆಗೆ ಒಳಪಡಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ವಿಧಾನಸಭೆಗೆ 5ನೇ ಹಂತದ ಮತದಾನದ ದಿನವೇ ಈ ಆಡಿಯೊ ಕ್ಲಿಪ್ ಅನ್ನು ಬಿಡುಗಡೆ ಮಾಡಲಾಗಿದೆ. ಸೀತಾಲಕುಚಿಯ ಟಿಎಂಸಿ ಅಭ್ಯರ್ಥಿ ಜತೆ ಅವರು ಈ ಮಾತುಗಳನ್ನು ಆಡಿದ್ದಾರೆ ಎನ್ನಲಾಗಿದೆ. ಆದರೆ, ‘ಆಡಿಯೊ ಕ್ಲಿಪ್ ನಕಲಿ. ಅದು ಮಮತಾ ಬ್ಯಾನರ್ಜಿ ಅವರ ದನಿಯಲ್ಲ’ ಎಂದು ಟಿಎಂಸಿ ಸ್ಪಷ್ಟನೆ ನೀಡಿದೆ. ಇನ್ನೊಂದೆಡೆ, ‘ನನ್ನ ಫೋನ್ ಅನ್ನು ಕದ್ದಾಲಿಸಲಾಗುತ್ತಿದೆ. ಇದನ್ನು ಸಿಐಡಿ ತನಿಖೆಗೆ ಒಪ್ಪಿಸುತ್ತೇನೆ’ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

‘ಬಿಜೆಪಿ ನಾಯಕರು ನಮ್ಮ ಅಡುಗೆ ಮನೆಯ ಮಾತುಕತೆಯನ್ನೂ ಕದ್ದಾಲಿಸುತ್ತಿದ್ದಾರೆ ಎನಿಸುತ್ತಿದೆ. ಈ ಬಗ್ಗೆ ಸಿಐಡಿ ತನಿಖೆಗೆ ಆದೇಶಿಸುತ್ತೇನೆ. ಇದರಲ್ಲಿ ಯಾರು ಭಾಗಿಯಾಗಿದ್ದಾರೆ ಎಂಬುದು ಗೊತ್ತಿದೆ, ಅವರನ್ನು ಸುಮ್ಮನೆ ಬಿಡುವುದಿಲ್ಲ’ ಎಂದು ಮಮತಾ ಹೇಳಿದ್ದಾರೆ.

ಬಿಜೆಪಿ ದೂರು: ‘ಶವಗಳ ಮೆರವಣಿಗೆ ನಡೆಸಲು ಸೂಚನೆ ನೀಡುವ ಮೂಲಕ ಮಮತಾ ಬ್ಯಾನರ್ಜಿ ಅವರು ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರಲು ಯತ್ನಿಸಿದ್ದಾರೆ. ಇದು ಇನ್ನೂ ಮೂರು ಹಂತದ ಮತದಾನದ ಮೇಲೆ ಪ್ರಭಾವ ಬೀರಬಹುದು. ಹೀಗಾಗಿ ಮಮತಾ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು’ ಎಂದು ಒತ್ತಾಯಿಸಿ ಬಿಜೆಪಿ ನಾಯಕ ಸ್ವಪನ್ ದಾಸ್‌ಗುಪ್ತಾ ಅವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ.

ಟಿಎಂಸಿ ದೂರು: ‘ಬಿಜೆಪಿಯು ಟಿಎಂಸಿ ನಾಯಕಿ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಫೋನ್ ಕರೆಯನ್ನು ಕದ್ದಾಲಿಸುತ್ತಿದೆ. ಜತೆಗೆ ಇದನ್ನು ಮತದಾನದ ದಿನ ಬಿಡುಗಡೆ ಮಾಡುವ ಮೂಲಕ, ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸುತ್ತಿದೆ. ಇದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆ. ಬಿಜೆಪಿ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು’ ಎಂದು ಟಿಎಂಸಿಯು ಚುನಾವಣಾ ಆಯೋಗಕ್ಕೆ ಪತ್ರ ಮುಖೇನ ಒತ್ತಾಯಿಸಿದೆ.

ಸೀತಾಲಕುಚಿಯ ಮೃತದೇಹಗಳನ್ನು ಬಳಸಿಕೊಂಡು ರಾಜಕೀಯ ಲಾಭ ಮಾಡಿಕೊಳ್ಳಲು ದೀದಿ ಯತ್ನಿಸಿದ್ದಾರೆ. ಇದು ಅವರ ಹವ್ಯಾಸ

ನರೇಂದ್ರ ಮೋದಿ, ಪ್ರಧಾನಿ

ಅಭಿವೃದ್ಧಿಯ ವಿಚಾರದಲ್ಲಿ ನಮ್ಮೊಂದಿಗೆ ಸೆಣಸಲಾಗದ ಬಿಜೆಪಿ, ಫೋನ್ ಕರೆ ಕದ್ದಾಲಿಕೆ ಮತ್ತು ತಿರುಚಿದ ಆಡಿಯೊ ಕ್ಲಿಪ್ ಬಿಡುಗಡೆಯಂತಹ ಕೀಳು ತಂತ್ರ ಅನುಸರಿಸುತ್ತಿದೆ

ಮಮತಾ ಬ್ಯಾನರ್ಜಿ
ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಮೃತದೇಹಗಳ ಮೆರವಣಿಗೆ ಮಾಡಿ ಎಂದು ಸೂಚನೆ ನೀಡುವ ಮೂಲಕ ಮಮತಾ ಅವರು ಗಲಭೆಗೆ ಪ್ರಚೋದನೆ ನೀಡುತ್ತಿದ್ದಾರೆ. ಇಷ್ಟು ಕೀಳುಮಟ್ಟಕ್ಕೆ ಇಳಿದಿದ್ದಾರೆ

ಅಮಿತ್ ಮಾಳವೀಯ
ಬಿಜೆಪಿ ಐಟಿ ಘಟಕದ ಮುಖ್ಯಸ್ಥ

ಇನ್ನಷ್ಟು ಸುದ್ದಿಗಳು 6

ಧಾರ್ಮಿಕ ಕಟ್ಟಡ: ಅಫಿಡವಿಟ್ ಕೇಳಿದ ಹೈಕೋರ್ಟ್

ಬೆಂಗಳೂರು: ಸಾರ್ವಜನಿಕ ಜಾಗದಲ್ಲಿ ದೇವಾಲಯ, ಮಸೀದಿ ಹಾಗೂ ಇತರ ಧಾರ್ಮಿಕ ಕಟ್ಟಡಗಳನ್ನು ಅನಧಿಕೃತವಾಗಿ ನಿರ್ಮಾಣ ಮಾಡದಂತೆ ತಡೆಯಲು ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆ ಆರು ವಾರಗಳಲ್ಲಿ ಅಫಿಡವಿಟ್ ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಧಾರ್ಮಿಕ ಕಟ್ಟಡಗಳ ತೆರವು ಸಂಬಂಧ ಸಲ್ಲಿಕೆಯಾಗಿರುವ ಹಲವು ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸುತ್ತಿದೆ.

‘ಅಕ್ರಮ ನಿರ್ಮಾಣಗಳ ಬಗ್ಗೆ ಹಲವು ದೂರುಗಳು ಬಂದಿದ್ದರೂ ರಾಜ್ಯ ಸರ್ಕಾರ ನಿಷ್ಕ್ರಿಯವಾಗಿದೆ. ದೂರು ಪರಿಶೀಲಿಸಲು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿ ರಚಿಸುವ ಅಗತ್ಯವಿದೆ’ ಎಂದು ಪೀಠ ಹೇಳಿತು.

ಸರ್ಕಾರಿ ಜಾಗದಲ್ಲಿರುವ ಧಾರ್ಮಿಕ ಕೇಂದ್ರಗಳನ್ನು ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಎಲ್ಲ ರಾಜ್ಯ ಸರ್ಕಾರಗಳಿಗೆ 2009ರಲ್ಲಿ ಆದೇಶ ನೀಡಿತ್ತು. ಈ ಆದೇಶ ಪಾಲನೆ ಸಂಬಂಧ ಸ್ವಯಂ ಪ್ರೇರಿತವಾಗಿ ಮೇಲುಸ್ತುವಾರಿ ವಹಿಸುವಂತೆ ಹೈಕೋರ್ಟ್‌ಗಳಿಗೆ 2018ರಲ್ಲಿ ನಿರ್ದೇಶನ ನೀಡಿತ್ತು.

ಆಸ್ಪತ್ರೆಗಳಲ್ಲಿ ಆಮ್ಲಜನಕ ಅಭಾವ ಸಂಕಷ್ಟದಲ್ಲಿ ಕೋವಿಡ್ ಪೀಡಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಖಾಸಗಿ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕದ (ಆಕ್ಸಿಜನ್) ಕೊರತೆ ಗಂಭೀರ ಸ್ವರೂಪ ಪಡೆದುಕೊಂಡಿದೆ. ದಿನವೊಂದಕ್ಕೆ ಅಗತ್ಯವಿರುವ ಆಮ್ಲಜನಕ ಪ್ರಮಾಣದಲ್ಲಿ ಶೇ 30ರಷ್ಟು ಮಾತ್ರ ಸದ್ಯ ಪೂರೈಕೆಯಾಗುತ್ತಿರುವ ಪರಿಣಾಮ ಆಸ್ಪತ್ರೆಗಳು ರೋಗಿಗಳನ್ನು ದಾಖಲಿಸಿಕೊಳ್ಳಲು ಹಿಂದೇಟು ಹಾಕಲಾರಂಭಿಸಿವೆ. ಇದರಿಂದಾಗಿ ಕೋವಿಡ್ ಪೀಡಿತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಾಣುತ್ತಿರುವ ಬೆನ್ನಲ್ಲಿಯೇ ಆಸ್ಪತ್ರೆಗಳಿಗೆ ದಾಖಲಾಗುವವರ ಸಂಖ್ಯೆ ಹೆಚ್ಚಳವಾಗಿದೆ. ಸದ್ಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 56 ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ 55 ಹಾಸಿಗೆಗಳು ಮಾತ್ರ ಖಾಲಿಯಿವೆ. ಇದರಿಂದಾಗಿ ಸೋಂಕಿತರನ್ನು ಕೆಲ ಸರ್ಕಾರಿ ಆಸ್ಪತ್ರೆಗಳು ಖಾಸಗಿ ಆಸ್ಪತ್ರೆಗಳಿಗೆ ಶಿಫಾರಸು ಮಾಡುತ್ತಿವೆ. ಈಗಾಗಲೇ ಶಿಫಾರಸು ಮಾಡಲಾದ ಸಾವಿರಕ್ಕೂ ಅಧಿಕ ಕೋವಿಡ್ ಪೀಡಿತರಿಗೆ ಖಾಸಗಿ ಆಸ್ಪತ್ರೆಗಳು ಚಿಕಿತ್ಸೆ ಒದಗಿಸುತ್ತಿವೆ.

ಪೀಣ್ಯದಲ್ಲಿರುವ ಯೂನಿವರ್ಸಲ್ ಏರ್ ಮರುಪೂರಣ ಕೇಂದ್ರದಲ್ಲಿ ಆಮ್ಲಜನಕ ಸಿಲಿಂಡರ್‌ಗಳನ್ನು ತುಂಬಿಸಲು ಆಸ್ಪತ್ರೆಗಳ ಸಿಬ್ಬಂದಿ ಕಾಯುತ್ತಿರುವುದು – ಪ್ರಜಾವಾಣಿ ಚಿತ್ರ

3ನೇ ಪುಟ ನೋಡಿ

ಮಸ್ಕಿ ಕ್ಷೇತ್ರದಲ್ಲಿ ಗರಿಷ್ಠ, ಬೆಳಗಾವಿಯಲ್ಲಿ ಕನಿಷ್ಠ ಮತದಾನ ಪ್ರಮಾಣ

ಉಪಚುನಾವಣೆ: ಶಾಂತಿಯುತ, ನೀರಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಭೀತಿ, ಬಿರುಬಿಸಿಲ ನಡುವೆ ಶನಿವಾರ ಬೆಳಗಾವಿ ಲೋಕಸಭೆ ಕ್ಷೇತ್ರ ಮತ್ತು ಬಸವಕಲ್ಯಾಣ, ಮಸ್ಕಿ ವಿಧಾನ ಸಭೆ ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದ್ದು, ಮತದಾನ ಶಾಂತಿಯುತವಾಗಿತ್ತು.

ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯ ಮಾಹಿತಿಗಳ ಪ್ರಕಾರ, ಮಸ್ಕಿ ವಿಧಾನಸಭೆ ಕ್ಷೇತ್ರದಲ್ಲಿ ಗರಿಷ್ಠ ಅಂದರೆ ಶೇ 70.48ರಷ್ಟು ಮತದಾನವಾಗಿದೆ. ಬೆಳಗಾವಿ ಲೋಕಸಭೆ ಕ್ಷೇತ್ರದಲ್ಲಿ ಕನಿಷ್ಠ ಶೇ 54.73 ಮತದಾನವಾಗಿದೆ. ಬಸವಕಲ್ಯಾಣ ಕ್ಷೇತ್ರದಲ್ಲಿ ಶೇ 61.49 ರಷ್ಟು ಮತದಾನವಾಗಿದೆ ಎಂದು ಹೇಳಿಕೆ ತಿಳಿಸಿದೆ.

ಬೆಳಗಾವಿ ಕ್ಷೇತ್ರದ ಹೆಚ್ಚಿನ ಮತಗಟ್ಟೆಗಳಲ್ಲಿ ಮತದಾನ ನೀರಸವಾಗಿತ್ತು. ಪ್ರತಿ ವರ್ಷ ನೆರೆ ಹಾವಳಿಗೆ ತುತ್ತಾಗುತ್ತಿರುವ ರಾಮದುರ್ಗ ತಾಲ್ಲೂಕಿನ ಚಿಕ್ಕತಡಸಿ ಮತ್ತು ಹಿರೇತಡಸಿ ಗ್ರಾಮಗಳ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳದ ಸರ್ಕಾರದ ಧೋರಣೆ ವಿರೋಧಿಸಿ ಉಭಯ ಗ್ರಾಮಗಳ ಮತದಾರರು ಚುನಾವಣೆ ಬಹಿಷ್ಕರಿಸಿದರು. ಅಧಿಕಾರಿಗಳು ನಡೆಸಿದ ಮನವೊಲಿಕೆ ಯತ್ನವು ವಿಫಲವಾಯಿತು.

ಉಳಿದಂತೆ ರಾಯಚೂರು ಜಿಲ್ಲೆಯ ಮಸ್ಕಿ ವಿಧಾನಸಭೆ ಕ್ಷೇತ್ರದಲ್ಲಿ ಉತ್ತಮ ಮತದಾನವಾದರೆ, ಬೀದರ್ ಜಿಲ್ಲೆಯ ಬಸವಕಲ್ಯಾಣ ಕ್ಷೇತ್ರದಲ್ಲಿ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಬಿಸಿಲು ಹೆಚ್ಚಿದ್ದ ಕಾರಣ ಈ ಎರಡೂ ಕ್ಷೇತ್ರಗಳಲ್ಲಿ ಸಂಜೆ 4ರ ನಂತರವೇ ಮತದಾರರು ಹೆಚ್ಚಿನ ಪ್ರಮಾಣದಲ್ಲಿ ಮತಗಟ್ಟೆಗೆ ಬಂದು ಹಕ್ಕು ಚಲಾಯಿಸಿದರು.

ಮಸ್ಕಿ ಕ್ಷೇತ್ರದಲ್ಲಿ ಬೆಳಿಗ್ಗೆ 6.30ಕ್ಕೆ ಅಣಕು ಮತದಾನದ ವೇಳೆ ಐದು ಕಡೆ ಮತಯಂತ್ರಗಳಲ್ಲಿ ದೋಷ ಕಂಡು ಬಂದಿತ್ತು. ತಕ್ಷಣ ಯಂತ್ರಗಳನ್ನು ಬದಲಾಯಿಸಲಾಯಿತು. ಯಾವುದೇ ಅಹಿತಕರ ಘಟನೆ ವರದಿಯಾಗಿಲ್ಲ.

ಬೆಳಗಾವಿ ಲೋಕಸಭಾ ಕ್ಷೇತ್ರದ ರಾಮದುರ್ಗ ತಾಲ್ಲೂಕಿನ ತೋರಣಗಟ್ಟಿ ಮತಗಟ್ಟೆಯಲ್ಲಿ ಮಹಿಳೆಯರು ಬಿರುಬಿಸಿಲು ಲೆಕ್ಕಿಸದೆ ಸರದಿಯಲ್ಲಿ ನಿಂತು ಶನಿವಾರ ಮತದಾನ ಮಾಡಿದರು –ಪ್ರಜಾವಾಣಿ ಚಿತ್ರ

ಇನ್ನಷ್ಟು ಸುದ್ದಿಗಳು 6

ಮಂಗಳ ಗ್ರಹಣದ ಕೌತುಕ

ಪ್ರಜಾವಾಣಿ ವಾರ್ತೆ

ಉಡುಪಿ: ಶನಿವಾರ ಸಂಜೆ 6.55ರ ಹೊತ್ತಿಗೆ ಆಕಾಶದಲ್ಲಿ ಮಂಗಳ ಗ್ರಹಣದ ಕೌತುಕ ಕಾಣಿಸಿತು. ಅಪರೂಪದ ಖಗೋಳ ವಿದ್ಯಮಾನವನ್ನು ಖಗೋಳಾಸಕ್ತರು ದೂರದರ್ಶಕಗಳಲ್ಲಿ ವೀಕ್ಷಿಸಿ ಕಣ್ತುಂಬಿಕೊಂಡರು.

ಸಂಜೆ 5.08ಕ್ಕೆ ಚಂದ್ರನಿಗೆ ಸಮೀಪದಲ್ಲಿ ಕಾಣಿಸಿಕೊಂಡ ಮಂಗಳ ಕೆಲವೇ ಕ್ಷಣಗಳಲ್ಲಿ ಮರೆಯಾಯಿತು. ಚಂದ್ರ ಆವರಿಸಿಕೊಂಡ ಪರಿಣಾಮ ಮಂಗಳ ಗ್ರಹ ಕೆಲಹೊತ್ತು ಕಾಣಲಿಲ್ಲ.

ಬಳಿಕ 6.55ರ ಹೊತ್ತಿಗೆ ಮತ್ತೆ ಮಂಗಳ ಗ್ರಹವು ಚಂದ್ರನ ಪ್ರಕಾಶಮಾನವಾದ ಭಾಗದ ಬಳಿ ಬೆಳ್ಳಿಯ ಚುಕ್ಕೆಯಂತೆ ಗೋಚರಿಸಿತು. ಈ ಮೂಲಕ ಚಂದ್ರನ ಅಚ್ಛಾದನೆಯು (ಮಂಗಳ ಗ್ರಹಣ) ಪೂರ್ಣಗೊಂಡಿತು.

ಹಿಂದೆ ಚಂದ್ರನ ಅಚ್ಛಾದನೆಯು ಆಫ್ರಿಕಾ ಹಾಗೂ ಅಮೆರಿಕಾದಲ್ಲಿ ಕಾಣಿಸಿಕೊಂಡಿತ್ತು ಎಂದು ಪೂರ್ಣ ಪ್ರಜ್ಞ ಹವ್ಯಾಸಿ ಖಗೋಳ ವೀಕ್ಷಕರ ಸಂಘದ ಅತುಲ್ ಭಟ್ ಮಾಹಿತಿ ನೀಡಿದರು.

ಗ್ರಹಣದ ಬಳಿಕ ಚಂದ್ರನ ಬಳಿ ಕಾಣಿಸಿಕೊಂಡ ಮಂಗಳ ಗ್ರಹ

ಧಾರಾವಾಹಿ ಫ್ಲೆಕ್ಸ್‌ಗೆ ಬೆಂಕಿ; ಇಬ್ಬರ ಬಂಧನ

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ತಾಲ್ಲೂಕಿನ ಬೆಳತೂರು ಗ್ರಾಮದಲ್ಲಿ, ಡಾ.ಬಿ.ಆರ್. ಅಂಬೇಡ್ಕರ್ ಜೀವನಾಧಾರಿತ ಧಾರಾವಾಹಿ 'ಮಹಾನಾಯಕ' ಫ್ಲೆಕ್ಸ್‌ಗೆ ಏ.13ರ ರಾತ್ರಿ ಬೆಂಕಿ ಹಚ್ಚಿದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಗ್ರಾಮದ ನವೀನ್ (30) ಹಾಗೂ ಗಿರೀಶ್ (35) ಬಂಧಿತರು. ಇವರಿಗೂ ಅಂಬೇಡ್ಕರ್ ಜಯಂತಿ ಆಚರಿಸುತ್ತಿದ್ದ ಗುಂಪಿಗೂ ಈ ಹಿಂದೆ ಗಲಾಟೆ ನಡೆದಿತ್ತು.

ಮದ್ಯ ಸೇವಿಸಿದ್ದ ಇವರು ಅಂದು ರಾತ್ರಿ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಫ್ಲೆಕ್ಸ್‌ಗೆ ಬೆಂಕಿ ಹಚ್ಚಿದ್ದರಿಂದ ಗ್ರಾಮದಲ್ಲಿ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು.

ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ವಿಸ್ತರಣಾ ಶಾಖೆ : ನಂ. 587, 2ನೇ 'ಎ' ಮುಖ್ಯ ರಸ್ತೆ, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ, ಪಾಪರೆಡ್ಡಿಪಾಳ್ಯ ಸರ್ಕಲ್ ಹತ್ತಿರ, ಬೆಂಗಳೂರು – 560 072.
ದೂರವಾಣಿ : 2318 2333 / 2321 2333 ಇ–ಮೇಲ್ : nehrungr@rediffmail.com

ಸ್ವಾಧೀನ ನೋಟೀಸ್ ನಿಯಮ 8(1) (ಸ್ಥಿರಾಸ್ತಿ)

ಶ್ರೀ.ಮುನಿಯಪ್ಪ. ಜಿ.

ಕೆಳ ಸಹಿದಾರರು ದಿ.ನೆಹರೂನಗರ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಸೇಶನ್ ಮತ್ತು ರಿಕನಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ನಿಯಮ (9) ಅನ್ನು ಓದಿಕೊಂಡಂತೆ ಪ್ರಕರಣ 13(2)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ತಗಾದೆ ಸೂಚನೆಯನ್ನು ದಿನಾಂಕಃ 17/12/2019 ರಂದು ಸಾಲಗಾರರಾದ ಶ್ರೀ.ಮುನಿಯಪ್ಪ ಜಿ. ಬಿನ್ ಲೇಟ್ ಗಂಗಪ್ಪ ರವರಿಗೆ ಮೊಬಲಗು ರೂ. 59,49,569.00 (ಐವತ್ತೊಂಬತ್ತು ಲಕ್ಷದ ನಲವತ್ತೊಂಬತ್ತು ಸಾವಿರದ ಐದುನೂರ ಅರವತ್ತೊಂಬತ್ತು ರೂಪಾಯಿಗಳು ಮಾತ್ರ) ದಿನಾಂಕಃ 22–11–2019 ರಂತೆ ಪಾವತಿಸುವಂತೆ ನೀಡಿದ್ದು (ಇನ್ನು ಮುಂದೆ ಸಾಲಗಾರರು ಎಂದು ಓದಿಕೊಳ್ಳುವುದು) ಇವರಿಗೆ ಸೂಚನೆಯಲ್ಲಿ ನೀಡಿರುವ ಮೊತ್ತ ಮತ್ತು ಇತರೆ ಖರ್ಚುಗಳನ್ನು ತಗಾದೆ ಸೂಚನೆ ತಲುಪಿದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸೂಚಿಸಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಮತ್ತು ಈ ಕೆಳಗೆ ತಿಳಿಸಲಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆ ಕಲಂ 13 ಸೆಕ್ಷನ್(4) ರೊಂದಿಗೆ ನಿಯಮ (8)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಲಾದ ಆಸ್ತಿಯನ್ನು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೂ ಕೂಡಾ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು ದಿ ನೆಹರೂನಗರ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಶೇಷಾದ್ರಿಪುರಂ ಶಾಖೆ ಇವರಿಗೆ ಬರತಕ್ಕ ಬಾಕಿ ಸಾಲದ ಮೊತ್ತ ದಿನಾಂಕಃ 17/04/2021 ಕ್ಕೆ ಇರುವಂತೆ ರೂ.52,42,973–00 (ಐವತ್ತೆರಡು ಲಕ್ಷದ ನಲವತ್ತೆರಡು ಸಾವಿರದ ಒಂಭೈನೂರ ಎಪ್ಪತ್ತಮೂರು ರೂಪಾಯಿಗಳು ಮಾತ್ರ) ಮತ್ತು ಈ ದಿನಾಂಕದ ನಂತರ ಮರು ಪಾವತಿಸಲಾದ ಮೊತ್ತ ಯಾವುದಾದರೂ ಇದ್ದಲ್ಲಿ ಅದನ್ನು ಕಳೆದು ಬಡ್ಡಿ ಮತ್ತು ಇತರೆ ಶುಲ್ಕಗಳ ಪಾವತಿಗೆ ಒಳಪಟ್ಟಿರುತ್ತದೆ.

ಸಾಲದ ಖಾತೆ ಸಂಖ್ಯೆ: ಐಪಿಎಲ್ 136 ಮತ್ತು 264, ಸಾಲಗಾರರ ವಿವರ : ಶ್ರೀ.ಮುನಿಯಪ್ಪ.ಜಿ. ಬಿನ್ ಲೇಟ್ ಗಂಗಪ್ಪ ನಂ.2316, ಬ್ಲಾಕ್–1, ಬನಶಂಕರಿ 2ನೇ ಹಂತ ಎಕ್ಸ್‌ಟೆನ್ಷನ್ ಬೆಂಗಳೂರು.

ಶ್ರೀ.ಮುನಿಯಪ್ಪ.ಜಿ. ಬಿನ್ ಲೇಟ್ ಗಂಗಪ್ಪ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಭದ್ರತೆಗಾಗಿ ಈ ಕೆಳಕಂಡ ಸ್ಥಿರಾಸ್ತಿಯನ್ನು ಅಡಮಾನ ಮಾಡಿರುತ್ತಾರೆ. ಸ್ಥಿರಾಸ್ತಿಯ ವಿವರಃ–ನಿವೇಶನ ಸಂಖ್ಯೆ: ನಂ.2316, ಬ್ಲಾಕ್–1, ಬನಶಂಕರಿ 2ನೇ ಹಂತ ಎಕ್ಸ್‌ಟೆನ್ಷನ್, ಬೆಂಗಳೂರು, ಪಿ.ಐ.ಡಿ. ನಂ.56–54–2316 ವಿಸ್ತೀರ್ಣ ಪೂರ್ವ–ಪಶ್ಚಿಮ 40 ಅಡಿಗಳು, ಉತ್ತರ ದಕ್ಷಿಣ 60–0 ಅಡಿಗಳು, ಚಕ್ಕುಬಂದಿ:– ಪೂರ್ವಕ್ಕೆ: ಸೈಟ್ ಸಂಖ್ಯೆ:2315, ಪಶ್ಚಿಮಕ್ಕೆ: ಸೈಟ್ ಸಂಖ್ಯೆ:2317, ಉತ್ತರಕ್ಕೆ: ಸೈಟ್ ಸಂಖ್ಯೆ:2323, ದಕ್ಷಿಣಕ್ಕೆ: ರಸ್ತೆ.

ದಿನಾಂಕ : 18–04–2021
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಂಗಳೂರು–560072

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ

ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ, ಸಾವಕನಹಳ್ಳಿ ಗೇಟ್, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ : 080–29787088 ಇಮೇಲ್ : dcfrural@gmail.com

ಸಂಖ್ಯೆ : ಎ8/ನಾಟಾ.ಹರಾಜು/ಸಿಆರ್–09/2020–21 ದಿನಾಂಕ : 26–03–2021

ಅರಣ್ಯ ಉತ್ಪನ್ನಗಳ ಇ-ಹರಾಜಿಗೆ ಸಂಬಂಧಪಟ್ಟ ಟೆಂಡರ್ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಗ್ರಾಮಾಂತರ ವಿಭಾಗದ ಕೆಳಕಂಡ ಸರ್ಕಾರಿ ಟೆಂಕಿ ನಾಟಾ ಸಂಗ್ರಹಾಲಯಗಳಲ್ಲಿ ದಾಸ್ತಾನು ಇರುವ ನಾಟಾ / ಸೌದೆ / ಬಿಲ್ಲೇಟ್ಸ್ / ಪೋಲ್ಸ್‌ಗಳನ್ನು ಅಕ್ಟೋಬರ್ – 2020 ನೇ ಮಾಹೆಯಲ್ಲಿ ಇ–ಹರಾಜು ಮೂಲಕ ವಿಲೇವಾರಿ ಮಾಡಲು ಕೆಳಕಂಡಂತೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಹರಾಜಿನಲ್ಲಿ ಈ ಕಛೇರಿಯ ಸವಿಸ್ತಾರ ಹರಾಜು ಪ್ರಕಟಣೆ ಸಂಖ್ಯೆ : ಎ8/ಟಿಂಬರ್ ಸೇಲ್/ಸಿಆರ್–09/2020–21 ದಿನಾಂಕ : 26–03–2021 ರಲ್ಲಿ ತಿಳಿಸಿರುವ ಷರತ್ತಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಇ–ಹರಾಜಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಇ–ಹರಾಜಿನ ಕುರಿತು ವಿವರಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ www.mstcecommerce.com, www.etimber.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಮಾರಾಟವಾಗುವ ವಸ್ತುಗಳ ವಿವರ

ಕ್ರ. ಸಂ.	ವಲಯ	ಟೆಂಕಿ ಡಿಪೋ ಹೆಸರು	ಮರದ ಜಾತಿ	ಅರಣ್ಯ ಉತ್ಪನ್ನದ ವಿವರ: ವಿಧ	ಲಾಟ್ ಸಂಖ್ಯೆ	ಪರಿಮಾಣ (ಘ.ಮೀ.)	ದಿನಾಂಕ ಹಾಗೂ ನಿಗಧಿಪಡಿಸಿದ ಸೆಷನ್‌ಗಳು
1.	ಹೊಸಕೋಟೆ	ಜಡಿಗೇನಹಳ್ಳಿ	ಅಕೇಶಿಯಾ	ಪಲ್ಪ್‌ವುಡ್	149	380.43	22–04–2021 (1ನೇ ಸೆಷನ್)
2.	ದೊಡ್ಡಬಳ್ಳಾಪುರ	ಆರೂಡಿ ಸ. ನಂ. 313	ಅಕೇಶಿಯಾ	ಪಲ್ಪ್‌ವುಡ್	4	35	22–04–2021 (2ನೇ ಸೆಷನ್)
			ಅಕೇಶಿಯಾ	ಸೌದೆ	3	30	
			ಅಕೇಶಿಯಾ	ಟಿಂಬರ್	5	13.778	
3.		ದೊಡ್ಡಬಳ್ಳಾಪುರ (ಹೊಸಹಳ್ಳಿ ಸರ್ವೆ ನಂ. 86 & 87)	ನೀಲಗಿರಿ	ಪಲ್ಪ್‌ವುಡ್	9	90	22–04–2021 (3ನೇ ಸೆಷನ್)
			ಅಕೇಶಿಯಾ	ಪಲ್ಪ್‌ವುಡ್	1	10	
4.	ನೆಲಮಂಗಲ	ಬೆಟ್ಟಹಳ್ಳಿ ಕಾಲೋನಿ	ಅಕೇಶಿಯಾ	ಟಿಂಬರ್	13	32.2	22–04–2021 (4ನೇ ಸೆಷನ್)
5.		ಸೂಲದೇವನಹಳ್ಳಿ	ನೀಲಗಿರಿ	ಟಿಂಬರ್	8	49.609	23–04–2021 (1ನೇ ಸೆಷನ್)
		ಒಟ್ಟು			192	641.017	

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

DIPR/DDO/B-Rural/Manipal/22/2021-22

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಲಯ ಆಯುಕ್ತರು, ದಾಸರಹಳ್ಳಿ ವಲಯ, ಎಂ.ಇ.ಐ. ಬಡಾವಣೆ, ಬಾಗಲಗುಂಟೆ, ಹೆಸರಘಟ್ಟ ಮುಖ್ಯ ರಸ್ತೆ, ಬೆಂಗಳೂರು–560 073.
ಆರೋಗ್ಯಾಧಿಕಾರಿರವರ ಕಛೇರಿ, ಬೆಂಗಳೂರು.

ಸಂಖ್ಯೆ:ಬೃಬೆಂಮಪಾ/ಆರೋಗ್ಯಾಧಿಕಾರಿ/ದಾವಿ/ಪಿಆರ್/117/2021-22 ದಿನಾಂಕ: 17-04-2021

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕರೋನಾ ವೈರಸ್‌ನ (ಕೋವಿಡ್-19) ನಿಯಂತ್ರಣಕ್ಕೆ ಅವಶ್ಯವಿರುವ ಹೆಚ್ಚುವರಿ ಮಾನವ ಸಂಪನ್ಮೂಲವನ್ನು ತಾತ್ಕಾಲಿಕವಾಗಿ 06 ತಿಂಗಳು ಅವಧಿಗೆ ಗುತ್ತಿಗೆ ಆಧಾರದ ಮೇಲೆ ವಾಕ್-ಇನ್-ಪ್ರಕ್ರಿಯೆ ಮೂಲಕ ಸೇವೆಯನ್ನು ಪಡೆಯಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಾಕ್-ಇನ್-ಪ್ರಕ್ರಿಯೆ

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ವೇತನ
1)	ಎಂ.ಬಿ.ಬಿ.ಎಸ್ ವೈದ್ಯರು	ಅಂಗೀಕೃತ ಭಾರತೀಯ ವೈದ್ಯಕೀಯ ಸಂಸ್ಥೆಯಿಂದ ಅನುಮೋದಿತ, ಎಂ.ಬಿ.ಬಿ.ಎಸ್ ಪದವಿ.	ರೂ.60,000/- (ಹೆಚ್ಚುವರಿ ರೂ.20,000/- ಕೋವಿಡ್ ಭತ್ಯೆ) ರೂ.80,000/-
2)	ದಂತ ವೈದ್ಯರು	ಅಂಗೀಕೃತ ಭಾರತೀಯ ದಂತ ವೈದ್ಯಕೀಯ ಸಂಸ್ಥೆಯಿಂದ ಅನುಮೋದಿತ ಬಿ.ಡಿ.ಎಸ್ ಪದವಿ.	ರೂ.45,000/- (ಹೆಚ್ಚುವರಿ ರೂ.15,000/- ಕೋವಿಡ್ ಭತ್ಯೆ) ರೂ.60,000/-
3)	ಆಯುಷ್ ವೈದ್ಯರು	ಅಂಗೀಕೃತ ಭಾರತೀಯ ಆಯುರ್ವೇದ / ಯುನಾನಿ / ಸಿದ್ಧ / ಹೋಮಿಯೋಪತಿ ಸಂಸ್ಥೆಯಿಂದ ಅನುಮೋದಿತ ಆಯುಷ್ ಪದವಿ.	ರೂ.45,000/- (ಹೆಚ್ಚುವರಿ ರೂ.15,000/- ಕೋವಿಡ್ ಭತ್ಯೆ) ರೂ.60,000/-
4)	ಸ್ಟಾಫ್ ನರ್ಸ್	ಅಂಗೀಕೃತ ಕರ್ನಾಟಕ ವಿಶ್ವವಿದ್ಯಾಲಯದಿಂದ ಜಿ.ಎನ್.ಎಂ. / ಡಿಪ್ಲೋಮ / ಬಿಎಸ್ಸಿ ನರ್ಸಿಂಗ್ ಕೋರ್ಸ್ ಹೊಂದಿರಬೇಕು ಹಾಗೂ ಕೆ.ಎನ್.ಸಿ ಅಡಿಯಲ್ಲಿ ನೊಂದಾಯಿಸಲ್ಪಟ್ಟಿರಬೇಕು.	ರೂ.20,000/- (ಹೆಚ್ಚುವರಿ ರೂ.10,000/- ಕೋವಿಡ್ ಭತ್ಯೆ) ರೂ.30,000/-
5)	ಲ್ಯಾಬ್–ಟೆಕ್ನಿಷಿಯನ್ / ಫಾರ್ಮಸಿಸ್ಟ್	ಅಂಗೀಕೃತ ಪ್ಯಾರಾ ಮೆಡಿಕಲ್ ಬೋರ್ಡ್‌ನಿಂದ ಡಿಪ್ಲೋಮ ಇನ್ ಲ್ಯಾಬ್-ಟೆಕ್ನಿಷಿಯನ್ / ಬಿ. ಫಾರ್ಮಾ, ಡಿ. ಫಾರ್ಮಾ ಕೋರ್ಸ್ ಹೊಂದಿರಬೇಕು ಹಾಗೂ ಪ್ಯಾರಾ ಮೆಡಿಕಲ್ ಅಡಿಯಲ್ಲಿ ನೊಂದಾಯಿಸಲ್ಪಟ್ಟಿರಬೇಕು.	ರೂ.15,000/- (ಹೆಚ್ಚುವರಿ ರೂ.5,000/- ಕೋವಿಡ್ ಭತ್ಯೆ) ರೂ.20,000/-
6)	ಸ್ವಾಬ್ ಕಲೆಕ್ಟರ್ / ಗಣಕಯಂತ್ರ ನಿರ್ವಾಹಕರು	ಸ್ವಾಬ್ ಕಲೆಕ್ಟರ್–ಪದವಿದಾರರಾಗಿರಬೇಕು ಗಣಕಯಂತ್ರ ನಿರ್ವಾಹಕರು – ಪಿ.ಯು.ಸಿ/ ಡಿಪ್ಲೋಮ / ಪದವಿ ಹೊಂದಿರಬೇಕು.	ಸ್ವಾಬ್ ಕಲೆಕ್ಟರ್ ರೂ.19,000/- ಗಣಕಯಂತ್ರ ನಿರ್ವಾಹಕರು ರೂ.18,000/-

ಅರ್ಹತೆ: 1) ವಯಸ್ಸು ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 50 ವರ್ಷಗಳನ್ನು ಮೀರಿರಬಾರದು.
2) ಕನ್ನಡ ಭಾಷೆ ಮಾತನಾಡಲು, ಓದಲು, ಬರೆಯಲು ಬರಬೇಕು.

ದಿನಾಂಕ: 19–04–2021 ರಿಂದ 21–04–2021. ಸ್ಥಳಃ ದಾಸರಹಳ್ಳಿ ಕೇಂದ್ರ ಕಛೇರಿ, ಬಾಗಲಗುಂಟೆ, ದಾಸರಹಳ್ಳಿ ವಲಯ, ಎಂ.ಇ.ಐ. ಬಡಾವಣೆ, ಹೆಸರುಘಟ್ಟ ಮುಖ್ಯರಸ್ತೆ, ಬೆಂಗಳೂರು–560 0073. ಸಮಯಃ ಬೆಳಗ್ಗೆ 11.00 ರಿಂದ ಸಂಜೆ 4.00. ಆಸಕ್ತರು ಸಂಬಂಧಿಸಿದ ದಾಖಲೆಗಳೊಂದಿಗೆ ಪಟ್ಟಿಯಲ್ಲಿ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್-ಇನ್-ಪ್ರಕ್ರಿಯೆಗೆ ಹಾಜರಾಗಲು ಸೂಚಿಸಲಾಗಿದೆ. ಅಭ್ಯರ್ಥಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸಲಾಗುವುದು. ಮೇಲ್ಕಂಡ ಹುದ್ದೆಗಳ ಸಂಖ್ಯೆಗಳನ್ನು ಹೆಚ್ಚಿಸುವ / ಕಡಿತಗೊಳಿಸುವ ಅಧಿಕಾರವನ್ನು ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ಹೊಂದಿರುತ್ತಾರೆ.

ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 99728 32686 ಹಾಗೂ ಇ-ಮೇಲ್ ಐಡಿ hodasarahalli@gmail.com ಅನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸೂಚನೆಃ ಸ್ವಾಬ್ ಕಲೆಕ್ಟರ್‌ಗಳನ್ನು ಸಂಚಾರಿ ತಂಡ / ಫೀವರ್ ಕ್ಲಿನಿಕ್ / ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸಲಾಗುವುದು.

ಸಹಿ/–
ವಲಯ ಆಯುಕ್ತರು, ದಾಸರಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕೋವಿಡ್–19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆಮ್ಮುವಾಗ, ಸೀನುವಾಗ ಕರವಸ್ತ್ರದಿಂದ ಮುಚ್ಚಿಕೊಳ್ಳಿ

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಕೋಲಾರ.

ಕೋಲಾರ ಡೇರಿ,ಎನ್.ಎಚ್–4, ಹುತ್ತೂರು ಅಂಚೆ, ಕೋಲಾರ–563102

IFT.No. : ಕೋ.ಚಿ.ಹಾ.ಒ: ಇಂಜಿ–ಸಿವಿಲ್:ಇ–ಟೆಂಡರ್:522&523:2021–22 ದಿನಾಂಕ:17.04.2021

** ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ **

ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ವು ಕೆಪಿಡಬ್ಲ್ಯೂಡಿ: ಸಿಪಿಡಬ್ಲ್ಯೂಡಿ: ಎಂ.ಇ.ಎಸ್ ಅಡಿಯಲ್ಲಿ ನೋಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಈ ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಸಿವಿಲ್ ಕೆಲಸಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖೇನ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಗುತ್ತಿಗೆದಾರರು ವೆಬ್ ಸೈಟ್ www.eproc.karnataka.gov.in ಮೂಲಕ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ ರೂ.	ಇ.ಎಂ.ಡಿ ರೂ.	ಮುಕ್ತಾಯದ ಅವಧಿ (ಮಳೆ ಕಾಲ ಸೇರಿ)	ಗುತ್ತಿಗೆದಾರರ ದರ್ಜೆ
1	Construction of Compound Wall to Bangarpete Camp Office Site in Sy no 197 of Karhalli Village at Bangarpete Taluk.	25.00Lakhs	50,000/-	02 Months	Class 4 and above
2	Providing Flooring and Other Civil Works at Sadali Chillig Centre.	17.00Lakhs	42,500/-	02Months	Class 4 and above

1. ಟೆಂಡರ್ ಷೆಡ್ಯೂಲ್‌ಗಳನ್ನು ದಿನಾಂಕ:18.04.2021 ರಿಂದ 26.04.2021 ರ ಸಂಜೆ 5.00 ಘಂಟೆಯವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕವು 26.04.2021 ರ ಸಂಜೆ 5.00 ಘಂಟೆಯವರೆಗೆ ಇರುತ್ತದೆ.
3. ಟೆಂಡರಿನ ತಾಂತ್ರಿಕ ಭಾಗವನ್ನು ದಿನಾಂಕ:27.04.2021 ರ ಸಂಜೆ 5.30 ಘಂಟೆ ನಂತರ ತೆರೆಯಲಾಗುವುದು.
4. ತಾಂತ್ರಿಕ ಭಾಗದಲ್ಲಿ ಯಶಸ್ವಿಯಾದ ಟೆಂಡರ್‌ದಾರರ ವಾಣಿಜ್ಯ ಬಿಡ್ ಅನ್ನು ದಿನಾಂಕ:28.04.2021 ರಂದು ಸಂಜೆ 5.30 ರ ನಂತರ ತೆರೆಯಲಾಗುವುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕೋಲಾರ–ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಒಕ್ಕೂಟ,.

ಜಿಲ್ಲಾ ಪಂಚಾಯತ್ ಚಿಕ್ಕಬಳ್ಳಾಪುರ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾ ಕಛೇರಿ, ಗಣೇಶ್ ಸೈಕಲ್ ಮಾರ್ಟ್ ಹತ್ತಿರ, ಗೌರಿಬಿದನೂರು. ದೂ: 08155–284168
ಇ–ಮೇಲ್: cdpogbd@gmail.com

ಸಂ: ಶಿಅಯೋ/ಗೌರಿಬಿ/ಹೊಗುವಾ/ಟೆಂಡರ್/2021–22 ದಿನಾಂಕ: 15.04.2021

ಹೊರಗುತ್ತಿಗೆ ವಾಹನಕ್ಕಾಗಿ ಟೆಂಡರ್ ಪ್ರಕಟಣೆ

ಶಿಶು ಅಭಿವೃದ್ಧಿ ಯೋಜನಾ ಕಛೇರಿ ಗೌರಿಬಿದನೂರು ಇಲ್ಲಿಗೆ 2021–22ನೇ ಸಾಲಿಗೆ ಕಛೇರಿ ಕೆಲಸ ಕಾರ್ಯಗಳಿಗೆ ಮತ್ತು ತಾಲ್ಲೂಕಿನಾದ್ಯಂತ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಲು ಅವಶ್ಯವಿರುವ ವಾಹನವನ್ನು ಹೊರಗುತ್ತಿಗೆ ಆಧಾರದಲ್ಲಿ ಬಾಡಿಗೆಗೆ ಪಡೆಯಲು ಟೆಂಡರ್ ಆಹ್ವಾನಿಸಿದ್ದು, ಬಾಡಿಗೆಗೆ ವಾಹನ ನೀಡುವ ಸ್ಥಳೀಯ ತಾಲ್ಲೂಕಿನ ಟ್ರಾವೆಲ್ ಸಂಸ್ಥೆಯವರು/ವಾಹನ ಮಾಲೀಕರು ದ್ವಿ–ಲಕೋಟೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **30.04.2021ರ ಸಂಜೆ 5.00 ಗಂಟೆ, ಮತ್ತು ಅದೇ ದಿನ 5.15 ಗಂಟೆಗೆ** ಹಾಜರಿರುವ ಟೆಂಡರ್‌ದಾರರ ಸಮ್ಮುಖದಲ್ಲಿ ಶಿಶು ಅಭಿವೃದ್ಧಿ ಯೋಜನಾ ಕಛೇರಿಯಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.

ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಗೌರಿಬಿದನೂರು.
ವಾ.ಸಾ.ಸಂ.ಇ./ಚಿಕ್ಕಬಳ್ಳಾಪುರ/13/ಎಂಸಿಎ/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ

ವಿಸ್ತರಣಾ ಶಾಖೆ : ನಂ. 587, 2ನೇ 'ಎ' ಮುಖ್ಯ ರಸ್ತೆ, 11ನೇ ಬ್ಲಾಕ್, ನಾಗರಭಾವಿ 2ನೇ ಹಂತ, ಪಾಪರೆಡ್ಡಿಪಾಳ್ಯ ಸರ್ಕಲ್ ಹತ್ತಿರ, ಬೆಂಗಳೂರು – 560 072.
ದೂರವಾಣಿ : 2318 2333 / 2321 2333 ಇ–ಮೇಲ್ : nehrungr@rediffmail.com

ಸ್ವಾಧೀನ ನೋಟೀಸ್ ನಿಯಮ 8(1) (ಸ್ಥಿರಾಸ್ತಿ)


ಶ್ರೀ. ದೊಡ್ಡರಂಗಯ್ಯ

ಕೆಳ ಸಹಿದಾರರು ದಿ.ನೆಹರೂನಗರ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಂಗಳೂರು ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಸೇಶನ್ ಮತ್ತು ರಿಕನಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸ್ಸೆಟ್ಸ್ ಮತ್ತು ಎನ್‌ಪೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002 ನಿಯಮ (9) ಅನ್ನು ಓದಿಕೊಂಡಂತೆ ಪ್ರಕರಣ 13(2)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ತಗಾದೆ ಸೂಚನೆಯನ್ನು ದಿನಾಂಕ : 21/11/2020 ರಂದು ಸಾಲಗಾರರಾದ ಶ್ರೀ.ದೊಡ್ಡರಂಗಯ್ಯ ಬಿನ್ ಲೇಟ್ ರಂಗಯ್ಯ ರವರಿಗೆ ಮೊಬಲಗು ರೂ. 96,12,114.00 (ತೊಂಬತ್ತಾರು ಲಕ್ಷದ ಹನ್ನೆರಡು ಸಾವಿರದ ನೂರ ಹದಿನಾಲ್ಕು ರೂಪಾಯಿಗಳು ಮಾತ್ರ) ದಿನಾಂಕಃ 05–11–2020 ರಂತೆ ಪಾವತಿಸುವಂತೆ ನೀಡಿದ್ದು (ಇನ್ನು ಮುಂದೆ ಸಾಲಗಾರರು ಎಂದು ಓದಿಕೊಳ್ಳುವುದು) ಇವರಿಗೆ ಸೂಚನೆಯಲ್ಲಿ ನೀಡಿರುವ ಮೊತ್ತ ಮತ್ತು ಇತರೆ ಖರ್ಚುಗಳನ್ನು ತಗಾದೆ ಸೂಚನೆ ತಲುಪಿದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಸೂಚಿಸಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಮತ್ತು ಈ ಕೆಳಗೆ ತಿಳಿಸಲಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳಗೆ ವಿವರಿಸಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆ ಕಲಂ 13 ಸೆಕ್ಷನ್(4) ರೊಂದಿಗೆ ನಿಯಮ (8)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಗೆ ವಿವರಿಸಲಾದ ಆಸ್ತಿಯನ್ನು ಸಾಂಕೇತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೂ ಕೂಡಾ ಸದರಿ ಸ್ವತ್ತಿನ ಬಗ್ಗೆ ವ್ಯವಹಾರ ಮಾಡಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೇ ಆದರೆ ಅದು ದಿ ನೆಹರೂನಗರ ಕೋ ಆಪರೇಟಿವ್ ಬ್ಯಾಂಕ್ ನಿಯಮಿತ, ಶೇಷಾದ್ರಿಪುರಂ ಶಾಖೆ ಇವರಿಗೆ ಬರತಕ್ಕ ಬಾಕಿ ಸಾಲದ ಮೊತ್ತ ದಿನಾಂಕಃ 17/04/2021 ಕ್ಕೆ ಇರುವಂತೆ ರೂ. 91,58,632–00 (ತೊಂಬತ್ತೊಂದು ಲಕ್ಷದ ಐವತ್ತೆಂಟುಸಾವಿರದ ಆರುನೂರ ಮೂವತ್ತೆರಡು ರೂಪಾಯಿಗಳು ಮಾತ್ರ) ಮತ್ತು ಈ ದಿನಾಂಕದ ನಂತರ ಮರು ಪಾವತಿಸಲಾದ ಮೊತ್ತ ಯಾವುದಾದರೂ ಇದ್ದಲ್ಲಿ ಅದನ್ನು ಕಳೆದು ಬಡ್ಡಿ ಮತ್ತು ಇತರೆ ಶುಲ್ಕಗಳ ಪಾವತಿಗೆ ಒಳಪಟ್ಟಿರುತ್ತದೆ. ಸಾಲದ ಖಾತೆ ಸಂಖ್ಯೆ: ಐಪಿಎಲ್ 564,616 ಮತ್ತು 746

ಸಾಲಗಾರರ ವಿವರ : ಶ್ರೀ.ದೊಡ್ಡರಂಗಯ್ಯ ಬಿನ್ ಲೇಟ್ ರಂಗಯ್ಯ, ನಂ.1, ಮುನಿಸಿಪಲ್ ನಂ.1–9, 25ನೇ 'ಎ' ಮುಖ್ಯರಸ್ತೆ, ತಿಮ್ಮೇನಹಳ್ಳಿ, ಕೆ.ಹೆಚ್.ಬಿ. ಮಾಗಡಿ ರಸ್ತೆ, ಬೆಂಗಳೂರು 560 079.

ಶ್ರೀ.ದೊಡ್ಡರಂಗಯ್ಯ ಬಿನ್ ಲೇಟ್ ರಂಗಯ್ಯ ಬ್ಯಾಂಕಿನಿಂದ ಪಡೆದ ಸಾಲಕ್ಕೆ ಭದ್ರತೆಗಾಗಿ ಈ ಕೆಳಕಂಡ ಸ್ಥಿರಾಸ್ತಿಯನ್ನು ಅಡಮಾನ ಮಾಡಿರುತ್ತಾರೆ. ಸ್ಥಿರಾಸ್ತಿಯ ವಿವರಃ– ನಿವೇಶನ ಸಂಖ್ಯೆ:1, ಮುನಿಸಿಪಲ್ ನಂ.1–9, 25ನೇ 'ಎ' ಮುಖ್ಯರಸ್ತೆ, ತಿಮ್ಮೇನಹಳ್ಳಿ, ಕೆ.ಹೆಚ್.ಬಿ. ಮಾಗಡಿ ರಸ್ತೆ, ಕಾರ್ಡ್ ರಸ್ತೆ, ಬೆಂಗಳೂರು ಸಿಟಿ ಕಾರ್ಪೊರೇಷನ್ ಡಿವಿಜನ್ ನಂ.29, ಬೆಂಗಳೂರು, ಪಿ.ಐ.ಡಿ. ನಂ.36–25–09 ಮತ್ತು ಹೊಸ ಪಿ.ಐ.ಡಿ. ನಂ. 104–ಡಬ್ಲ್ಯು0020–01, ವಿಸ್ತೀರ್ಣ ಪೂರ್ವ–ಪಶ್ಚಿಮ 10 ಮೀಟರ್, ಉತ್ತರ ದಕ್ಷಿಣ 18 ಮೀಟರ್, ಚಕ್ಕುಬಂದಿ:– ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ: ಹೆಚ್, ಪಶ್ಚಿಮಕ್ಕೆ: ಖಾಸಗಿ ಸ್ವತ್ತು, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಕನ್ಸರವೆನ್ಸಿ ಗಲ್ಲಿ.

ದಿನಾಂಕ : 18–04–2021
ಸ್ಥಳ : ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ದಿ ನೆಹರೂನಗರ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಂಗಳೂರು–560072

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾಧಿಕಾರಿ ನಿ.441 ರವರ ಕಛೇರಿ

ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿ.

ನಂ–741, 3ನೇ ವಿಭಾಗ, ರಾಜಾಜಿನಗರ, ಬೆಂಗಳೂರು–560010.

ಮಂಜು.ಎಲ್, ಸಾಲಗಾರರು

ರಾಧಾ, ಹೊಣೆಗಾರರು

ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನ್ಯಾಯಾಲಯದ ಆದೇಶ/ಅವಾರ್ಡ್‌ನಂತೆ ಸುಸ್ತಿ ಬಾಕಿದಾರರಿಂದ ಬರಬೇಕಾದ ಸಾಲಕ್ಕೆ ಈ ಕೆಳಗೆ ನಮೂದಿಸಿರುವ ಸ್ಥಿರ ಸ್ವತ್ತುಗಳನ್ನು ಬಹಿರಂಗ ಹರಾಜು ಮೂಲಕ ಮಾರಾಟ ಮಾಡಲಾಗುವುದು, ಕೊಳ್ಳಲು ಇಚ್ಛೆಯುಳ್ಳವರು **ದಿನಾಂಕ 22.04.2021 ರ ಗುರುವಾರ ಬೆಳಿಗ್ಗೆ 11 ಘಂಟೆಗೆ** ಕೆಳಗೆ ನಮೂದಿಸಿರುವ ಸ್ಥಳದಲ್ಲಿ ಹಾಜರಿದ್ದು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮ 1960 ಹಾಗೂ ಈ ಕೆಳಗೆ ಕಾಣಿಸಿದ ಷರತ್ತುಗಳಿಗೊಳಪಟ್ಟು ಹರಾಜಿನಲ್ಲಿ ಭಾಗವಹಿಸಿ ಬಿಡ್ ಮೂಲಕ ಪಡೆಯಬಹುದು

ಕ್ರ ಸಂ	ಸಿ.ಇ.ಪಿ ಸಂಖ್ಯೆ ಅವಾರ್ಡ್ ಸಂಖ್ಯೆ	ಬಾಕಿದಾರನ ಹೆಸರು ಮತ್ತು ವಿಳಾಸ	ಮಾರಲ್ಪಡುವ ಸ್ಥಿರ ಸ್ವತ್ತುಗಳ ವಿವರ / ಅಂದಾಜು ವಿಸ್ತೀರ್ಣ ವಿಳಾಸ		ಬರಬೇಕಾದ ಮೊಬಲಗು	ಸ್ವತ್ತುಗಳ ಮೇಲೆ ಯಾವುದಾದರೂ ಋಣಗಳು ಇದ್ದ ಪಕ್ಷಕ್ಕೆ ಅವುಗಳ ವಿವರ	ಷರಾ	ಹರಾಜು ದಿನಾಂಕ ವೇಳೆ, ಸ್ಥಳ
1	ಸಿ.ಇ.ಪಿ ಸಂಖ್ಯೆ ಎಆರ್ 1–44/27/2019–20 ದಿನಾಂಕ 07.11.2019 ಅವಾರ್ಡ್ ಆದೇಶ ಸಂಖ್ಯೆ ಜೆ.ಆರ್.ಡಿ /ಯು.ಬಿ.ಎಫ್ 164/2018–19 ದಿನಾಂಕ 19.01.2019	**ಮಂಜು.ಎಲ್** ನಂ–10, 23ನೇ ಅಡ್ಡರಸ್ತೆ, ಭುವನೇಶ್ವರಿನಗರ ಕೆ.ಪಿ.ಅಗ್ರಹಾರ, ಮಾಗಡಿ ರಸ್ತೆ, ಬೆಂಗಳೂರು–23	ಸ್ವತ್ತಿನ ಸಂಖ್ಯೆ 10, ಪಿಐಡಿ ನಂ–32–31–10, ದಕ್ಷಿಣಾರ್ಧಭಾಗ, 23ನೇ ಅಡ್ಡರಸ್ತೆ, ಭುವನೇಶ್ವರಿನಗರ, ಹಳೆಎಂ.ಎಲ್ ನಂ–7, ಹಳೆ 21ನೇ ಅಡ್ಡರಸ್ತೆ, ಕೆಂಪಾಪುರ ಅಗ್ರಹಾರ, ಬೆಂಗಳೂರು.	ಚೆಕ್ಕುಬಂದಿ ಪೂರ್ವ ಪಶ್ಚಿಮ 40ಅಡಿಗಳು ಮತ್ತು ಉತ್ತರ ದಕ್ಷಿಣ –15 ಅಡಿಗಳು ಒಟ್ಟು 600 ಚ.ಅಡಿಗಳು ಪೂರ್ವಕ್ಕೆ : ಸ್ವತ್ತಿನ ಸಂಖ್ಯೆ 4 ಪಶ್ಚಿಮಕ್ಕೆ : 20 ಅಡಿ ರಸ್ತೆ ಉತ್ತರಕ್ಕೆ : ಇದೇ ಸ್ವತ್ತಿನ ಪೈಕಿ ನಾವು ಉಳಿಸಿಕೊಂಡಿರುವ 15 X 40 ಅಡಿ, ಉತ್ತರಾರ್ಧಭಾಗದ ಮನೆ ಸಹಿತವಾದ ಸ್ವತ್ತು ದಕ್ಷಿಣಕ್ಕೆ :ಸ್ವತ್ತಿನ ಸಂಖ್ಯೆ 6	ದಿನಾಂಕ 05.03.2021ಕ್ಕೆ ರೂ.35,85,764/– ಸಾಲ ಮಕ್ತಾಯ ವಾಗುವವರೆಗೂ ಮುಂದುವರೆದ ಬಡ್ಡಿ 12.50% ಮತ್ತು ಸುಸ್ತಿ ಬಡ್ಡಿ 2% ಹಾಗೂಇತರೆ ಖರ್ಚುಗಳು	ಸದರಿ ಸ್ವತ್ತು ನ್ಯಾಯಾಲಯದ ಆದೇಶದಂತೆ ದಿ ರಾಜಾಜಿನಗರ ಕೋ ಆಪರೇಟಿವ್ ಬ್ಯಾಂಕ್ ಲಿ. ಹೆಸರಿಗೆ ಅಡಮಾನ ವಾಗಿರುತ್ತದೆ.	ಮಾರುಕಟ್ಟೆ ದರ ರೂ. 92,67,000	ದಿನಾಂಕ 22.04.2021 ಗುರುವಾರ ಬೆಳಿಗ್ಗೆ 11 ಘಂಟೆಗೆ ಸ್ವತ್ತಿನ ಸಂಖ್ಯೆ 10, ಪಿಐಡಿ ನಂ –32–31–10, ದಕ್ಷಿಣಾರ್ಧಭಾಗ, 23ನೇ ಅಡ್ಡರಸ್ತೆ, ಭುವನೇಶ್ವರಿನಗರ, ಹಳೆ ಎಂ.ಎಲ್ ನಂ–7, ಹಳೆ 21ನೇ ಅಡ್ಡರಸ್ತೆ, ಕೆಂಪಾಪುರ ಅಗ್ರಹಾರ, ಬೆಂಗಳೂರು.

ಹರಾಜಿನ ಷರತ್ತುಗಳು : 1. ಸುಸ್ತಿ ಸಾಲಗಾರರು ಹರಾಜಿಗೆ ಮುನ್ನ ಪೂರ್ಣ ಹಣ ಮರುಪಾವತಿಸಿದಲ್ಲಿ ಸದರಿಯವರು ಸ್ವತ್ತುಗಳನ್ನು ಹರಾಜು ಮಾಡುವುದಿಲ್ಲ. 2. ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹರಾಜು ಸಮಯದ ಪೂರ್ವದಲ್ಲಿ **ರೂ. 36,000/– (ರೂ. ಮೂತ್ತಾರು ಸಾವಿರ ಮಾತ್ರ)** ಇ.ಎಂ.ಡಿ ಮೊತ್ತವನ್ನು (ಹರಾಜು ಡಿಪಾಸಿಟ್) ನಗದಾಗಿದ್ದಲ್ಲಿ ದಿ ರಾಜಾಜಿನಗರ ಕೋ–ಆಪ್‌ರೇಟಿವ್ ಬ್ಯಾಂಕ್ ಲಿ., ಹೆಸರಿನಲ್ಲಿ ಬ್ಯಾಂಕಿನಲ್ಲಿ ಪಾವತಿಸಬೇಕು. ಡಿ.ಡಿ. ಆಗಿದ್ದಲ್ಲಿ ಹರಾಜು ಸಮಯಕ್ಕೆ ಪೂರ್ವದಲ್ಲಿ ದಿ ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್, ಬೆಂಗಳೂರು ಹೆಸರಿಗೆ ಪಡೆದು ಮಾರಾಟಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು. 3. ಹರಾಜಿನ ಅತ್ಯಧಿಕ ಬಿಡ್ ಮೊಬಲಗಿನ ಶೇ. 15ರಷ್ಟು ಹಣವನ್ನು ಯಶಸ್ವಿ ಬಿಡ್‌ದಾರರು ಸ್ಥಳದಲ್ಲೇ ಪಾವತಿ ಮಾಡಿ ರಸೀತಿಯನ್ನು ಪಡೆಯುವುದು. ಉಳಿದ ಮೊಬಲಗನ್ನು ಹಾಗೂ ನೊಂದಣಿ ಮತ್ತು ಮುದ್ರಾಂಕ ಶುಲ್ಕದೊಂದಿಗೆ 45 ದಿನಗಳೊಳಗಾಗಿ ತಪ್ಪದೆ ಪಾವತಿ ಮಾಡತಕ್ಕದ್ದು, ತಪ್ಪಿದ್ದಲ್ಲಿ ಪಾವತಿ ಮಾಡಿದ ಮೊಬಲಗನ್ನು ನಿಯಮಾನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 4. ಹರಾಜಿನ ಸ್ಥಿರಾಸ್ತಿ ವಿವರಣೆ/ ಅಂದಾಜಿನ ವಿಸ್ತೀರ್ಣದ ವಿಷಯದಲ್ಲಿ ಆಗಿರಬಹುದಾದ ಯಾವುದಾದರೂ ತಪ್ಪುಗಳಿಗೆ ಸರ್ಕಾರ/ ಬ್ಯಾಂಕ್‌ನವರು ಜವಾಬ್ದಾರರಾಗುವುದಿಲ್ಲ. 5. ಹರಾಜಿನಲ್ಲಿ ಬಿಡ್ ಮೊತ್ತ ಕಡಿಮೆಯಾದಲ್ಲಿ ಹರಾಜನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕು ಕ.ಸ.ಸ.ಕಾಯ್ದೆ 1959 ಮತ್ತು ನಿಯಮಗಳು 1960 ಪ್ರಕಾರ ಮಾರಾಟಾಧಿಕಾರಿಗಳ ವಿವೇಚನೆಗೆ ಬಿಟ್ಟಿರುತ್ತದೆ. 6. ವಸೂಲಾಧಿಕಾರಿ/ ಮಾರಾಟಾಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಈ ಹರಾಜು ಪ್ರಕ್ರಿಯೆಯನ್ನು ಯಾವುದೇ ಮುನ್ಸೂಚನೆ ಇಲ್ಲದೆ ಮುಂದೂಡಬಹುದಾಗಿದೆ ಅಥವಾ ಹರಾಜಿನಲ್ಲಿ ಬಂದ ಬೆಲೆಯು ತೃಪ್ತಿಕರವಾಗಿಲ್ಲವೆಂದು ವಸೂಲಾಧಿಕಾರಿಗೆ / ಮಾರಾಟಾಧಿಕಾರಿಗೆ ಕಂಡುಬಂದಲ್ಲಿ ಹರಾಜನ್ನು ನಿಲ್ಲಿಸಬಹುದಾಗಿದೆ. 7. ಹರಾಜಿನಲ್ಲಿ ಬಿಡ್ದುದಾರರು ಬಾರದಿದ್ದಲ್ಲಿ ಅಥವಾ ಹರಾಜಿನಲ್ಲಿ ಯೋಗ್ಯ ಬೆಲೆ ಬಾರದಿದ್ದಲ್ಲಿ ಕ.ಸ.ಸಂ. ನಿಯಮ 38(ಎ) ರನ್ವಯ ಡಿಕ್ರಿದಾರಕ ಬ್ಯಾಂಕಿಗೆ ಸ್ಥಿರಾಸ್ತಿ ವರ್ಗಾವಣೆ ಮಾಡಿಕೊಳ್ಳಲು ಹಕ್ಕನ್ನು ಕಾಯ್ದಿರಿಸಿದೆ. 8. ಸದರಿ ಸ್ಥಿರಾಸ್ತಿಗಳನ್ನು ಪರಿಶೀಲಿಸಲು ಇಚ್ಛಿಸುವ ಬಿಡ್‌ದಾರರು ಬ್ಯಾಂಕಿನ ವ್ಯವಸ್ಥಾಪಕರು / ಮಾರಾಟಾಧಿಕಾರಿಯವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪರಿಶೀಲಿಸಬಹುದಾಗಿದೆ. 9. ಹರಾಜಿಗೆ ಒಳಪಡಿಸುವ ಸ್ಥಿರಾಸ್ತಿಯು **"ಎಲ್ಲಿ ಹೇಗಿದೆಯೋ ಅದೇ ಸ್ಥಿತಿಯಲ್ಲಿ"** ಹರಾಜು ಮಾಡಲಾಗುವುದು **(As is where is basis)** 10. ಬಿಡ್‌ದಾರರು ಹರಾಜಿನಲ್ಲಿ ಆಧಾರ್ /ಪಾನ್‌ಕಾರ್ಡ್ ಮೂಲ ಮತ್ತು ನಕಲು ಪ್ರತಿಗಳನ್ನು ಕಡ್ಡಾಯವಾಗಿ ಹಾಜರುಪಡಿಸತಕ್ಕದ್ದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿಗಳು ನಿ 441 ಇವರ ಆದೇಶದ ಮೇರೆಗೆ

ಸಹಿ/–
ಮಾರಾಟಾಧಿಕಾರಿಗಳು
ದಿ.ರಾಜಾಜಿನಗರ ಕೋ–ಆಪರೇಟಿವ್ ಬ್ಯಾಂಕ್ ಲಿ.,
ನಂ–741 , 3ನೇ ವಿಭಾಗ , ರಾಜಾಜಿನಗರ, ಬೆಂಗಳೂರು–560010

ಸ್ಥಳ : ಬೆಂಗಳೂರು
ದಿನಾಂಕ : 09–03–2021

ಸೂಚನೆ :– ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವವರು ಹೆಚ್ಚಿನ ವಿವರಗಳನ್ನು ಮಾರಾಟಾಧಿಕಾರಿ / ಬ್ಯಾಂಕಿನ ವ್ಯವಸ್ಥಾಪಕರಿಂದ ಪಡೆಯಬಹುದು. ದೂರವಾಣಿ ಸಂಖ್ಯೆ : 080–23151204 / 23152073

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಒತ್ತಾಯ

'ಆಕಾಶವಾಣಿ ಹೊಸ ನಿಯಮ ಹಿಂಪಡೆಯಲಿ'

ಪ್ರಜಾವಾಣಿ ವಾರ್ತೆ

ಟಿ.ಎಸ್. ನಾಗಾಭರಣ

ಬೆಂಗಳೂರು: 'ಕೇವಲ ನಿರ್ವಹಣಾ ವೆಚ್ಚದ ಕಾರಣ ನೀಡಿ ಆಕಾಶವಾಣಿಯಲ್ಲಿ ಪ್ರಸಾರವಾಗುತ್ತಿದ್ದ ಪ್ರಾದೇಶಿಕ ಕಾರ್ಯಕ್ರಮಗಳನ್ನು ಸ್ಥಗಿತಗೊಳಿಸಿರುವುದು ಸರಿಯಾದ ಕ್ರಮವಲ್ಲ. ಪ್ರಸಾರ ಭಾರತಿಯು ಕೂಡಲೇ ಹೊಸ ನಿಯಮವನ್ನು ಹಿಂಪಡೆಯಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಒತ್ತಾಯಿಸಿದ್ದಾರೆ.

ಈ ಸಂಬಂಧ ಆಕಾಶವಾಣಿ ನಿಲಯ ನಿರ್ದೇಶಕರಿಗೆ ಪತ್ರ ಬರೆದಿರುವ ಅವರು, 'ದಕ್ಷಿಣದ ಕೇರಳ, ತಮಿಳುನಾಡು, ಆಂಧ್ರಪ್ರದೇಶಕ್ಕೆ ಇಲ್ಲದ ನಿಯಮಗಳನ್ನು ಕರ್ನಾಟಕದ ಮೇಲೆ ಹೇರಿ, ಏ.13ರಿಂದ ಹೊಸ ನೀತಿಯನ್ನು ಜಾರಿಮಾಡಿರುವುದು ನಿಯಮಬಾಹಿರ. ಕೂಡಲೇ ಈ ನೀತಿಯನ್ನು ಪರಿಷ್ಕರಿಸಿ, ಈ ಮೊದಲಿನಂತೆ ಆಕಾಶವಾಣಿಯಲ್ಲಿ ಹೆಚ್ಚಿನ ಸಮಯ ಕನ್ನಡದ ಕಾರ್ಯಕ್ರಮಗಳು ಪ್ರಸಾರವಾಗುವಂತೆ ಕ್ರಮವಹಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಪ್ರಸಾರ ಭಾರತಿ ಜಾರಿಗೆ ತಂದಿರುವ ಹೊಸನೀತಿ, ನಿಯಮಗಳಿಂದಾಗಿ ಇದುವರೆಗೂ ನಿರಂತರವಾಗಿ ಬಿತ್ತರವಾಗುತ್ತಿದ್ದ ಪ್ರಾದೇಶಿಕ ಕಾರ್ಯಕ್ರಮಗಳು ಸ್ಥಗಿತಗೊಳ್ಳಲಿವೆ. ಇದರಿಂದಾಗಿ ಸ್ಥಳೀಯ ಕಲಾವಿದರಿಗೆ ಮತ್ತು ಜಿಲ್ಲಾ ಕಚೇರಿಗಳಲ್ಲಿ ಕೆಲಸ ನಿರ್ವಹಿಸುವ ಸ್ಥಳೀಯ ಉದ್ಯೋಗಿಗಳ ಬದುಕು ಡೋಲಾಯಮಾನವಾಗುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಾದೇಶಿಕತೆಯ ಅಸ್ಮಿತೆಯನ್ನು ಪ್ರಶ್ನಿಸದಂತಾಗುತ್ತದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

'ಪ್ರಾದೇಶಿಕ ಭಾಷೆಗಳ ಅಸ್ಮಿತೆಗೆ ಅಡ್ಡಿ'


ಸೋಮಶೇಖರ್

'ಆಕಾಶವಾಣಿಯಲ್ಲಿ ಕನ್ನಡ ಹಾಗೂ ಕರ್ನಾಟಕದ ಪ್ರಾದೇಶಿಕ ಭಾಷೆಗಳ ಕಾರ್ಯಕ್ರಮಗಳನ್ನು ಬಿತ್ತರಿಸುವ ಬಗ್ಗೆ ಪ್ರಸಾರ ಭಾರತಿ ಜಾರಿಗೆ ತಂದಿರುವ ನೀತಿಯು ಪ್ರಾದೇಶಿಕ ಭಾಷೆಗಳ ಅಸ್ಮಿತೆಗೆ ಆತಂಕ ಒಡ್ಡುವಂತಿದೆ. ಕನ್ನಡದ ಕಾರ್ಯಕ್ರಮಗಳ ಪ್ರಸಾರದ ಸಮಯವೂ ಅವೈಜ್ಞಾನಿಕವಾಗಿ ಬದಲಾಗಿದೆ. ಆಕಾಶವಾಣಿಯನ್ನು ಕೇವಲ ವಾಣಿಜ್ಯ ದೃಷ್ಟಿಯಿಂದ ನೋಡುವ ಪ್ರಸಾರ ಭಾರತೀಯ ಹೊಸ ಪ್ರಸಾರ ನೀತಿಯು ಕನ್ನಡಿಗರಿಗೆ ತುಂಬಾ ನಿರಾಸೆ ಉಂಟು ಮಾಡಿದೆ' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ತಿಳಿಸಿದರು.

'ಆಕಾಶವಾಣಿಯಲ್ಲಿನ ಕನ್ನಡ ಭಾಷಾ ಕಾರ್ಯಕ್ರಮಗಳ ಅಭಿಮಾನಿಗಳ ಅಭಿಪ್ರಾಯಗಳನ್ನು ಮನ್ನಿಸಿ ಈ ತಿಂಗಳಿಂದ ಜಾರಿಗೆ ಬಂದಿರುವ ಪ್ರಾದೇಶಿಕ ಕಾರ್ಯಕ್ರಮಗಳ ಪ್ರಸಾರದ ನೀತಿಯನ್ನು ಹಿಂಪಡೆಯಬೇಕು. ಈ ಬಗ್ಗೆ ಪ್ರಸಾರ ಭಾರತಿಯ ಮುಖ್ಯಸ್ಥರಿಗೆ ಸ್ಥಳೀಯ ಬೆಂಗಳೂರು ಆಕಾಶವಾಣಿಯ ನಿರ್ದೇಶಕರು ಕೂಡಲೇ ಪತ್ರದ ಮೂಲಕ ತಿಳಿಸಬೇಕು' ಎಂದು ಆಗ್ರಹಿಸಿದ್ದಾರೆ.

ಇಂಗ್ಲೆಂಡ್‌ನ ವಿಶ್ವ ಒಕ್ಕಲಿಗರ ಪರಿಷತ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಡಾ.ಸಿ.ಎನ್. ಅಶ್ವತ್ಥನಾರಾಯಣ

ಬೆಂಗಳೂರು: 'ಇಂಗ್ಲೆಂಡ್ ಸೇರಿದಂತೆ ಜಗತ್ತಿನ ವಿವಿಧ ದೇಶಗಳಲ್ಲಿ ನೆಲೆಸಿರುವ ಒಕ್ಕಲಿಗರ ಸಾಧನೆಯಿಂದಾಗಿ ನಾವೆಲ್ಲ ಹೆಮ್ಮೆಯಿಂದ ಬೀಗುವಂತಾಗಿದೆ. ಅವರು ಭಾರತದಲ್ಲಿ ಉದ್ಯಮ ಸ್ಥಾಪಿಸಿದರೆ ಅಥವಾ ಇತರೆ ಯಾವುದಾದರೂ ಯೋಜನೆ ಕೈಗೆತ್ತಿಕೊಂಡರೆ ಸರ್ಕಾರದಿಂದ ಎಲ್ಲಾ ಬಗೆಯ ಸಹಕಾರ ನೀಡಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಾ. ಸಿ. ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಇಂಗ್ಲೆಂಡ್‌ನಲ್ಲಿ ನೆಲೆಸಿರುವ ಒಕ್ಕಲಿಗ ಸಮುದಾಯದವರು ಅಲ್ಲಿ ಸ್ಥಾಪಿಸಿರುವ ವಿಶ್ವ ಒಕ್ಕಲಿಗರ ಪರಿಷತ್ತನ್ನು ಶನಿವಾರ ಉದ್ಘಾಟಿಸಿದರು.

ವರ್ಚುವಲ್ ವೇದಿಕೆ ಮೂಲಕ ಯುಗಾದಿ ಉತ್ಸವಕ್ಕೂ ಚಾಲನೆ ನೀಡಿ ಮಾತನಾಡಿದರು.

'ಕೃಷಿಯನ್ನೇ ಜೀವಾಳವಾಗಿಸಿಕೊಂಡಿರುವ ಒಕ್ಕಲಿಗರು ಎಲ್ಲರಿಗೂ ಆದರ್ಶವಾಗಿದ್ದಾರೆ. ಈ ಸಮುದಾಯದಲ್ಲೂ ಬಡವರಿದ್ದಾರೆ. ವಿದೇಶದಲ್ಲಿ ನೆಲೆಸಿರುವವರು ಅಂತಹವರಿಗೆ ನೆರವಿನ ಹಸ್ತ ಚಾಚಬೇಕು. ಸಮುದಾಯದ ಸಬಲೀಕರಣ ನಮ್ಮೆಲ್ಲರ ಆದ್ಯತೆಯಾಗಬೇಕು. ಅದಕ್ಕಾಗಿ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮಿಗಳ ಮಾರ್ಗದರ್ಶನದಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕು' ಎಂದು ತಿಳಿಸಿದರು.

ಲೇಖಕಿ ಹೇಮಲತಾ ಮಹಿಷಿ ಮಾತನಾಡಿದರು. ಲೇಖಕಿ ಮಲ್ಲಿಕಾ ಘಂಟಿ, ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ಮತ್ತು ಲೇಖಕಿ ಸವಿತಾ ಶ್ರೀನಿವಾಸ್ ಇದ್ದಾರೆ
ಪ್ರಜಾವಾಣಿ ಚಿತ್ರ

ಕಳ್ಳರ ಮನಸ್ಸು ಪರಿವರ್ತಿಸುವ ಶಕ್ತಿ ಸಾಹಿತ್ಯಕ್ಕಿದೆ: ಮಲ್ಲಿಕಾ ಘಂಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳ್ಳರ ಮನಸ್ಸು ಪರಿವರ್ತಿಸುವ ಶಕ್ತಿ ಸಾಹಿತ್ಯಕ್ಕಿದೆ. ಸಾಹಿತ್ಯದ ಮನಸ್ಸು ಮತ್ತು ಸೃಜನಶೀಲ ಶಕ್ತಿ ಉಳ್ಳವರು ಕ್ರೌರ್ಯದಿಂದ ದೂರ ಉಳಿಯುತ್ತಾರೆ. ಜೈಲಿನಲ್ಲಿರುವ ಕೈದಿಗಳು ಬರವಣಿಗೆ ಮೈಗೂಡಿಸಿಕೊಳ್ಳುತ್ತಿದ್ದಾರೆ. ಅವರಿಗೆ ತಪ್ಪಿನ ಅರಿವಾಗುತ್ತಿದೆ. ಮುಖ್ಯವಾಹಿನಿಗೆ ಬರಬೇಕೆಂಬ ಅಪೇಕ್ಷೆ ಅವರಲ್ಲಿ ಮೂಡುತ್ತಿದೆ' ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲಿಕಾ ಘಂಟಿ ಶನಿವಾರ ಹೇಳಿದರು.

ಕನ್ನಡ ಸಾಹಿತ್ಯ ಪರಿಷತ್ ಹಮ್ಮಿಕೊಂಡಿದ್ದ 'ಮಹಿಳಾ ಸಾಹಿತ್ಯ ಸಂಪುಟಗಳು' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ಬರೆಯುವ ಹಾಗೂ ಬರೆದಿದ್ದನ್ನು ಬದುಕಿಗೆ ಅಳವಡಿಸಿಕೊಳ್ಳುವ ಕೆಲಸವನ್ನು ಲೇಖಕಿಯರು ಪ್ರಾಮಾಣಿಕವಾಗಿ ಮಾಡುತ್ತಿದ್ದಾರೆ. ಸಂಸ್ಥೆಯೊಂದರ ಜವಾಬ್ದಾರಿ ಹೊತ್ತ ವ್ಯಕ್ತಿಗಳು ಪೂರ್ವಗ್ರಹವಿಲ್ಲದೆ ಸಮಾಜವನ್ನು ನೋಡುವುದರ ಜೊತೆಗೆ ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಬೇಕು. ಆಗ ಮಾತ್ರ ಕಾಲ ದಾಖಲಿಸಿಕೊಳ್ಳಬಹುದಾದ ಕೆಲಸವೊಂದನ್ನು ಮಾಡಲು ಸಾಧ್ಯ' ಎಂದರು.

'ಸಹನೆ ಮತ್ತು ಸಹಬಾಳ್ವೆಯನ್ನು ಒತ್ತಿ ಹೇಳುವ ಸಾಹಿತ್ಯ ಇಂದಿನ ಸಮಾಜಕ್ಕೆ ಅಗತ್ಯವಿದೆ. ಆಧುನಿಕ ಕಾಲದಲ್ಲಿ ಹಣಬಲ ಮತ್ತು ತೋಳ್ಬಲ ಪ್ರಜಾಪ್ರಭುತ್ವದ ಆಶಯಗಳನ್ನು ನುಂಗಿ ಹಾಕುತ್ತಿದೆ. ಹೆಣ್ಣು ಮಕ್ಕಳು ಇವೆರಡು ಇಲ್ಲದೆ ರಾಜಕೀಯ ಮತ್ತು ಸಾಮಾಜಿಕವಾಗಿ ಬಲಿಷ್ಠರಾಗುವುದು ಅಸಾಧ್ಯ' ಎಂದು ತಿಳಿಸಿದರು.

ಲೇಖಕಿ ಹೇಮಲತಾ ಮಹಿಷಿ, 'ಮಹಿಳಾ ಸಾಹಿತ್ಯವೆಂದರೆ 'ಅಡುಗೆ ಮನೆ' ಸಾಹಿತ್ಯ ಎಂದು ಮೂದಲಿಸುವ ಕಾಲ ಹಿಂದೆ ಇತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಸಾಹಿತ್ಯದ ಎಲ್ಲಾ ಕ್ಷೇತ್ರಗಳು ಹಾಗೂ ಪ್ರಕಾರಗಳಲ್ಲೂ ಮಹಿಳೆಯರು ಛಾಪು ಮೂಡಿಸುತ್ತಿದ್ದಾರೆ. ಸಾಹಿತ್ಯ ಪರಿಷತ್ ಹೊರತಂದಿರುವ ಎಂಟು ಸಂಪುಟಗಳು ಆಕರ್ಷಕವಾಗಿವೆ' ಎಂದು ಹೇಳಿದರು.

ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, 'ಪುರುಷರಿಂದ ಸಾಧ್ಯವಾಗದ ಕೆಲಸವನ್ನು ಮಹಿಳೆಯರು ಮಾಡಿ ತೋರಿಸಿದ್ದಾರೆ. ನನ್ನ ಅವಧಿಯಲ್ಲಿ ₹12.5 ಲಕ್ಷ ಗೌರವ ಧನ ಬಂದಿದೆ. ಈ ಮೊತ್ತವನ್ನು ದತ್ತಿನಿಧಿಯನ್ನಾಗಿ ಇಟ್ಟು ಮಹಿಳೆ ಮತ್ತು ಪುರುಷರಿಗೆ ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ' ಎಂದರು.

ಪರಿಷತ್ತಿನ ಗೌರವ ಕಾರ್ಯದರ್ಶಿ ಪದ್ಮರಾಜ ದಂಡಾವತಿ, ಕೆ.ರಾಜ ಕುಮಾರ್, ಗೌರವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ, ಸವಿತಾ ಶ್ರೀನಿವಾಸ್ ಹಾಗೂ ಪದ್ಮಿನಿ ನಾಗರಾಜು ಇದ್ದರು.

ಕೋವಿಡ್ ಹೆಚ್ಚಳ: ಸಭೆ ನಾಳೆ

ಬೆಂಗಳೂರು: ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರಗತಿಯಲ್ಲಿ ಏರಿಕೆಯಾಗುತ್ತಿದ್ದು, ಪರಿಸ್ಥಿತಿ ಅವಲೋಕಿಸಲು ಮುಖ್ಯಮಂತ್ರಿ ನಿರ್ದೇಶನದಂತೆ ಕಂದಾಯ ಸಚಿವ ಆರ್. ಅಶೋಕ ಅವರು ಇದೇ 19ರಂದು ಬೆಂಗಳೂರು ವ್ಯಾಪ್ತಿಯ ಜನಪ್ರತಿನಿಧಿಗಳ ಸಭೆ ನಡೆಸಲಿದ್ದಾರೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಮಧ್ಯಾಹ್ನ 3 ಗಂಟೆಗೆ ನಡೆಯಲಿರುವ ಸಭೆಗೆ ಬೆಂಗಳೂರು ವ್ಯಾಪ್ತಿಯ ಸಂಸದರು, ಸಚಿವರು, ಶಾಸಕರನ್ನು ಆಹ್ವಾನಿಸಲಾಗಿದೆ. ಕೋವಿಡ್ ಸೋಂಕಿತರಾಗಿ ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ವರ್ಚುವಲ್ ಮೂಲಕ ಸಭೆಯಲ್ಲಿ ಭಾಗವಹಿಸುವ ಸಾಧ್ಯತೆ ಇದೆ. ಕೋವಿಡ್ ನಿಯಂತ್ರಿಸಲು ಮತ್ತಷ್ಟು ಬಿಗಿ ಕ್ರಮಗಳನ್ನು ತೆಗೆದುಕೊಳ್ಳುವ ಕುರಿತು ಈ ಸಭೆಯಲ್ಲಿ ಚರ್ಚೆ ನಡೆಯಲಿದೆ.

ವಿ.ವಿ. ಕಚೇರಿ ಭೇಟಿಗೆ ನಿರ್ಬಂಧ

ಬೆಂಗಳೂರು: ಉದ್ಯಾನನಗರಿಯಲ್ಲಿ ಕೋವಿಡ್ ಪ್ರಕರಣಗಳು ಉಲ್ಬಣಿಸುತ್ತಿರುವ ಕಾರಣ ಬೆಂಗಳೂರು ವಿಶ್ವವಿದ್ಯಾಲಯವು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕಚೇರಿಗಳಿಗೆ ಭೇಟಿ ನೀಡುವುದನ್ನು ನಿರ್ಬಂಧಿಸಿದೆ. ಇದೇ 20 ಅಥವಾ ಮುಂದಿನ ಆದೇಶದವರೆಗೂ ಇದು ಜಾರಿಯಲ್ಲಿರಲಿದೆ.

'ಸಿಬ್ಬಂದಿಯ ಹಿತದೃಷ್ಟಿಯಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ. ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ದೂರವಾಣಿ ಮೂಲಕ ಸಂಬಂಧಪಟ್ಟ ಕಚೇರಿಯನ್ನು ಸಂಪರ್ಕಿಸಿ ತಮ್ಮ ಅಹವಾಲುಗಳ ಕುರಿತಾದ ಮಾಹಿತಿ ಪಡೆದುಕೊಳ್ಳಬೇಕು' ಎಂದು ಕುಲಸಚಿವರ ಪ್ರಕಟಣೆ ತಿಳಿಸಿದೆ.

ಕಾಣೆಯಾಗಿದ್ದಾರೆ

ಸಾರ್ವಜನಿಕರಲ್ಲಿ ವಿನಂತಿ ಈ ಭಾವಚಿತ್ರದಲ್ಲಿರುವ ರೇಣುಕಪ್ರಸಾದ್ ವೃದ್ಧ ಪುರುಷರು, ಮಾನಸಿಕ ಅಸ್ವಸ್ಥ ಇವರು ದಿನಾಂಕ 12–04–2021 ರಂದು ಚುಂಚನಕುಪ್ಪೆ ಗ್ರಾಮ ತಾವರೆಕೆರೆ ಹೋ. ದೊಡ್ಡ ಆಲದಮರ, ಬೆಂಗಳೂರು ದಕ್ಷಿಣ ಈ ವಿಳಾಸದಿಂದ ಕಾಣೆಯಾಗಿರುತ್ತಾರೆ.

ಇವರು ಕಾಣೆಯಾದಾಗ ಬಿಳಿ ಬಣ್ಣದ ಅಂಗಿ ಹಾಗೂ ಕಪ್ಪು ಬಣ್ಣದ ಪ್ಯಾಂಟ್ ತೊಟ್ಟಿರುತ್ತಾರೆ. ಇವರ ಚಹರೆ: ಗೋದಿ ಮೈಬಣ್ಣ, ಬಿಳಿ ಕೂದಲು, ಕೋಲು ಮುಖ, 5 ಅಡಿ ಎತ್ತರ, ಕನ್ನಡ ಭಾಷೆ ಮಾತನಾಡುತ್ತಾರೆ.

ಇವರ ಸುಳಿವು ಸಿಕ್ಕಲ್ಲಿ ದಯವಿಟ್ಟು ತಕ್ಷಣ ಈ ದೂರವಾಣಿ ಸಂಖ್ಯೆಗಳಿಗೆ ಕರೆಮಾಡಬೇಕಾಗಿ ವಿನಂತಿ.
ಮೊ: 9900782962, 7019706002, 9901813330, 9741513331, 9972849728

Inners for Winners
RAMRAJ
BANIANS • BRIEFS • TRUNKS
SHOWROOMS
KEMPEGOWDA ROAD | MALLESHWARAM | KORAMANGALA | BASAVESHWAR NAGAR | RR NAGAR | YESHWANTHPUR
VIJAYA NAGAR | RAJAJI NAGAR | BASAVANAGUDI | JAYA NAGAR | HOSPET | BANASHANKARI | MAJESTIC MALL | R.T NAGAR
KANAKAPURA | TUMKUR | RAMNAGARA | HESARAGATTA | NELAMANGALA | RAMAMURTHY NAGAR | JP NAGAR | CHINTAMANI
Available at company showroom & all leading textile shops / www.ramrajcotton.in

ಸಂಕಷ್ಟದಲ್ಲಿ ಕೋವಿಡ್ ಪೀಡಿತರು

ಒಂದನೇ ಪುಟದಿಂದ

ಇದೇ ವೇಳೆ ಗಂಭೀರವಾಗಿ ಅಸ್ವಸ್ಥಗೊಳ್ಳುವ ಕೋವಿಡ್ ಪೀಡಿತರ ಸಂಖ್ಯೆ ಕೂಡ ಹೆಚ್ಚಳವಾಗುತ್ತಿದೆ. ಸದ್ಯ 124 ರೋಗಿಗಳು ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಕಳೆದ ವರ್ಷ ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆ ಕಂಡ ಬಳಿಕ ಕಿಮ್ಸ್ ಸೇರಿದಂತೆ ಕೆಲ ಆಸ್ಪತ್ರೆಗಳಲ್ಲಿ ಆಮ್ಲಜನಕದ ಕೊರತೆ ಉಂಟಾಗಿ, ರೋಗಿಗಳು ಸಮಸ್ಯೆ ಎದುರಿಸಿದ್ದರು. ರಾಜಾಜಿನಗರದ ಇಎಸ್‌ಐ ಆಸ್ಪತ್ರೆಯ ವೈದ್ಯರೊಬ್ಬರು ಆಮ್ಲಜನಕ ಸಂಪರ್ಕ ಹೊಂದಿದ್ದ ಹಾಸಿಗೆ ಸಿಗದೆಯೇ ಆಸ್ಪತ್ರೆಗಳಿಗೆ ಅಲೆದು ಮೃತಪಟ್ಟಿದ್ದರು. ಈಗ ಕೂಡ ಶೇ 70ರಷ್ಟು ಅಭಾವ ಸೃಷ್ಟಿಯಾಗಿರುವ ಕಾರಣ ಖಾಸಗಿ ಆಸ್ಪತ್ರೆಗಳು ಸರ್ಕಾರದ ಮೊರೆ ಹೋಗಿವೆ.

ಈ ಸಂಬಂಧ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫಾನಾ) ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಪತ್ರ ಬರೆದು, 'ಗಂಭೀರವಾಗಿ ಅಸ್ವಸ್ಥರಾಗಿರುವ ಸೋಂಕಿತರನ್ನು ಅಪಾಯದಿಂದ ಪಾರು ಮಾಡಲು ಆಮ್ಲಜನಕದ ಅಗತ್ಯವಿದೆ. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿರ್ವಹಿಸಲು ನಿಗದಿತ ಪ್ರಮಾಣದಲ್ಲಿ ಆಮ್ಲಜನಕದ ಸರಬರಾಜು ಆಗಬೇಕು' ಎಂದು ಮನವಿ ಮಾಡಿಕೊಂಡಿವೆ.

300 ಟನ್ ಅಗತ್ಯ: 'ನಗರದ ಖಾಸಗಿ ಆಸ್ಪತ್ರೆಗಳಿಗೆ ಪ್ರತಿದಿನ ವೈದ್ಯಕೀಯ ಬಳಕೆಗೆ 300 ಟನ್ ಆಕ್ಸಿಜನ್ ಬೇಕಾಗುತ್ತದೆ. ಈಗ 100 ಟನ್ ಮಾತ್ರ ಪೂರೈಕೆಯಾಗುತ್ತಿದೆ. ಬೇಡಿಕೆ ಸಲ್ಲಿಸಿದಷ್ಟು ವೈದ್ಯಕೀಯ ಆಮ್ಲಜನಕವನ್ನು ಉತ್ಪಾದನಾ ಕಂಪನಿಗಳು ಒದಗಿಸುತ್ತಿಲ್ಲ ಎನ್ನುವುದು ಪೂರೈಕೆದಾರರ ಆರೋಪ. ಈ ಸಮಸ್ಯೆಯನ್ನು ಔಷಧ ನಿಯಂತ್ರಕರ ಗಮನಕ್ಕೆ ಕೂಡ ತಂದಿದ್ದೇನೆ. ಈಗಾಗಲೇ ಹಲವು ಸೋಂಕಿತರನ್ನು ಶಿಫಾರಸು ಆಧಾರದ ಮೇಲೆ ದಾಖಲಿಸಿಕೊಳ್ಳಲಾಗಿದೆ. ಅವರಿಗೆ ಸೂಕ್ತ ಪ್ರಮಾಣದಲ್ಲಿ ಆಮ್ಲಜನಕ ಒದಗಿಸದಿದ್ದಲ್ಲಿ ಜೀವಕ್ಕೆ ಅಪಾಯವಾಗುವ ಸಾಧ್ಯತೆಯಿದೆ' ಎಂದು ಫಾನಾ ಅಧ್ಯಕ್ಷ ಡಾ. ಪ್ರಸನ್ನ ಎಚ್.ಎಂ. 'ಪ್ರಜಾವಾಣಿ'ಗೆ ತಿಳಿಸಿದರು.

'ಇದೇ ರೀತಿ ಕೊರತೆ ಮುಂದುವರಿದಲ್ಲಿ ಹೊಸ ರೋಗಿಗಳನ್ನು ದಾಖಲಿಸಿಕೊಳ್ಳುವುದು ಕಷ್ಟವಾಗುತ್ತದೆ. ಕೆಲ ಆಸ್ಪತ್ರೆಗಳಲ್ಲಿ 6 ಗಂಟೆಗಳಿಗೆ ಸಾಕಾಗುವಷ್ಟು ಮಾತ್ರ ಆಮ್ಲಜನಕವಿದೆ. ಬಹುತೇಕ ಆಸ್ಪತ್ರೆಗಳು ಪ್ರತಿನಿತ್ಯ ಪೂರೈಕೆಯಾಗುವ ಆಮ್ಲಜನಕದ ಮೇಲೆಯೇ ಅವಲಂಬಿತವಾಗಿವೆ. ನಮಗೆ ಎಷ್ಟು ಪ್ರಮಾಣದಲ್ಲಿ ವೈದ್ಯಕೀಯ ಆಮ್ಲಜನಕ ಅಗತ್ಯವಿದೆ ಎನ್ನುವ ವಿವರವನ್ನು ಸರ್ಕಾರಕ್ಕೆ ನೀಡಲಾಗಿದೆ' ಎಂದು ವಿವರಿಸಿದರು.

'ರಾಜ್ಯದಲ್ಲಿ ಪ್ರತಿನಿತ್ಯ 800 ಟನ್ ವೈದ್ಯಕೀಯ ಆಮ್ಲಜನಕವನ್ನು ಉತ್ಪಾದಿಸಲಾಗುತ್ತದೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಆಮ್ಲಜನಕವಿದೆ. ಖಾಸಗಿ ಆಸ್ಪತ್ರೆಗಳ ಮುಖ್ಯಸ್ಥರು ಕೊರತೆಯ ಬಗ್ಗೆ ತಿಳಿಸಿದ್ದಾರೆ. ಆ ಬಗ್ಗೆ ಪರಿಶೀಲನೆ ನಡೆಸಿ, ಅಗತ್ಯ ವ್ಯವಸ್ಥೆ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

'ಆಮ್ಲಜನಕ ಪೂರೈಸದಿದ್ದಲ್ಲಿ ಜೀವಕ್ಕೆ ಅಪಾಯ'

'ಆಮ್ಲಜನಕದ ಕೊರತೆ ಗಂಭೀರ ಸಮಸ್ಯೆ ಪಡೆದುಕೊಂಡಿದೆ. ಕಳೆದ ವರ್ಷ ಒಮ್ಮೆಲೆಯೇ 40ಕ್ಕೂ ಅಧಿಕ ರೋಗಿಗಳನ್ನು ದಾಖಲಿಸಿಕೊಂಡರೂ ಆಮ್ಲಜನಕದ ಸಮಸ್ಯೆ ಕಾಣಿಸಿರಲಿಲ್ಲ. ಆದರೆ, ಈ ಬಾರಿ ಬೇಡಿಕೆ ಅನುಸಾರ ಆಮ್ಲಜನಕ ದೊರೆಯುತ್ತಿಲ್ಲ. ಪೂರೈಕೆದಾರರು ಆಮ್ಲಜನಕ ಒದಗಿಸುತ್ತಿಲ್ಲ. ಅಗತ್ಯ ಪ್ರಮಾಣದಲ್ಲಿ ಆಮ್ಲಜನಕ ಇಲ್ಲದಿದ್ದಲ್ಲಿ ರೋಗಿಗಳಿಗೆ ಚಿಕಿತ್ಸೆ ಒದಗಿಸಲು ಸಾಧ್ಯವಾಗುವುದಿಲ್ಲ. ಈಗಾಗಲೇ ದಾಖಲಾಗಿರುವ ರೋಗಿಗಳನ್ನು ಸ್ಥಳಾಂತರ ಮಾಡದಿದ್ದಲ್ಲಿ ಅವರ ಜೀವಕ್ಕೆ ಅಪಾಯವಾಗಲಿದೆ. ಆದರೆ, ಎಲ್ಲಿಗೆ ಸ್ಥಳಾಂತರ ಮಾಡಬೇಕೆಂದು ಗೊತ್ತಾಗುತ್ತಿಲ್ಲ' ಎಂದು ಸ್ವಸ್ತಿಕ್ ಆಸ್ಪತ್ರೆಯ ಮಾಲೀಕ ಡಾ. ವಿಜಯ್ ರಾಘವ್ ರೆಡ್ಡಿ ಹೇಳಿದ್ದಾರೆ.

ಈ ಬಗ್ಗೆ ಅವರು ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ಹಂಚಿಕೊಂಡಿದ್ದು, 'ಸರ್ಕಾರವು ಅಗತ್ಯ ಪ್ರಮಾಣದಲ್ಲಿ ಆಮ್ಲಜನಕ ಒದಗಿಸಲು ಕ್ರಮಕೈಗೊಳ್ಳದಿದ್ದರೆ ಹಲವರು ಜೀವ ಕಳೆದುಕೊಳ್ಳಲಿದ್ದಾರೆ. ಹಾಗಾಗಿ, ಆಮ್ಲಜನಕ ಮತ್ತು ರೆಮ್‌ಡಿಸಿವಿರ್ ಔಷಧವನ್ನು ಆದ್ಯತೆ ಅನುಸಾರ ಒದಗಿಸಬೇಕು. ಈ ಮೂಲಕ ಕೋವಿಡ್ ಪೀಡಿತರನ್ನು ರಕ್ಷಿಸಲು ನೆರವಾಗಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

'ಮಹಾರಾಷ್ಟ್ರಕ್ಕೆ ಆಮ್ಲಜನಕ ಪೂರೈಕೆ'

ನೆರೆಯ ರಾಜ್ಯ ಮಹಾರಾಷ್ಟ್ರದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಗಣನೀಯವಾಗಿ ಏರಿಕೆ ಕಾಣುತ್ತಿದ್ದು, ಅಲ್ಲಿನ ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಹೆಚ್ಚಿದೆ. ಇದರಿಂದಾಗಿ ಇಲ್ಲಿನ ಉತ್ಪಾದನಾ ಕಂಪನಿಗಳು ದ್ರವರೂಪದ ಆಮ್ಲಜನಕವನ್ನು ಅಲ್ಲಿಗೆ ಕೂಡ ಹೆಚ್ಚಿನ ಪ್ರಮಾಣದಲ್ಲಿ ಪೂರೈಕೆ ಮಾಡಲಾರಂಭಿವೆ. ಇದರಿಂದಾಗಿ ಇಲ್ಲಿ ಕೊರತೆ ಎದುರಾಗಿದೆ ಎಂದು ಪೂರೈಕೆದಾರರು ತಿಳಿಸಿದರು.

ಈ ಹಿಂದೆ ಮಧ್ಯಮ ಗಾತ್ರದ ಆಸ್ಪತ್ರೆಗಳು ಪ್ರತಿನಿತ್ಯ 5ರಿಂದ 10 ಸಿಲಿಂಡರ್‌ಗಳಿಗೆ ಬೇಡಿಕೆ ಇಡುತ್ತಿದ್ದವು. ಈಗ ಆ ಸಂಖ್ಯೆ 25ರಿಂದ 50ಕ್ಕೆ ಏರಿಕೆಯಾಗಿದೆ. ಪರಿಣಾಮ ಬೇಡಿಕೆ ಮತ್ತು ಉತ್ಪಾದನೆ ನಡುವೆ ಅಂತರ ಹೆಚ್ಚಾಗಿದೆ ಎಂದು ಹೇಳಿದರು.

'ಪರಿಸ್ಥಿತಿ ಮುಂದುವರಿದಲ್ಲಿ ನಿರ್ವಹಣೆ ಕಷ್ಟ'

'ಜಂಬೊ ಸಿಲಿಂಡರ್ ಎಂದು ಕರೆಯಲಾಗುವ ಒಂದು ಸಿಲಿಂಡರ್ ಸುಮಾರು 7000 ಲೀಟರ್ ಆಕ್ಸಿಜನ್ ಹೊಂದಿರುತ್ತದೆ. ಸದ್ಯ ನಮಗೆ 30ರಿಂದ 45 ಸಿಲಿಂಡರ್‌ಗಳು ಪ್ರತಿನಿತ್ಯ ಅಗತ್ಯವಿದೆ. ಕೈಗಾರಿಕೆಗಳಿಗೆ ಸರಬರಾಜಾಗುತ್ತಿರುವ ಆಮ್ಲಜನಕವನ್ನು ಸರ್ಕಾರವು ಆರೋಗ್ಯ ಕ್ಷೇತ್ರಕ್ಕೆ ಒದಗಿಸಬೇಕು. ಈ ಮೂಲಕ ಆರೋಗ್ಯ ತುರ್ತುಪರಿಸ್ಥಿತಿಯಲ್ಲಿ ರೋಗಿಗಳಿಗೆ ಅಗತ್ಯ ವೈದ್ಯಕೀಯ ಸೇವೆ ಒದಗಿಸಲು ನೆರವಾಗಬೇಕು' ಎಂದು ಎಸಿಇ ಸುಹಾಸ್ ಆಸ್ಪತ್ರೆಯ ಜಗದೀಶ್ ಹಿರೇಮಠ ತಿಳಿಸಿದರು.

ರೀಗಲ್ ಆಸ್ಪತ್ರೆಯ ಮುಖ್ಯಸ್ಥ ಡಾ. ಸೂರಿರಾಜು, 'ಕೋವಿಡ್ ಸಾವುಗಳ ಸಂಖ್ಯೆ ಏರಿಕೆಯಾಗುತ್ತಿದೆ. ಕೋವಿಡ್ ಕಾಣಿಸಿಕೊಳ್ಳುವ ಮೊದಲು ನಮಗೆ ಡಯಾಲಿಸಿಸ್ ಹಾಗೂ ಶಸ್ತ್ರಚಿಕಿತ್ಸೆಗೆ 5 ರಿಂದ 10 ಆಮ್ಲಜನಕದ ಸಿಲಿಂಡರ್ ಅವಶ್ಯಕತೆ ಇತ್ತು. ಆದರೆ, ಈಗ ಪ್ರತಿ ದಿನ 100 ಜಂಬೊ ಸಿಲಿಂಡರ್‌ಗಳು ಕೂಡ ಸಾಕಾಗುತ್ತಿಲ್ಲ. ಕೆಲ ದಿನಗಳಿಂದ ಆಸ್ಪತ್ರೆಯವರೇ ಬೆಳಿಗ್ಗೆ ಕೈಗಾರಿಕೆಗಳಿಗೆ ತೆರಳಿ, ಸಿಲಿಂಡರ್ ತರುವ ಸ್ಥಿತಿ ನಿರ್ಮಾಣವಾಗಿದೆ. ಸರ್ಕಾರವು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

ಸರ್ಕಾರಿ ನೌಕರರಿಗೂ ಪಾಳಿ ಪದ್ಧತಿ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೆಚ್ಚುತ್ತಿರುವುದರಿಂದ, ಕೇಂದ್ರ ಸರ್ಕಾರದ ಮಾದರಿಯಲ್ಲಿ ರಾಜ್ಯ ಸರ್ಕಾರ ಕೂಡಾ ಸರ್ಕಾರಿ ಕಚೇರಿಗಳಲ್ಲಿ ನೌಕರರ ಹಾಜರಾತಿಗೆ ಪಾಳಿ ಪದ್ಧತಿ ಅನುಸರಿಸಬೇಕು ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಅವರಿಗೆ ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಸಲ್ಲಿಸಿದೆ.

ಸಚಿವಾಲಯದ ಉಪ ಕಾರ್ಯದರ್ಶಿ ಮತ್ತು ಅಧೀನ ಕಾರ್ಯದರ್ಶಿ ಹಂತದ ಅಧಿಕಾರಿಗಳು ಶೇ 50ರಷ್ಟು ಹಾಗೂ ಇತರ ಎಲ್ಲ ಹಂತದ ಅಧಿಕಾರಿ, ನೌಕರರು ಶೇ 33ರಷ್ಟು ಕಚೇರಿಗೆ ಸರದಿ ಆಧಾರದಲ್ಲಿ ಹಾಜರಾಗಲು ಅವಕಾಶ ಕಲ್ಪಿಸಬೇಕು. ಗರ್ಭಿಣಿ ನೌಕರರಿಗೆ ಮತ್ತು 55 ವರ್ಷ ದಾಟಿದ, ಅನಾರೋಗ್ಯದಿಂದ ಬಳಲುತ್ತಿರುವ ನೌಕರರಿಗೆ ಹಾಜರಾತಿಯಿಂದ ವಿನಾಯಿತಿ ನೀಡಿ ಮನೆಯಿಂದಲೇ ಕರ್ತವ್ಯ ನಿರ್ವಹಿಸಲು ಅವಕಾಶ ಮಾಡಿಕೊಡಬೇಕು' ಎಂದು ಮನವಿ ಪತ್ರದಲ್ಲಿ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಕೋರಿದ್ದಾರೆ.

'ಕೇಂದ್ರ ಸರ್ಕಾರ ತನ್ನ ನೌಕರರ ಆರೋಗ್ಯ ರಕ್ಷಣೆ ದೃಷ್ಟಿಯಿಂದ ಕಚೇರಿ ನಿರ್ವಹಣೆ ಸಂದರ್ಭದಲ್ಲಿ ಅಧಿಕಾರಿಗಳು, ನೌಕರರು ಪಾಳಿ ಪದ್ಧತಿ ಅನುಸರಿಸುವಂತೆ ಏ. 13ರಂದೇ ಆದೇಶ ಹೊರಡಿಸಿದೆ. ಅದೇ ರೀತಿ ರಾಜ್ಯ ಸರ್ಕಾರ ಕೂಡಾ ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಮನವಿ ಮಾಡಿದ್ದಾರೆ.

'ಮನೆ ಬಾಗಿಲಿಗೆ ಶಾಲೆ' ಕಾರ್ಯಕ್ರಮಕ್ಕೆ ಚಾಲನೆ

ಬೆಂಗಳೂರು: ಸಂಚಾರದ ಸಿಗ್ನಲ್‌ಗಳ ಬಳಿ ಭಿಕ್ಷಾಟನೆಯಲ್ಲಿ ತೊಡಗಿದ್ದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಬಿಬಿಎಂಪಿ ಆರಂಭಿಸಿರುವ 'ಮನೆ ಬಾಗಿಲಿಗೆ ಶಾಲೆ' ಕಾರ್ಯಕ್ರಮಕ್ಕೆ ಹೈಕೋರ್ಟ್ ಆವರಣದಲ್ಲಿ ಶನಿವಾರ ಚಾಲನೆ ನೀಡಲಾಯಿತು.

ಭಿಕ್ಷಾಟನೆ ಹಾಗೂ ವಸ್ತುಗಳ ಮಾರಾಟದಲ್ಲಿ ತೊಡಗಿರುವ ಮಕ್ಕಳ ಶಿಕ್ಷಣಕ್ಕೆ ಸಂಚಾರ ಶಾಲೆ ಆರಂಭಿಸುವಂತೆ ಹೈಕೋರ್ಟ್ ರಿಟ್ ಅರ್ಜಿಯೊಂದರ ವಿಚಾರಣೆ ವೇಳೆ 2020ರ ಡಿ 10ರಂದು ಆದೇಶ ಮಾಡಿತ್ತು. ಬಿಬಿಎಂಪಿಯ ಆಗಿನ ಆಯುಕ್ತ ಎನ್.ಮಂಜುನಾಥ ಪ್ರಸಾದ್ ಅವರು ಇಂತಹ ಮಕ್ಕಳ ಸಮೀಕ್ಷೆ ನಡೆಸುವಂತೆ ಸೂಚನೆ ನೀಡಿದ್ದರು. ಬಿಎಂಟಿಸಿಯು 10 ಬಸ್‌ಗಳನ್ನು ಸಂಚಾರ ಶಾಲೆಗಳನ್ನಾಗಿ ಪರಿವರ್ತಿಸಿ ಬಿಬಿಎಂಪಿಗೆ 2021ರ ಮಾರ್ಚ್ 22ರಂದು ಹಸ್ತಾಂತರಿಸಿತ್ತು.

ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ಅವರ ಕೋರಿಕೆ ಮೇರೆಗೆ ಬಿಬಿಎಂಪಿಯು ದಕ್ಷಿಣ ವಲಯದ ಹೊಸಕೆರೆಹಳ್ಳಿಯ ಕೊಳೆಗೇರಿ, ರಾಜರಾಜೇಶ್ವರಿನಗರ ವಲಯದ ದೊಡ್ಡಗೊಲ್ಲರಹಟ್ಟಿಯಲ್ಲಿ ಸಂಚಾರ ಶಾಲೆಗಳನ್ನು ಆರಂಭಿಸಲು ಕ್ರಮ ಕೈಗೊಂಡಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ವಿ.ರವೀಂದ್ರನ್, ಹೈಕೋರ್ಟ್‌ನ ನ್ಯಾಯಮೂರ್ತಿ ಅರವಿಂದ ಕುಮಾರ್, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ ಗುಪ್ತ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಭತ್ತ ಖರೀದಿ: ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ಬೆಂಬಲ ಬೆಲೆಯಲ್ಲಿ ಹಿಂಗಾರು ಹಂಗಾಮಿನ ಭತ್ತ ಖರೀದಿಸುವ ಅವಧಿಯನ್ನು ಕೇಂದ್ರ ಸರ್ಕಾರ ಜೂನ್ 30ವರೆಗೆ ವಿಸ್ತರಿಸಿದೆ.

ರೈತರ ನೋಂದಣಿ ಅವಧಿಯನ್ನು ಮೇ 5 ರವರೆಗೆ ನಿಗದಿಪಡಿಸಿದೆ.

ಕೋವಿಡ್ ಸಂಕಷ್ಟದಲ್ಲಿ ರೈತರು ಕಡಿಮೆ ಬೆಲೆಗೆ ಭತ್ತ ಮಾರಾಟ ಮಾಡದಂತೆ ಮಾಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಬೆಂಬಲ ಬೆಲೆ ಯೋಜನೆಯಲ್ಲಿ ನೋಂದಾಯಿತ ರೈತರಿಂದ ರಾಗಿ, ಜೋಳ ಖರೀದಿಸುವ ಅವಧಿಯನ್ನು ಏ. 30ರವರೆಗೆ ವಿಸ್ತರಿಸಲಾಗಿದೆ.

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

- ಲೈಂಗಿಕ ರೋಗಗಳು
- ಉದ್ರೇಕದ ಸಮಸ್ಯೆ
- ಲೈಂಗಿಕ ನಿರಾಸಕ್ತಿ
- ನಿದ್ರಾ ಸ್ಖಲನ
- ಶೀಘ್ರ ಸ್ಖಲನ
- ಲಿಂಗ ಚಿಕ್ಕದಾಗುವುದು
- ನರ ದೌರ್ಬಲ್ಯ
- ಅವಧಿಗೆ ಮೊದಲೇ ಸ್ಖಲನ
- ಆತಂಕ, ದೌರ್ಬಲ್ಯ
- ಕಡಿಮೆ ವೀರ್ಯಾಣು
- ಮುಷ್ಠಿ ಮೈಥುನದ ಅಡ್ಡಪರಿಣಾಮ

NO SIDE EFFECTS 100% No Side Effects
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

Prestige GROUP
Add Prestige to your life

2750+ ಸಂತುಷ್ಟ ಪರಿವಾರಗಳು
ಜಾಣ ನಿರ್ಧಾರ ಕೈಗೊಂಡಿವೆ
ಪ್ರೆಸ್ಟೀಜ್ ಜಿಂದಾಲ್ ಸಿಟಿ ಯೋಜನೆಯಲ್ಲಿ ನಿಮ್ಮ ಕನಸಿನ
ಮನೆ ಬುಕ್ ಮಾಡಿ, ನೀವು ಅವರನ್ನು ಸೇರಿಕೊಳ್ಳಿ

25:75
ಕೊಡುಗೆ
(ಕಡಿಮೆ ಅವಧಿಯ ಕೊಡುಗೆಗಳು)
ಈಗ 25% ಪಾವತಿಸಿ
ಇನ್ನುಳಿದ 75% ಅನ್ನು ಸ್ವಾಧೀನತೆಯ * ನಂತರ
ಹಂತ 1 – ಏಪ್ರಿಲ್ 2022
ಹಂತ 2 – ಡಿಸೆಂಬರ್ 2022

- ಯೋಜನೆಯ ಪಕ್ಕದಲ್ಲಿಯೇ ಮೆಟ್ರೊ ನಿಲ್ದಾಣವಿದೆ
- ವಿಶಾಲವಾಗಿ 32 ಎಕರೆಗಳಲ್ಲಿ ಹರಡಿಕೊಂಡಿದೆ
- ಕ್ಲಬ್‌ಹೌಸ್ ಜೊತೆಗೆ 30+ ಸೌಲಭ್ಯಗಳು

1, 2, 3 & 4 ಬಿಹೆಚ್‌ಕೆ
ಆರಂಭಿಕ ಬೆಲೆ ₹45 ಲಕ್ಷ **
** ತೆರಿಗೆಗಳು/ಹೆಚ್ಚುವರಿ ಶುಲ್ಕಗಳು ಪ್ರತ್ಯೇಕ
ಕಾರ್ಪೆಟ್ ಏರಿಯಾ ವಿವರಗಳಿಗೆ ದಯವಿಟ್ಟು ಬ್ರೊಷರ್ ಪರಿಶೀಲಿಸಿ.

ಪ್ರೆಸ್ಟೀಜ್ ಜಿಂದಾಲ್ ಸಿಟಿ
ಉನ್ನತ ವಸತಿಯ ಹೆಗ್ಗುರುತು
ತುಮಕೂರು ರಸ್ತೆ
ಸಂಪರ್ಕಿಸಿ: 84950 84950
www.prestigeconstructions.com
* ಷರತ್ತು & ನಿಬಂಧನೆಗಳು ಅನ್ವಯ

MEMBER OF CREDAI
1 ಬಿಹೆಚ್‌ಕೆ ಅಪಾರ್ಟ್‌ಮೆಂಟ್‌ಗಳ ಮೇಲೆ ಕಡಿಮೆ ಮುದ್ರಾಂಕ ಶುಲ್ಕದ ಲಾಭ ಪಡೆಯಿರಿ
ಪ್ರೆಸ್ಟೀಜ್ ಗ್ರೂಪ್ & ಎಸ್‌ಆರ್ ಜಿಂದಾಲ್ ಗ್ರೂಪ್ ಜಾಯಿಂಟ್ ವೆಂಚರ್
CRISIL DA1 Rated

ಹೆಚ್ಚುತ್ತಿರುವ ಬಸ್‌ಗಳ ಸಂಚಾರ; ಸಂಘಟನೆಗಳ ಮಧ್ಯೆ ಆರೋಪ–ಪ್ರತ್ಯಾರೋಪ ತಾರಕಕ್ಕೆ

ಒಂದೇ ದಿನ 2,443 ಸಿಬ್ಬಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರ ಆರಂಭವಾಗಿ 11 ದಿನವಾಗಿದ್ದು, ರಸ್ತೆಗಿಳಿಯುವ ಬಸ್‌ಗಳ ಸಂಖ್ಯೆ ಹೆಚ್ಚಳ ಆಗುತ್ತಿದೆ. ಮುಷ್ಕರ ತೀವ್ರತೆ ಕಡಿಮೆಗೊಳ್ಳುತ್ತಿದೆ. ಇನ್ನೊಂದೆಡೆ ಬಿಎಂಟಿಸಿ ನೌಕರರನ್ನೇ ಸರ್ಕಾರ ಗುರಿಯಾಗಿಸಿಕೊಂಡಿದ್ದು, ಶನಿವಾರ ಒಂದೇ ದಿನ 2,443 ನೌಕರರನ್ನು ಅಮಾನತುಗೊಳಿಸಿ ಆದೇಶಿಸಿದೆ.

ಮುಷ್ಕರಕ್ಕೆ ಕರೆ ನೀಡಿರುವ ಸಾರಿಗೆ ನೌಕರರ ಕೂಟದಲ್ಲಿ ಬಿಎಂಟಿಸಿ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಈವರೆಗೆ 820 ಜನರನ್ನು ಬಿಎಂಟಿಸಿ ವಜಾಗೊಳಿಸಿದೆ. ಇದರಲ್ಲಿ ತರಬೇತಿ, ಪ್ರೊಬೇಷನರಿ ಅವಧಿಯ 580 ಸಿಬ್ಬಂದಿ ಇದ್ದಾರೆ. ಅಮಾನತುಗೊಂಡ ನೌಕರರ ಸಂಖ್ಯೆ 3,170ಕ್ಕೆ ಏರಿಕೆದೆ. ಎಲ್ಲಾ

ಸಾರಿಗೆ ನೌಕರರ ಬಗ್ಗೆ ಸರ್ಕಾರ ತಿರಸ್ಕಾರ ಭಾವನೆ ತೋರಿಸುತ್ತಿದ್ದು, ಬೇಡಿಕೆಗಳಿಗೆ ಸ್ಪಂದಿಸಲು ಸರ್ಕಾರಕ್ಕೆ ಸೌಜನ್ಯವಾದ ತನಕ ಗಡುವು ನೀಡಲಾಗಿದೆ

ಕೋಡಿಹಳ್ಳಿ ಚಂದ್ರಶೇಖರ್, ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ

ಕೂಟದ ಅಧ್ಯಕ್ಷ, ಗೌರವಾಧ್ಯಕ್ಷರನ್ನು ನಂಬಿ ಅಮಾಯಕ ನೌಕರರು ಬಲಿಪಶು ಆಗುತ್ತಿದ್ದಾರೆ. ಆಗುಹೋಗುಗಳಿಗೆ ಅವರೇ ಹೊಣೆ, ನಾವಲ್ಲ

ಎಚ್.ವಿ. ಅನಂತಸುಬ್ಬರಾವ್, ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ

ನೌಕರರ ವಿರುದ್ಧ ದೋಷಾರೋಪ ಪಟ್ಟಿ ಕೂಡ ಸಿದ್ಧವಾಗುತ್ತಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಇದೆಲ್ಲದರ ನಡುವೆ, ಮುಷ್ಕರದ ವೈಫಲ್ಯ ಆಗುತ್ತಿರುವುದಕ್ಕೆ ಯಾರು ಹೊಣೆ ಎಂಬುದರ ಕುರಿತು ಸಂಘಟನೆಗಳ ನಡುವೆಯೇ ಆರೋಪ-ಪ್ರತ್ಯಾರೋಪಗಳು ಶನಿವಾರ ತಾರಕಕ್ಕೆ ಏರಿದೆ. ಶನಿವಾರ ಸಂಜೆ ವೇಳೆಗೆ ನಾಲ್ಕು ನಿಗಮಗಳ 6,836 ಬಸ್‌ಗಳು ರಸ್ತೆಗೆ ಇಳಿದಿವೆ ಎಂದು ಮಾಹಿತಿಯನ್ನು ಕೆಎಸ್‌ಆರ್‌ಟಿಸಿ ನೀಡಿದೆ.

ಶನಿವಾರ ರಸ್ತೆಗಿಳಿದ ಬಸ್‌ಗಳು	
ಕೆಎಸ್‌ಆರ್‌ಟಿಸಿ	3,206
ಬಿಎಂಟಿಸಿ	1,152
ಎನ್‌ಇಕೆಆರ್‌ಟಿಸಿ	1,308
ಎನ್‌ಡಬ್ಲ್ಯುಕೆಆರ್‌ಟಿಸಿ	1,170
ಒಟ್ಟು	6,836

ಈ ನಡುವೆ ನೌಕರರನ್ನು ಮಾತುಕತೆಗೆ ಕರೆಯುವ ಯಾವುದೇ ಲಕ್ಷಣಗಳು ಸರ್ಕಾರದ ಕಡೆಯಿಂದ ಕಾಣಿಸುತ್ತಿಲ್ಲ. ಬದಲಾಗಿ ದಿನೇ ದಿನೇ ನೌಕರರ ವಜಾ ಮತ್ತು ಅಮಾನತು ಪ್ರಕ್ರಿಯೆ ಮುಂದುವರಿದಿದೆ. ಇದರಿಂದ ಹೆದರಿ ಕರ್ತವ್ಯಕ್ಕೆ ಹಾಜರಾಗುತ್ತಿರುವ ನೌಕರರ ಸಂಖ್ಯೆ ಕೂಡ ಹೆಚ್ಚಾಗುತ್ತಿದೆ.

ಈ ಬೆಳವಣಿಗೆಗಳ ಮಧ್ಯೆ, ನೌಕರರ ಕೂಟದ ಅಧ್ಯಕ್ಷ ಚಂದ್ರಶೇಖರ್ ವಿಡಿಯೊ ಒಂದನ್ನು ಹರಿಬಿಟ್ಟಿದ್ದಾರೆ. ನೌಕರರ ಮುಷ್ಕರ ದಾರಿ ತಪ್ಪಲು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಷನ್ ಅಧ್ಯಕ್ಷ ಅನಂತಸುಬ್ಬರಾವ್ ಮತ್ತು ಸಾರಿಗೆ ನೌಕರರ ಮಹಾಮಂಡಳದ ಅಧ್ಯಕ್ಷ ಡಾ.ಕೆ.ಎಸ್. ಶರ್ಮಾ ಕಾರಣ ಎಂದು ಹರಿಹಾಯ್ದಿದ್ದಾರೆ.

'ಮುಷ್ಕರ ವಿಫಲಗೊಳಿಸಲು ಈ ಮಹಾನಾಯಕರೇ ಪಿತೂರಿ ಮಾಡಿದ್ದಾರೆ. ನಾಯಕತ್ವ ಬದಲಾವಣೆ ಸಹಿಸಲಾರದೆ ಬಸ್‌ಗಳ ಕಾರ್ಯಾಚರಣೆಗೆ ಕುಮ್ಮಕ್ಕು ನೀಡಿದ್ದಾರೆ. ನೌಕರರಿಗೆ ಅನ್ಯಾಯವಾದರೆ ಅದಕ್ಕೆ ಈ ಇಬ್ಬರೇ ಹೊಣೆ' ಎಂದು ಆರೋಪಿಸಿದ್ದಾರೆ.

ಇದರಿಂದ ಕುಪಿತಗೊಂಡಿರುವ ಫೆಡರೇಷನ್ ಮತ್ತು ಮಹಾಮಂಡಳದ ಪದಾಧಿಕಾರಿಗಳು, ಚಂದ್ರಶೇಖರ್ ಅವರನ್ನು ತರಾಟೆಗೆ ತೆಗೆದುಕೊಂಡಿರುವ ಆಡಿಯೊ ಕೂಡ ಹರಿದಾಡುತ್ತಿದೆ. 'ದಿನಾಲು ನೌಕರರ, ಸಾರಿಗೆ ನೌಕರರ ಪರ ಸುದೀರ್ಘ ಹೋರಾಟ ನಡೆಸಿರುವ ಕೆ.ಎಸ್.ಶರ್ಮಾ ವಿರುದ್ಧ ಮಾತನಾಡುತ್ತಿರುವುದು ಅಕ್ಷಮ್ಯ. ನೌಕರರನ್ನು ದಿಕ್ಕುತಪ್ಪಿಸಿ ಬೀದಿಗೆ ತಳ್ಳುವ ಪ್ರಯತ್ನವನ್ನು ನೀವು ಮಾಡಿದ್ದೀರಿ' ಎಂದು ಟೀಕಿಸಿದ್ದಾರೆ.

'ಸಾರಿಗೆ ನಿಗಮಗಳು ಮತ್ತು ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಮತ್ತು ಆಗುಹೋಗುಗಳ ಎಲ್ಲಾ ಪರಿಣಾಮಗಳ ಹೊಣೆಯನ್ನು ಚಂದ್ರಶೇಖರ್ ಅವರೇ ಹೊರಬೇಕು' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಫೆಡರೇಷನ್‌ (ಸಿಐಟಿಯು) ಕಾರ್ಯದರ್ಶಿ ಎಚ್.ಎಸ್. ಮಂಜುನಾಥ್ ಪ್ರತಿಕ್ರಿಯಿಸಿದ್ದಾರೆ.

ಸುದ್ದಿ 2 ನಿಮಿಷ

ಹಣದಾಸೆಗೆ ಜ್ಯೋತಿಷ ಶಾಸ್ತ್ರದ ದುರುಪಯೋಗ: ಸೋಮಣ್ಣ

ಮೈಸೂರು: 'ಕೆಲವರು ಹಣದಾಸೆಗೆ ಜ್ಯೋತಿಷ ಶಾಸ್ತ್ರ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.ಇದರಿಂದ ಈ ಶಾಸ್ತ್ರಕ್ಕೂ ಮೂಢನಂಬಿಕೆ ಎಂಬ ಕೆಟ್ಟ ಹೆಸರು ಬಂದಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ಬೇಸರ ವ್ಯಕ್ತಪಡಿಸಿದರು.

ಮಾಯಾಕಾರ ಗುರುಕುಲ ಆಯೋಜಿಸಿರುವ ರಾಷ್ಟ್ರ ಮಟ್ಟದ ಎರಡು ದಿನಗಳ ಜ್ಯೋತಿಷ ಸಮ್ಮೇಳನವನ್ನು ಶನಿವಾರ ಉದ್ಘಾಟಿಸಿದ ಅವರು, 'ತಾತ್ವಿಕ ನೆಲೆಗಟ್ಟಿನ ಮೇಲೆ ಜ್ಯೋತಿಷ ಶಾಸ್ತ್ರ ನಿಂತಿದೆ. ಇದನ್ನು ಸರಿಯಾಗಿ ಅಧ್ಯಯನ ಮಾಡದೆ ವಿಜ್ಞಾನವನ್ನು ದುರುಪಯೋಗಪಡಿಸುವ ಕೆಲಸ ಅಗುತ್ತಿದೆ' ಎಂದರು.

ಜನರಿಗೆ ಜ್ಯೋತಿಷ ಶಾಸ್ತ್ರದ ಬಗ್ಗೆ ನಂಬಿಕೆ ಬರುವಂತೆ ಜ್ಯೋತಿಷಿಗಳು ವರ್ತಿಸಬೇಕು. ಶಾಸ್ತ್ರದ ಸರಿಯಾದ ಅಧ್ಯಯನ ಮತ್ತು ವೈಜ್ಞಾನಿಕ ನೆಲೆಗಟ್ಟಿನಿಂದ ಮೂಢನಂಬಿಕೆ ಎಂಬ ಹಣೆಪಟ್ಟಿ ಖಂಡಿತವಾಗಿ ಕಳಚಿ ಹೋಗುತ್ತದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಮುಕ್ತ ವಿಶ್ವವಿದ್ಯಾಲಯ ಆವರಣದಲ್ಲಿ ಸಮ್ಮೇಳನ ಆಯೋಜಿಸಿದ್ದು, ರಾಜ್ಯದ ವಿವಿಧ ಭಾಗಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದಾರೆ. ನಾಡಿ ರಹಸ್ಯ, ಸಂಖ್ಯಾಶಾಸ್ತ್ರ, ವೈದ್ಯಕೀಯ ಜ್ಯೋತಿಷ, ರಾಜಯೋಗ, ಸ್ವರಭಾನು, ದೈವ ಶಾಪ, ಶಲ್ಯ ದೋಷ ಮುಂತಾದ ವಿಷಯಗಳ ಕುರಿತು ಉಪನ್ಯಾಸ ಏರ್ಪಡಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ: ₹68.94 ಕೋಟಿ ಆದಾಯ

ಸುಬ್ರಹ್ಮಣ್ಯ: ಇಲ್ಲಿನ ಕುಕ್ಕೆ ಸುಬ್ರಹ್ಮಣ್ಯ ದೇಗುಲಕ್ಕೆ 2020-21ನೇ ಆರ್ಥಿಕ ವರ್ಷದಲ್ಲಿ ₹ 68.94 ಕೋಟಿ ಆದಾಯ ಬಂದಿದ್ದು, ಕಳೆದ ಸಾಲಿಗಿಂತ ₹ 29.97 ಕೋಟಿ ಕಡಿಮೆಯಾಗಿದೆ. 2019-20ರಲ್ಲಿ ₹98.92 ಕೋಟಿ ಆದಾಯ ಗಳಿಸಿತ್ತು.

ಲಾಕ್‌ಡೌನ್‌ನಿಂದಾಗಿ ಕಳೆದ ವರ್ಷ ಮಾ.17ರಿಂದ ಸೆ.8ರ ತನಕ ದೇವಳ ಬಂದ್ ಆಗಿತ್ತು. ಉಳಿದಂತೆ ಸೆ.15 ರಿಂದ ಮಾ.31ರ ತನಕ ದೇವಳಕ್ಕೆ ಬಂದ ಆದಾಯ ಇದಾಗಿದೆ ಎಂದು ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನರಾಂ ಸುಳ್ಳಿ ತಿಳಿಸಿದ್ದಾರೆ.

ದೇವಸ್ಥಾನಕ್ಕೆ ಹರಕೆ ಸೇವೆ, ಕಾಣಿಕೆ ಡಬ್ಬಿ, ಉಳಿತಾಯ ಖಾತೆಗಳ ಬಡ್ಡಿ, ಛತ್ರಗಳ ಬಾಡಿಗೆ, ಕಟ್ಟಡಗಳ ಬಾಡಿಗೆ ಮತ್ತು ಕೃಷಿ ತೋಟದಿಂದ ಆದಾಯವು ಬರುತ್ತದೆ ಎಂದರು.

ಬಸ್ ಮೇಲೆ ಕಲ್ಲು ತೂರಾಟ

ಬಸ್‌ನ ಗಾಜು ಒಡೆದಿರುವುದು

ರಾಮನಗರ: ಕನಕಪುರದಿಂದ ರಾಮನಗರಕ್ಕೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮೇಲೆ ದುಷ್ಕರ್ಮಿಗಳು ಶನಿವಾರ ಮಧ್ಯಾಹ್ನ ಕನಕಪುರ ತಾಲ್ಲೂಕಿನ ಹಳ್ಳಿಮಾರನಹಳ್ಳಿ ಬಳಿ ಕಲ್ಲು ತೂರಿದ್ದಾರೆ.

ಬೈಕಿನಲ್ಲಿ ಬಂದ ಕಿಡಿಗೇಡಿಗಳು ಗಾಜಿಗೆ ಕಲ್ಲು ತೂರಿದರು. ಇದರಿಂದಾಗಿ ಚಾಲಕನ ಬಲಭಾಗದ ಕಿಟಕಿ ಗ್ಲಾಸ್ ಪುಡಿಯಾಗಿದೆ. ಯಾರಿಗೂ ಗಾಯವಾಗಿಲ್ಲ. ಕನಕಪುರ ಗ್ರಾಮೀಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

ಪ್ರಮುಖ ಆರೋಪಿ ಅದೇ ಬಸ್‌ನಲ್ಲಿದ್ದ!

ಕಲ್ಲು ಹೊಡೆದು ಚಾಲಕ ನಬಿ ರಸೂಲ್ ಕೊಲೆ ಪ್ರಕರಣ: ಐವರು ಸಹೋದ್ಯೋಗಿಗಳ ಬಂಧನ

ಪ್ರಜಾವಾಣಿ ವಾರ್ತೆ

ಅರುಣ್ ಅರಕೇರಿ

ಲೋಹಿತ್ ದಾಸರ

ಚೇತನ್ ಕರ್ವೆ

ಸದಾಶಿವ

ಮಲ್ಲಪ್ಪ

ಬಾಗಲಕೋಟೆ: ವಾಯವ್ಯ ಸಾರಿಗೆ ಸಂಸ್ಥೆ ಚಾಲಕ ನಬಿ ರಸೂಲ್ ಆವಟಿ ಅವರನ್ನು ಕಲ್ಲು ಹೊಡೆದು ಕೊಲೆ ಮಾಡಿದ ಆರೋಪದ ಮೇಲೆ ಬಂಧಿತರಾಗಿರುವ ಐವರಲ್ಲಿ ಪ್ರಮುಖ ಆರೋಪಿ ಅರುಣ್ ಅರಕೇರಿ, ದಾಳಿಗೆ ತುತ್ತಾದ ಬಸ್‌ನಲ್ಲಿಯೇ ವಿಜಯಪುರದಿಂದ ಕೃತ್ಯ ನಡೆದ ಸ್ಥಳದವರೆಗೆ ಪ್ರಯಾಣಿಸಿದ್ದ ಎಂಬುದು ಪೊಲೀಸರ ತನಿಖೆಯ ವೇಳೆ ಬಯಲಾಗಿದೆ.

ಚಾಲಕ ಕಂ ನಿರ್ವಾಹಕ ಅರುಣ್ ಅರಕೇರಿ ಸೇರಿದಂತೆ ವಾಯವ್ಯ ಸಾರಿಗೆ ಸಂಸ್ಥೆಯ ಜಮಖಂಡಿ ಘಟಕದ ಸಿಬ್ಬಂದಿ ಮಲ್ಲಪ್ಪ ತಳವಾರ, ಚೇತನ ಕರ್ವೆ, ಸದಾಶಿವ ಕಂಕಣವಾಡಿ, ಲೋಹಿತ್ ದಾಸರ ಅವರನ್ನು ಬಾಗಲಕೋಟೆ ಪೊಲೀಸರ ವಿಶೇಷ ತಂಡ ಶುಕ್ರವಾರ ರಾತ್ರಿ ಬಂಧಿಸಿದೆ.

ಬಹುತೇಕ ಸಿಬ್ಬಂದಿ ಮುಷ್ಕರದಲ್ಲಿ ನಿರತರಾಗಿದ್ದ ವೇಳೆ ಕೆಲವರು ಮಾತ್ರ ಕರ್ತವ್ಯಕ್ಕೆ ಮರಳಿದ್ದು ಆರೋಪಿಗಳ ಅತೃಪ್ತಿಗೆ ಕಾರಣವಾಗಿತ್ತು. ಜೊತೆಗೆ ಜಮಖಂಡಿ ಸಾರಿಗೆ ನೌಕರರ ಮುಷ್ಕರದ ನೇತೃತ್ವ ವಹಿಸಿದ್ದರು ಎಂಬ ಕಾರಣಕ್ಕೆ ಅರುಣ್ ಅರಕೇರಿ ಅವರನ್ನು ಉತ್ತರ ಕನ್ನಡ ಜಿಲ್ಲೆ ಭಟ್ಕಳ ಘಟಕಕ್ಕೆ ವರ್ಗಾವಣೆ ಮಾಡಲಾಗಿತ್ತು. ಇದರಿಂದಾಗಿ ಅರುಣ್ ಸೇರಿದಂತೆ ಇತರ ಆರೋಪಿಗಳು ಆಕ್ರೋಶಗೊಂಡು ದುಷ್ಕೃತ್ಯ ಕೈಗೊಳ್ಳಲು ಪ್ರಚೋದಿಸಿತ್ತು ಎಂದು ಹೇಳಲಾಗಿದೆ.

ಘತ್ತರಗಾ–ಜಮಖಂಡಿ ಬಸ್ ವಿಜಯಪುರ ಮಾರ್ಗವಾಗಿ ಬರುವಾಗ ಬಸ್ ಹತ್ತಿದ್ದ ಅರುಣ್ ಅರಕೇರಿ, ಬಸ್ ಸಂಚರಿಸುತ್ತಿದ್ದ ಕ್ಷಣ ಕ್ಷಣದ ಮಾಹಿತಿಯನ್ನು ಮೊಬೈಲ್ ಮೂಲಕ ಇತರ ಆರೋಪಿಗಳಿಗೆ ನೀಡುತ್ತಿದ್ದರು. ಕೃತ್ಯ ನಡೆಯುವುದಕ್ಕೂ ಮುನ್ನ ಉಳಿದ ನಾಲ್ವರು ಆರೋಪಿಗಳು ಎರಡು ಬೈಕ್‌ಗಳಲ್ಲಿ ಬಬಲೇಶ್ವರಕ್ಕೆ ಪರಿಚಿತರೊಬ್ಬರ ಸಾವಿನ ಅಂತ್ಯಕ್ರಿಯೆಗೆ ತೆರಳಿ ಅದೇ ಮಾರ್ಗದಲ್ಲಿ ಜಮಖಂಡಿಗೆ ವಾಪಸಾಗುತ್ತಿದ್ದರು.

> **ಕೃತ್ಯ ನಡೆದ ಕೆಲವೇ ಗಂಟೆಗಳಲ್ಲಿ ಎಲ್ಲರನ್ನೂ ಬಂಧಿಸಿದ್ದೇವೆ. ಆಲಗೂರು, ಅಥಣಿಯಲ್ಲಿ ಬಸ್‌ಗಳ ಮೇಲೆ ಕಲ್ಲು ಎಸೆದ ಪ್ರಕರಣಗಳ ತನಿಖೆ ನಡೆಸಿದ್ದೇವೆ**
>
> **ಲೋಕೇಶ ಜಗಲಾಸರ್,** ಬಾಗಲಕೋಟೆ ಎಸ್ಪಿ

ಈ ವೇಳೆ ಚಿಕ್ಕಲಕಿ ಕ್ರಾಸ್‌ನಲ್ಲಿ ಎಲ್ಲರೂ ಕುಳಿತು ಮದ್ಯ ಸೇವನೆ ಮಾಡಿ ಬಸ್ ಕವಟಗಿ ಪುನರ್ವಸತಿ ಕೇಂದ್ರದ ಬಳಿ ಬರುತ್ತಿದ್ದಂತೆಯೇ ನಿರ್ಜನ ಪ್ರದೇಶದಲ್ಲಿ ಅಡ್ಡಹಾಕಿ ನಾಲ್ವರೂ ಕಲ್ಲು ಎಸೆದಿದ್ದರು. ಈ ವೇಳೆ ಕುತ್ತಿಗೆ ಭಾಗಕ್ಕೆ ಬಿದ್ದ ಕಲ್ಲೇಟಿನಿಂದ ನಬಿ ತೀವ್ರವಾಗಿ ಗಾಯಗೊಂಡಿದ್ದರು.

ಕಲ್ಲಿನ ದಾಳಿಯ ನಂತರ ಬಸ್ ನಿಲ್ಲುತ್ತಿದ್ದಂತೆಯೇ ಅರುಣ್ ಅರಕೇರಿ ಉಳಿದ ಪ್ರಯಾಣಿಕರಂತೆ ಜಮಖಂಡಿಗೆ ಬೇರೆ ವಾಹನದಲ್ಲಿ ತೆರಳಿ ಏನೂ ಆಗಿಲ್ಲವೆಂಬಂತೆ ಮನೆ ಸೇರಿದ್ದರು. ಆರೋಪಿಗಳ ಮೊಬೈಲ್‌ಫೋನ್ ಕರೆ ವಿವರ (ಸಿಡಿಆರ್) ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರ ತಂಡ ರಾತ್ರಿ ವೇಳೆಗೆ ಎಲ್ಲ ಆರೋಪಿಗಳನ್ನು ಬಂಧಿಸಿದೆ.

ಕರ್ತವ್ಯ ಪ್ರಜ್ಞೆ ಮೆರೆದ ನಬಿ

'ಕಲ್ಲಿನ ದಾಳಿಗೆ ತುತ್ತಾಗಿ ತೀವ್ರ ಗಾಯಗೊಂಡರೂ ಚಾಲಕ ನಬಿ ರಸೂಲ್ ಸ್ಟೇರಿಂಗ್ ಕೈ ಬಿಡಲಿಲ್ಲ. ರಸ್ತೆ ಪಕ್ಕಕ್ಕೆ ಬಸ್ ನಿಲ್ಲಿಸಿ ಹಾಗೆಯೇ ಸ್ಟೇರಿಂಗ್ ಮೇಲೆ ಕುಸಿದರು. ನಾವೆಲ್ಲರೂ ಸೇರಿ ಅವರನ್ನು ಉಪಚರಿಸಿ ಆಂಬುಲೆನ್ಸ್ ಕರೆಸಿ ಜಮಖಂಡಿ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ದಾರಿಯಲ್ಲಿಯೇ ಅವರು ಮೃತಪಟ್ಟರು. ಸಾವಿನ ವೇಳೆಯೂ ನಮ್ಮೆಲ್ಲರ ಜೀವದ ಹಿತ ಕಾಯ್ದರು' ಎಂದು ಬಸ್‌ನಲ್ಲಿದ್ದ ಪ್ರಯಾಣಿಕರು ಪೊಲೀಸರಿಗೆ ನೀಡಿರುವ ಮಾಹಿತಿಯಲ್ಲಿ ತಿಳಿಸಿದ್ದಾರೆ.

ರಸೂಲ್ ಇನ್ನು 10 ತಿಂಗಳು ಕಳೆದಿದ್ದರೆ ಸೇವೆಯಿಂದ ನಿವೃತ್ತಿ ಹೊಂದುತ್ತಿದ್ದರು. ಮುಷ್ಕರದ ಕಾರಣ 55 ವರ್ಷ ಮೇಲ್ಪಟ್ಟ ಚಾಲಕ–ನಿರ್ವಾಹಕರು ಆರೋಗ್ಯ ತಪಾಸಣೆ ಮಾಡಿಸಿಕೊಂಡು ಕರ್ತವ್ಯಕ್ಕೆ ಹಾಜರಾಗುವಂತೆ ಸಾರಿಗೆ ಸಂಸ್ಥೆ ನೋಟಿಸ್ ನೀಡಿದ್ದ ಕಾರಣ ಎರಡು ದಿನಗಳ ಹಿಂದೆ ಕೆಲಸಕ್ಕೆ ಮರಳಿದ್ದರು ಎನ್ನಲಾಗಿದೆ.

'ಈಗ ಗೈರಾದರೆ ನಿವೃತ್ತಿಯ ನಂತರ ಸೌಲಭ್ಯ ಸಿಗುವುದಿಲ್ಲ' ಎಂದು ಪತಿ ಕರ್ತವ್ಯಕ್ಕೆ ತೆರಳಿದ್ದರು ಎಂದು ನಬಿ ಅವರ ಪತ್ನಿ ಸಾಯಿರಾ ಬಾನು ತಿಳಿಸಿದರು.

ಬಸ್‌ಗೆ ಕಲ್ಲು ತೂರಿದ ಅಪರಿಚಿತರು

ಪ್ರಜಾವಾಣಿ ವಾರ್ತೆ

ಶಿರಸಿ: ಇಲ್ಲಿನ ಹಳೆ ಬಸ್ ನಿಲ್ದಾಣದಿಂದ ಹುಬ್ಬಳ್ಳಿಯತ್ತ ಹೊರಟಿದ್ದ ಸಾರಿಗೆ ಸಂಸ್ಥೆಯ ಬಸ್‌ಗೆ ಬೆಣಗಿ ಸಮೀಪ ಶನಿವಾರ ಮುಂಜಾನೆ ಇಬ್ಬರು ದುಷ್ಕರ್ಮಿಗಳು ಕಲ್ಲು ತೂರಿ ಪರಾರಿಯಾಗಿದ್ದಾರೆ.

'ಬೈಕ್‌ನಲ್ಲಿ ಬಂದು ಬಸ್ ಅಡ್ಡಗಟ್ಟಿ, ಗಾಜಿಗೆ ಕಲ್ಲು ಎಸೆದು ಹಾನಿಗೊಳಿಸಿದರು' ಎಂದು ಚಾಲಕ ಅಬ್ದುಲ್ ಘನಿ ಬನವಾಸಿ ಠಾಣೆಗೆ ನೀಡಿದ ದೂರಿನಲ್ಲಿ ಹೇಳಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hospital & Medical Jobs

HEALTHBLOOM POLYCLINIC AT WHITEFIELD, BANGALORE OF RADICAL PROPERTY PVT LTD REQUIRES
CHIEF MEDICAL OFFICER
MBBS with MD in General Medicine with 10 years of practicing to head with profit sharing
MEDICAL OFFICER
MBBS preferably with PG diploma in pediatric or Ortho with 5 years of practicing
LAB TECHINICIANS
B.Sc/Diploma in Medical Lab Technology with 2-5years of experience
RADIOLOGY TECHINICIAN(RT)
B.Sc /DMRT in Radiology imaging Technology with 2-5years experience
PHARMACIST
B.Pharm/D.Pharm with 2-5years experience of managing pharmacy of repute.
NURSES
B.Sc/Diploma/+2 pass with nursing qualification with 5 years experience
RECEPTIONIST
BA/B.Sc preferably in computer science with 3 years experience in front office
Attractive Salary package and those fulfilling job specs,may apply to RADICAL PROPERTIES PVT LTD by Email radicalreality2013@gmail.com
99621 - 82221
0422- 3513451
SAA

Wanted

ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ
ಕನಿಷ್ಠ 4 ವರ್ಷದ ಅನುಭವ ವಯೋಮಿತಿ 30 ವರ್ಷ ಒಳಗೆ ಆಕರ್ಷಕ ವೇತನ, ವಸತಿ ಸೌಲಭ್ಯವಿರುತ್ತದೆ. ನಾಗರಭಾವಿ 2ನೇ ಸ್ಟೇಜ್ ಎನ್. ಜಿ. ಎಫ್ ಲೇಔಟ್
----: ಸಂಪರ್ಕಿಸಿ :----
97425 43188
99001 00244

ವ್ಯಾಪಾರ

Business Offers

Franchise

RP - Sanjiv Goenka Group
ಬ್ರೆಡ್ ಫ್ರಾಂಚೈಸ್ ಅವಕಾಶ
ಸ್ಪೆನ್ಸರ್ಸ್ ಬ್ರೆಡ್ ಫ್ರಾಂಚೈಸಿಗಳನ್ನು ಕರ್ನಾಟಕದಲ್ಲಿ ನೇಮಕಾತಿ ಮಾಡುತ್ತಿದ್ದಾರೆ.
ತಯಾರಿಕೆ ಹಾಗೂ ವಿತರಣೆಯ ಸೌಲಭ್ಯವನ್ನು ಹೊಂದಿರುವ ಆಸಕ್ತಿಯುಳ್ಳ ಕಕ್ಷಿಗಳು
ಸಂಪರ್ಕಿಸಬಹುದು:
ಗೋಪಿನಾಥ್:7540072073 - gopinath.b@rpsg.in
ರವೀಂದ್ರ:9611005994 - ravindra.koshti@rpsg.in
ರಾಜೇಶ್:9810102066 - rajesh.mishra@rpsg.in
spencer's
Makes fine living affordable
CIN. U51229WB2000PLC154278

ಶಿಕ್ಷಣ

Special Courses

IN SHIVAMOGGA, 2-year course for PUC, CET, JEE with proper guidance All those appearing for these exams, For admission, Contact Siddharth Anantram Bhat, MSc, IIT Roorkee. Cell: 9324336949.

ಭವಿಷ್ಯ

Astrology

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂ ಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

HEALTH SPECIAL

ಶ್ರವಣ ಸಮಸ್ಯೆಯೇ??
ನಿಮಗೆ ಇಲ್ಲಿ ಶ್ರವಣ ಸಾಧನ ಗೋಚರಿಸುತ್ತಿದೆಯೆ?
ಹೌದು. ನಿಮಗೆ ಗೋಚರಿಸುವುದಿಲ್ಲ.
ಇದು 100% ಅಗೋಚರ ಶ್ರವಣ ಸಾಧನ.
• ಪ್ರಸ್ತುತ ಶ್ರವಣ ಸಾಧನಗಳ ಬಳಕೆದಾರರಿಗೆ ಆಕರ್ಷಕ ಎಕ್ಸ್‌ಚೇಂಜ್ ಆಫರ್.
• ಆಧುನಿಕ ಕೃತಕ ಬುದ್ಧಿಮತ್ತೆಯುಳ್ಳ ರಿಚಾರ್ಜೇಬಲ್ ಶ್ರವಣ ಸಾಧನಗಳು ಲಭ್ಯ.
• ಹಿರಿಯ ನಾಗರಿಕರಿಗಾಗಿ ಮನೆಗೆ ಭೇಟಿ.
*T & C Apply.
HHCC ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್
ವಿಶ್ವ ದಾಖಲೆ ಹೊಂದಿದೆ
ಕುಡುವೇವ್ ಆಡಿಯೋಮೀಟರ್ ಮೂಲಕ ತಪಾಸಣೆ
ಬೆಂಗಳೂರು ಮತ್ತು ಕರ್ನಾಟಕ ರಾಜ್ಯಾದ್ಯಂತ ಶಾಖೆಗಳಿವೆ.
ನಿಮ್ಮ ಸಮೀಪದ ಶಾಖೆಯನ್ನು ತಿಳಿದುಕೊಳ್ಳಲು ಸಂಪರ್ಕಿಸಿ.
ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್
99456 11100
www.hearingc.com

★ಕೊಳ್ಳೆಗಾಲದಿಂದ ನೇರಪರಿಹಾರ★ ಕೊಳ್ಳೆಗಾಲದ ಪ್ರಸಿದ್ಧ ಮನೆತನದವರಾದ ಮೋಡಿಬೆಟ್ಟಪ್ಪನವರು ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬಸ್ ಸ್ಟಾಪ್ ಪಕ್ಕ, ಕೊಳ್ಳೆಗಾಲ. 9686351668

★||ಸ್ತ್ರೀವಶೀಕರಣ ಸ್ಪೆಷಲಿಸ್ಟ್||★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ರಾವ್. 9901724082

★ಶ್ರೀಕ್ಷೇತ್ರ ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ:9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Whitefield

SEMI FURNISHED 2 BHK Flat for Sale in DNA Ariston, Whitefield. Contact 7337347372.

Farm House/ Land/ Resorts

Nelamangala

FARMLAND FOR Sale 5/10 Guntas Near Nelamangala. Suitable for Dairy Farming and Farm House Contact 9448119275/ 7829134000

Sites

Hesaraghatta

CNR DEVELOPERS and Builders BMRDA Sites Available.Contact 9448119275 / 7829134000

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಗ್ರಂಥಾಲಯಕ್ಕೆ ಬೀಡಿಯಿಂದ ಬೆಂಕಿ– ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: ಸೈಯದ್ ಇಸಾಕ್ ಅವರ ಗ್ರಂಥಾಲಯ ಭಸ್ಮಗೊಳ್ಳಲು ವ್ಯಕ್ತಿಯೊಬ್ಬರು ಬೀಡಿ ಹಚ್ಚಿ, ನಿರ್ಲಕ್ಷ್ಯದಿಂದ ಎಸೆದ ಬೆಂಕಿ ಕಡ್ಡಿ ಕಾರಣ ಎಂಬ ಅಂಶವನ್ನು ಪೊಲೀಸರು ಪತ್ತೆ ಹಚ್ಚಿದ್ದಾರೆ. ಬೆಂಕಿ ಕಡ್ಡಿ ಎಸೆದ ಆರೋಪಿ ಸೈಯದ್ ನಾಸೀರ್ (35) ಎಂಬಾತನನ್ನು ಬಂಧಿಸಿದ್ದಾರೆ.

'ಮದ್ಯ ಸೇವಿಸಿದ್ದ ಆರೋಪಿಯು ಏ.8ರಂದು ರಾತ್ರಿ 10 ಗಂಟೆ ಸುಮಾರಿನಲ್ಲಿ ತಾಯಿ ಮತ್ತು ಸೋದರನೊಂದಿಗೆ ಗಲಾಟೆ ಮಾಡಿಕೊಂಡು, ಗ್ರಂಥಾಲಯದ ಸಮೀಪದ ಅಂಗಡಿಯಲ್ಲಿ ಬೀಡಿ, ಬೆಂಕಿ ಪೊಟ್ಟಣ ಖರೀದಿಸುತ್ತಾರೆ. ಬೀಡಿ ಹೊತ್ತಿಸಿ ಗ್ರಂಥಾಲಯ ಪಕ್ಕದ ಸೋಫಾ ರಿಪೇರಿ ಅಂಗಡಿ ಬಳಿನ ಬೆಂಕಿ ಕಡ್ಡಿ ಎಸೆದು ಹೋಗುತ್ತಾರೆ. ಅದು ಸೋಫಾ ಮತ್ತು ಕುಷನ್ ಮೇಲೆ ಬೀಳುತ್ತದೆ. ಸ್ವಲ್ಪ ಹೊತ್ತಿನ ನಂತರ ಈ ಜಾಗದಲ್ಲಿ ಬೆಂಕಿ ಹೊತ್ತಿಕೊಳ್ಳುತ್ತದೆ' ಎಂದು ನಗರ ಪೊಲೀಸ್ ಕಮಿಷನರ್ ಡಾ.ಚಂದ್ರಗುಪ್ತ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಡಾ.ಚಂದ್ರಗುಪ್ತ

ಸ್ಥಳದಲ್ಲಿದ್ದ ಸೈಯದ್ ಅಸ್ಗರ್ ಮತ್ತು ಸೈಯದ್ ಅಯಾಜುದ್ದೀನ್ ಎಂಬವರು ಬೆಂಕಿ ನಂದಿಸುತ್ತಾರೆ. ಉಳಿದಿದ್ದ ಕಿಡಿಗಳು ನಸುಕಿನ 2.15ಕ್ಕೆ ಬೆಂಕಿ ಜ್ವಾಲೆಗಳಾಗಿ ಪರಿವರ್ತನೆಯಾಗುತ್ತವೆ. ಇಸಾಕ್ ಅವರ ಗ್ರಂಥಾಲಯಕ್ಕೂ ವ್ಯಾಪಿಸುತ್ತವೆ. ಈ ದೃಶ್ಯಗಳು ಸಮೀಪದಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ದಾಖಲಾಗಿವೆ ಎಂದು ಹೇಳಿದರು.

10x18 ವಿಸ್ತೀರ್ಣ ಜಾಗದಲ್ಲಿ 11 ಸಾವಿರದಷ್ಟು ಪುಸ್ತಕ ಇಡಲು ಸಾಧ್ಯವೇ ಎಂಬ ಪ್ರಶ್ನೆಗೆ, 'ಭಸ್ಮವಾಗಲು ಕಾರಣ ಏನು ಎಂದು ಪತ್ತೆ ಹಚ್ಚುವುದಷ್ಟೇ ನಮ್ಮ ಕೆಲಸ. ಇಸಾಕ್ ಅವರು ದೂರಿನಲ್ಲಿ 11 ಸಾವಿರ ಪುಸ್ತಕಗಳಿದ್ದವು ಎಂದು ಹೇಳಿಲ್ಲ. ಮಾಧ್ಯಮಗಳಿಗಷ್ಟೇ ಅವರು ಈ ರೀತಿ ಹೇಳಿದ್ದಾರೆ' ಎಂದು ತಿಳಿಸಿದರು.

ಸಮಿತಿ ರಚನೆಗೆ ವಿರೋಧ

ಇಸಾಕ್ ಅವರ ಗ್ರಂಥಾಲಯ ಮರುಸ್ಥಾಪನೆಗೆ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಗ್ರಂಥಾಲಯ ಇಲಾಖೆ ಜಂಟಿ ಸಮಿತಿ ರಚನೆ ಮಾಡಿರುವುದಕ್ಕೆ ವಿರೋಧ ವ್ಯಕ್ತವಾಗಿದೆ.

ಈ ಮಧ್ಯೆ, ಗ್ರಂಥಾಲಯ ಮರುನಿರ್ಮಿಸಲು ಆನ್‌ಲೈನ್‌ನಲ್ಲಿ ಆರಂಭಿಸಿದ್ದ ಕ್ರೌಡ್‌ಫಂಡಿಂಗ್ ಅಭಿಯಾನವನ್ನು ಇನ್ಫೋಸಿಸ್‌ನ ಸಾಫ್ಟ್‌ವೇರ್ ಎಂಜಿನಿಯರ್ ಫತೇನ್ ಮಿಸ್ಬಾ ನಿಲ್ಲಿಸಿದ್ದಾರೆ. ಇಲ್ಲಿಯವರೆಗೆ ₹ 29 ಲಕ್ಷ ಸಂಗ್ರಹವಾಗಿದೆ.

'1,800ಕ್ಕೂ ಅಧಿಕ ಮಂದಿ ದಾನಿಗಳು ಹಣ ನೀಡಿದ್ದಾರೆ' ಎಂದು ಫತೇನ್ ಮಿಸ್ಬಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಸಂಕ್ಷಿಪ್ತ ಸುದ್ದಿ

ಸೇನಾ ಪ್ರವೇಶ ಪರೀಕ್ಷೆ ಮುಂದಕ್ಕೆ

ಬೆಳಗಾವಿ: ಇದೇ 25ರಂದು ಇಲ್ಲಿ ನಡೆಯಬೇಕಿದ್ದ ಸೇನಾ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಕೋವಿಡ್–19 ಕಾರಣದಿಂದ ಮುಂದೂಡಲಾಗಿದೆ ಎಂದು ಸೇನೆಯ ನೇಮಕಾತಿ ವಿಭಾಗದ ನಿರ್ದೇಶಕ ರಾಹುಲ್ ಆರ್ಯ ತಿಳಿಸಿದ್ದಾರೆ.

'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೈದಾನದಲ್ಲಿ ಫೆ.4ರಿಂದ ಫೆ.15ರವರೆಗೆ ಸೇನಾ ಭರ್ತಿ ರ‍್ಯಾಲಿ ನಡೆಸಲಾಗಿತ್ತು. ಅಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರವೇಶ ಪರೀಕ್ಷೆ ನಿಗದಿಯಾಗಿತ್ತು. ಮುಂದಿನ ದಿನಾಂಕವನ್ನು ಬಳಿಕ ತಿಳಿಸಲಾಗುವುದು' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪರೀಕ್ಷೆ ಮುಂದೂಡಿಕೆ

ವಿಜಯಪುರ: ಏಪ್ರಿಲ್ 19 ರಿಂದ ಆರಂಭವಾಗಬೇಕಿದ್ದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳನ್ನು ಸಾರಿಗೆ ನೌಕರರ ಮುಷ್ಕರದ ಹಿನ್ನೆಲೆಯಲ್ಲಿ ಮುಂದೂಡಲಾಗಿದೆ ಎಂದು ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ.ರಮೇಶ್ ಕೆ. ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಯನ್ನು ವಿದ್ಯಾರ್ಥಿನಿಯರು ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಮೂಲಕ ಪಡೆದುಕೊಳ್ಳಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಡ್ ಕಾನ್‌ಸ್ಟೆಬಲ್ ಅಮಾನತು

ಮಂಗಳೂರು: 'ಹಾಸನ ಹೊರವಲಯದಲ್ಲಿ ನಡೆದ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಇಲ್ಲಿನ ಆರ್ಥಿಕ ಅಪರಾಧ ಮತ್ತು ನಾರ್ಕೋಟಿಕ್ ಠಾಣೆ ಹೆಡ್ ಕಾನ್‌ಸ್ಟೆಬಲ್ ಶ್ರೀಲತಾ ಅವರನ್ನು ಅಮಾನತು ಮಾಡಿ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಆದೇಶಿಸಿದ್ದಾರೆ.

ಶಿವಮೊಗ್ಗ, ಕೊಡಗಿನಲ್ಲಿ ಮಳೆ

ಶಿವಮೊಗ್ಗ: ಜಿಲ್ಲೆಯಲ್ಲಿ ಹಲವೆಡೆ ಶನಿವಾರ ಗುಡುಗು ಸಹಿತ ಮಳೆಯಾಗಿದೆ. ತೀರ್ಥಹಳ್ಳಿ, ಶಿಕಾರಿಪುರದಲ್ಲಿ ಗುಡುಗು ಸಹಿತ ಉತ್ತಮ ಮಳೆಯಾಗಿದ್ದು, ಶಿವಮೊಗ್ಗ ತಾಲ್ಲೂಕು, ಸಾಗರ, ಕೋಣಂದೂರು, ಹೊಸನಗರ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಭರಮಸಾಗರದಲ್ಲಿ ಶನಿವಾರ ಗುಡುಗು ಸಹಿತ ಮಳೆಯಾಗಿದೆ. ಸಿರಿಗೆರೆಯಲ್ಲಿ ಹತ್ತು ನಿಮಿಷಗಳ ಕಾಲ ಬಿರುಸಿನ ಮಳೆಯಾಗಿದೆ. ಕೊಡಗಿನಲ್ಲಿ ಉತ್ತಮ ಮಳೆ

ಮಡಿಕೇರಿ: ಕೊಡಗು ಜಿಲ್ಲೆಯ ವಿರಾಜಪೇಟೆ, ನಾಪೋಕ್ಲು, ಗೋಣಿಕೊಪ್ಪಲು, ಪೊನ್ನಂಪೇಟೆ, ಬಾಳೆಲೆ ಹಾಗೂ ತಿತಿಮತಿ ಭಾಗದಲ್ಲಿ ಶುಕ್ರವಾರ ರಾತ್ರಿತ ಧಾರಾಕಾರ ಮಳೆ ಸುರಿದಿದೆ.

ನನಗೆ ಬುದ್ಧಿ ಹೇಳಬೇಡಿ–ರವೀಂದ್ರ: ನಿಮ್ಮ ಮಟ್ಟಕ್ಕೆ ಇಳಿಯುವುದಿಲ್ಲ– ಸಚಿವ

ವೇದಿಕೆಯಲ್ಲೇ ಸಚಿವ –ಶಾಸಕ ವಾಗ್ವಾದ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ): ಪಟ್ಟಣದಲ್ಲಿ ಶನಿವಾರ ನಡೆದ ನಿವೇಶನರಹಿತರಿಗೆ ಹಕ್ಕುಪತ್ರ ವಿತರಣಾ ಕಾರ್ಯಕ್ರಮ ಶಾಸಕ ರವೀಂದ್ರ ಶ್ರೀಕಂಠಯ್ಯ ಮತ್ತು ಸಚಿವ ನಾರಾಯಣಗೌಡ ಅವರ ನಡುವಿನ ವಾಗ್ವಾದಕ್ಕೆ ಕಾರಣವಾಯಿತು.

'ಕಂದಾಯ ಅದಾಲತ್ ನಡೆಸದಿದ್ದರೂ ಆಹ್ವಾನ ಪತ್ರಿಕೆಯಲ್ಲಿ ಕಂದಾಯ ಅದಾಲತ್ ನಡೆಯುತ್ತಿದೆ ಎಂದು ಏಕೆ ಹಾಕಿಸಿದ್ದೀರಿ? ನಿಮ್ಮದು ಜನ ವಿರೋಧಿ ಸರ್ಕಾರ. ಕೋವಿಡ್ ರೋಗಿಗಳಿಗೆ ವೆಂಟಿಲೇಟರ್ ಕೊಟ್ಟಿಲ್ಲ. ರೋಗಿಗಳಿಗೆ ಊಟ ಕೊಟ್ಟವರಿಗೆ ಹಣ ನೀಡಿಲ್ಲ, ಸರ್ಕಾರಿ ಕಚೇರಿಗಳಲ್ಲಿ ನಿರಂತರವಾಗಿ ಲೂಟಿ ನಡೆಯುತ್ತಿದೆ. ಅಧಿಕಾರಿಗಳನ್ನು ಹದ್ದುಬಸ್ತಿನಲ್ಲಿ ಇಡಲು ಆಗಿಲ್ಲ. ನೀವೇನು ಮಾಡುತ್ತಿದ್ದೀರಿ' ಎಂದು ರವೀಂದ್ರ ಏರುದನಿಯಲ್ಲಿ ಪ್ರಶ್ನಿಸಿದರು.

ತಹಶೀಲ್ದಾರ್ ಎಂ.ವಿ.ರೂಪಾ ಅವರನ್ನೂ ತರಾಟೆಗೆ ತೆಗೆದುಕೊಂಡರು. 'ನೀವು ನಡೆದಿದ್ದೇ ದಾರಿಯಾಗಿದೆ. ಸೋಮವಾರ ಸಭೆ ಕರೆದಿದ್ದು, ನಿಮ್ಮ ಬಂಡವಾಳ ಬಯಲು ಮಾಡುತ್ತೇನೆ. ಈ ತಾಲ್ಲೂಕಿನಲ್ಲಿ ಹೇಗೆ ಕೆಲಸ ಮಾಡುತ್ತೀಯೋ ನೋಡುತ್ತೇನೆ' ಎಂದು ಎರಡು ಹೆಜ್ಜೆ ಮುಂದೆ ಬಂದು ಎಚ್ಚರಿಕೆ ನೀಡಿದರು.

ಶ್ರೀರಂಗಪಟ್ಟಣದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮತ್ತು ಸಚಿವ ನಾರಾಯಣಗೌಡ ನಡುವೆ ನಡೆದ ಮಾತಿನ ಚಕಮಕಿ

ಪ್ರತಿಕ್ರಿಯೆ ನೀಡಲು ಮುಂದಾದ ರೂಪಾ ಅವರನ್ನು 'ಶಟಪ್, ಮುಚ್ಚು ಬಾಯ್' ಎಂದು ಗಟ್ಟಿ ದನಿಯಲ್ಲಿ ಗದರಿದರು.

ಈ ಹಂತದಲ್ಲಿ ಸಚಿವ ನಾರಾಯಣಗೌಡ, 'ಶಾಸಕರಾದವರಿಗೆ ತಾಳ್ಮೆ ಇರಬೇಕು. ಅಧಿಕಾರಿಗಳನ್ನು ಹೀಗೆ ಹೊಡೆಯಲು ಹೋಗಬಾರದು. ಸಮಸ್ಯೆ ಇದ್ದರೆ ನಾಲ್ಕು ಗೋಡೆ ಮಧ್ಯೆ ಕುಳಿತು ಬಗೆಹರಿಸಿಕೊಳ್ಳಬೇಕು' ಎಂದರು.

ಸಚಿವರ ಮಾತಿನಿಂದ ಮತ್ತಷ್ಟು ಸಿಟ್ಟಿಗೆದ್ದ ಶಾಸಕ, 'ನಿಮ್ಮಿಂದ ಕಲಿಯುವುದು ಏನೂ ಇಲ್ಲ. ನೀವು ಮೊದಲೇ ನಿಷ್ಠೆ ಇಲ್ಲದವರು. ನನಗೆ ಬುದ್ಧಿ ಹೇಳಲು ಬರಬೇಡಿ. ಮುಂದೊಂದು ದಿನ ನಾನೂ ಮಂತ್ರಿಯಾಗುತ್ತೇನೆ. ಆಗ ನಿಮಗೆ ತಕ್ಕ ಉತ್ತರ ಕೊಡುತ್ತೇನೆ' ಎಂದು ತಿರುಗೇಟು ನೀಡಿದರು.

ಇದಕ್ಕೆ ಪ್ರತ್ಯುತ್ತರ ನೀಡಿದ ಸಚಿವರು, 'ನಾನು ಮೂರನೇ ಬಾರಿ ಶಾಸಕನಾಗಿದ್ದೇನೆ. ಈ ಜಿಲ್ಲೆಯ ಮಂತ್ರಿ ಕೂಡ. ನನಗೂ ಮಾತನಾಡಲು ಬರುತ್ತದೆ. ಆದರೆ, ನಿಮ್ಮ ಮಟ್ಟಕ್ಕೆ ಇಳಿದು ಮಾತನಾಡಲು ಆಗುವುದಿಲ್ಲ' ಎಂದರು.

ನಿಧನ ವಾರ್ತೆ

ಕೆಂಪಸಿದ್ಧಯ್ಯ

ಎಂ.ಕೆ. ಕೆಂಪಸಿದ್ಧಯ್ಯ

ಬೆಂಗಳೂರು: ಡಾ. ಬಿ. ಆರ್. ಅಂಬೇಡ್ಕರ್ ಮೆಡಿಕಲ್ ಕಾಲೇಜು ಹಾಗೂ ಆನಂದ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್‌ನ ಸ್ಥಾಪಕ ಟ್ರಸ್ಟಿ ಎಂ.ಕೆ.ಕೆಂಪಸಿದ್ಧಯ್ಯ (85) ಅವರು ಬೆಂಗಳೂರಿನಲ್ಲಿ ಶನಿವಾರ ನಿಧನರಾದರು.

ಮಂಡ್ಯ ಜಿಲ್ಲೆಯ ಮಳವಳ್ಳಿಯವರಾದ ಇವರು ಬೆಂಗಳೂರಿನಲ್ಲಿ ವಾಸವಿದ್ದರು. ಸ್ವಗ್ರಾಮ ಮಳವಳ್ಳಿಯಲ್ಲಿ ಭಾನುವಾರ ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇವರು ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಪ ಆಯುಕ್ತರಾಗಿ 25 ವರ್ಷ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ್ದರು. ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಚಾಮರಾಜನಗರ ಕ್ಷೇತ್ರದಿಂದ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದ್ದರು.

ಕೊರೊನಾ ಸಾಂತ್ವನ

ಎಚ್ಚರ: ಒಬ್ಬರಿಂದ 460 ಮಂದಿಗೆ ಹರಡುವ ಸಾಧ್ಯತೆ!



‘ಕೋವಿಡ್ ಲಕ್ಷಣಗಳು ಕಾಣಿಸಿಕೊಂಡ ತಕ್ಷಣ ಪರೀಕ್ಷೆ ಮಾಡಿಸಿಕೊಂಡು, ಮನೆಯಲ್ಲಿಯೇ ಸ್ವಯಂ ನಿಗಾ ವ್ಯವಸ್ಥೆಗೆ ಒಳಪಡಬೇಕು. ಕೆಲವರು ಜ್ವರ ಸೇರಿದಂತೆ ವಿವಿಧ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಬಳಿಕವೂ ಸಾರ್ವಜನಿಕ ಪ್ರದೇಶಗಳಲ್ಲಿ ಸಂಚರಿಸಿದ ಪರಿಣಾಮ ಈಗ ಸಮಸ್ಯೆ ಎದುರಿಸುತ್ತಿದ್ದೇವೆ.’

‘ಕೋವಿಡ್ ಎರಡನೇ ಅಲೆ ಬರುತ್ತದೆ ಎಂಬುದು ತಿಳಿದಿತ್ತು. ಆದರೆ, ಇಷ್ಟು ಅಲ್ಪಾವಧಿಯಲ್ಲಿಯೇ ಅದು ಕಾಣಿಸಿಕೊಳ್ಳುತ್ತದೆ ಎಂಬ ನಿರೀಕ್ಷೆ ಮಾಡಿರಲಿಲ್ಲ. ಇದಕ್ಕೆ ಜನಸಾಮಾನ್ಯರು ಮಾಡಿದ ತಪ್ಪುಗಳೇ ಕಾರಣ. ಕೋವಿಡ್ ಹೋಯಿತು ಎಂಬ ಮನೋಭಾವದಿಂದ ಕಳೆದ ವರ್ಷಾಂತ್ಯದಿಂದ ಜನರು ಗುಂಪಾಗಿ ಸೇರಲು ಆರಂಭಿಸಿದರು. ಸರಿಯಾದ ರೀತಿಯಲ್ಲಿ ಮುಖಗವಸು ಧರಿಸದೆಯೇ ನಿಯಮಗಳನ್ನು ಗಾಳಿಗೆ ತೂರಿದರು. ಸೋಂಕು ನಿವಾರಕದಿಂದ ಕೈಗಳನ್ನು ಸ್ವಚ್ಛಪಡಿಸಿಕೊಳ್ಳುತ್ತಿರಲಿಲ್ಲ. ಸೋಂಕಿನ ಲಕ್ಷಣಗಳು ಕಾಣಿಸಿಕೊಂಡ ಬಳಿಕ ಮನೆಯಲ್ಲಿಯೇ ಸ್ವಯಂ ನಿಗಾ ವ್ಯವಸ್ಥೆಗೆ ಒಳಗಾಗುತ್ತಿರಲಿಲ್ಲ. ಇದರಿಂದಾಗಿ ಈಗ ದೊಡ್ಡ ಸಂಖ್ಯೆಯಲ್ಲಿ ಪ್ರಕರಣಗಳು ಪತ್ತೆಯಾಗುತ್ತಿವೆ. ವೈಜ್ಞಾನಿಕ ಅಧ್ಯಯನದ ಪ್ರಕಾರ ಸೋಂಕಿತ ವ್ಯಕ್ತಿಯಿಂದ 460 ಮಂದಿಗೆ ವೈರಾಣು ಹರಡುವ ಸಾಧ್ಯತೆ ಇರುತ್ತದೆ.’

‘ಎರಡನೇ ಅಲೆಯ ಅವಧಿಯಲ್ಲಿ 20ರಿಂದ 40 ವರ್ಷದೊಳಗಿನವರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗುತ್ತಿದ್ದಾರೆ. ಮೊದಲ ಅಲೆಯ ಅವಧಿಯಲ್ಲಿ ಹಿರಿಯ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರಾಗಿ, ಆಸ್ಪತ್ರೆಗೆ ಬರುತ್ತಿದ್ದರು. ಯುವಕರು ಸೋಂಕಿನ ಲಕ್ಷಣಗಳು ಕಾಣಿಸಿಕೊಂಡರೂ ಪರೀಕ್ಷೆ ಮಾಡಿಸಿಕೊಳ್ಳದೆಯೇ ಸಮಸ್ಯೆಯನ್ನು ತಂದೊಡ್ಡಿಕೊಳ್ಳುತ್ತಿದ್ದಾರೆ. ತಡವಾಗಿ ಪರೀಕ್ಷೆ ಮಾಡಿಸಿಕೊಂಡಲ್ಲಿ ಅದರ ಪರಿಣಾಮವೂ ತೀಕ್ಷ್ಣವಾಗಿರುತ್ತದೆ. ಆರ್‌ಟಿ-ಪಿಸಿಆರ್ ಪರೀಕ್ಷೆಯ ಜತೆಗೆ ಸಿಟಿ ಸ್ಕ್ಯಾನ್ ಮೂಲಕ ಸಹ ಕಾಯಿಲೆ ಪತ್ತೆ ಸಾಧ್ಯವಾಗಲಿದೆ. ಈಗ ವೇಗವಾಗಿ ಹರಡುತ್ತಿರುವ ಈ ವೈರಾಣುವಿನ ನಿಯಂತ್ರಣ ಜನರ ವರ್ತನೆಯನ್ನು ಆಧರಿಸಿದೆ.’

‘ಎಲ್ಲ ಸೋಂಕಿತರು ಆಸ್ಪತ್ರೆಗೆ ಬಂದು ದಾಖಲಾದಲ್ಲಿ ತುರ್ತಾಗಿ ಚಿಕಿತ್ಸೆ ಅಗತ್ಯ ಇರುವವರಿಗೆ ಸಮಸ್ಯೆಯಾಗಲಿದೆ. ಸಣ್ಣ ಪ್ರಮಾಣದಲ್ಲಿ ಲಕ್ಷಣಗಳು ಕಾಣಿಸಿಕೊಂಡಲ್ಲಿ ಮನೆಯಲ್ಲಿಯೇ ಆರೈಕೆ ಮಾಡಿಕೊಳ್ಳಬಹುದು. ಆದರೆ, ರಕ್ತದಲ್ಲಿನ ಆಮ್ಲಜನಕ ಪ್ರಮಾಣವನ್ನು ಆಗಾಗ ಪರೀಕ್ಷೆ ಮಾಡಿಕೊಳ್ಳುತ್ತಾ ಇರಬೇಕು. ಈ ಪ್ರಮಾಣ ಶೇ 95ಕ್ಕಿಂತ ಇಳಿಕೆಯಾದಲ್ಲಿ ಆಸ್ಪತ್ರೆಗೆ ತೆರಳಬೇಕು. ಮಧುಮೇಹ ಸೇರಿದಂತೆ ವಿವಿಧ ಕಾಯಿಲೆಗಳನ್ನು ಎದುರಿಸುತ್ತಿರುವವರು ಸೋಂಕಿತರಾದಲ್ಲಿ ಆಸ್ಪತ್ರೆಗೆ ದಾಖಲಾಗಬೇಕು. ಲಸಿಕೆ ಪಡೆಯುವುದರಿಂದ ದೇಹದಲ್ಲಿ ಪ್ರತಿಕಾಯಗಳು ವೃದ್ಧಿಯಾಗಿ, ರಕ್ಷಣೆ ಸಿಗಲಿದೆ. ಸೋಂಕು ತಗುಲಿದರೂ ಸಣ್ಣ ಪ್ರಮಾಣದಲ್ಲಿ ಸಮಸ್ಯೆಗಳು ಕಾಣಿಸಿಕೊಂಡು ಕಾಯಿಲೆ ವಾಸಿಯಾಗಲಿದೆ.’

ಡಾ.ವಿ. ಶಂಕರ್, ಮಲ್ಲೇಶ್ವರದ ಮಣಿಪಾಲ್ ಆಸ್ಪತ್ರೆಯ ಹಿರಿಯ ವೈದ್ಯ

ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಆಗ್ರಹ

‘ಲಸಿಕೆಯನ್ನು ಮುಕ್ತ ಮಾರುಕಟ್ಟೆಗೆ ಬಿಡಿ’

ನವದೆಹಲಿ/ಮುಂಬೈ/ಭುವನೇಶ್ವರ (ಪಿಟಿಐ): ಕೋವಿಡ್-19 ಲಸಿಕೆಯ ಕೊರತೆ ಶನಿವಾರವೂ ಮುಂದುವರಿದಿದೆ. ‘ತಕ್ಷಣವೇ ಕೋವಿಡ್ ಲಸಿಕೆಯನ್ನು ಪೂರೈಸಿ’ ಎಂದು ಹಲವು ರಾಜ್ಯಗಳು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿವೆ. ‘ಕೋವಿಡ್ ಲಸಿಕೆಯನ್ನು ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡಿ’ ಎಂದು ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ.

ಕೋವಿಡ್ ಹೊಸ ಪ್ರಕರಣಗಳು ವಿಪರೀತ ಪ್ರಮಾಣದಲ್ಲಿ ಏರಿಕೆ ಆಗಿರುವ ಕಾರಣ, ಹಲವು ರಾಜ್ಯಗಳಲ್ಲಿ ಆಸ್ಪತ್ರೆಗಳಲ್ಲಿ ಹಾಸಿಗೆ ಕೊರತೆ ಉಂಟಾಗಿದೆ. ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಇದು ಕೇಂದ್ರ ಸರ್ಕಾರ ಮತ್ತು ವಿರೋಧ ಪಕ್ಷಗಳ ನಡುವೆ ಜಟಾಪಟಿಗೆ ಕಾರಣವಾಗಿದೆ.

‘ಭಾರತವು ಹೆಚ್ಚು ಲಸಿಕೆ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ. ಅಗತ್ಯವಿರುವಷ್ಟು ಲಸಿಕೆ ತಯಾರಿಸಲು ದೇಶದ ಬೇರೆ ಬೇರೆ ಕಂಪನಿಗಳಿಗೆ ಕೇಂದ್ರ ಸರ್ಕಾರವು ನೆರವು ನೀಡಬೇಕು. ಬೇರೆ ಲಸಿಕೆಗಳ ಬಳಕೆ ಮತ್ತು ತಯಾರಿಕೆಗೆ ಅನುಮತಿ ನೀಡಬೇಕು. ಲಸಿಕೆಯನ್ನು ಮುಕ್ತ ಮಾರುಕಟ್ಟೆಗೆ ಬಿಡುಗಡೆ ಮಾಡಿ. ಆಗ ಶಕ್ತರು ಲಸಿಕೆ ಖರೀದಿಸಿ, ಹಾಕಿಸಿಕೊಳ್ಳುತ್ತಾರೆ. ಶಕ್ತರಲ್ಲದವರ ಕಡೆ ಸರ್ಕಾರ ಗಮನ ನೀಡಬಹುದು’ ಎಂದು ಪಟ್ನಾಯಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಲಹೆ ನೀಡಿದ್ದಾರೆ.

ಆಮ್ಲಜನಕದ ಕೊರತೆ: ‘ರಾಜ್ಯಕ್ಕೆ ಅಗತ್ಯವಿರುವಷ್ಟು ಆಮ್ಲಜನಕ ಪೂರೈಕೆ ಆಗುತ್ತಿಲ್ಲ. ಕೇಂದ್ರ ಸರ್ಕಾರ ಹೇಳಿದಂತೆ ನಡೆದುಕೊಳ್ಳುತ್ತಿಲ್ಲ’ ಎಂದು ಮಹಾರಾಷ್ಟ್ರ ಸರ್ಕಾರ ಆರೋಪಿಸಿದೆ.

ಕಚ್ಚಾ ವಸ್ತುಗಳ ಕೊರತೆ ಇರುವುದರಿಂದಲೇ ದೇಶದಲ್ಲಿ ಲಸಿಕೆ ತಯಾರಿಸಲು ಸಾಧ್ಯವಾಗುತ್ತಿಲ್ಲ. ಕಚ್ಚಾವಸ್ತುಗಳ ರಫ್ತಿನ ಮೇಲೆ ಅಮೆರಿಕವು ನಿಷೇಧ ಹೇರಿದೆ. ಈ ವಸ್ತುಗಳ ರಫ್ತಿನ ಮೇಲಿನ ನಿಷೇಧವನ್ನು ತೆರವು ಮಾಡಲು ಕೇಂದ್ರ ಸರ್ಕಾರವು ಅಗತ್ಯ ಕ್ರಮ ತೆಗೆದುಕೊಳ್ಳಬೇಕು. ಮೋದಿ ಅವರು ಅಮೆರಿಕದ ಜತೆಗಿನ ಕ್ವಾಡ್ ಒಕ್ಕೂಟಕ್ಕೆ ಕೊಡುತ್ತಿರುವಷ್ಟೇ ಒತ್ತನ್ನು ಈ ವಿಚಾರದಲ್ಲೂ ನೀಡಬೇಕು ಎಂದು ಸಿಪಿಎಂ ಆಗ್ರಹಿಸಿದೆ.

ಸಮಯವಿದ್ದರೂ ಸಿದ್ಧತೆ ಮಾಡಿಕೊಳ್ಳದ ಸರ್ಕಾರ: ಆರೋಪ

ನವದೆಹಲಿ (ಪಿಟಿಐ): ‘ಕೋವಿಡ್ ಎರಡನೇ ಅಲೆಯನ್ನು ತಡೆಯುವ ಸಿದ್ಧತೆ ಮಾಡಿಕೊಳ್ಳಲು ಒಂದು ವರ್ಷದ ಕಾಲಾವಕಾಶ ಇದ್ದರೂ ಸರ್ಕಾರವು ಅದನ್ನು ಮಾಡಿಕೊಳ್ಳಲಿಲ್ಲ. ಬದಲಿಗೆ ತಾತ್ಕಾಲಿಕ ಪರಿಹಾರಗಳನ್ನಷ್ಟೇ ಮಾಡಿದೆ’ ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಆರೋಪಿಸಿದ್ದಾರೆ.

ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಮಾತನಾಡಿದ ಅವರು ಕೋವಿಡ್-19 ನಿರ್ವಹಣೆ ವಿಚಾರವಾಗಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು.

‘ಕೋವಿಡ್ ವಿರುದ್ಧದ ಹೋರಾಟವು ರಾಷ್ಟ್ರೀಯ ವಿಚಾರ, ಇದನ್ನು ಪಕ್ಷ ರಾಜಕಾರಣದಿಂದ ಹೊರಗಿಡಬೇಕು. ಇಂಥ ಸಂದರ್ಭದಲ್ಲಿ ಕೇಂದ್ರವು ‘ರಾಜಧರ್ಮವನ್ನು’ ಪಾಲಿಸಬೇಕು. ಆದರೆ, ಬಿಜೆಪಿಯೇತರ ಪಕ್ಷಗಳ ಆಳ್ವಿಕೆ ಇರುವ ರಾಜ್ಯಗಳ ಬೇಡಿಕೆಗಳ ವಿಚಾರದಲ್ಲಿ ಕೇಂದ್ರವು ದಿವ್ಯ ಮೌನ ವಹಿಸುತ್ತಿದೆ. ಇತರ ಕೆಲವು ರಾಜ್ಯಗಳಿಗೆ ಆದ್ಯತೆಯ ಮೇರೆಗೆ ಸೌಲಭ್ಯಗಳು ಲಭಿಸುತ್ತಿವೆ ಎಂದು ಸೋನಿಯಾ ಆರೋಪಿಸಿದರು.

ಲಸಿಕೆಯ ರಫ್ತನ್ನು ಸ್ಥಗಿತಗೊಳಿಸಲು ಒತ್ತಾಯಿಸಿರುವ ಸೋನಿಯಾ, ‘ನಮ್ಮದೇ ದೇಶದ ಜನರು ಸಾಯುತ್ತಿರುವಾಗ, ಇತರ ದೇಶಗಳಿಗೆ ಲಸಿಕೆಯನ್ನು ನೀಡುವ ಮೂಲಕ ನಮ್ಮ ಔದಾರ್ಯದ ಬಗ್ಗೆ ಹೆಮ್ಮೆಪಟ್ಟುಕೊಳ್ಳಲು ಹೇಗೆ ಸಾಧ್ಯ’ ಎಂದು ಪ್ರಶ್ನಿಸಿದರು.

24 ಗಂಟೆ: 17 ಸಾವಿರ ದಾಟಿದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ದಿನದಿಂದ ದಿನಕ್ಕೆ ಕೋವಿಡ್ ಪೀಡಿತರ ಸಂಖ್ಯೆ ಏರುಗತಿ ಪಡೆದುಕೊಳ್ಳುತ್ತಿದ್ದು, ಮತ್ತೆ 17,489 ಮಂದಿ ಸೋಂಕಿತರಾಗಿರುವುದು ಶನಿವಾರ ದೃಢಪಟ್ಟಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಕೋವಿಡ್ ವೇಗವಾಗಿ ವ್ಯಾಪಿಸಿಕೊಳ್ಳುತ್ತಿರುವ ಪರಿಣಾಮ ಪರೀಕ್ಷೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ಒಂದು ದಿನದ ಅವಧಿಯಲ್ಲಿ 1.43 ಲಕ್ಷ ಮಾದರಿಗಳನ್ನು ಪರೀಕ್ಷಿಸಲಾಗಿದೆ. ಸೋಂಕು ದೃಢ ಪ್ರಮಾಣ 12.20ಕ್ಕೆ ಏರಿಕೆಯಾಗಿದೆ. ಮತ್ತೆ 14 ಮಂದಿಯಲ್ಲಿ ಬ್ರಿಟನ್ ಮಾದರಿಯ ವೈರಾಣು ಕಾಣಿಸಿಕೊಂಡಿದೆ. ಈವರೆಗೆ 43 ಮಂದಿಯಲ್ಲಿ ಈ ಮಾದರಿಯ ವೈರಾಣು ಪತ್ತೆಯಾಗಿದೆ. ಅದೇ ರೀತಿ, ಮೂವರಲ್ಲಿ ದಕ್ಷಿಣ ಆಫ್ರಿಕಾ ಮಾದರಿ ವೈರಾಣು ಇರುವುದು ದೃಢಪಟ್ಟಿದೆ. ಈ ಮಾದರಿಯ ವೈರಾಣು ಕಾಣಿಸಿಕೊಂಡವರ ಸಂಖ್ಯೆ 6ಕ್ಕೆ ಏರಿಕೆಯಾಗಿದೆ.

ಈ ತಿಂಗಳು 17 ದಿನಗಳಲ್ಲಿಯೇ 1.44 ಲಕ್ಷ ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 11.41 ಲಕ್ಷ ದಾಟಿದೆ. 22 ಜಿಲ್ಲೆಗಳಲ್ಲಿ ಮೂರಂಕಿ ತಲುಪಿದೆ. ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 43 ಮಂದಿ ಸೇರಿದಂತೆ ರಾಜ್ಯದಲ್ಲಿ 80 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಸಂಖ್ಯೆ 13,270ಕ್ಕೆ ತಲುಪಿದೆ.

ಸದ್ಯ 589 ಮಂದಿ ಐಸಿಯುನಲ್ಲಿ ಇದ್ದಾರೆ. ಕೋವಿಡ್ ಪೀಡಿತರಲ್ಲಿ 5,565 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 10.09 ಲಕ್ಷಕ್ಕೆ ಏರಿಕೆಯಾಗಿದೆ.

ಕುಮಾರಸ್ವಾಮಿಗೆ ಕೋವಿಡ್

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಅವರಿಗೂ ಕೋವಿಡ್ ದೃಢಪಟ್ಟಿದೆ.

ಬಸವಕಲ್ಯಾಣ ಉಪ ಚುನಾವಣೆಯ ಪ್ರಚಾರ ಮುಗಿಸಿ ಬಂದಿದ್ದ ಕುಮಾರಸ್ವಾಮಿ ಅವರ ಆರೋಗ್ಯದಲ್ಲಿ ವ್ಯತ್ಯಯವಾಗಿತ್ತು. ಶನಿವಾರ ಬೆಳಿಗ್ಗೆ ಆರೋಗ್ಯ ತಪಾಸಣೆಗೆ ಒಳಗಾದಾಗ ಅವರಿಗೆ ಕೋವಿಡ್ ದೃಢ ಪಟ್ಟಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕುಮಾರಸ್ವಾಮಿ, ‘ಎರಡನೇ ಬಾರಿ ಹೃದಯ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಬನ್ನೇರುಘಟ್ಟ ರಸ್ತೆಯ ಅಪೊಲೊ ಆಸ್ಪತ್ರೆಯಲ್ಲೇ ಕೋವಿಡ್ ಚಿಕಿತ್ಸೆಗಾಗಿ ದಾಖಲಾಗಿದ್ದು, ಚೇತರಿಸಿಕೊಳ್ಳುತ್ತಿದ್ದೇನೆ. ಇತ್ತೀಚೆಗೆ ನನ್ನ ಸಂಪರ್ಕಕ್ಕೆ ಬಂದಿದ್ದವರು ಪರೀಕ್ಷೆ ಮಾಡಿಸಿಕೊಳ್ಳಿ’ ಎಂದೂ ತಿಳಿಸಿದ್ದಾರೆ.

ನಿಖಿಲ್‌ಗೂ ಕೋವಿಡ್: ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿಗೂ ಕೋವಿಡ್ ದೃಢಪಟ್ಟಿದೆ. ‘ರೈಡರ್’ ಚಿತ್ರದ ಚಿತ್ರೀಕರಣಕ್ಕೆ ಕೆಲವು ದಿನಗಳ ಹಿಂದೆ ಲಡಾಖ್‌ಗೆ ಹೋಗಿದ್ದರು. ಶುಕ್ರವಾರ ಬೆಂಗಳೂರಿಗೆ ವಾಪಸಾಗಿದ್ದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಮಗಳು ಪದ್ಮಾ, ಮೊಮ್ಮಗಳು ಸೌಂದರ್ಯಾ ಮತ್ತು ಅವರ ಪತಿ ಡಾ. ನಿರಂಜನ್ ಅವರಿಗೂ ಕೋವಿಡ್ ದೃಢಪಟ್ಟಿದೆ. ಏ. 15ರಂದೇ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಬಿಎಸ್‌ವೈ ಆರೋಗ್ಯ ಸ್ಥಿರ

ಬೆಂಗಳೂರು: ಎರಡನೇ ಬಾರಿಗೆ ಕೊರೊನಾ ಸೋಂಕು ತಗುಲಿ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಆರೋಗ್ಯ ಸ್ಥಿರವಾಗಿದೆ. ಅವರು ಲವಲವಿಕೆಯಿಂದ ಇದ್ದಾರೆ’ ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ.

ಯಡಿಯೂರಪ್ಪ ಅವರನ್ನು ಶುಕ್ರವಾರ ಮಧ್ಯಾಹ್ನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ತಜ್ಞ ವೈದ್ಯರ ತಂಡ ಮುಖ್ಯಮಂತ್ರಿಯ ಆರೋಗ್ಯದ ಮೇಲೆ ನಿಗಾ ಇರಿಸಿದೆ.

ವೈದ್ಯರು ಈಗಾಗಲೇ ಮುಖ್ಯಮಂತ್ರಿ ಅವರನ್ನು ವಿವಿಧ ಪರೀಕ್ಷೆಗಳಿಗೆ ಒಳಪಡಿಸಿದ್ದು, ಯಾವುದೇ ಸಮಸ್ಯೆ ಕಾಣಿಸಿಕೊಂಡಿಲ್ಲ ಎಂದೂ ಮೂಲಗಳು ಹೇಳಿವೆ.

ರೆಮ್‌ಡಿಸಿವಿರ್ ಬೆಲೆ ಇಳಿಕೆ– ಡಿವಿಎಸ್

ಬೆಂಗಳೂರು: ‘ಕೋವಿಡ್ ಪೀಡಿತರ ಚಿಕಿತ್ಸೆಯಲ್ಲಿ ಪ್ರಮುಖವಾಗಿ ಬಳಕೆಯಾಗುವ ರೆಮ್‌ಡಿಸಿವಿರ್ ಚುಚ್ಚುಮದ್ದು ಬೆಲೆಯು ಕೇಂದ್ರ ಸರ್ಕಾರದ ಮಧ್ಯಪ್ರವೇಶದಿಂದ ಭಾರಿ ಇಳಿಕೆಯಾಗಿದೆ’ ಎಂದು ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದ ಗೌಡ ಹೇಳಿದ್ದಾರೆ.

ಕ್ಯಾಡಿಲಾ ಕಂಪನಿ ರೆಮ್ಡೆಕ್ ಬ್ರ್ಯಾಂಡಿನ ರೆಮ್‌ಡಿಸಿವಿರ್ ದರವನ್ನು ₹2,800ರಿಂದ ₹ 899ಕ್ಕೆ ಇಳಿಸಿದೆ. ಬೇರೆ ಬೇರೆ ಕಂಪನಿಗಳ ವಿವಿಧ ಬ್ರ್ಯಾಂಡಿನ ರೆಮ್‌ಡಿಸಿವಿರ್ ದರ ಹೀಗಿದೆ. ಡಾ ರೆಡ್ಡೀಸ್ ಕಂಪನಿಯ ರೆಡಿಕ್ಸ್ ₹2,700 (ಹಿಂದಿನ ದರ ₹ 5,400), ಸಿಂಜೆನ್ (ಬಯೋಕಾನ್) ಕಂಪನಿಯ ರೆಮ್ವಿನ್ ₹ 2,450 (₹ 39,50), ಸಿಪ್ಲಾ ಕಂಪನಿಯ ಸಿಪ್ರೆಮಿ ₹ 3,000 (₹ 4,000), ಮಿಲನ್ ಫಾರ್ಮಾಸ್ಯುಟಿಕಲ್ಸ್ ಕಂಪನಿಯ ಡೆಸ್ರೆಮ್ ₹ 3,400 (₹ 4,800), ಜ್ಯುಬಿಲೆಂಟ್ ಜೆನರಿಕ್ಸ್ ಕಂಪನಿಯ ಜ್ಯುಬಿ-ಆರ್ ₹ 3,400 (₹ 4,700), ಹೆಥೆರೋ ಹೆಲ್ತ್‌ಕೇರ್ ಕಂಪನಿಯ ಕೊವಿಫೊರ್ ₹ 3,490 (₹5,400) ಎಂದು ಅವರು ವಿವರಿಸಿದ್ದಾರೆ.

ಉತ್ಪಾದನೆ ಹೆಚ್ಚಳ: ‘ಅಮೆರಿಕದ ಗಿಲೀಡ್ ಸೈನ್ಸಸ್ ಕಂಪನಿ ಈ ಚುಚ್ಚುಮದ್ದಿನ ಪೇಟೆಂಟ್ ಹೊಂದಿದ್ದು, ಭಾರತದ ಏಳು ಫಾರ್ಮಾ ಕಂಪನಿಗಳು ಉತ್ಪಾದನಾ ಪರವಾನಗಿ ಪಡೆದಿವೆ. ಅವುಗಳ ಈಗಿನ ತಿಂಗಳ ಉತ್ಪಾದನಾ ಸಾಮರ್ಥ್ಯ 38.8 ಲಕ್ಷ ವೈಯಲ್ಸ್ (ಬಾಟಲಿ)ಯಷ್ಟಿದೆ. ಹೆಚ್ಚುವರಿಯಾಗಿ 35.3 ಲಕ್ಷ ವೈಯಲ್ಸ್ ಉತ್ಪಾದಿಸಲು ಅನುಮತಿ ನೀಡಲಾಗಿದೆ’ ಎಂದು ಹೇಳಿದ್ದಾರೆ.

ಮಾಸ್ಕ್ ಧರಿಸದ ರೈಲು ಪ್ರಯಾಣಿಕರಿಗೆ ₹500 ದಂಡ

ನವದೆಹಲಿ (ಪಿಟಿಐ): ರೈಲು ನಿಲ್ದಾಣದ ಆವರಣದಲ್ಲಿರುವವರು ಮತ್ತು ರೈಲುಗಳಲ್ಲಿ ಸಂಚರಿಸುವವರು ಮಾಸ್ಕ್ ಧರಿಸದಿದ್ದರೆ ₹500 ದಂಡ ವಿಧಿಸುವುದಾಗಿ ರೈಲ್ವೆ ಇಲಾಖೆ ಶನಿವಾರ ಎಚ್ಚರಿಸಿದೆ.

‘ಕೋವಿಡ್ 19‘ ಸೋಂಕು ಹರಡುವುದನ್ನು ನಿರ್ಬಂಧಿಸುವುದಕ್ಕಾಗಿ ಆರೋಗ್ಯ ಮತ್ತು ಕುಟುಂಬ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ‘ಕೋವಿಡ್ ನಿಯಂತ್ರಣ ಶಿಷ್ಟಾಚಾರ‘ದ ಪ್ರಕಾರ, ಭಾರತೀಯ ರೈಲ್ವೆ (ರೈಲ್ವೆ ಆವರಣದ ಶುಚಿತ್ವಕ್ಕೆ ಧಕ್ಕೆ ತರುವ ಚಟುವಟಿಕೆಗಾಗಿ ವಿಧಿಸುವ ದಂಡ) ಕಾಯ್ದೆ 2012 ಅನ್ವಯ ಈ ಕ್ರಮ ಕೈಗೊಂಡಿದೆ.

ತಮಿಳುನಾಡು ಪಶ್ಚಿಮ ಬಂಗಾಳ ಅಸ್ಸಾಂ ಕೇರಳ ಪುದುಚೇರಿ

ಪ್ರಜಾ ಮತ

ಜನತಂತ್ರದ ಹಬ್ಬ 2021

ನುಡಿ-ಕಿಡಿ

ಈ ಚುನಾವಣೆಯಲ್ಲಿ ಟಿಎಂಸಿ ಸೋಲುತ್ತದೆ ಎಂಬುದು ಮಮತಾ ಬ್ಯಾನರ್ಜಿ ಅವರಿಗೆ ಚೆನ್ನಾಗಿ ಮನದಟ್ಟಾಗಿದೆ. ಹೀಗಾಗಿಯೇ ಅವರು ಬಿಜೆಪಿ ವಿರುದ್ಧ ಎಲ್ಲಾ ವಿರೋಧ ಪಕ್ಷಗಳನ್ನು ಒಟ್ಟುಗೂಡಿಸಲು ಯತ್ನಿಸುತ್ತಿದ್ದಾರೆ. ಆದರೆ, ಅವರ ಯಾವ ಪ್ರಯತ್ನವೂ ಫಲನೀಡುವುದಿಲ್ಲ. ಮೇ 2ರ ನಂತರ ಇವರೆಲ್ಲಾ ಮನೆಗೆ ಹೋಗುತ್ತಾರೆ

ನರೇಂದ್ರ ಮೋದಿ, ಪ್ರಧಾನಿ



ಟಿಎಂಸಿಯದ್ದು ನಕಲಿ ರಾಷ್ಟ್ರಭಕ್ತಿ. ರಾಜ್ಯದ ಯಾವ ಸಮಸ್ಯೆಯನ್ನೂ ಟಿಎಂಸಿ ಬಗೆಹರಿಸಿಲ್ಲ. ಒಳನುಸುಳುವಿಕೆ ಮತ್ತು ನಕಲಿ ನೋಟಿನ ಹಾವಳಿ ಪಶ್ಚಿಮ ಬಂಗಾಳದ ಅತ್ಯಂತ ದೊಡ್ಡ ಸಮಸ್ಯೆಗಳು. ಬಿಜೆಪಿ ಅಧಿಕಾರಕ್ಕೆ ಬಂದರೆ ಮಾತ್ರವೇ ಈ ಸಮಸ್ಯೆಗಳು ಬಗೆಹರಿಯಲಿವೆ. ಮೇ 2ರ ನಂತರ ಬಿಜೆಪಿ ಅಧಿಕಾರಕ್ಕೆ ಬರಲಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ

ಆಮ್ಲಜನಕದ ಕೊರತೆ ಬಗ್ಗೆ ಮಾತನಾಡಲು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕರೆ ಮಾಡಿದ್ದೆ. ಅವರು ಪಶ್ಚಿಮ ಬಂಗಾಳ ಚುನಾವಣೆಯ ಪ್ರಚಾರದಲ್ಲಿ ಬ್ಯುಸಿ ಆಗಿದ್ದರು

ಉದ್ಧವ್ ಠಾಕ್ರೆ, ಮಹಾರಾಷ್ಟ್ರ ಮುಖ್ಯಮಂತ್ರಿ

ದೇಶದಲ್ಲಿ ಕೋವಿಡ್ ಅಟ್ಟಹಾಸ ನಡೆಸುತ್ತಿದೆ. ದೇಶ ನಲುಗಿದೆ. ಇಂತಹ ಸಂದರ್ಭದಲ್ಲಿ ಅಗತ್ಯ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು, ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ. ಲಸಿಕೆ, ಆಮ್ಲಜನಕ, ರೆಮ್‌ಡಿಸಿವಿರ್ ಕೊರತೆ ನೀಗಿಸುವುದು ಪ್ರಧಾನಿ ಅವರ ಕರ್ತವ್ಯವಲ್ಲವೇ?

ಪಿ.ಚಿದಂಬರಂ, ಕಾಂಗ್ರೆಸ್ ನಾಯಕ

ಪಶ್ಚಿಮ ಬಂಗಾಳದ ಮತದಾನದ ವೇಳೆ ಅಲ್ಲಲ್ಲಿ ಘರ್ಷಣೆ ಮತ್ತು ಹಿಂಸಾಚಾರ: ಹಲವೆಡೆ ಲಾಠಿ ಪ್ರಹಾರ

ಮತ್ತೆ ಗುಂಡು ಹಾರಿಸಿದ ಸಿಐಎಸ್‌ಎಫ್

ಕೋಲ್ಕತ್ತ/ಸಿಲಿಗುರಿ (ಪಿಟಿಐ): ಪಶ್ಚಿಮ ಬಂಗಾಳದ ಉತ್ತರ 24 ಪರಗಣ ಜಿಲ್ಲೆಯ ಮತಗಟ್ಟೆ ಒಂದರ ಬಳಿ ಸಿಐಎಸ್‌ಎಫ್ ಸಿಬ್ಬಂದಿ ಗುಂಡು ಹಾರಿಸಿದ್ದಾರೆ. ಸುಮ್ಮನೆ ನಿಂತಿದ್ದ ಜನರತ್ತ ಸಿಐಎಸ್‌ಎಫ್ ಸಿಬ್ಬಂದಿ ಗುಂಡು ಹಾರಿಸುವ ವಿಡಿಯೊ ವೈರಲ್ ಆಗಿದೆ. ಉಳಿದಂತೆ, 45 ಲೋಕಸಭಾ ಕ್ಷೇತ್ರಗಳಿಗೆ ಶನಿವಾರ 5ನೇ ಹಂತದಲ್ಲಿ ನಡೆದ ಮತದಾನದ ವೇಳೆ ಅಲ್ಲಲ್ಲಿ ಘರ್ಷಣೆ ಮತ್ತು ಹಿಂಸಾಚಾರ ನಡೆದಿದೆ.

ಸಿಐಎಸ್‌ಎಫ್ ಸಿಬ್ಬಂದಿ ಗುಂಡು-ಹಾರಿಸಿದ್ದಾರೆ ಎಂದು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಕೆಯಾಗಿದೆ. ಉತ್ತರ 24 ಪರಗಣ ಜಿಲ್ಲೆಯ ದೆಗಾಂಗ ಕ್ಷೇತ್ರದ ಕುರುಲ್‌ಗಾಚಾ ಮತಗಟ್ಟೆಯಲ್ಲಿ ಸಿಐಎಸ್‌ಎಫ್ ಸಿಬ್ಬಂದಿ ಗುಂಡುಹಾರಿಸಿದ್ದಾರೆ ಎಂದು ಗ್ರಾಮಸ್ಥರು ದೂರು ನೀಡಿದ್ದಾರೆ. ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಸಿಐಎಸ್‌ಎಫ್ ವಕ್ತಾರರು ಹೇಳಿದ್ದಾರೆ. ಆದರೆ, ಈ ಬಗ್ಗೆ ವರದಿ ನೀಡುವಂತೆ ಚುನಾವಣಾ ಆಯೋಗವು ಸೂಚಿಸಿದೆ.

‘ಸಿಐಎಸ್‌ಎಫ್ ಸಿಬ್ಬಂದಿ ಸುಮ್ಮನೆ ಗುಂಡು ಹಾರಿಸಿದ್ದಾರೆ ಎಂಬ ದೂರು ಬಂದಿದೆ. ಜತೆಗೆ ಮತಗಟ್ಟೆ ಬಳಿ ಸುಮ್ಮನೆ ಗುಂಪುಗೂಡಿದ್ದ ಜನರತ್ತ ಸಿಐಎಸ್‌ಎಫ್ ಸಿಬ್ಬಂದಿ ಗುಂಡು ಹಾರಿಸುತ್ತಿರುವ ವಿಡಿಯೊ ಸಹ ನಮಗೆ ದೊರೆತಿದೆ. ಹಲವು ಮಾಧ್ಯಮಗಳು ಆ ವಿಡಿಯೊವನ್ನು ಪ್ರಸಾರ ಮಾಡಿವೆ. ಈ ಬಗ್ಗೆ ವಿವರಣೆ ನೀಡಿ’ ಎಂದು ಚುನಾವಣಾ ಆಯೋಗವು ನೋಟಿಸ್‌ನಲ್ಲಿ ಸೂಚಿಸಿದೆ.

ಅಲ್ಲಲ್ಲಿ ಘರ್ಷಣೆ: ಮತದಾನ ನಡೆದ ಜಿಲ್ಲೆಗಳ ಹಲವು ಮತಗಟ್ಟೆಗಳಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ಮಧ್ಯೆ ಘರ್ಷಣೆ ನಡೆದಿದೆ. ಮತದಾರರು ಮತಗಟ್ಟೆಗೆ ಬರಲು ಬಿಡುತ್ತಿಲ್ಲ ಎಂದು ಎರಡೂ ಪಕ್ಷದ ಕಾರ್ಯಕರ್ತರು ಪರಸ್ಪರ ಆರೋಪಿಸಿದ್ದಾರೆ. ಆದರೆ ಪರಿಸ್ಥಿತಿ ಕೈಮೀರುವ ಮುನ್ನ ಭದ್ರತಾ ಸಿಬ್ಬಂದಿ ಜಗಳವನ್ನು ತಿಳಿಗೊಳಿಸಿದ್ದಾರೆ.

ಕೆಲವು ಮತಗಟ್ಟೆಗಳಲ್ಲಿ ಕಲ್ಲುತೂರಾಟವೂ ನಡೆದಿದೆ. ಈ ಘಟನೆಗಳಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರು ಗಾಯಗೊಂಡಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಾಗಿದೆ.

ಕಲ್ಯಾಣಿ ಜಿಲ್ಲೆಯ ಹಲವೆಡೆ ಎರಡೂ ಪಕ್ಷಗಳ ಕಾರ್ಯಕರ್ತರ ಸಂಘರ್ಷವನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಲಾಠಿ ಪ್ರಹಾರ ನಡೆಸಿದ್ದಾರೆ.

ಕೋಲ್ಕತ್ತದ ಸಾಲ್ಟ್‌ಲೇಕ್ ಪ್ರದೇಶದಲ್ಲಿ ಶನಿವಾರ ಮತದಾನದ ವೇಳೆ ಘರ್ಷಣೆ ನಡೆದಿತ್ತು. ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿದರು. ಈ ವೇಳೆ ಸಿಬ್ಬಂದಿಯೊಬ್ಬರು ಮೆಗಾಫೋನ್ ಮೂಲಕ ಸೂಚನೆ ನೀಡಿದರು –ಪಿಟಿಐ ಚಿತ್ರ

ಶೇ 78.36ರಷ್ಟು ಮತದಾನ

ಪಶ್ಚಿಮ ಬಂಗಾಳದ 45 ವಿಧಾನಸಭಾ ಕ್ಷೇತ್ರಗಳಿಗೆ 5ನೇ ಹಂತದಲ್ಲಿ ಶನಿವಾರ ನಡೆದ ಮತದಾನದಲ್ಲಿ, ಶೇ 78.36ರಷ್ಟು ಮತದಾನ ದಾಖಲಾಗಿದೆ.

ಜಲಪೈಗುರಿ ಜಿಲ್ಲೆಯಲ್ಲಿ ಶೇ 81.73ರಷ್ಟು, ಪೂರ್ವ ವರ್ಧಮಾನ್ ಜಿಲ್ಲೆಯಲ್ಲಿ ಶೇ 81.72, ಉತ್ತರ 24 ಪರಗಣ ಜಿಲ್ಲೆಯಲ್ಲಿ ಶೇ 74.83, ಡಾರ್ಜಿಲಿಂಗ್‌ನಲ್ಲಿ ಶೇ 74.31 ಮತ್ತು ಕಲಿಂಪಾಂಗ್ ಜಿಲ್ಲೆಯಲ್ಲಿ ಶೇ 69.56ರಷ್ಟು ಮತದಾನ ನಡೆದಿದೆ.

ಚುನಾವಣಾ ಕಣದಲ್ಲಿ

- ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪಶ್ಚಿಮ ಬಂಗಾಳದ ಹಲವೆಡೆ ಶನಿವಾರ ರೋಡ್‌ಶೋ ನಡೆಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ್ದಾರೆ
- ಪ್ರಧಾನಿ ನರೇಂದ್ರ ಮೋದಿ ಅವರು ಪಶ್ಚಿಮ ಬಂಗಾಳದ ಹಲವೆಡೆ ಶನಿವಾರ ರೋಡ್‌ಶೋ ನಡೆಸಿದ್ದಾರೆ. ಬಿಜೆಪಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ್ದಾರೆ
- ಉತ್ತರ 24 ಪರಗಣ ಜಿಲ್ಲೆಯ ಮತಗಟ್ಟೆಒಂದರಲ್ಲಿ ಬಿಜೆಪಿಯ ಏಜೆಂಟ್ ಒಬ್ಬರು, ಕುಸಿದುಬಿದ್ದು ಮೃತಪಟ್ಟಿದ್ದಾರೆ

ಮತದಾನ ಮುಗಿವ ಹೊತ್ತಿನಲ್ಲಿ ಖೂಬಾ ಉಚ್ಚಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಮಲ್ಲಿಕಾರ್ಜುನ ಖೂಬಾ ಅವರನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟಿಸಿರುವುದಾಗಿ ಬಿಜೆಪಿ ಹೇಳಿದೆ.

ಮತದಾನಕ್ಕೆ ಮುನ್ನವೇ ಅವರನ್ನು ಉಚ್ಚಾಟನೆ ಮಾಡಿ ಶಿಸ್ತುಕ್ರಮ ಕೈಗೊಳ್ಳದೇ, ಮತದಾನದ(ಏ.17) ದಿನ ಮಧ್ಯಾಹ್ನದ ಬಳಿಕ ಶಿಸ್ತುಕ್ರಮ ಕೈಗೊಂಡಿರುವುದು ಪಕ್ಷದಲ್ಲಿ ಚರ್ಚೆಗೆ ಕಾರಣವಾಗಿದೆ.

‘ಕೊನೆಗಳಿಗೆಯವರೆಗೂ ಪ್ರಯತ್ನ ನಡೆಸಿದರೂ ಕಣದಿಂದ ಹಿಂದೆ ಸರಿಯದೆ ಬಂಡುಕೋರರಾಗಿ ಉಳಿದಿದ್ದೀರಿ. ಇದು ಪಕ್ಷದ ಶಿಸ್ತಿನ ಉಲ್ಲಂಘನೆ. ಈ ಕಾರಣಕ್ಕೆ ನಿಮ್ಮನ್ನು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದ ಆರು ವರ್ಷಗಳ ಕಾಲ ಉಚ್ಚಾಟನೆ ಮಾಡಲಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜ ಪಾಟೀಲ ಅವರು ಖೂಬಾ ಅವರಿಗೆ ಕಳುಹಿಸಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಈ ಕ್ಷೇತ್ರದಿಂದ ಸ್ಪರ್ಧಿಸಲು ಮಲ್ಲಿಕಾರ್ಜುನ ಖೂಬಾ, ಸೂರ್ಯಕಾಂತ ನಾಗಮಾರಪಲ್ಲಿ ಆಕಾಂಕ್ಷಿಗಳಾಗಿದ್ದರು. ಬಿಜೆಪಿಯು ಶರಣು ಸಲಗರ ಅವರಿಗೆ ಟಿಕೆಟ್ ನೀಡಿದೆ. ಖೂಬಾ ಅವರು ಪಕ್ಷೇತರರಾಗಿ ಕಣದಲ್ಲಿ ಉಳಿದಿದ್ದರು. ಖೂಬಾ ಅವರನ್ನು ಸ್ಪರ್ಧೆಯಿಂದ ಹಿಂದೆ ಸರಿಸಲು ಬಿಜೆಪಿ ನಾಯಕರು ಅನೇಕ ಪ್ರಯತ್ನ ಮಾಡಿದ್ದರು. ಆದರೆ, ಖೂಬಾ ಕಣದಲ್ಲಿ ಉಳಿದಿದ್ದಲ್ಲದೇ ತೀವ್ರ ಪೈಪೋಟಿಯನ್ನೂ ಒಡ್ಡಿದ್ದರು.

ಬೆಳಗಾವಿ ಲೋಕಸಭೆ ಕ್ಷೇತ್ರ, ಮಸ್ಕಿ, ಬಸವಕಲ್ಯಾಣ ವಿಧಾನಸಭೆ ಕ್ಷೇತ್ರ

ಮತದಾನದ ಉತ್ಸಾಹ ಕಸಿದ ಬಿಸಿಲು

ಪ್ರಜಾವಾಣಿ ವಾರ್ತೆ

ರಾಯಚೂರು/ಬೀದರ್: ತೀವ್ರ ಕುತೂಹಲ ಕೆರಳಿಸಿರುವ ವಿಧಾನಸಭಾ ಉಪ ಚುನಾವಣೆಯ ಮಸ್ಕಿ ಕ್ಷೇತ್ರದಲ್ಲಿ ಉತ್ತಮ ಮತದಾನವಾದರೆ, ಬಸವಕಲ್ಯಾಣದಲ್ಲಿ ಮತದಾರರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. ಬಿಸಿಲಿನಿಂದಾಗಿ ಎರಡೂ ಕಡೆಗಳಲ್ಲಿ ಸಂಜೆ ನಂತರವೇ ಮತದಾರರು ಹೆಚ್ಚಿನ ಪ್ರಮಾಣದಲ್ಲಿ ಮತಗಟ್ಟೆಗೆ ಬಂದರು

ಕಾಂಗ್ರೆಸ್ ಅಭ್ಯರ್ಥಿ ಬಸನಗೌಡ ತುರ್ವಿಹಾಳ ಅವರು ತುರ್ವಿಹಾಳ ಪಟ್ಟಣದಲ್ಲಿ, 'ಹೋಮ್ ಐಸೋಲೇಷನ್' ನಲ್ಲಿರುವ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಅವರು ಸುರಕ್ಷತಾ ಸಾಧನ ಧರಿಸಿ ಹಕ್ಕು ಚಲಾಯಿಸಿದರು.

ಹಾಲಾಪುರ ಮತ್ತು ವಟಗಲ್ ಗ್ರಾಮಗಳ ಮತಗಟ್ಟೆಗಳಲ್ಲಿ ಚುನಾವಣಾ ನಿಯಮ ಉಲ್ಲಂಘನೆ ಕುರಿತು ಪ್ರಕರಣ ದಾಖಲಿಸಲು ಚುನಾವಣಾಧಿಕಾರಿ ಸೂಚಿಸಿದರು. ಮಸ್ಕಿ ಕ್ಷೇತ್ರದ ನಾಲ್ಕು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ರೈತರು ಎನ್‌ಆರ್‌ಬಿಸಿ 5ಎ ಕಾಲುವೆಗಾಗಿ 115 ದಿನಗಳಿಂದ ಹೋರಾಟ ನಡೆಸಿದ್ದು, ಇಲ್ಲಿ ಬಿಗಿ ಪೊಲೀಸ್ ಭದ್ರತೆ ನಿಯೋಜಿಸಲಾಗಿತ್ತು.

ಬಸವಕಲ್ಯಾಣ ಕ್ಷೇತ್ರದ ತ್ರಿಪುರಾಂತ ಗ್ರಾಮದಲ್ಲಿ ಹಣ ಹಂಚಿಕೆ ಆರೋಪ ಕೇಳಿ ಬಂದ ನಂತರ ಮತಗಗಟ್ಟೆಗಳ ವ್ಯಾಪ್ತಿಯಲ್ಲಿ ಪೊಲೀಸ್ ಬಂದೋಬಸ್ತ್ ಬಿಗಿಗೊಳಿಸಲಾಗಿತ್ತು. ಜಿಲ್ಲಾ ಚುನಾವಣಾ ಅಧಿಕಾರಿ ರಾಮಚಂದ್ರನ್ ಅವರು ಅಧಿಕಾರಿಗಳ ತಂಡ ದೊಂದಿಗೆ ವಿವಿಧ ಮತ ಗಟ್ಟೆಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಮಾಲಾ ಬಿ. ನಾರಾಯಣರಾವ್, ಬಿಜೆಪಿ ಅಭ್ಯರ್ಥಿ ಶರಣು ಸಲಗರ, ಜೆಡಿಎಸ್ ಅಭ್ಯರ್ಥಿ ಯಸ್ರಬ್ ಅಲಿ ಖಾದ್ರಿ, ಪಕ್ಷೇತರ ಅಭ್ಯರ್ಥಿ ಮಲ್ಲಿಕಾರ್ಜುನ ಖೂಬಾ ಬಸವಕಲ್ಯಾಣದಲ್ಲಿ ಮತ ಚಲಾಯಿಸಿದರು.

ಮತಚಲಾವಣೆ ವಿಡಿಯೊ ಮಾಡಿದ: ಮಸ್ಕಿ ಕ್ಷೇತ್ರದ ವಟಗಲ್ ಗ್ರಾಮದಲ್ಲಿ ಮತದಾನ ಮಾಡಿದ್ದನ್ನು ಪಂಚಾಯಿತಿ ಸದಸ್ಯ ಬಸವರಾಜ ಚಲುವಾದಿ ವಿಡಿಯೊ ಮಾಡಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದರು. ಇವರ ವಿರುದ್ಧ ಕವಿತಾಳ ಠಾಣೆಯಲ್ಲಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಕೋವಿಡ್ ನಿಯಮ ಪಾಲನೆ: ಮತಗಟ್ಟೆ ಆವರಣಗಳಲ್ಲಿ ಕೋವಿಡ್ ನಿಯಮ ಪಾಲನೆಗೆ ಕ್ರಮ ಕೈಗೊಳ್ಳಲಾಗಿತ್ತು. ಕೆಲವೆಡೆ ಅಂತರ ಕಾಣಲಿಲ್ಲ. ಎಲ್ಲರೂ ಮಾಸ್ಕ್ ಧರಿಸಿದ್ದರು. ಮತದಾರರಿಗೆ ಥರ್ಮಲ್ ಪರೀಕ್ಷೆ ನಡೆಯಿತು.

ಮಸ್ಕಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರತಾಪಗೌಡ ಪಾಟೀಲ ಅವರಿಗೆ ಕೋವಿಡ್ ದೃಢಪಟ್ಟ ಕಾರಣ ಶನಿವಾರ ಸಂಜೆ ಅವರು ಸುರಕ್ಷತಾ ಸಾಧನ ಧರಿಸಿ ಮಸ್ಕಿಯ ಕಿಲ್ಲಾ ಮತಗಟ್ಟೆಯಲ್ಲಿ ಮತ ಚಲಾಯಿಸಿ ಹೊರಬಂದರು

ನೀರಸ ಮತದಾನ

ಬೆಳಗಾವಿ: ಲೋಕಸಭೆ ಕ್ಷೇತ್ರದ ಚುನಾವಣೆಗೆ 2,566 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಬಹುತೇಕ ಮತಗಟ್ಟೆಗಳಲ್ಲಿ ನೀರಸ ಮತದಾನ ನಡೆಯಿತು.

ಬಿಜೆಪಿಯ ಮಂಗಲಾ ಸುರೇಶ ಅಂಗಡಿ ನಗರದಲ್ಲಿ ಹಾಗೂ ಕಾಂಗ್ರೆಸ್‌ನ ಸತೀಶ ಜಾರಕಿಹೊಳಿ ಗೋಕಾಕದಲ್ಲಿ ಮತ ಚಲಾಯಿಸಿ ಗೆಲುವಿನ ವಿಶ್ವಾಸ ವ್ಯಕ್ತಪಡಿಸಿದರು. ಕೋವಿಡ್‌ನಿಂದ ಚೇತರಿಸಿಕೊಂಡಿರುವ ಗೋಕಾಕದ ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಚುನಾವಣೆಗೆ ಎರಡು ದಿನಗಳ ಹಿಂದೆಯೇ ಅಂಚೆ ಮತಪತ್ರದ ಮೂಲಕ ಹಕ್ಕು ಚಲಾಯಿಸಿದ್ದರು. ಅವರ ಪುತ್ರ, ಕೆಎಂಎಫ್ ನಿರ್ದೇಶಕ ಅಮರನಾಥ ಜಾರಕಿಹೊಳಿ, ಕೋವಿಡ್ ದೃಢಪಟ್ಟಿದ್ದರಿಂದ ಪಿಪಿಇ ಕಿಟ್ ಧರಿಸಿ ಬಂದು ಮತದಾನ ಮಾಡಿದರು.

ದುಮ್ಕಾ ಖಜಾನೆ ಪ್ರಕರಣ ಲಾಲು ಪ್ರಸಾದ್‌ಗೆ ಜಾಮೀನು

ರಾಂಚಿ (ಪಿಟಿಐ): ಬಹುಕೋಟಿ ಮೇವು ಹಗರಣ ಕುರಿತ ದುಮ್ಕಾ ಖಜಾನೆ ಪ್ರಕರಣದಲ್ಲಿ ಜಾರ್ಖಂಡ್ ಹೈಕೋರ್ಟ್ ಶನಿವಾರ ಆರ್‌ಜೆಡಿ ಅಧ್ಯಕ್ಷ ಲಾಲು ಪ್ರಸಾದ್ ಅವರಿಗೆ ಜಾಮೀನು ನೀಡಿದೆ.

ನ್ಯಾಯಮೂರ್ತಿ ಅಪರೇಶ್ ಕುಮಾರ್ ಸಿಂಗ್ ಜಾಮೀನು ನೀಡಿದ್ದು, ಇದು ಲಾಲು ಪ್ರಸಾದ್ ಜೈಲಿನಿಂದ ಹೊರಬರುವ ಹಾದಿಯನ್ನು ಸುಗಮಗೊಳಿಸಿದೆ.

ಜಾಮೀನು ಅವಧಿಯಲ್ಲಿ ಅನುಮತಿಯಿಲ್ಲದೇ ದೇಶ ಬಿಟ್ಟು ತೆರಳಬಾರದು. ವಿಳಾಸ ಅಥವಾ ಮೊಬೈಲ್ ಸಂಖ್ಯೆ ಬದಲಿಸಬಾರದು ಎಂದು ಕೋರ್ಟ್ ಸೂಚಿಸಿದೆ. ಇದೇ ಬಹುಕೋಟಿ ಮೇವು ಹಗರಣಕ್ಕೆ ಸಂಬಂಧಿಸಿದಂತೆ ಇತರೆ ಮೂರು ಪ್ರಕರಣದಲ್ಲಿ ಅವರು ಈಗಾಗಲೇ ಜಾಮೀನು ಪಡೆದಿದ್ದರು. ದುಮ್ಕಾ ಖಜಾನೆಯಿಂದ 90ರ ದಶಕದಲ್ಲಿ ಕಾನೂನುಬಾಹಿರವಾಗಿ ₹ 3.13 ಕೋಟಿ ಪಡೆದಿದ್ದ ಸಂಬಂಧ ಪ್ರಕರಣ ನ್ಯಾಯಾಲಯದಲ್ಲಿದೆ.



ಜುನಾ ಅಖಾಡದ ಸ್ವಾಮಿ ಅವಧೇಶಾನಂದ ಗಿರಿ ಘೋಷಣೆ • ಸಾಂಕೇತಿಕವಾಗಿ ನಡೆಯಲಿ: ಪ್ರಧಾನಿ ಮೋದಿ

ಕೋವಿಡ್: ಕುಂಭಮೇಳ ಅರ್ಧಕ್ಕೇ ಮೊಟಕು

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಪ್ರಕರಣಗಳು ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಹರಿದ್ವಾರದಲ್ಲಿ ನಡೆಯುತ್ತಿರುವ ಕುಂಭಮೇಳವನ್ನು ಕೊನೆಗೊಳಿಸುವುದಾಗಿ ಜುನಾ ಅಖಾಡದ ಸ್ವಾಮಿ ಅವಧೇಶಾನಂದ ಗಿರಿ ಅವರು ಶನಿವಾರ ಸಂಜೆ ಘೋಷಿಸಿದ್ದಾರೆ.

ಕುಂಭಮೇಳ ಈಗ ಸಾಂಕೇತಿಕವಾಗಿ ನಡೆಯಲಿ ಎಂದು ಪ್ರಧಾನಿ ನರೇಂದ್ರ ಮೋದಿ ಸೂಚಿಸಿದ್ದರು. ಇದಕ್ಕೆ ಪೂರಕವಾಗಿ ಪ್ರತಿಕ್ರಿಯಿಸಿದ್ದ ಅವಧೇಶಾನಂದ ಗಿರಿ ಅವರು ಕುಂಭಮೇಳಕ್ಕೆ ಯಾರೂ ಬರಬಾರದು ಎಂದು ಕೋರಿದ್ದರು. ಇದೀಗ ಕುಂಭಮೇಳವನ್ನೇ ಕೊನೆಗೊಳಿಸಿರುವುದಾಗಿ ಟ್ವೀಟ್ ಮಾಡಿದ್ದಾರೆ.

‘ಭಾರತ ಜನರು, ಅವರ ಜೀವದ ರಕ್ಷಣೆಯು ನಮ್ಮ ಮೊದಲ ಮತ್ತು ಪ್ರಮುಖ ಆದ್ಯತೆಯಾಗಿದೆ. ಕೊರೊನಾ ಸೋಂಕು ಪ್ರಕರಣಗಳು ತೀವ್ರವಾಗಿ ಹೆಚ್ಚುತ್ತಿರುವುದರಿಂದ ವಿಧಿವತ್ತಾಗಿ ಕುಂಭಕ್ಕೆ ಆಹ್ವಾನಿಸಲಾಗಿದ್ದ ಎಲ್ಲ ದೇವತೆಗಳನ್ನು ವಿಸರ್ಜಿಸಲಾಗಿದೆ. ಜುನಾ ಅಖಾಡದ ವತಿಯಿಂದ ಕುಂಭಮೇಳವನ್ನು ವಿಧಿವತ್ತಾಗಿ ಸಮಾರೋಪಗೊಳಿಸಲಾಗಿದೆ’ ಎಂದು ಅವಧೇಶಾನಂದ ಅವರು ಟ್ವೀಟ್ ಮಾಡಿದ್ದಾರೆ.

ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುಉದರಿಂದ ಹರಿದ್ವಾರದ ಹರಿ ಕಿ ಪುರ ಘಾಟ್‌ನಲ್ಲಿ ಭಕ್ತರ ಸಂಖ್ಯೆ ವಿರಳವಾಗಿತ್ತು –ಪಿಟಿಐ ಚಿತ್ರ

ಜನಸಮೂಹ ತೆರವುಗೊಳಿಸಲು ಕೋರಿ ಸುಪ್ರೀಂಗೆ ಅರ್ಜಿ

ನವದೆಹಲಿ (ಪಿಟಿಐ): ಕುಂಭ ಮೇಳಕ್ಕಾಗಿ ಹರಿದ್ವಾರದಲ್ಲಿ ಜಮಾವಣೆಗೊಂಡಿರುವ ಜನಸಮೂಹವನ್ನು, ಒಂದೇ ಸಮನೇ ಏರುತ್ತಿರುವ ಕೋವಿಡ್ ಪ್ರಕರಣಗಳ ಕಾರಣ ತೆರವುಗೊಳಿಸುವಂತೆ ಕೇಂದ್ರ ಮತ್ತು ಇತರ ಆಡಳಿತ ಸಂಸ್ಥೆಗಳಿಗೆ ನಿರ್ದೇಶನ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆ. ಮೇಳದಿಂದ ಹಿಂತಿರುಗುವ ಯಾತ್ರಿಗಳಿಗೆ ಸುರಕ್ಷತಾ ಕ್ರಮಗಳ ಮಾರ್ಗಸೂಚಿ ನಿಗದಿಪಡಿಸುವಂತೆಯೂ ಈ ಅರ್ಜಿಯಲ್ಲಿ ಕೋರಲಾಗಿದೆ.

ಇತ್ತೀಚಿನ ದಿನಗಳಲ್ಲಿ ಸೋಂಕು ಪ್ರಕರಣಗಳು ವಿಪರೀತವಾಗಿ ಏರುತ್ತಿರುವುದನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಜನರನ್ನು ಕುಂಭಮೇಳಕ್ಕೆ ಆಹ್ವಾನಿಸುತ್ತಿರುವ ಜಾಹೀರಾತುಗಳನ್ನು ಹಿಂಪಡೆಯುವಂತೆಯೂ ಕೇಂದ್ರ ಮತ್ತು ಉತ್ತರಾಖಂಡ ಸರ್ಕಾರಕ್ಕೆ ತಕ್ಷಣವೇ ನಿರ್ದೇಶನ ನೀಡುವಂತೆ ಮನವಿ ಮಾಡಲಾಗಿದೆ.

ಚುನಾವಣಾ ಪ್ರಕ್ರಿಯೆ ಜಾರಿಯಲ್ಲಿರುವ ರಾಜ್ಯಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು, ಉಲ್ಲಂಘಿಸುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಲು ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು ಎಂದು ಅರ್ಜಿಯಲ್ಲಿ ಹೇಳಲಾಗಿದೆ.

ನೊಯ್ಡಾ ನಿವಾಸಿ ಸಂಜಯ್ ಕುಮಾರ್ ಪಾಠಕ್ ಈ ಅರ್ಜಿ ದಾಖಲಿಸಿದ್ದಾರೆ. ಕೊರೊನಾ ಸೋಂಕು ಪ್ರಕರಣಗಳು ತೀವ್ರಗತಿಯಲ್ಲಿ ಏರುತ್ತಿದ್ದು, ಈ ಒತ್ತಡದ ಭಾರದಿಂದ ನಲುಗಿ ಅನೇಕ ರಾಜ್ಯಗಳಲ್ಲಿ ಆರೋಗ್ಯ ಸೌಕರ್ಯಗಳು ಕುಸಿಯುವ ಹಂತಕ್ಕೆ ಬಂದುನಿಂತಿವೆ ಎಂದು ಕಳವಳ ವ್ಯಕ್ತಪಡಿಸಲಾಗಿದೆ.

ಆಸ್ಪತ್ರೆ ಮತ್ತು ಚಿತಾಗಾರಗಳಲ್ಲಿ ಸ್ಥಳಾಭಾವ ಕಂಡುಬರುತ್ತಿದ್ದು, ಹಲವು ರಾಜ್ಯಗಳಲ್ಲಿ ಔಷಧಿ ಕೊರತೆ ತೀವ್ರವಾಗಿರುವ ವರದಿಗಳು ಬಂದಿವೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.

ಪ್ರಾರ್ಥನೆಗಳು ಫಲಿಸಿವೆ, ನನಗಿದು ಎರಡನೇ ಜನ್ಮ: ಮನ್ಹಾಸ್

ಜಮ್ಮು (ಪಿಟಿಐ): ‘ಎಂಥ ಕಠಿಣ ಪರಿಸ್ಥಿತಿಯಲ್ಲೂ ನಾನು ಭರವಸೆಯನ್ನು ಕಳೆದುಕೊಳ್ಳಲಿಲ್ಲ. ಬಹಳ ತಾಳ್ಮೆಯಿಂದ ಇದ್ದೆ. ಆ ಬಂಧನದಿಂದ ಬಿಡುಗಡೆಯಾಗಿ ಬರುತ್ತೇನೆ ಅಂತ ಅಂದಕೊಂಡಿರಲಿಲ್ಲ.. ನನಗೆ ಎರಡನೇ ಜನ್ಮ ಸಿಕ್ಕಿದಂತಾಗಿದೆ..’

ನಕ್ಸಲರ ವಶದಿಂದ ಬಿಡುಗಡೆಯಾಗಿ ತವರಿಗೆ ಮರಳಿರುವ ಸಿಆರ್‌ಪಿಎಫ್ ಕಮಾಂಡೊ ರಾಕೇಶ್ವರ್ ಸಿಂಗ್ ಮನ್ಹಾಸ್ ಅವರ ಮನದಾಳದ ಮಾತುಗಳಿವು.

ಛತ್ತೀಸ್‌ಗಡದ ಅರಣ್ಯದಲ್ಲಿ ಏಪ್ರಿಲ್ 3ರಂದು ಸಿಆರ್‌ಪಿಎಫ್ ಮತ್ತು ನಕ್ಸಲರ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ರಾಕೇಶ್ವರ್ ಸಿಂಗ್ ನಾಪತ್ತೆಯಾಗಿದ್ದರು. ಆ ನಂತರ ಅವರನ್ನು ನಕ್ಸಲರು ಅಪಹರಿಸಿರುವುದು ಗೊತ್ತಾಯಿತು. ಐದು ದಿನಗಳಕಾಲ ನಕ್ಸಲರ ವಶದಲ್ಲಿದ್ದ ರಾಕೇಶ್ವರ ಸಿಂಗ್ ಏಪ್ರಿಲ್ 8ರಂದು ಬಿಡುಗಡೆಯಾದರು.

ನಕ್ಸಲರಿಂದ ಬಿಡುಗಡೆಯಾದ ಬಳಿಕ ಮನ್ಹಾಸ್ ಅವರು ತಮ್ಮ ಸ್ವಗ್ರಾಮ ಜಮ್ಮುವಿನ ಹೊರ ವಲಯದಲ್ಲಿರುವ ಬರ್ನೈಗೆ ಆಗಮಿಸುತ್ತಿದ್ದಂತೆ, ಕುಟುಂಬದ ಸದಸ್ಯರು ಮತ್ತು ಗ್ರಾಮಸ್ಥರು ಊರಿನ ಹೊರವಲಯದಲ್ಲೇ ಅವರನ್ನು ಸ್ವಾಗತಿಸಿದರು.

ಈ ವೇಳೆ ಮಾತನಾಡಿದ ರಾಕೇಶ್ವರ್ ಸಿಂಗ್, ‘ನನ್ನ ತಾಯಿಯ ಪ್ರಾರ್ಥನೆಯಿಂದ ಇಂದು ಜೀವಂತವಾಗಿದ್ದೇನೆ, ಇಲ್ಲಿಯವರೆಗೆ ನಕ್ಸಲರ ಸೆರೆಯಿಂದ ಯಾರೂ ಜೀವಂತವಾಗಿ ಮರಳಿಲ್ಲ‘ ಎಂದು ಮನ್ಹಾಸ್ ಹೇಳಿದರು.

ಸಮೃದ್ಧ, ಇಂಡೊ–ಫೆಸಿಫಿಕ್ ಪ್ರದೇಶಕ್ಕೆ ಅಮೆರಿಕ–ಜಪಾನ್ ಪಣ

ವಾಷಿಂಗ್ಟನ್: ಮುಕ್ತ, ವೈವಿಧ್ಯಮಯ ಮತ್ತು ಸಮೃದ್ಧ ವಾತಾವರಣ ಸೃಷ್ಟಿಸುವ ಇಂಡೊ–ಪೆಸಿಫಿಕ್ ಪ್ರದೇಶಕ್ಕೆ ಶ್ರಮಿಸುವುದಾಗಿ ಅಮೆರಿಕ, ಜಪಾನ್ ಒಪ್ಪಿಕೊಂಡಿವೆ. ಸಮೃದ್ಧ ಇಂಡೊ–ಫೆಸಿಫಿಕ್ ನಿರ್ಮಿಸಲು ‘ಕ್ವಾಡ್’ ಅನ್ನು ಇನ್ನಷ್ಟು ಬಲಿಷ್ಠಗೊಳಿಸಬೇಕಾಗಿದೆ. ಇದಕ್ಕಾಗಿ ಭಾರತ ಮತ್ತು ಆಸ್ಟ್ರೇಲಿಯಾದೊಂದಿಗೆ ಕೆಲಸ ಮಾಡುವುದಾಗಿ ಉಭಯ ರಾಷ್ಟ್ರಗಳು ಹೇಳಿವೆ.

ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮತ್ತು ಜಪಾನ್ ಪ್ರಧಾನಿ ಯೋಶಿಹಿದೆ ಸುಗಾ ಅವರು ಶ್ವೇತಭವನದಲ್ಲಿ ಸಭೆ ನಡೆಸಿದರು. ಇಂಡೊ–ಫೆಸಿಫಿಕ್‌ನ ಶಾಂತಿ ಮೇಲೆ ಚೀನಾದ ಕ್ರಮಗಳು ಬೀರುತ್ತಿರುವ ಪರಿಣಾಮದ ಬಗ್ಗೆ ಉಭಯ ನಾಯಕರು ಚರ್ಚೆ ನಡೆಸಿದರು. ‘ಕ್ವಾಡ್ ಮೂಲಕ ನಾವು ಪಾಲುದಾರರಾಗಿ ಕೆಲಸ ಮಾಡಲಿದ್ದೇವೆ. ನಾಲ್ಕು ರಾಷ್ಟ್ರಗಳು ಜತೆಗೂಡಿ ಕ್ವಾಡ್ ಅನ್ನು ಇನ್ನಷ್ಟು ಬಲಿಷ್ಠಗೊಳಿಸಲಿದ್ದೇವೆ’ ಎಂದು ಉಭಯ ನಾಯಕರು ಜಂಟಿಯಾಗಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾದ ಒಕ್ಕೂಟವನ್ನು ’ಕ್ವಾಡ್’ ಎಂದು ಕರೆಯಲಾಗುತ್ತದೆ. ಮುಕ್ತ ಚರ್ಚೆಯ ನೆಪದಲ್ಲಿ ಇತರ ರಾಷ್ಟ್ರಗಳ ನಡುವಿನ ಅಂತರ ಹೆಚ್ಚಿಸುವ ಕೆಲಸ ಇಲ್ಲಿ ನಡೆದಿದೆ ಎಂದು ಚೀನಾ ಟೀಕಿಸಿದೆ.

ನಟ ದೀಪ್ ಸಿಧುಗೆ ಜಾಮೀನು, ಮರು ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ಕೃಷಿ ಕಾಯ್ದೆಗಳನ್ನು ವಿರೋಧಿಸಿ ಗಣರಾಜ್ಯೋತ್ಸವ ದಿನದಂದು ಕೆಂಪುಕೋಟೆ ಬಳಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಬಂಧನಕ್ಕೊಳಗಾಗಿದ್ದ ನಟ–ಹೋರಾಟಗಾರ ದೀಪ್ ಸಿಧು ಅವರಿಗೆ ದೆಹಲಿ ನ್ಯಾಯಾಲಯ ಶನಿವರ ಜಾಮೀನು ನೀಡಿತು.

ಅದರ ಬೆನ್ನಿಗೇ ದೆಹಲಿ ಪೊಲೀಸ್ ಅಪರಾಧ ದಳ ಇನ್ನೊಂದು ಪ್ರಕರಣದಲ್ಲಿ ಅವರನ್ನು ಬಂಧಿಸಿತು.

₹30 ಸಾವಿರ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತದ ಇಬ್ಬರು ಜಾಮೀನುದಾರರೊಂದಿಗೆ ದೆಹಲಿ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ನೀಲೊಫರ್ ಅಬಿದಾ ಪರ್ವೀನ್ ಅವರು ಶುಕ್ರವಾರ ದೀಪ್ ಸಿಧು ಅವರಿಗೆ ಜಾಮೀನು ನೀಡಿದ್ದರು.ಸಿಧು ಅವರನ್ನು ಫೆಬ್ರವರಿ 9ರಂದು ಪೊಲೀಸರು ಬಂಧಿಸಿದ್ದರು. ಹಿಂಸಾಚಾರದಲ್ಲಿ ಒಬ್ಬ ರೈತರು ಮೃತಪಟ್ಟಿದ್ದು, 300ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದರು.



ದೀಪ್ ಸಿಧು

ಸಂಕ್ಷಿಪ್ತ ಸುದ್ದಿ

ಫೆಡೆಕ್ಸ್ ಕಂಪನಿ ಸಮೀಪ ಗುಂಡಿನ ದಾಳಿ; ಮೃತರಲ್ಲಿ ನಾಲ್ವರು ಸಿಖ್ಖರು

ವಾಷಿಂಗ್ಟನ್: ಅಮೆರಿಕದ ಇಂಡಿಯಾನಾಪೊಲೀಸ್‌ನಲ್ಲಿನ ಫೆಡೆಕ್ಸ್ ಕಂಪನಿಯ ಸಮೀಪ ನಡೆದ ಗುಂಡಿನ ದಾಳಿಯಲ್ಲಿ ಸಾವಿಗೀಡಾದ 8 ಮಂದಿಯಲ್ಲಿ ನಾಲ್ವರು ಸಿಖ್ ಸಮುದಾಯಕ್ಕೆ ಸೇರಿದವರಾಗಿದ್ದಾರೆ.

ಅಮೆರಿಕದಲ್ಲಿ ಹೆಚ್ಚುತ್ತಿರುವ ದ್ವೇಷ ಅಪರಾಧ ಮತ್ತು ಗುಂಡಿನ ದಾಳಿಯನ್ನು ನಿಯಂತ್ರಿಸುವಂತೆ ಭಾರತ ಮೂಲದ ನಾಯಕರು, ಅಧ್ಯಕ್ಷ ಜೋ ಬೈಡನ್ ಅವರಿಗೆ ಮನವಿ ಮಾಡಿದ್ದಾರೆ.

ಗುರುವಾರ ತಡರಾತ್ರಿ ವ್ಯಕ್ತಿಯೊಬ್ಬ ಫೆಡೆಕ್ಸ್ ಕಂಪನಿಯ ಸಮೀಪ ಗುಂಡಿನ ದಾಳಿ ನಡೆಸಿದ್ದ. ಆರೋಪಿಯನ್ನು 19 ವರ್ಷದ ಬ್ರ್ಯಾಡನ್ ಸ್ಕಾಟ್ ಹೋಲ್ ಎಂದು ಗುರುತಿಸಲಾಗಿದೆ. ಈತ ಗುಂಡಿನ ದಾಳಿ ನಡೆಸಿದ ಬೆನ್ನಲ್ಲೇ ಆತ್ಮಹತ್ಯೆ ಮಾಡಿಕೊಂಡ ಎನ್ನಲಾಗಿದೆ.

ಬ್ರ್ಯಾಡನ್ ಫೆಡೆಕ್ಸ್‌ನ ಮಾಜಿ ಉದ್ಯೋಗಿಯಾಗಿದ್ದು, 2020ರಲ್ಲಿ ಈತ ಫೆಡೆಕ್ಸ್ ಕಂಪನಿಯಲ್ಲಿ ಕಾರ್ಯ ನಿರ್ವಹಿಸಿದ್ದ.

ಇಂಡಿಯಾನದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ–ಅಮೆರಿಕನ್ ಉದ್ಯೋಗಿಗಳಿದ್ದಾರೆ.

ಲಸಿಕೆ ಕಚ್ಚಾ ಸಾಮಗ್ರಿಗಳ ರಫ್ತಿಗೆ ಅಮೆರಿಕ ನಿರ್ಬಂಧ–ಸಿಪಿಎಂ

ನವದೆಹಲಿ (ಪಿಟಿಐ): ಲಸಿಕೆಯ ಕಚ್ಚಾಸಾಮಗ್ರಿಗಳ ರಫ್ತು ಮೇಲೆ ಅಮೆರಿಕ ವಿಧಿಸಿರುವ ನಿರ್ಬಂಧ, ಲಸಿಕೆ ಉತ್ಪಾದನೆಯ ಮೇಲೆ ಪರಿಣಾಮ ಬೀರಿದ್ದು, ಕೊರತೆಗೂ ಕಾರಣವಾಗಿದೆ ಎಂದು ಸಿಪಿಎಂ ಆರೋಪಿಸಿದೆ.

ಈ ಕುರಿತು ಹೇಳಿಕೆ ನೀಡಿರು ಪಕ್ಷದ ಪಾಲಿಟ್‌ಬ್ಯೂರೊ, ಜೋ ಬೈಡನ್ ನೇತೃತ್ವದ ಅಮೆರಿಕ ಆಡಳಿತದ ಈ ನಿಲುವು ಅದರ ದ್ವಂದ್ವ ನಿಲುವಿಗೆ ನಿದರ್ಶನವಾಗಿದೆ ಎಂದು ಟೀಕಿಸಿದೆ.

‘ಭಾರತದಲ್ಲಿ ಲಸಿಕೆ ಉತ್ಪಾದನೆಗೆ ಧಕ್ಕೆಯಾಗಿದೆ. ಅಗತ್ಯ ಪ್ರಮಾಣದ ಕಚ್ಚಾ ಸಾಮಗ್ರಿಗಳ ಕೊರತೆ ಇದಕ್ಕೆ ಕಾರಣ. ಪ್ರಮುಖವಾಗಿ ಬೇಕಿರುವ ಫಿಲ್ಟರ್, ಸೊಲ್ಯೂಷನ್, ಪ್ಲಾಸ್ಟಿಕ್ ಬ್ಯಾಗ್‌ಗಳು ಅಮೆರಿಕದಿಂದಲೇ ಬರಬೇಕಿದೆ. ಆದರೆ, ರಕ್ಷಣಾ ಉತ್ಪನ್ನಗಳ ಕಾಯ್ದೆಯಡಿ ಅಮೆರಿಕ ಇವುಗಳ ರಫ್ತಿಗೆ ನಿರ್ಬಂಧ ಹೇರಿದೆ’ ಎಂದಿದೆ.

ಭಾರತ ಕ್ವಾಡ್ ಸದಸ್ಯ ರಾಷ್ಟ್ರವಾಗಿ ಪ್ರಧಾನಿ ನರೇಂದ್ರ ಮೋದಿ ಈ ಸಮಸ್ಯೆಯತ್ತ ಗಮನಹರಿಸಿ, ಅಗತ್ಯ ಕಚ್ಚಾ ಸಾಮಗ್ರಿ ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ಹೇಳಿದೆ. ಭಾರತವಲ್ಲದೆ, ಅಮೆರಿಕ, ಆಸ್ಟ್ರೇಲಿಯ, ಜಪಾನ್ ಕ್ವಾಡ್ ಸಮೂಹದ ಇತರ ಸದಸ್ಯ ರಾಷ್ಟ್ರಗಳಾಗಿವೆ.

ಕಮ್ಯುನಿಸ್ಟ್ ಪಕ್ಷದ ಮುಖ್ಯಸ್ಥ ಸ್ಥಾನಕ್ಕೆ ರೌಲ್ ಕ್ಯಾಸ್ಟ್ರೊ ರಾಜೀನಾಮೆ

ಹವಾನ (ಎಪಿ): ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ರೌಲ್ ಕ್ಯಾಸ್ಟ್ರೊ ಘೋಷಿಸಿದ್ದಾರೆ.ಯುವ ಸದಸ್ಯರ ಕೈಗೆ ಪಕ್ಷದ ಜವಾಬ್ದಾರಿಯನ್ನು ವಹಿಸುವ ಇಂಗಿತವನ್ನು ರೌಲ್ ವ್ಯಕ್ತಪಡಿಸಿದ್ದಾರೆ.

89 ವರ್ಷದ ರೌಲ್ ಕ್ಯಾಸ್ಟ್ರೊ ಶುಕ್ರವಾರ ಇಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಎಂಟನೇ ಸಮಾವೇಶದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾಡಿದ ಭಾಷಣದಲ್ಲಿ ಈ ಹೇಳಿಕೆ ನೀಡಿದ್ದಾರೆ.

ಕೋವಿಡ್ ಚಿಕಿತ್ಸೆ ಮೇಲ್ವಿ-ಚಾರಣೆಗೆ ಸಮಿತಿ ನೇಮಿಸಿ

ಬೆಂಗಳೂರು: ಕೋವಿಡ್ ಸೋಂಕಿತರ ಚಿಕಿತ್ಸೆಯ ಮೇಲ್ವಿಚಾರಣೆಗೆ ನಿವೃತ್ತ ನ್ಯಾಯಮೂರ್ತಿಯೊಬ್ಬರ ನೇತೃತ್ವದಲ್ಲಿ ಸಮಿತಿ ರಚಿಸಬೇಕು ಎಂದು ಸರ್ಕಾರಕ್ಕೆ ಹೈಕೋರ್ಟ್ ತಿಳಿಸಿದೆ.

‘ರೋಗಿಗಳಿಗೆ ಪರಿಣಾಮಕಾರಿ ಚಿಕಿತ್ಸೆ ಕೊಡಿಸಲು ಮತ್ತು ಜನರ ಕುಂದು–ಕೊರತೆ ವಿಚಾರಿಸಲು ಇದರಿಂದ ಅನುಕೂಲವಾಗುತ್ತದೆ. ಈ ರೀತಿಯ ಸಮಿತಿಯೊಂದನ್ನು ನೇಮಿಸಿದರೆ ಸರ್ಕಾರದ ಆಡಳಿತಾತ್ಮಕ ಕ್ರಮಗಳ ಬಗ್ಗೆ ಜನರಲ್ಲಿ ವಿಶ್ವಾಸ ಹೆಚ್ಚಲಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿದೆ.

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ, ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ, ನಿವೃತ್ತ ಪೊಲೀಸ್ ಮಹಾನಿರ್ದೇಶಕರನ್ನು ಒಳಗೊಂಡ ಸಮಿತಿ ರಚಿಸುವುದು ಸೂಕ್ತ ಎಂದು ಹೇಳಿದೆ.

‘ನಗರದಲ್ಲಿ ಕೋವಿಡ್ ಸೋಂಕಿತರ ಸಂಖ್ಯೆ 10 ಸಾವಿರ ದಾಟಿದೆ. ದೊಡ್ಡಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಉಪಚುನಾವಣೆ ನಡೆಯುತ್ತಿರುವ ಕ್ಷೇತ್ರಗಳಲ್ಲಿ ಫಲಿತಾಂಶದ ದಿನ ಕೋವಿಡ್ ನಿಯಮಗಳು ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ನೋಡಿಕೊಳ್ಳಬೇಕು’ ಎಂದು ಪೀಠ ತಿಳಿಸಿತು.

ರೆಮ್‌ಡಿಸಿವಿರ್ ಕೊರತೆ ಇಲ್ಲ: ‘ರಾಜ್ಯದಲ್ಲಿ ರೆಮ್‌ಡಿಸಿವಿರ್ ಕೊರತೆ ಇಲ್ಲ. ವಿವಿಧ ಹಂತಗಳಲ್ಲಿ 35,821 ಬಾಟಲಿಗಳು ಲಭ್ಯವಿದ್ದು, ಹೆಚ್ಚುವರಿಯಾಗಿ 70 ಸಾವಿರ ಬಾಟಲಿ ತರಿಸಲಾಗುತ್ತಿದೆ. ಜನವರಿ 1ರಿಂದ ಈವರೆಗೆ 55 ಸಾವಿರ ಬಾಟಲಿಗಳನ್ನು ವಿವಿಧ ಸರ್ಕಾರಿ ಆಸ್ಪತ್ರೆಗಳಿಗೆ ಸರಬರಾಜು ಮಾಡಲಾಗಿದೆ’ ಎಂದು ಹೈಕೋರ್ಟ್‌ಗೆ ಸರ್ಕಾರ ಮಾಹಿತಿ ನೀಡಿತು.

ಬಿಟಿಪಿಎಸ್; ಹೊಸ ತಂತ್ರಜ್ಞಾನ ಅಳವಡಿಕೆ ಇಲ್ಲ

● ಕೆ. ನರಸಿಂಹಮೂರ್ತಿ

ಬಳ್ಳಾರಿ: ತಾಲ್ಲೂಕಿನ ಕುಡಿತಿನಿಯಲ್ಲಿರುವ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಕಲ್ಲಿದ್ದಲನ್ನು ಸುಟ್ಟಾಗ ಬರುವ ಹೊಗೆಯಲ್ಲಿರುವ ಮಾರಕ ಸಲ್ಫರ್ ಅನ್ನು ತೆಗೆಯುವ ತಂತ್ರಜ್ಞಾನ Flue gas desulfurization ಘಟಕವನ್ನು ಇನ್ನೂ ಅಳವಡಿಸಿಲ್ಲ. ಈ ಘಟಕವನ್ನು ಅಳವಡಿಸಿದರೆ ಪರಿಸರ ಮತ್ತು ಜೀವಸಂಕುಲದ ಆರೋಗ್ಯದ ಮೇಲೆ ಬೀರಬಹುದಾದ ದುಷ್ಪರಿಣಾಮ ಕಡಿಮೆಯಾಗುತ್ತದೆ ಎಂಬ ಪ್ರತಿಪಾದನೆ ಇದೆ.

‘ಘಟಕದಿಂದ ಬರುವ ಬೂದಿಯಲ್ಲಿ ಶೇ 20ರಷ್ಟು ಬೃಹತ್ ಚಿಮಣಿಗಳ ಮೂಲಕ ವಾತಾವರಣ ಸೇರುತ್ತದೆ. ಶೇ 80ರಷ್ಟನ್ನು ಚಿಮಣಿಗಳ ತಳಭಾಗದಲ್ಲೇ ಸಂಗ್ರಹಿಸಿ ಬೂದಿ ಕಣಜದಲ್ಲಿ ಶೇಖರಿಸಲಾಗುತ್ತಿದೆ. ಬೂದಿಯ ಶೇ 50ರಷ್ಟನ್ನು ತೇವಗೊಳಿಸಿ, ಉಳಿದಿದ್ದನ್ನು ಇರುವಂತೆಯೇ ಸಂಗ್ರಹಿಸಲಾಗುತ್ತಿದೆ. ಈ ವಿಧಾನದಿಂದ ಯಾರಿಗೂ ಹೆಚ್ಚಿನ ತೊಂದರೆ ಇಲ್ಲ’ ಎನ್ನುತ್ತವೆ ಬಿಟಿಪಿಎಸ್ ಮೂಲಗಳು.

ಘಟಕದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ಹಾರುಬೂದಿಯಿಂದ ಸಂರಕ್ಷಿಸಿಕೊಳ್ಳುವ ಸಾಮಗ್ರಿಗಳನ್ನು ಸಮರ್ಪಕವಾಗಿ ವಿತರಿಸುವುದಿಲ್ಲ ಎಂಬ ಆರೋಪಗಳಿವೆ. ಆದರೆ ಅಧಿಕಾರಿಗಳು ಅದನ್ನು ಅಲ್ಲಗಳೆಯುತ್ತಾರೆ.

‘ಹಾರುಬೂದಿ ಸಾಗಣೆ ಸಂದರ್ಭದಲ್ಲಿ ಮುನ್ನೆಚ್ಚರಿಕೆ ವಹಿಸದೇ ಇರುವುದರಿಂದ, ರಾಷ್ಟ್ರೀಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಬಿಟಿಪಿಎಸ್–ತಿಮ್ಮಲಾಪುರ ರಸ್ತೆ ಮತ್ತು ಅದರ ಅಂಚಿನಲ್ಲಿರುವ ಅಂಬೇಡ್ಕರ್ ಕಾಲೊನಿಯ ನಿವಾಸಿಗಳಿಗೆ ಹೆಚ್ಚಿನ ತೊಂದರೆಯಾಗುತ್ತಿತ್ತು. ಈಗ ಬೂದಿ ಸಾಗಣೆ ಪ್ರಮಾಣ ಕಡಿಮೆಯಾಗಿರುವುದರಿಂದ ಸಮಸ್ಯೆಯೂ ಕಡಿಮೆಯಾಗಿದೆ’ ಎಂದು ಬಿಟಿಪಿಎಸ್ ಗುತ್ತಿಗೆ ಕಾರ್ಮಿಕರ ಸಂಘದ ಅಧ್ಯಕ್ಷ ತಿಪ್ಪೇಸ್ವಾಮಿ ಹೇಳುತ್ತಾರೆ.

ತಲಾ 500 ಮೆಗಾವಾಟ್ ಸಾಮರ್ಥ್ಯದ ಎರಡು ಘಟಕಗಳ ಪೈಕಿ ಒಂದು ಕಾರ್ಯನಿರ್ವಹಿಸುತ್ತಿದ್ದು, ಮತ್ತೊಂದರ ದುರಸ್ತಿ ಕಾರ್ಯ ನಡೆದಿದೆ. 700 ಮೆಗಾವಾಟ್ ಸಾಮರ್ಥ್ಯದ ಮೂರನೇ ಘಟಕವೂ ಕಾರ್ಯನಿರ್ವಹಿಸುತ್ತಿದೆ. ಮೊದಲ ಎರಡು ಘಟಕಗಳಿಂದ ದಿನವೂ 1.20 ಕೋಟಿ ಯೂನಿಟ್ ಹಾಗೂ ಮೂರನೇ ಘಟಕದಿಂದ 1.6 ಕೋಟಿ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ರಾಜ್ಯದ ವಿವಿಧ ಭಾಗಗಳ 10ರಿಂದ 15 ಖಾಸಗಿ ಕಂಪನಿಗಳು ಸಿಮೆಂಟ್ ಮತ್ತು ಇಟ್ಟಿಗೆ ತಯಾರಿಸಲು ಹಾರುಬೂದಿಯನ್ನು ಖರೀದಿಸುತ್ತವೆ.

‘ಕುಡಿತಿನಿಯ ಎಸಿಸಿ ಸಿಮೆಂಟ್ ಕಾರ್ಖಾನೆಗೆ ಹಾಗೂ ಜಿಲ್ಲೆಯ ಹಲವು ಸ್ಥಳಗಳಿಗೆ, ಸೇಡಂ, ಬಾಗಲಕೋಟೆಗೂ ಬೂದಿಯನ್ನು ಸರಬರಾಜು ಮಾಡಲಾಗುತ್ತಿದೆ. ಕೆಪಿಸಿಎಲ್ ಬೇಡಿಕೆಗೆ ಅನುಗುಣವಾಗಿ ಸ್ಥಾವರದಲ್ಲಿ ವಿದ್ಯುತ್ ಉತ್ಪಾದಿಸಲಾಗುತ್ತದೆ’ ಎಂದು ಬಿಟಿಪಿಎಸ್ ಕಾರ್ಯನಿರ್ವಾಹಕ ನಿರ್ದೇಶಕ ನರೇಂದ್ರಕುಮಾರ್ ಹೇಳುತ್ತಾರೆ.

ಉಷ್ಣ ಸ್ಥಾವರ ಯುಗಾಂತ್ಯಕ್ಕೆ ಪ್ರವರ

● ಎಸ್. ರವಿಪ್ರಕಾಶ್

ಕಲ್ಲಿದ್ದಲು ಅಗತ್ಯತೆ

ರಾಯಚೂರು ಉಷ್ಣ ವಿದ್ಯುತ್ ಸ್ಥಾವರ		ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ
1,720	ಸಾಮರ್ಥ್ಯ (ಮೆ.ವಾ)	1,700
30 ಸಾವಿರ ಟನ್	ಕಲ್ಲಿದ್ದಲು ಪ್ರಮಾಣ (ಪ್ರತಿ ದಿನ)	20 ಸಾವಿರ ಟನ್

● ರಾಜ್ಯಕ್ಕೆ ತನ್ನದೇ ಆದ ಕಲ್ಲಿದ್ದಲು ಗಣಿ ಇಲ್ಲ. ಹೊರ ರಾಜ್ಯಗಳು ಅಥವಾ ಹೊರದೇಶಗಳಿಂದ ಆಮದು ಮಾಡಿಕೊಳ್ಳಬೇಕು

● 30 ದಿನಗಳಿಗಾಗುವಷ್ಟು ಕಲ್ಲಿದ್ದಲು ದಾಸ್ತಾನು ಇಟ್ಟುಕೊಳ್ಳಬೇಕು. ಆದರೆ, 3 ದಿನಗಳಿಗೆ ಆಗುವಷ್ಟು ದಾಸ್ತಾನು ಮಾತ್ರ ಇರುತ್ತದೆ.

ಕೆಪಿಸಿಎಲ್ ಉತ್ಪಾದನೆ

ಆರ್‌ಟಿಪಿಎಸ್	1,317
ಬಿಟಿಪಿಎಸ್	1,106
ವೈಟಿಪಿಎಸ್	750

ಜಲ ವಿದ್ಯುತ್

ಶರಾವತಿ	496
ನಾಗಝರಿ	410
ವರಾಹಿ	60

(ಕೆಲವು ಪ್ರಮುಖ ವಿದ್ಯುತ್ ಉತ್ಪಾದನಾ ಕೇಂದ್ರಗಳ ವಿವರ/ ಮೆ.ವಾಟ್‌ಗಳಲ್ಲಿ ಏಪ್ರಿಲ್ ಮೊದಲ ವಾರದ ಗರಿಷ್ಠ ಉತ್ಪಾದನೆ)

ವಿದ್ಯುತ್ ಬೇಡಿಕೆ (ಮೆ.ವಾಟ್‌ಗಳಲ್ಲಿ)	
ರಾಜ್ಯದ ಬೇಡಿಕೆ	12,206 (ಏಪ್ರಿಲ್ ಮೊದಲ ವಾರದಲ್ಲಿ)
ರಾಜ್ಯದಲ್ಲಿ ಉತ್ಪಾದನೆ	4,660
ಸಿಜಿಎಸ್‌ನಿಂದ	4,634
ಎನ್‌ಸಿಇಪಿ ಉತ್ಪಾದನೆ	2,911
ಪಾವಗಡ (ಕೆಎಸ್‌ಡಿಸಿಎಲ್)	1,298

ಬೆಂಗಳೂರು: ಜಲಮೂಲದ ವಿದ್ಯುತ್‌ಗೆ ಪರ್ಯಾಯವೆಂದೇ ನಿರೂಪಿಸಿ, ರಾಜ್ಯ ಮಾತ್ರವಲ್ಲದೇ ದೇಶದೆಲ್ಲೆಡೆ ದೊಡ್ಡ ಹಂಗಾಮಿನಂತೆ ಆರಂಭಗೊಂಡಿದ್ದ ಉಷ್ಣ ವಿದ್ಯುತ್ ಉತ್ಪಾದನೆಯ ‘ಯುಗಾಂತ್ಯ’ ಆರಂಭವಾಗಿದೆ. ಪರ್ಯಾಯ ಇಂಧನ ಮೂಲಗಳಾದ ಸೌರ ಮತ್ತು ಪವನ ವಿದ್ಯುತ್ ಉತ್ಪಾದನೆಗೆ ಕೇಂದ್ರ ಸರ್ಕಾರ ಹೆಚ್ಚಿನ ಆದ್ಯತೆ ನೀಡಿರುವ ಕಾರಣ ದೇಶದ ಎಲ್ಲೆಡೆ ಉಷ್ಣ ವಿದ್ಯುತ್ ಸ್ಥಾವರಗಳ ಬಾಗಿಲು ಕ್ರಮೇಣ ಮುಚ್ಚಲಿವೆ.

ರಾಯಚೂರು ಉಷ್ಣ ವಿದ್ಯುತ್ ಸ್ಥಾವರ (ಆರ್‌ಟಿಪಿಎಸ್) ಆ ಸರದಿಯಲ್ಲಿ ಮೊದಲಾಗುವ ಸಾಧ್ಯತೆ ಹೆಚ್ಚು.

‘ಇನ್ನು ಮುಂದೆ ಯಾವುದೇ ಉಷ್ಣ (ಶಾಖೋತ್ಪನ್ನ) ವಿದ್ಯುತ್ ಸ್ಥಾವರಗಳ ಆಧುನೀಕರಣಕ್ಕೆ ಹೂಡಿಕೆ ಮಾಡದಿರಲೂ ರಾಜ್ಯ ಸರ್ಕಾರ ನಿರ್ಧರಿಸಿದೆ. ಈಗ ಇರುವ ಸ್ಥಾವರಗಳು ಎಷ್ಟು ದಿನ ನಡೆಯುತ್ತವೆಯೋ ಅಷ್ಟು ದಿನಗಳವರೆಗೆ ನಡೆಯಲಿ ಎಂಬ ತೀರ್ಮಾನಕ್ಕೆ ಬರಲಾಗಿದೆ. ಆರ್‌ಟಿಪಿಎಸ್‌ನ ಎಂಟೂ ಘಟಕಗಳು 25ರಿಂದ 32 ವರ್ಷಗಳಷ್ಟು ಹಳೆಯದಾಗಿವೆ. ಇವುಗಳನ್ನು ಮುಚ್ಚುವಂತೆ ರಾಷ್ಟ್ರೀಯ ಹಸಿರು ಪೀಠವೂ (ಎನ್‌ಜಿಟಿ) ಸೂಚನೆ ನೀಡಿದೆ. ರಾಜ್ಯ ಸರ್ಕಾರ ಸ್ಥಾವರಗಳ ಆಧುನೀಕರಣಕ್ಕೆ ಮನವಿ ಸಲ್ಲಿಸಿತ್ತು. ಆದರೆ, ಕೇಂದ್ರ ಸರ್ಕಾರವೇ ಉಷ್ಣ ವಿದ್ಯುತ್ ಸ್ಥಾವರಗಳ ಬದಲಿಗೆ ಪರ್ಯಾಯ ಇಂಧನಕ್ಕೆ ಆದ್ಯತೆ ನೀಡಿರುವುದರಿಂದ ಉಷ್ಣ ವಿದ್ಯುತ್ ಸ್ಥಾವರಗಳನ್ನು ನೇಪಥ್ಯಕ್ಕೆ ಸರಿಸದೇ ಅನ್ಯ ಮಾರ್ಗವಿಲ್ಲ’ ಎನ್ನುತ್ತವೆ ಇಂಧನ ಇಲಾಖೆಯ ಮೂಲಗಳು.

ಕೇಂದ್ರದ ಇಂಗಿತ ಅರಿತುಕೊಂಡಿರುವ ರಾಜ್ಯ ಸರ್ಕಾರ ಈ ದಿಸೆಯಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾರಂಭಿಸಿದೆ. ಮುಖ್ಯವಾಗಿ, ಸ್ವಚ್ಛ ಶಕ್ತಿ ಆಧಾರಿತ ನಿರಂತರ ವಿದ್ಯುತ್ ಸರಬರಾಜಿಗಾಗಿ 1,000 ಮೆಗಾವಾಟ್ ಸಾಮರ್ಥ್ಯದ ಪಂಪ್ಡ್ ಹೈಡ್ರೊ ಸ್ಟೋರೇಜ್ ಪ್ಲಾಂಟ್ ಯೋಜನೆ. ₹4,000 ಕೋಟಿ ವೆಚ್ಚದಲ್ಲಿ ಖಾಸಗಿ ಹೂಡಿಕೆ ಆಧಾರದ ಮೇಲೆ ಅನುಷ್ಠಾನಗೊಳಿಸಲು ಸರ್ಕಾರ ಮುಂದಾಗಿದ್ದು, ಬಜೆಟ್‌ನಲ್ಲಿ ಈ ಅಂಶ ಪ್ರಸ್ತಾಪಿಸಲಾಗಿದೆ. ಶರಾವತಿಯನ್ನು ಈಗಾಗಲೇ ಗುರುತಿಸಲಾಗಿದೆ. ಮುಂದೆ ನೇತ್ರಾವತಿ, ವರದಾ ನದಿಗಳಲ್ಲೂ ಪಂಪ್ಡ್ ಹೈಡ್ರೊ ಸ್ಟೋರೇಜ್ ಘಟಕಗಳನ್ನು ಆರಂಭಿಸಲು ಉದ್ದೇಶಿಸಿದೆ.

ನಿತ್ಯವೂ ನಿರಂತರ 10 ಗಂಟೆಗಳ ಕಾಲ 1,000 ಮೆಗಾವಾಟ್ ವಿದ್ಯುತ್ ಉತ್ಪಾದಿಸಿ ಸ್ಟೋರ್ ಮಾಡಿಕೊಳ್ಳಲು ಇವುಗಳ ಅಗತ್ಯವಿದೆ. ಮುಂದಿನ ಐದು ವರ್ಷಗಳಲ್ಲಿ ಸೌರ ಮತ್ತು ಪವನ ವಿದ್ಯುತ್ ಉತ್ಪಾದನಾ ಸಾಮರ್ಥ್ಯವೂ ಹೆಚ್ಚಾಗುವುದರಿಂದ ವೋಲ್ಟೇಜ್‌ನಲ್ಲಾಗುವ ವ್ಯತ್ಯಾಸವನ್ನು ಸರಿದೂಗಿಸಲು ಮತ್ತು ಏಕಪ್ರಕಾರದ ವಿದ್ಯುತ್ ಸರಬರಾಜಿಗೆ, ಪೀಕ್ ಲೋಡ್ ಮತ್ತು ಕ್ಲಪ್ತ ಸಮಯದಲ್ಲಿ ಉತ್ಪಾದನೆಗೆ ನೆರವಾಗುತ್ತದೆ. ಅಂದರೆ, ಉಷ್ಣ ವಿದ್ಯುತ್ ಸ್ಥಾವರಗಳನ್ನು ಮುಚ್ಚುತ್ತಾ ಹೋದಂತೆ ಪರ್ಯಾಯವಾಗಿ ಗ್ರಿಡ್ ವ್ಯವಸ್ಥೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ನಿರಂತರತೆ ಮತ್ತು ವೋಲ್ಟೇಜ್ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಪರ್ಯಾಯ ವ್ಯವಸ್ಥೆ ಇದಾಗಿದೆ ಎನ್ನುತ್ತವೆ ಈ ಮೂಲಗಳು.

> ಆಧುನೀಕರಣಕ್ಕೆ ಆದೇಶ ಆಗಿದೆ. ಮುಚ್ಚುವುದಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಯತ್ನ ನಡೆದಿಲ್ಲ. 30 ವರ್ಷಗಳ ಬಳಿಕವೂ ನಮ್ಮ ಘಟಕಗಳೂ ಹೆಚ್ಚು ಕ್ಷಮತೆಯಿಂದ ಕಾರ್ಯ ನಿರ್ವಹಿಸುತ್ತಿವೆ.
>
> **ಚಲಪತಿ,** ಹಿರಿಯ ಅಧಿಕಾರಿ, ಆರ್‌ಟಿಪಿಎಸ್

‘ಉಷ್ಣ ವಿದ್ಯುತ್ ಸ್ಥಾವರಗಳು ಮಾಲಿನ್ಯ ಉಂಟು ಮಾಡುವುದರಿಂದ ಅವುಗಳನ್ನು ಬಂದ್ ಮಾಡಬೇಕು. ಹೊಸ ಸ್ಥಾವರಗಳಿಗೆ ಅನುಮತಿ ನೀಡಬಾರದು. ಜಲ ವಿದ್ಯುತ್ ಘಟಕಗಳಿಂದ ಕಾಡು ನಾಶ, ಅಣು ವಿದ್ಯುತ್ ಸ್ಥಾವರಗಳು ವಿಕಿರಣ ಹೊರಸೂಸುವುದರಿಂದ ಇವುಗಳಿಗೂ ಅವಕಾಶ ನೀಡಬಾರದು’ ಎಂಬುದು ಪರಿಸರವಾದಿಗಳ ಪ್ರತಿಪಾದನೆ. ಹಾಗಿದ್ದರೆ, ಭಾರೀ ಉದ್ಯಮಗಳು, ಗೃಹ ಮತ್ತು ಇತರೆ ಬಳಕೆಗೆ ಇಡೀ ದಿನ ನಿರಂತರ, ವೋಲ್ಟೇಜ್ ವ್ಯತ್ಯಾಸವಿಲ್ಲದ ವಿದ್ಯುತ್ ಎಲ್ಲಿಂದ ಸಿಗುತ್ತದೆ? ಸೌರ, ಪವನ ವಿದ್ಯುತ್ ಸೂರ್ಯನ ಬೆಳಕು ಮತ್ತು ಗಾಳಿ ಇದ್ದಾಗ ಮಾತ್ರ ಲಭ್ಯವಾಗುತ್ತದೆ. ಇವುಗಳನ್ನು ಗೃಹ ಬಳಕೆಗೆ ಬಳಸಬಹುದೇ ಹೊರತು ಉದ್ಯಮಗಳ ಉದ್ದೇಶಕ್ಕೆ ಸಾಧ್ಯವಿಲ್ಲ. ಹೀಗಾಗಿ ಪರಿಸರ ಮತ್ತು ಅಭಿವೃದ್ಧಿ ಮಧ್ಯೆ ಸಮತೋಲನ ಸಾಧಿಸಲು ಕಿರು ಜಲವಿದ್ಯುತ್ ಘಟಕಗಳು ಅಥವಾ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಅವಕಾಶ ನೀಡಬೇಕಾಗುತ್ತದೆ’ ಎನ್ನುವುದು ವಿದ್ಯುತ್ ವಲಯದ ತಜ್ಞರ ಪ್ರತಿಪಾದನೆ.

‘ಪರಿಸರವಾದಿಗಳೂ ಸೇರಿದಂತೆ ಸಮಾಜದಲ್ಲಿ ಎಲ್ಲರಿಗೂ ಇಡೀ ದಿನ ಅಬಾಧಿತ ವಿದ್ಯುತ್ ಬೇಕು. ಮನೆಗಳಲ್ಲಿ ಫ್ಯಾನು, ಫ್ರಿಜ್ಜು, ಟಿ.ವಿ, ಕಂಪ್ಯೂಟರ್ ಎಲ್ಲವೂ ಕಾರ್ಯನಿರ್ವಹಿಸಬೇಕು. ಲೋಡ್ ಶೆಡ್ಡಿಂಗ್ ಮಾಡಿದರೆ ಸರ್ಕಾರ ಸರಿ ಇಲ್ಲ ಎನ್ನುತ್ತಾರೆ. ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಹಾರುಬೂದಿ ಸಮಸ್ಯೆ ಆದಷ್ಟು ಕಡಿಮೆ ಮಾಡಲು ತಂತ್ರಜ್ಞಾನಗಳು ಬಂದಿವೆ. ಹಾರು ಬೂದಿಯಿಂದ ಹಲವು ಉಪ ಉತ್ಪನ್ನಗಳನ್ನು ತಯಾರಿಸಬಹುದಾಗಿದೆ. ದೇಶಿ ಕಲ್ಲಿದ್ದಲಿನಲ್ಲಿ ಬೂದಿ(ಶೇ 40) ಸಮಸ್ಯೆ ಇದೆ. ಆದರೆ ಗಂಧಕದ ಅಂಶ ಕಡಿಮೆ. ವಿದೇಶಿ ಕಲ್ಲಿದ್ದಲಿನಲ್ಲಿ ಗಂಧಕದ ಅಂಶ ಹೆಚ್ಚು, ಬೂದಿ ಪ್ರಮಾಣ (ಶೇ 10) ಕಡಿಮೆ. ಗಂಧಕ ಹೆಚ್ಚಿನ ಪ್ರಮಾಣದಿಂದ ಹಳದಿ ಮಳೆಗೆ ಕಾರಣವಾಗುತ್ತದೆ. ಆದರೂ ಜಗತ್ತಿನ ಮುಂದುವರಿದ ದೇಶಗಳು ಇನ್ನೂ ಉಷ್ಣ ವಿದ್ಯುತ್ ಸ್ಥಾವರಗಳಿಂದ ವಿದ್ಯುತ್ ಪಡೆಯುತ್ತಿವೆ ಎನ್ನುತ್ತಾರೆ ತಜ್ಞರು.

‘ಉಷ್ಣ ವಿದ್ಯುತ್ ಸ್ಥಾವರಗಳು ವಿದ್ಯುತ್‌ನ ಬೇಸ್ ಲೋಡ್‌ಗೆ ಅಗತ್ಯವಿವೆ. ಬೇಸ್ ಲೋಡ್ ಎಂದರೆ 24 ಗಂಟೆ ನಿರಂತರ ವಿದ್ಯುತ್ ಪೂರೈಕೆ ಮಾಡುವುದು. ಪೀಕ್ ಲೋಡ್ ಎಂದರೆ ಆಯಾ ಪ್ರದೇಶದ ಬೇಡಿಕೆಗೆ ಅನುಗುಣವಾಗಿ ಅಧಿಕ ವಿದ್ಯುತ್ ಪೂರೈಕೆ ಮಾಡುವುದು. ಪೀಕ್ ಲೋಡ್ ದಿನಕ್ಕೆ ಎರಡು–ಮೂರು ಬಾರಿ ಬರಬಹುದು. ಇದಕ್ಕೆ ನವೀಕರಿಸಬಹುದಾದ ಇಂಧನ ಬಳಸಬಹುದು. ಆದರೆ, ಸೌರ ಮತ್ತು ಪವನ ವಿದ್ಯುತ್ ಉತ್ಪಾದನೆ ನಮ್ಮ ಕೈಯಲ್ಲಿ ಇಲ್ಲ. ಬೆಳಕು ಮತ್ತು ಗಾಳಿಯ ಲಭ್ಯತೆಯನ್ನು ಆಧರಿಸಿದೆ. ಅಲ್ಲದೆ ಇವುಗಳ ಪಿಎಲ್‌ಎಫ್ (ಪ್ಲಾಂಟ್ ಲೋಡ್ ಫ್ಯಾಕ್ಟರ್) ಕಡಿಮೆ. ಉಷ್ಣ, ಜಲ ಮತ್ತು ಅಣು ವಿದ್ಯುತ್ ಉತ್ಪಾದನೆ ನಮ್ಮ ಕೈಯಲ್ಲಿ ಇರುತ್ತದೆ. ಬೇಡಿಕೆಗೆ ಅನುಗುಣವಾಗಿ ವಿದ್ಯುತ್ ಪಡೆಯಬಹುದು’ ಎನ್ನುವುದು ತಜ್ಞರ ಸಮರ್ಥನೆ.

ಯುಪಿಸಿಎಲ್: ಪರಿಸರ, ಆರೋಗ್ಯದ ಮೇಲೆ ದುಷ್ಪರಿಣಾಮ

₹74.93 ಕೋಟಿ ದಂಡ ವಸೂಲಿಗೆ ಎನ್‌ಜಿಟಿ ತಜ್ಞರ ಸಮಿತಿ ವರದಿ

● ಬಾಲಚಂದ್ರ ಎಚ್.

ಉಡುಪಿ: ಜಿಲ್ಲೆಯ ಉಡುಪಿ ಪವರ್ ಕಾರ್ಪೊರೇಷನ್ ಲಿಮಿಟೆಡ್‌ನಿಂದ (ಯುಪಿಸಿಎಲ್) ಸ್ಥಳೀಯರ ಆರೋಗ್ಯದ ಮೇಲೆ ಗಂಭೀರ ದುಷ್ಪರಿಣಾಮ ಬೀರಿರುವ ಕಳವಳಕಾರಿ ಅಂಶಗಳು ಎನ್‌ಜಿಟಿ ತಜ್ಞರ ವರದಿಯಲ್ಲಿ ಬಹಿರಂಗವಾಗಿವೆ. ಕಾರ್ಖಾನೆ ಸುತ್ತಮುತ್ತಲಿನ ನಿರ್ದಿಷ್ಟ ಪ್ರದೇಶಗಳಲ್ಲಿ ಅಧ್ಯಯನ ನಡೆಸಿರುವ ತಜ್ಞರ ಸಮಿತಿಯು ಕ್ಯಾನ್ಸರ್, ಅಸ್ತಮಾ ಹಾಗೂ ಉಸಿರಾಟದ ಸೋಂಕು ಹೆಚ್ಚಾಗಿರುವ ಆತಂಕಕಾರಿ ವಿಚಾರಗಳನ್ನು ಹೊರಗೆಡವಿದೆ.

ಪಡುಬಿದ್ರಿಯ ಎಲ್ಲೂರಿನಲ್ಲಿರುವ ಯುಪಿಸಿಎಲ್‌ನ 2 ಘಟಕಗಳು ಕಾರ್ಯಾರಂಭ ಮಾಡಿದ (ತಲಾ 600 ಮೆಗಾವಾಟ್) ಬಳಿಕ ಕಾರ್ಖಾನೆಯ ಸುತ್ತಮುತ್ತಲಿನ 20 ಕಿ.ಮೀ ವ್ಯಾಪ್ತಿಯಲ್ಲಿ ಅಧ್ಯಯನ ನಡೆಸಿರುವ ತಜ್ಞರ ಸಮಿತಿಯು ಪರಿಸರ ಹಾಗೂ ಜನರ ಆರೋಗ್ಯದ ಮೇಲೆ ಬೀರಿರುವ ಪರಿಣಾಮಗಳ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಮಾರ್ಚ್ 1ಕ್ಕೆ ರಾಷ್ಟ್ರೀಯ ಹಸಿರು ಪೀಠಕ್ಕೆ ಸಲ್ಲಿಸಿದೆ.

2008–09 ಹಾಗೂ 2019–20ರ ಅವಧಿಯಲ್ಲಿ 33 ಗ್ರಾಮಗಳಲ್ಲಿ ಪರಿಶೀಲನೆ ನಡೆಸಿರುವ ಸಮಿತಿಯು ಜನರ ಆರೋಗ್ಯದ ಮೇಲಾಗಿರುವ ದುಷ್ಪರಿಣಾಮಗಳ ಬಗ್ಗೆ ಜಿಲ್ಲಾ ವೈದ್ಯಾಧಿಕಾರಿ ನೀಡಿರುವ ಮಾಹಿತಿಯ ಆಧಾರದಲ್ಲಿ ವರದಿ ತಯಾರಿಸಿತ್ತು.

ಕಾರ್ಖಾನೆಯ 10 ಕಿ.ಮೀ. ವ್ಯಾಪ್ತಿಯಲ್ಲಿರುವ ಗ್ರಾಮಗಳಲ್ಲಿ ಕಲುಷಿತ ಗಾಳಿಯಿಂದ ಅಸ್ತಮಾ ರೋಗಿಗಳ ಸಂಖ್ಯೆ ಶೇ 17ರಷ್ಟು ಹೆಚ್ಚಾಗಿದ್ದರೆ, ಉಸಿರಾಟದ ಸೋಂಕಿನ ಸಮಸ್ಯೆ ಹೊಂದಿರುವವರ ಸಂಖ್ಯೆಯಲ್ಲಿ ಶೇ 171ರಷ್ಟು, ಕ್ಯಾನ್ಸರ್ ರೋಗಿಗಳ ಸಂಖ್ಯೆಯಲ್ಲಿ ಶೇ 293ರಷ್ಟು ಹೆಚ್ಚಳವಾಗಿದೆ. ಕಲುಷಿತ ನೀರಿನಿಂದ ಮೂತ್ರಪಿಂಡ ಸಮಸ್ಯೆ ಇರುವವರ ಸಂಖ್ಯೆಯಲ್ಲಿ ಶೇ 55ರಷ್ಟು ಹೆಚ್ಚಳವಾಗಿದೆ. ಕ್ಯಾನ್ಸರ್ ಪೀಡಿತರ ಸಂಖ್ಯೆ ಶೇ 109 ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ವರದಿಯಲ್ಲಿ ಕಾರ್ಖಾನೆಯ ಗಾಳಿ ಹಾಗೂ ನೀರು ಸೇವಿಸಿ ಯಾವುದೇ ಜಾನುವಾರು ಮೃತಪಟ್ಟಿಲ್ಲ, ಮಣ್ಣಿನ ಆರೋಗ್ಯಕ್ಕೆ ಹಾನಿಯಾಗಿಲ್ಲ, ರೈತರ ಬೆಳೆಗಳಿಗೆ ಗಂಭೀರ ಹಾನಿಯಾಗಿಲ್ಲ, ಗಾಳಿಯಲ್ಲಿ ವಿಷಕಾರಿ ಅಂಶಗಳಿಲ್ಲ, ಕೃಷಿ ಜಮೀನಿನಲ್ಲಿರುವ ತೆರೆದಬಾವಿಗಳಲ್ಲಿನ ನೀರು ಮಾತ್ರ ನಿಗದಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಟಿಡಿಎಸ್, ಕ್ಲೋರೈಡ್ ಹಾಗೂ ಗಡಸುತನ ಹೊಂದಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮೂವರು ತಜ್ಞರ ಸಮಿತಿ

2019ರಲ್ಲಿ ₹ 4.89 ಕೋಟಿ ಪರಿಹಾರ ಪಾವತಿಗೆ ತಜ್ಞರ ಸಮಿತಿಯು ಯುಪಿಸಿಎಲ್‌ಗೆ ಸೂಚಿಸಿತ್ತು. ಈ ಆದೇಶದ ವಿರುದ್ಧ ನಂದಿಕೂರು ಜನಜಾಗೃತಿ ಸಮಿತಿ ಚೆನ್ನೈನ ಹಸಿರುಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು. ಬಳಿಕ ಜನ–ಜಾನುವಾರು ಹಾಗೂ ಪರಿಸರ ಹಾನಿಯ ಬಗ್ಗೆ ಪರಿಶೀಲಿಸಿ ವರದಿ ನೀಡಲು ಡಾ.ಆರ್.ಶ್ರೀಕಾಂತ್, ಡಾ.ಕೃಷ್ಣರಾಜ್, ಜಿ.ತಿರುಮೂರ್ತಿ ಅವರನ್ನೊಳಗೊಂಡ ತಜ್ಞರ ಸಮಿತಿ ರಚಿಸಲಾಗಿತ್ತು. ಸಮಿತಿ ಪರಿಶೀಲನೆ ನಡೆಸಿ, ₹ 74.93 ಕೋಟಿ ಪರಿಹಾರ ವಸೂಲಿಗೆ ಎನ್‌ಜಿಟಿಗೆ ತಿಳಿಸಿದೆ.

‘ವಿರೋಧ ಲೆಕ್ಕಿಸದೇ ಅನುಮತಿ’

‘ಉಷ್ಣ ವಿದ್ಯುತ್ ಸ್ಥಾವರ ಪರಿಸರಕ್ಕೆ ಮಾರಕ ಎಂಬುವುದನ್ನು ಜನಜಾಗೃತಿ ಸಮಿತಿ ಆರಂಭದಲ್ಲೇ ತಿಳಿಸಿತ್ತು. ಜನರ ವಿರೋಧ ಲೆಕ್ಕಿಸದೆ ಯೋಜನೆಗೆ ಗ್ರೀನ್ ಸಿಗ್ನಲ್ ನೀಡಲಾಯಿತು. ಪರಿಸರ ಮಾಲಿನ್ಯ ವಿಚಾರವಾಗಿ ಪಂಚಾಯಿತಿಯು ಕಂಪನಿಗೆ ಎಚ್ಚರಿಕೆ ನೋಟಿಸ್ ಕೂಡ ನೀಡಿದೆ. ಪರಿಸರ ಮಾಲಿನ್ಯ ಮುಂದುವರಿಸಿದರೆ ಮತ್ತೆ ಸರ್ಕಾರದ ಗಮನಕ್ಕೆ ತರಲಾಗುವುದು’ ಎಂದು ಎಲ್ಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಜಯಂತ್ ಕುಮಾರ್ ತಿಳಿಸಿದ್ದಾರೆ.

ಹಾರುಬೂದಿ ವಿಲೇವಾರಿ ಆದರೂ ತಪ್ಪದ ಗೋಳು

● ಬಸವರಾಜ್ ಸಂಪಳ್ಳಿ / ಬಸವರಾಜ್ ಎಸ್. ಉಳ್ಳಾಗಡ್ಡಿ

ವಿಜಯಪುರ: ಜಿಲ್ಲೆಯ ಕೂಡಗಿಯಲ್ಲಿರುವ ನ್ಯಾಷನಲ್ ಥರ್ಮಲ್ ಪವರ್ ಕಾರ್ಪೋರೇಶನ್‌ನ (ಎನ್‌ಟಿಪಿಸಿ) ಉಷ್ಣ ವಿದ್ಯುತ್ ಸ್ಥಾವರದಲ್ಲಿ ಕಡಿಮೆ ನೀರು ಮತ್ತು ಕಲ್ಲಿದ್ದಲು ಬಳಸಿ ಸಾಮಾನ್ಯ ಶಾಖೋತ್ಪನ್ನ ಘಟಕಗಳಿಗಿಂತ ಶೇ 5ಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದಿಸಲಾಗುತ್ತಿದೆ.

ಹೊಸ ತಂತ್ರಜ್ಞಾನ ಅಳವಡಿಕೆಯಿಂದ ಹಾರುಬೂದಿ ಗಾಳಿಗೆ ಸೇರುವ ಪ್ರಮಾಣ ಕಡಿಮೆ. ಪೇಸ್ಟ್ ಮಾದರಿಯಲ್ಲಿ ಹಾರುಬೂದಿ ಹೊರಬರುವ ವ್ಯವಸ್ಥೆಯಿದ್ದು, ಇದನ್ನು ಸಿಮೆಂಟ್, ಇಟ್ಟಿಗೆ ಮತ್ತು ರಸ್ತೆ ನಿರ್ಮಾಣ ಸಂಸ್ಥೆಗಳಿಗೆ ನೀಡಲಾಗುತ್ತಿದೆ.

ವಿದ್ಯುತ್ ಉತ್ಪಾದನೆಗಾಗಿ ಬಳಸುವ ಕಲ್ಲಿದ್ದಲನ್ನು ಬಾಯ್ಲರ್‌ನಲ್ಲಿ ಹಾಕಿದಾಗ ಅದು ಹೊರಸೂಸುವ ಬೂದಿ ನಿಯಂತ್ರಣಕ್ಕೆ ಎನ್‌ಟಿಪಿಸಿ ಅತ್ಯುತ್ತಮ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ. ಹಾರುಬೂದಿ ಹಾಗೂ ಕೆಳಗೆ ಬೀಳುವ ಬೂದಿ–ಹೀಗೆ ಎರಡು ರೂಪದಲ್ಲಿ ಸಂಗ್ರಹವಾಗುತ್ತದೆ.

ಪ್ರತಿದಿನಕ್ಕೆ ಅಂದಾಜು 8 ಸಾವಿರ ಟನ್ ಹಾರುಬೂದಿ ಹಾಗೂ 2 ಸಾವಿರ ಟನ್ ಕೆಳಗೆ ಬೀಳುವ ಬೂದಿಯನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿದೆ.

ಕೃಷಿಗೆ ತೊಂದರೆ

‘ಹಾರುಬೂದಿಯನ್ನು ಸಂಗ್ರಹಿಸಿ ಸರಬರಾಜು ಮಾಡಲು ಮಸೂತಿ ಗ್ರಾಮದ ಸಮೀಪ ನಿರ್ಮಿಸಿರುವ ಬೃಹತ್ ಕೆರೆಗಳಿಂದ ಕಲುಷಿತ ನೀರು ಸಮೀಪದ ಹಳ್ಳಕ್ಕೆ ಸೇರುತ್ತಿದೆ. ಕೆರೆ ಸುತ್ತಮುತ್ತಲಿನ ಸುಮಾರು 200 ಎಕರೆಯಷ್ಟು ಕೃಷಿಭೂಮಿ ಫಲವತ್ತತೆ ಕಳೆದುಕೊಂಡು ಇಳುವರಿ ಕಡಿಮೆಯಾಗಿದೆ’ ಎನ್ನುತ್ತಾರೆ ರೈತರಾದ ಶಿವಪ್ಪ ಹಂಗರಗಿ, ಮಲ್ಲಪ್ಪ ಆಳಪ್ಪನವರ, ಗಿಡ್ಡಯ್ಯ ಬೇನಾಳ, ಭೀಮಾಶಂಕರ ಬಿಸ್ತಗೊಂಡ, ವಿವೇಕ ಪಾಟೀಲ.

‘ಎನ್‌ಟಿಪಿಸಿ ಈ ಭಾಗದ ರೈತರಿಗೆ ಪರಿಹಾರ ನೀಡಬೇಕು. ಇಲ್ಲವೇ, ಇಳುವರಿ ಕಳೆದುಕೊಂಡಿರುವ ಭೂಮಿಗೆ ಯೋಗ್ಯ ದರ ನೀಡಿದರೆ ಎನ್‌ಟಿಪಿಸಿಗೇ ಭೂಮಿ ನೀಡಲು ಸಿದ್ದರಿದ್ದೇವೆ’ ಎನ್ನುತ್ತಾರೆ ಅವರು.

‘ಸವಲು–ಜವಲು ಜಮೀನುಗಳಿಗೆ ಶಾಶ್ವತ ಪರಿಹಾರ, ಬಾಧಿತ ಕೂಡಗಿ, ತೆಲಗಿ, ಮಸೂತಿ, ಮುತ್ತಗಿ ಹಾಗೂ ಗೊಳಸಂಗಿ ಗ್ರಾಮಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಬೇಕು. 24 ಗಂಟೆ ಉಚಿತ ವಿದ್ಯುತ್ ಪೂರೈಸಬೇಕು’ ಎಂಬುದು ಎನ್‌ಟಿಪಿಸಿ ಸಂತ್ರಸ್ತ ಹಿತರಕ್ಷಣಾ ಸಮಿತಿ ಅಧ್ಯಕ್ಷ ಸಿ.ಪಿ. ಪಾಟೀಲ ಅವರ ಒತ್ತಾಯ.

ವಿದ್ಯುತ್ ಬರ ನೀಗಿಸಿದ ಎನ್‌ಟಿಪಿಸಿ

ವಿಜಯಪುರ ಜಿಲ್ಲೆಯ ಕೂಡಗಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ ಉತ್ಪಾದಿಸುವ ಒಟ್ಟು ವಿದ್ಯುತ್‌ನಲ್ಲಿ ಶೇ 50ರಷ್ಟು ರಾಜ್ಯಕ್ಕೆ ಲಭಿಸುತ್ತಿದೆ. ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಗೆ ದೊಡ್ಡ ಕೊಡುಗೆ ನೀಡುವ ಮೂಲಕ ವಿದ್ಯುತ್ ಬರ ನೀಗಿಸಿದೆ.

ಜಿಲ್ಲೆಯ ಕೊಲ್ಹಾರ ತಾಲ್ಲೂಕಿನ ಕೂಡಗಿ, ಮಸೂತಿ, ತೆಲಗಿ, ಮುತ್ತಗಿ ಹಾಗೂ ಗೊಳಸಂಗಿ ವ್ಯಾಪ್ತಿಯ ಸುಮಾರು 3,200 ಎಕರೆ ಭೂಮಿಯನ್ನು ರೈತರಿಂದ ಕೆಐಎಡಿಬಿ ಮೂಲಕ ಭೂಸ್ವಾಧೀನ ಮಾಡಿಕೊಂಡು, 2012 ಜೂನ್ 2ರಂದು ಘಟಕ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಬಳಿಕ 2016ರಲ್ಲಿ ವಿದ್ಯುತ್ ಉತ್ಪಾದನೆ ಪ್ರಾರಂಭವಾಯಿತು. 800 ಮೆಗಾವಾಟ್ ಸಾಮರ್ಥ್ಯದ ಮೂರು ಘಟಕಗಳಿದ್ದು, ಸ್ಥಾವರವು ಒಟ್ಟು 2,400 ಮೆಗಾವಾಟ್ ವಿದ್ಯುತ್ ಉತ್ಪಾದನೆ ಸಾಮರ್ಥ್ಯ ಹೊಂದಿದೆ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 18-4-1996

● ಶೀಲಾ ಕೌಲ್ ರಾಜೀನಾಮೆ ಪ್ರಶ್ನೆ: ಪ್ರಧಾನಿ ನಿರ್ಧಾರಕ್ಕೆ

ನವದೆಹಲಿ, ಏ.17 (ಪಿಟಿಐ, ಯುಎನ್ಐ)– ವಸತಿ ಹಗರಣದಲ್ಲಿ ಹಿಮಾಚಲ ಪ್ರದೇಶ ರಾಜ್ಯಪಾಲೆ ಶೀಲಾ ಕೌಲ್ ಅವರು ಭಾಗಿಯಾಗಿದ್ದಾರೆ ಎಂದು ಸಿಬಿಐ ಮಾಡಿರುವ ಆರೋಪದಿಂದ ಉಂಟಾಗಿರುವ ಪರಿಸ್ಥಿತಿ ಮತ್ತು ಕೌಲ್ ರಾಜೀನಾಮೆಗೆ ಸುಪ್ರೀಂ ಕೋರ್ಟ್ ಪರೋಕ್ಷವಾಗಿ ಸೂಚಿಸಿರುವ ಹಿನ್ನೆಲೆಯಲ್ಲಿ ಯಾವ ಕ್ರಮ ಕೈಗೊಳ್ಳಲಾಗುವುದು ಎಂದು ರಾಷ್ಟ್ರಪತಿ ಡಾ. ಶಂಕರದಯಾಳ್ ಶರ್ಮಾ ಅವರು ಪ್ರಧಾನಿ ಪಿ.ವಿ. ನರಸಿಂಹರಾವ್ ಅವರನ್ನು ಕೇಳಿದ್ದಾರೆ.

50 ವರ್ಷಗಳ ಹಿಂದೆ — ಭಾನುವಾರ, 18-4-1971

● ಪ್ರಜಾಸತ್ತಾತ್ಮಕ ಬಾಂಗ್ಲಾದೇಶ ಗಣರಾಜ್ಯ ಅಸ್ತಿತ್ವಕ್ಕೆ ಹಂಗಾಮಿ ಅಧ್ಯಕ್ಷರಿಂದ ಸ್ವಾತಂತ್ರ್ಯ ಘೋಷಣೆ

ಮುಜೀಬನಗರ, ಬಾಂಗ್ಲಾದೇಶ, ಏ.17– ಹಂಗಾಮಿ ಅಧ್ಯಕ್ಷ ಸೈಯದ್ ನಸರುಲ್ ಇಸ್ಲಾಂ ಅವರಿಂದ ಚರಿತ್ರಾರ್ಹವಾದ ಸ್ವಾತಂತ್ರ್ಯ ಘೋಷಣೆಯೊಂದಿಗೆ ಬಾಂಗ್ಲಾ ದೇಶದ ಪರಮಾಧಿಕಾರ ಪ್ರಜಾಸತ್ತಾತ್ಮಕ ಗಣರಾಜ್ಯವು ಇಂದು ಔಪಚಾರಿಕವಾಗಿ ಅಸ್ತಿತ್ವಕ್ಕೆ ಬಂದಿತು.

ಮಾವಿನ ತೋಪಿನ ನೆರಳಿನಲ್ಲಿ ‘ಜೈ ಬಾಂಗ್ಲಾ’ ಘೋಷಣೆಗಳ ನಡುವೆ ಹಸಿರು, ಕೆಂಪು, ಹೊಂಬಣ್ಣದ ಬಾಂಗ್ಲಾ ಧ್ವಜ ಸ್ಥಂಭದ ಬಳಿ ನಿಂತು ನಸರುಲ್ ಇಸ್ಲಾಂ ಅವರು ಸ್ವಾತಂತ್ರ್ಯ ಘೋಷಣೆ ಮಾಡಿದರು.

ದಿನ ಭವಿಷ್ಯ

ಭಾನುವಾರ 18 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನೀ ಷಷ್ಠೀ ಗಂ. 28-29 (ಸಾ. 5-36) ಭಾನುವಾರ ನಿತ್ಯ ನಕ್ಷತ್ರ ಆರ್ದ್ರೆ ಗಂ. 45-35 (ರಾ. 12-27) ಅತಿಗಂಡ ನಾಮ ಯೋಗ ಗಂ 24-32 ತೈತಲ ಕರಣ ಗಂ. 28-29 ವಿಷ ಗಂ. 3-20 ಅಮೃತ ಗಂ. 28-51 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-09 ಸೂರ್ಯಾಸ್ತ: 6-29 ಅದೃಷ್ಟ ಸಂಖ್ಯೆ 4

ಮೇಷ: ಬೌದ್ಧಿಕಮಟ್ಟ ಹೆಚ್ಚಿದ ಅನುಭವ. ಉಚ್ಚ ಶಿಕ್ಷಣದ ಯೋಜನೆ ಕೈಗೂಡಲಿದೆ. ಉದ್ಯೋಗ ಕ್ಷೇತ್ರದಲ್ಲಿನ ಜವಾಬ್ದಾರಿ ಹೆಚ್ಚಾಗುವ ಸಾಧ್ಯತೆ. ಸಾಹಿತ್ಯ, ಕಲೆಗಳಲ್ಲಿ ತೊಡಗಿಕೊಂಡವರಿಗೆ ಕೀರ್ತಿ.

ವೃಷಭ: ಬಿಡುವಿಲ್ಲದ ಕೆಲಸ ಕಾರ್ಯಗಳು. ಅತಿಯಾದ ಓಡಾಟ, ಪ್ರಯಾಣಗಳಿಂದಾಗಿ ದೇಹಾಲಾಸ್ಯ. ಮಕ್ಕಳು ಉದ್ಯೋಗದ ನಿಮಿತ್ತ ವಿದೇಶ ಪ್ರಯಾಣ. ಮನೆಯಲ್ಲಿ ಹೊಸ ಚೇತನವೊಂದು ಮೂಡಿಬರಲಿದೆ.

ಮಿಥುನ: ಹೊಸ ಉದ್ಯಮವೊಂದರಲ್ಲಿ ಹಣ ವಿನಿಯೋಗಿಸಲಿದ್ದೀರಿ. ಅತಿಯಾದ ದುಡುಕಿನಿಂದಾಗಿ ಸಂಗಾತಿಯೊಂದಿಗೆ ಮನಸ್ತಾಪ. ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಧನ ವಿನಿಯೋಗ.

ಕರ್ಕಾಟಕ: ಸ್ಥಿರಾಸ್ತಿ ಖರೀದಿ ಸಾಧ್ಯತೆ. ದೊಡ್ಡ ವ್ಯಕ್ತಿಯೊಬ್ಬರ ಸಹವಾಸದಿಂದ ಸಾಮಾಜಿಕ ಗೌರವ ಹೆಚ್ಚಲಿದೆ. ಭೂ ಸಂಬಂಧಿ ತಕರಾರುಗಳು ತಲೆದೋರುವ ಸಾಧ್ಯತೆ. ಸಾಲಗಳು ತೀರಲಿವೆ.

ಸಿಂಹ: ಜೀವನ ನಿರ್ವಹಣೆಗೆ ನಾಂದಿಯಾಗುವ ಆರ್ಥಿಕ ಸಂಪನ್ಮೂಲವೊಂದು ಗೋಚರ. ನಗರ ಸಭೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳಿಗೆ ಪದೋನ್ನತಿ.

ಕನ್ಯಾ: ಉದ್ಯೋಗ, ವ್ಯವಹಾರಗಳು ಅಭಿವೃದ್ಧಿಗೊಂಡು ಆರ್ಥಿಕ ಬಲವರ್ಧನೆ. ವಾಹನ ಖರೀದಿ. ವ್ಯವಸಾಯಿಕ ಹಾಗೂ ಗೃಹ ನಿರ್ಮಾಣ ಚಟುವಟಿಕೆಗಳು ಚುರುಕುಗೊಳ್ಳಲಿವೆ.

ತುಲಾ: ವ್ಯವಹಾರಗಳು ಸುಗಮವಾಗಿ ಸಾಗಲಿವೆ. ಉದ್ಯೋಗ ಕ್ಷೇತ್ರದಲ್ಲಿ ಶುಭವಾರ್ತೆ. ವಿರೋಧಿಗಳು ದೂರ ಸರಿಯಲಿದ್ದಾರೆ. ಸ್ತ್ರೀಯರಿಗೆ ಉದ್ಯೋಗ ಭಾಗ್ಯ.

ವೃಶ್ಚಿಕ: ತಾಳ್ಮೆಯಿಂದ ಕಾರ್ಯಾನುಕೂಲ. ವಿದ್ಯಾರ್ಥಿಗಳಿಗೆ ಉಚ್ಚಶಿಕ್ಷಣ ನಿಮಿತ್ತ ವಿದೇಶ ಪ್ರಯಾಣ. ಆರ್ಥಿಕ ಅಭಿವೃದ್ಧಿ. ವಸ್ತ್ರಾಭರಣ ಹಾಗೂ ಆಸ್ತಿ ಖರೀದಿ.

ಧನು: ಪದೋನ್ನತಿಯ ಸಲುವಾಗಿ ನಡೆಸುವ ಯತ್ನಗಳಲ್ಲಿ ಯಶಸ್ಸು. ವ್ಯವಹಾರಗಳಲ್ಲಿ ಶ್ರೇಯಸ್ಸು. ಕರಕುಶಲ ವಸ್ತುಗಳ ವ್ಯಾಪಾರಿಗಳಿಗೆ ಧನಲಾಭ. ನೌಕರಿಯಲ್ಲಿನ ತೀವ್ರ ಒತ್ತಡದಿಂದಾಗಿ ಬೇಸರ.

ಮಕರ: ಆಸ್ತಿ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ. ಹೊಸ ಗೃಹ ನಿರ್ಮಾಣ ಯೋಜನೆ ಕಾರ್ಯರೂಪಕ್ಕೆ ತರಲಿದ್ದೀರಿ. ಕೃಷಿ ಭೂಮಿಯನ್ನು ಖರೀದಿ ಮಾಡುವ ಸಾಧ್ಯತೆ.

ಕುಂಭ: ದವಸ ಧಾನ್ಯಗಳ ವ್ಯಾಪಾರಸ್ಥರಿಗೆ ಉತ್ತಮ ಲಾಭ. ಆಯವ್ಯಯಗಳನ್ನು ಪರಿಶೀಲನೆ ಮಾಡಬೇಕಾದುದು ಅನಿವಾರ್ಯ. ಬ್ಯಾಂಕ್ ಅಧಿಕಾರಿಗಳಿಂದ ವಂಚನೆಗೊಳಗಾಗುವ ಸಾಧ್ಯತೆ.

ಮೀನ: ಉದ್ಯೋಗ ವ್ಯವಹಾರಗಳಲ್ಲಿ ಪ್ರಗತಿ ಕಾಣುವಿರಿ. ಭೂಮಿ, ನಿವೇಶನ ವ್ಯವಹಾರದಲ್ಲಿ ಅಧಿಕ ಲಾಭ. ಸ್ತ್ರೀಯರಿಂದ ಮಾನಸಿಕ ಕಿರಿಕಿರಿ. ವಿರೋಧಿಗಳ ಪರಾಜಯ.

ನಿಮ್ಮ ಜನ್ಮದಿನ 18-ಏಪ್ರಿಲ್ ಈ ದಿನವು ಅತ್ಯಂತ ಶುಭಕರವಾಗಿದ್ದು, ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಪ್ರಾಪ್ತಿ. ಕೌಟುಂಬಿಕ ಕಲಹವನ್ನು ಸಮರ್ಥವಾಗಿ ನಿಭಾಯಿಸಲಿದ್ದೀರಿ. ಸಂತಾನ ಅಪೇಕ್ಷಿತರಿಗೆ ಸಂತಾನ ಪ್ರಾಪ್ತಿ. ಆರೋಗ್ಯ, ಕುಟುಂಬ ಸಾಮರಸ್ಯಗಳು ಉತ್ತಮಗೊಳ್ಳಲಿದೆ.

ಪದಬಂಧ 4570 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಪಾಮರನು ತಿರುಗಿಸಿರುವ ಪುಟ (2)
5.ಚಂದವಾಗಿ ತೇಯ್ದಿಟ್ಟ ಶ್ರೀಗಂಧ (3)
6.ಮಂದಿಗೆಲ್ಲಾ ತಿಳಿದಿರುವುದು (5)
9.ಪಾದರಸವನ್ನು ಹೀಗೂ ಹೇಳುವರು (3)
10.ಕಡಿಯುತಲಿದ್ದಾಗಲೇ ಖೋತಾ! (3)
11.ಸಿಹಿಯಲ್ಲದ ಸ್ಮರಣೆ (5)
14.ಮನಸ್ಸಿನ ಆಶಯ (3)
15.ಪರಾಜಿತನ ಹತ್ತಿರವೇ ಈ ಒಪ್ಪಂದ! (2)

ಮೇಲಿಂದ ಕೆಳಕ್ಕೆ
1.ಮಜದಲ್ಲಿರುವ ಮನುಷ್ಯ (3)
2.ಅವನಿರುವ ಭೂಮಿ (3)
3.ಮೆಲುವಾಗಿ ಬೀಸುವ ಗಾಳಿ (5)
7.ನೀರಿನಿಂದಾದ ಅನಿಲ (5)
8.ತಪ್ಪಾಗಿ ಭಾವಿಸುವಿಕೆ (5)
9.ತರಗತಿಯಲ್ಲಿ ಕಾಣಿಸಿದ ಚಿಟ್ಟೆ (5)
12.ತಂತ್ರಕ್ಕೊಂದು ಪರ್ಯಾಯ ಪದ (3)
13.ಪುರಕ್ಕೆ ತೆರಳಿ ನೀಡಿದ ರುಜುವಾತು (3)



4569ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪನ್ನ 2.ಕಲಿಲ 4.ತಲೋದರಿ 6.ಗವಾಸ್ಪದ 8.ಪಾಕ 9.ಸುಂಕ 10.ಕಡವರ 12.ಪ್ರಕರಣ 14.ಸರೀಕ 15.ಅಂಕ

ಮೇಲಿಂದ ಕೆಳಕ್ಕೆ: 1.ಪರಾತ 2.ಕಮರಿ 3.ಲವಂಗ 5.ಲೋಲಕ 7.ದಶಕ 8.ಪಾಲಕ 9.ಸುಂದರ 11.ರಕ್ಕಸ 12.ಪ್ರತೀಕ 13.ಣಲ್ಯಾಕ

ಸುಡೊಕು 4956

					5	4		9
		7	6				5	
	6	5			8	1		
	2				7			6
5		1		6			2	
			5				1	7
	3	9				6		
6			8		4		3	
		4		3		2		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4955 ಸುಡೊಕು

3	4	9	1	5	8	2	7	6
2	5	6	4	9	7	8	1	3
1	7	8	3	6	2	4	5	9
5	3	7	2	4	6	9	8	1
8	9	1	7	3	5	6	2	4
4	6	2	8	1	9	7	3	5
6	8	4	5	2	3	1	9	7
7	1	3	9	8	4	5	6	2
9	2	5	6	7	1	3	4	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹510
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹514

ಖಾದ್ಯ ತೈಲ ಮುಂಬೈ

ಶೇಂಗಾ (ರಿಫೈನ್ಡ್)	₹1630 (1630)
ಸೋಯಾ (ರಿಫೈನ್ಡ್)	₹1395 (1390)
ಸೂರ್ಯಕಾಂತಿ (ರಿಫೈನ್ಡ್)	₹1700 (1700)
ಪಾಮೋಲಿನ್	₹1310 (1295)

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ	
ದೊಡ್ಡ	₹1000-1200
ಮಧ್ಯಮ	₹800-1000
ಸಣ್ಣ	₹500-800

ಔಷಧ ಉತ್ಪನ್ನಗಳ ರಫ್ತು ಹೆಚ್ಚಳ

ಹೈದರಾಬಾದ್ (ಪಿಟಿಐ): ಭಾರತದಿಂದ ಔಷಧ ಉತ್ಪನ್ನಗಳ ರಫ್ತು 2019–20ನೇ ಹಣಕಾಸು ವರ್ಷಕ್ಕೆ ಹೋಲಿಸಿದರೆ 2020–21ನೇ ಹಣಕಾಸು ವರ್ಷದಲ್ಲಿ ಶೇ 18ರಷ್ಟು ಏರಿಕೆ ಆಗಿದೆ ಎಂದು ಫಾರ್ಮಾ ಸ್ಯುಟಿಕಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ ಆಫ್ ಇಂಡಿಯಾ ತಿಳಿಸಿದೆ.

ಮೌಲ್ಯದ ಲೆಕ್ಕದಲ್ಲಿ ₹ 1.58 ಲಕ್ಷ ಕೋಟಿಗಳಿಂದ ₹ 1.79 ಲಕ್ಷ ಕೋಟಿಗಳಿಗೆ ಏರಿಕೆ ಆಗಿದೆ. 2021ರ ಮಾರ್ಚ್ ತಿಂಗಳಿನಲ್ಲಿ ರಫ್ತು ವಹಿವಾಟು ಶೇ 48.5 ರಷ್ಟು ಭಾರಿ ಏರಿಕೆ ಕಂಡಿದ್ದು, ₹ 17,020 ಕೋಟಿಗಳಷ್ಟಾಗಿದೆ. 2020ರ ಮಾರ್ಚ್‌ನಲ್ಲಿ ರಫ್ತು ಮೌಲ್ಯವು ₹ 11,396 ಕೋಟಿಗಳಷ್ಟಿತ್ತು ಎಂದು ಕೌನ್ಸಿಲ್‌ನ ಪ್ರಧಾನ ನಿರ್ದೇಶಕ ಉದಯ್ ಭಾಸ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2020ರ ಮಾರ್ಚ್‌ನಲ್ಲಿ ಜಾಗತಿಕ ಮಟ್ಟದಲ್ಲಿ ಲಾಕ್‌ಡೌನ್ ಇದ್ದುದರಿಂದ ಪೂರೈಕೆ ವ್ಯವಸ್ಥೆಗೆ ಅಡ್ಡಿಯಾಗಿತ್ತು. ಹೀಗಾಗಿ 2020ರ ಮಾರ್ಚ್‌ಗೆ ಹೋಲಿಸಿದರೆ 2021ರ ಮಾರ್ಚ್ ರಫ್ತು ವಹಿವಾಟು ಹೆಚ್ಚಿನ ಬೆಳವಣಿಗೆ ಕಂಡಿದೆ.

2020ರಲ್ಲಿ ಜಾಗತಿಕ ಔಷಧ ಮಾರುಕಟ್ಟೆಯು ಶೇ 1 ರಿಂದ ಶೇ 2 ರಷ್ಟು ನಕಾರಾತ್ಮಕ ಬೆಳವಣಿಗೆ ಕಂಡಿದ್ದ ಸಮಯದಲ್ಲಿ ಗುಣಮಟ್ಟ ಮತ್ತು ಬೆಲೆಯ ದೃಷ್ಟಿಯಿಂದ ಭಾರತದಲ್ಲಿ ತಯಾರಾದ ಔಷಧಗಳಿಗೆ ಬೇಡಿಕೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಾಯಿತು ಎಂದು ಅವರು ತಿಳಿಸಿದ್ದಾರೆ.

ಭಾರತದ ಲಸಿಕೆಗಳ ರಫ್ತು ಮುಂಬರುವ ವರ್ಷಗಳಲ್ಲಿ ಭಾರಿ ಪ್ರಮಾಣದಲ್ಲಿ ಹೆಚ್ಚಾಗುವ ನಿರೀಕ್ಷೆಯನ್ನು ಕೌನ್ಸಿಲ್ ಇಟ್ಟುಕೊಂಡಿದೆ. ಉತ್ಪನ್ನ ಆಧಾರಿತ ಉತ್ತೇಜನ (ಪಿಎಲ್‌ಐ) ಯೋಜನೆಯಿಂದ ಆಮದು ಅವಲಂಬನೆ ತಗ್ಗಿಸುವ ಮೂಲಕ ದೇಶಿ ಔಷಧ ತಯಾರಕರ ಬೆಳವಣಿಗೆಗೆ ಅನುಕೂಲ ಆಗಲಿದೆ ಎಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಕೆ

ಬಂಟ್ವಾಳ		ಬೆಳ್ತಂಗಡಿ		[illegible]	
ಕೋಕ	10000-22500	ಕೋಕ	15000-23000	ರಾಶಿ	39099-41509
ಹೊಸತು	23500-41000	ಹೊಸತು	22390-39000	ತಟ್ಟಿಬೆಟ್ಟೆ	29099-38289
ಹಳತು	42500-50500	ಇತರೆ	19240-34500	ಶಿರಸಿ	
ಚಿತ್ರದುರ್ಗ		ಸಿದ್ದಾಪುರ		ಬೆಟ್ಟೆ	26019-38619
ಅಪಿ	42029-42449	ಬಿಳಿಗೋಟು	23899-29639	ಬಿಳಿಗೋಟು	19090-30599
ಬೆಟ್ಟೆ	33419-33889	ಚಾಲಿ	34099-36089	ಚಾಲಿ	34018-36508
ಕೆಂಪುಗೋಟು	29300-29700	ಕೋಕ	17699-27499	ಹಳೆಚಾಲಿ	39216-39216
ರಾಶಿ	41539-41969	ಕೆಂಪುಗೋಟು	27689-31099	ರಾಶಿ	38919-41609
				ರಾಮನಗರ ರೇಷ್ಮೆ ಧಾರಣೆ	
				ಮಿಶ್ರತಳಿ	317-392
				ದ್ವಿತಳಿ	244-453

ಮುಂಬೈ ಧಾರಣೆ

ಶೇಂಗಾ

17-4-2021

ಜಾವಾ 70/80(ಹೊಸ)	10250-10300
ಜಾವಾ 80/90(ಹೊಸ)	9750-9800
ದಪ್ಪ ಮಧ್ಯಪ್ರದೇಶ(ಹೊಸ)	10000-11100
ದಪ್ಪ ಗುಜರಾತ್(ಹೊಸ)	8800-8900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640 (1640)
ಒಂದು ವಾರದ ಡೆಲಿವರಿ	1635 (1635)
ಸೋಯಾ ಕಚ್ಚಾ	1375 (1370)
ಪಾಮ್ ವಾರದ ಡೆಲಿವರಿ	1308 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,050 (46,800)
ಬೆಳ್ಳಿ ಕೆ.ಜಿ 69,000 (68,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸೆಬಿಗೆ ಕರಡು ದಾಖಲೆ

ನವದೆಹಲಿ (ಪಿಟಿಐ): ಗ್ಲೆನ್‌ಮಾರ್ಕ್ ಲೈಫ್ ಸೈನ್ಸ್ ಕಂಪನಿಯು ತನ್ನ ಷೇರುಗಳನ್ನು ಸಾರ್ವಜನಿಕ ಖರೀದಿಗೆ ಮುಕ್ತಗೊಳಿಸುವ (ಐಪಿಒ) ಕರಡು ದಾಖಲೆ-ಪತ್ರಗಳನ್ನು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಗೆ (ಸೆಬಿ) ಸಲ್ಲಿಸಿದೆ ಎಂದು ಮಾತೃಸಂಸ್ಥೆ ಗ್ಲೆನ್‌ಮಾರ್ಕ್ ಫಾರ್ಮಾಸ್ಯುಟಿಕಲ್ಸ್ ಶನಿವಾರ ತಿಳಿಸಿದೆ.

ಹೂಡಿಕೆದಾರರಿಗೆ ನಷ್ಟ

ಬೆಂಗಳೂರು: ಮುಂಬೈ ಷೇರುಪೇಟೆಯ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯಗೊಂಡಿದೆ. ಇದರಿಂದ ಹೂಡಿಕೆದಾರರ ಸಂಪತ್ತು ₹ 4.33 ಲಕ್ಷ ಕೋಟಿ ಕರಗಿದೆ. ಷೇರುಪೇಟೆಯ ಒಟ್ಟಾರೆ ಬಂಡವಾಳ ಮೌಲ್ಯ ₹ 205.30 ಲಕ್ಷ ಕೋಟಿಗಳಿಗೆ ಇಳಿಕೆಯಾಗಿದೆ.

ವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 759 ಅಂಶಗಳಷ್ಟು ಇಳಿಕೆಯಾಗಿ 48,832 ಅಂಶಗಳಿಗೆ ತಲುಪಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 217 ಅಂಶ ಇಳಿಕೆ ಕಂಡು 14,617 ಅಂಶಗಳಿಗೆ ತಲುಪಿದೆ. ದೇಶದಲ್ಲಿ ಕೋವಿಡ್–19 ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಲೇ ಇರುವುದು ಷೇರುಪೇಟೆ ಮೇಲೆ ಪರಿಣಾಮ ಉಂಟುಮಾಡುತ್ತಿದೆ ಎಂದು ತಜ್ಞರು ಹೇಳಿದ್ದಾರೆ.

ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಈ ತಿಂಗಳಲ್ಲಿ ಇದುವರೆಗೆ ₹ 3,800 ಕೋಟಿ ಮೊತ್ತವನ್ನು ಹಿಂದಕ್ಕೆ ಪಡೆದಿದ್ದಾರೆ. ಹಲವು ರಾಜ್ಯಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು ವಹಿವಾಟಿನ ಮೇಲೆ ಪರಿಣಾಮ ಬೀರುತ್ತಿದೆ. ಔಷಧ ವಲಯವನ್ನು ಹೊರತುಪಡಿಸಿ ಉಳಿದೆಲ್ಲಾ ವಲಯಗಳ ಸೂಚ್ಯಂಕಗಳು ವಾರದ ವಹಿವಾಟಿನಲ್ಲಿ ಇಳಿಕೆ ಕಂಡಿವೆ. ಈ ತಿಂಗಳು ಆರ್ಥಿಕತೆಯು ಮಂದಗತಿಯಲ್ಲಿ ಇರಲಿದೆ ಎನ್ನುವುದನ್ನು ಹಲವು ಅಂಶಗಳು ಸೂಚಿಸುತ್ತಿರುವ ಮಧ್ಯೆಯೇ ಲೋಹದ ಬೆಲೆ ಗಣನೀಯವಾಗಿ ಹೆಚ್ಚಳ ಆಗುತ್ತಿದೆ. ಇದು ಕೈಗಾರಿಕೆಗಳ ಮೇಲೆ ಪರಿಣಾಮ ಉಂಟುಮಾಡುತ್ತಿದೆ ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ತಿಳಿಸಿದ್ದಾರೆ.

ಕಾಫಿಡೇ ವಹಿವಾಟು ಪುನರಾರಂಭ

ನವದೆಹಲಿ (ಪಿಟಿಐ): ಮುಂಬೈ (ಬಿಎಸ್‌ಇ) ಮತ್ತು ರಾಷ್ಟ್ರೀಯ ಷೇರುಪೇಟೆಗಳಲ್ಲಿ (ಎನ್‌ಎಸ್‌ಇ) ಏಪ್ರಿಲ್ 26ರಿಂದ ತನ್ನ ಷೇರುಗಳ ವಹಿವಾಟು ಪುನರಾರಂಭ ಆಗಲಿದೆ ಎಂದು ನಷ್ಟದಲ್ಲಿರುವ ಕಾಫಿ ಡೇ ಎಂಟರ್‌ಪ್ರೈಸಸ್ ಲಿಮಿಟೆಡ್ (ಸಿಡಿಇಎಲ್) ಶನಿವಾರ ತಿಳಿಸಿದೆ.

ಸಿಡಿಇಎಲ್‌ನ ಷೇರುಗಳನ್ನು ವಹಿವಾಟು ನಡೆಸುವುದರಿಂದ ಅಮಾನತು ಮಾಡಿದ್ದ ಆದೇಶವನ್ನು ರದ್ದುಮಾಡುವ ಕುರಿತು ಎನ್‌ಎಸ್‌ಇ ಮತ್ತು ಬಿಎಸ್‌ಇ ಶುಕ್ರವಾರ ಬರೆದಿರುವ ಪತ್ರದಲ್ಲಿ ತಿಳಿಸಿವೆ ಎಂದು ಬಿಎಸ್‌ಇಗೆ ಮಾಹಿತಿ ನೀಡಿದೆ.

2019ರ ಜೂನ್ ಮತ್ತು ಸೆಪ್ಟೆಂಬರ್ ತ್ರೈಮಾಸಿಕಗಳ ಹಣಕಾಸು ವರದಿಗಳನ್ನು ಸಲ್ಲಿಸದೇ ಇರುವ ಕಾರಣಕ್ಕಾಗಿ ಷೇರುಪೇಟೆಗಳು ಸಿಡಿಇಎಲ್‌ನ ಷೇರು ವಹಿವಾಟನ್ನು ಅಮಾನತಿನಲ್ಲಿ ಇಟ್ಟಿದ್ದವು. ಕಂಪನಿ ಸಾಲ ₹ 280 ಕೋಟಿಗಳಷ್ಟಿದೆ.

ಸ್ಕ್ರಿಪ್ಟ್ ಬರಹಗಾರ, ಸುಧಾರಕ, ಹಾಸ್ಯ ದಿಗ್ಗಜ

ತಮಿಳು ಸಿನಿಮಾದ 'ವಿವೇಕ'ದ ಧ್ವನಿ

• ಶರತ್ ಹೆಗ್ಡೆ

ಬೆಂಗಳೂರು: 'ಮನತಿ ಉರುಧಿ ವೆಂದಂ' 1987ರಲ್ಲಿ ತೆರೆಗೆ ಬಂದ ತಮಿಳು ಚಿತ್ರ. ಅದರಲ್ಲಿ ಸಣ್ಣ ಪಾತ್ರವೊಂದು ಹಾದು ಹೋಗುತ್ತದೆ. ಹಾಸ್ಯ ಪ್ರಜ್ಞೆಯ ಸೂಕ್ಷ್ಮತೆ, ಸಮಯ ಪ್ರಜ್ಞೆ ನೋಡಿ ಅಂದಿನ ಖ್ಯಾತ ನಿರ್ದೇಶಕ ಕೆ. ಬಾಲಚಂದರ್ ಅವರು ವಿವೇಕ್ ಅವರಿಗೆ ಈ ಪಾತ್ರ ನೀಡಿದ್ದರು. ಅಲ್ಲಿಂದ ವಿವೇಕ್ ಹಿಂದಿರುಗಿ ನೋಡಲಿಲ್ಲ. ತಮಿಳು, ಕನ್ನಡ ಸೇರಿದಂತೆ ಹಲವು ಭಾಷೆಗಳ ಬೆಳ್ಳಿತೆರೆಯಲ್ಲಿ ಪ್ರೇಕ್ಷಕರನ್ನು ನಗಿಸಿದರು. ಹಾಸ್ಯದಿಗ್ಗಜ ಎಂದು ಕರೆಸಿಕೊಂಡರು.



ನಟ ವಿವೇಕ್

ವಾಸ್ತವವಾಗಿ ವಿವೇಕ್ ಅವರು ತಮ್ಮ ಸಿನಿಬದುಕು ಆರಂಭಿಸಿದ್ದು ಸಹಾಯಕ ನಿರ್ದೇಶಕ ಹಾಗೂ ಸ್ಕ್ರಿಪ್ಟ್ ಬರಹಗಾರರಾಗಿ. '...ಉರುಧಿ ವೆಂದಂ' ಬಳಿಕ ಬಾಲಚಂದರ್ ಅವರು 'ಪುಟ್ಟು ಪುಟ್ಟು ಅರ್ಥಂಗಳ್' ಚಿತ್ರದಲ್ಲಿ ಪ್ರಮುಖ ಹಾಸ್ಯ ಪಾತ್ರ ನೀಡಿದರು. ಆ ಚಿತ್ರದಲ್ಲಿ ಪದೇಪದೇ ಹೇಳುವ ಪ್ರಮುಖ ಸಂಭಾಷಣೆ 'ಇನ್ನಿಕಿ ಸೆತ್ತ ನಾಲಾಯಕ್ಕು ಪಾಲ್' ಕೆಲಕಾಲ ಜನಪ್ರಿಯ ನುಡಿಗಟ್ಟೇ ಆಗಿಹೋಗಿತ್ತು. 90ರ ದಶಕದ ಕೊನೆಯ ಭಾಗದಿಂದ ಸುಮಾರು ಎರಡು ದಶಕ ವಿವೇಕ್ ವೃತ್ತಿಬದುಕಿನ ಪರ್ವಕಾಲ. ಹರಿತವಾದ ಮಾತು, ಸಂಭಾಷಣೆಯೇ ಅವರ ಅಭಿನಯದ ಪ್ಲಸ್ ಪಾಯಿಂಟ್.

'ಪೆರಸಗನ್', 'ರನ್', 'ಧೂಳ್', 'ಅನ್ನಿಯನ್' ಮತ್ತು 'ಶಿವಾಜಿ'ಯಲ್ಲಿ ಅವರು ಪ್ರಮುಖ ಹಾಸ್ಯ ಪಾತ್ರದಲ್ಲಿ ಅಭಿನಯಿಸಿದ್ದರು.

ಹೆಣ್ಣು ಶಿಶು ಉಳಿಸಿ ಹೋರಾಟ: ತೂತ್ತುಕುಡಿ ಜಿಲ್ಲೆಯ ಕೋವಿಲ್‌ಪಟ್ಟಿಯಲ್ಲಿ ಜನಿಸಿದ್ದ ವಿವೇಕ್ ಹಲವು ಸಾಮಾಜಿಕ ಸುಧಾರಣಾ ಕಾರ್ಯಕ್ರಮಗಳಲ್ಲೂ ತೊಡಗಿದ್ದರು. ದಕ್ಷಿಣ ತಮಿಳುನಾಡಿನಲ್ಲಿ ಜೀವಂತವಾಗಿದ್ದ ಹೆಣ್ಣು ಶಿಶುಹತ್ಯೆ ತಡೆ ವಿರುದ್ಧ ಧ್ವನಿಯೆತ್ತಿದ್ದರು. ಜಾತಿ ಸಂಘರ್ಷ, ಮೂಢನಂಬಿಕೆಗಳ ವಿರುದ್ಧ ಹೋರಾಟ ನಡೆಸಿಯೂ ಗಮನ ಸೆಳೆದು ಯಶಸ್ವಿಯೂ ಆಗಿದ್ದರು.

ಈ ಸುಧಾರಣೆಯ ಹೋರಾಟದಲ್ಲಿ ಅವರಿಗೆ ಬೆಂಬಲವಾಗಿದ್ದವರು ಹಿರಿಯ ಹೋರಾಟಗಾರ ಇ.ವಿ. ರಾಮಸ್ವಾಮಿ (ಪೆರಿಯಾರ್). ಈ ಸಮಯದಲ್ಲಿ ಜನರ ಜಡ್ಡುಗಟ್ಟಿದ ಮನಃಸ್ಥಿತಿಯ ಬಗ್ಗೆ ವಿವೇಕ್ ಅವರು ತೀಕ್ಷ್ಣವಾಗಿ ಹೇಳುತ್ತಿದ್ದ ಸಂಭಾಷಣೆಯೊಂದು ನೆನಪಾಗುತ್ತದೆ. 'ಇಂಥ ಸಾವಿರ ಪೆರಿಯಾರ್ (ರಾಮಸ್ವಾಮಿ)ಗಳು ಬಂದರೂ ನೀವು ಬದಲಾಗುವುದಿಲ್ಲ'. ಈ ಸಂಭಾಷಣೆಯೇ ರಾಮಸ್ವಾಮಿ ಅವರ ಗಮನ ಸೆಳೆದಿತ್ತು ಎಂದು ಅಲ್ಲಿನ ಜನರು ನೆನಪಿಸಿಕೊಳ್ಳುತ್ತಾರೆ.

ವಿವೇಕ್ ಅವರ ಕಲಾ ಸೇವೆ, ಸಮಾಜ ಸುಧಾರಣೆಯ ಸೇವೆ ಗಮನಿಸಿ ಕೇಂದ್ರ ಸರ್ಕಾರ ಅವರಿಗೆ ಪದ್ಮಶ್ರೀ ನೀಡಿ ಗೌರವಿಸಿತ್ತು. ಸತ್ಯಭಾಮಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿತ್ತು.

ಏ. 15ರಂದು ಕೋವಿಡ್ ಲಸಿಕೆ ಹಾಕಿಸಿಕೊಂಡಿದ್ದ ವಿವೇಕ್, 'ಅರ್ಹರಾದ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಕರೆ ನೀಡಿದ್ದರು. ತಮಿಳುನಾಡು ರಾಜ್ಯ ಸರ್ಕಾರ ಅವರನ್ನು ಆರೋಗ್ಯ ಸಂದೇಶಗಳ ರಾಯಭಾರಿಯನ್ನಾಗಿ ಘೋಷಿಸಿತ್ತು.

ವಿವೇಕ್ ನಿಧನ

ಬೆಂಗಳೂರು: ಹೃದಯಾಘಾತಕ್ಕೊಳಗಾಗಿದ್ದ ತಮಿಳು ನಟ ವಿವೇಕ್ (59) ಅವರು ಶನಿವಾರ ನಿಧನರಾದರು. ಶುಕ್ರವಾರ ಬೆಳಿಗ್ಗೆ ಹೃದಯಾಘಾತಕ್ಕೆ ಒಳಗಾಗಿ ಮೂರ್ಛೆ ಹೋಗಿದ್ದ ಅವರನ್ನು ತಕ್ಷಣವೇ ಪತ್ನಿ ಮತ್ತು ಮಗಳು ಆಸ್ಪತ್ರೆಗೆ ಸೇರಿಸಿದ್ದರು. ಅವರನ್ನು ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ನಿಧನರಾದರು ಎಂದು ವಡಪಳನಿ ಸಿಮ್ಸ್ ಆಸ್ಪತ್ರೆಯ ವೈದ್ಯರು ಮಾಧ್ಯಮ ಪ್ರತಿನಿಧಿಗಳಿಗೆ ಮಾಹಿತಿ ನೀಡಿದರು.

ವ್ಯಾಟ್ಸ್‌ಆ್ಯಪ್‌ನಲ್ಲಿ ಲೋಪ ಸೈಬರ್ ಏಜೆನ್ಸಿ ಎಚ್ಚರಿಕೆ

ನವದೆಹಲಿ (ಪಿಟಿಐ): ಜನಪ್ರಿಯ ಸಂದೇಶ ವಾಹಕ ವ್ಯಾಟ್ಸ್‌ಆ್ಯಪ್‌ನಲ್ಲಿ ಕೆಲವೊಂದು ಲೋಪ ಪತ್ತೆಯಾಗಿದ್ದು, ಬಳಕೆದಾರರು ಈ ಕುರಿತು ಜಾಗ್ರತರಾಗಿರಬೇಕು ಎಂದು ಸೈಬರ್ ಭದ್ರತಾ ಸಂಸ್ಥೆ ಸೆರ್ಟ್–ಇನ್ ಎಚ್ಚರಿಸಿದೆ.

ಈ ಬಗ್ಗೆ ಭಾರತದ ಕಂಪ್ಯೂಟರ್ ತುರ್ತು ಸ್ಪಂದನಾ ತಂಡ ಕಟ್ಟೆಚ್ಚರ ನೀಡಿದ್ದು, ಅಂಡ್ರಾಯ್ಡ್ ಆವೃತ್ತಿ ವಿ2.21.4.18 ಅಥವಾ ಅದಕ್ಕೂ ಮೊದಲಿನ ಹಾಗೂ ಐಒಎಸ್‌ನ ವಿ2.21.21.32 ಅಥವಾ ಅದಕ್ಕೂ ಮೊದಲಿನ ವ್ಯಾಟ್ಸ್‌ಆ್ಯಪ್, ವ್ಯಾಟ್ಸ್‌ಆ್ಯಪ್ ಬ್ಯುಸಿನೆಸ್ ಆ್ಯಪ್‌ಗಳಲ್ಲಿ ಆವೃತ್ತಿಗಳಲ್ಲಿ ಲೋಪ ಕಂಡುಬಂದಿದೆ ಎಂದಿದೆ.

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ
ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in
ಕ್ರ.ಸಂ.ಪಂ.ರಾ.ಇಂ/ವಿಶಿ/ಪಿ.ಬಿ-2/2515 ತಾಪಂಕ/ಟೆಂಡರ್ –28/2020–21/70 ದಿ: 12.04.2021
ಅಲ್ಪಾವಧಿ ಟೆಂಡರ್ ಪ್ರಕಟಣೆ 28/2020–21 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ) ತಿದ್ದುಪಡಿ ಆದೇಶ
ಈ ಕಚೇರಿಯಿಂದ ಟೆಂಡರ್ ನಂ. ಟೆಂಡರ್–28/2020–21/4120, ದಿನಾಂಕ 22.03.2021 ರಂತೆ ಆಹ್ವಾನಿಸಲಾದ ಶಿರಸಿ ತಾಲೂಕಿನ ಶಿರಸಿಯಲ್ಲಿ ತಾಲೂಕ ಪಂಚಾಯತ ಕಟ್ಟಡ ನಿರ್ಮಾಣ (Indent No-81195) ಕಾಮಗಾರಿಯ ಟೆಂಡರನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ ಟೆಂಡರ ದಿನಾಂಕಗಳನ್ನು ಮರು ನಿಗದಿಗೊಳಿಸಲಾಗಿದೆ.
(1) ಟೆಂಡರ್ ಶೆಡ್ಯೂಲ್ –ಬಿಗಳನ್ನು ಮತ್ತು Technical Bid ನ್ ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ:29.04.2021 ರ ಸಂಜೆ 16.00 ಗಂಟೆಗೆ (2) Technical Bid ಗಳನ್ನು ತೆರೆಯುವ ದಿನಾಂಕ: 30.04.2021 ಸಂಜೆ 16.30 ಗಂಟೆಗೆ ಹಾಗೂ Financial Bid ಗಳನ್ನು ತೆರೆಯುವ ದಿನಾಂಕ: 04.05.2021 ಬೆಳಿಗ್ಗೆ 11.00 ಗಂಟೆಗೆ. (ಸಾಧ್ಯವಾದಲ್ಲಿ).
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿ
DIPR/ADK/MCA/40/21-22 dt.16.4.2021

ಕರ್ನಾಟಕ ಸರ್ಕಾರ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿ, ಉತ್ತರ ಕನ್ನಡ
ದೂರವಾಣಿ: 08384-226381 ಇ-ಮೇಲ್: ee_zpedsirsi@yahoo.co.in
ಕ್ರ.ಸಂ.ಪಂ.ರಾ.ಇಂ/ವಿಶಿ/ಪಿ.ಬಿ-2/2515 ತಾಪಂಕ/ಟೆಂಡರ್ –28/2020–21/70 ದಿ: 12.04.2021
ಅಲ್ಪಾವಧಿ ಟೆಂಡರ್ ಪ್ರಕಟಣೆ 28/2020–21 (ಇ-ಪ್ರೊಕ್ಯೂರ್‌ಮೆಂಟ್ ಮೂಲಕ) ತಿದ್ದುಪಡಿ ಆದೇಶ
ಈ ಕಚೇರಿಯಿಂದ ಟೆಂಡರ್ ನಂ. ಟೆಂಡರ್–28/2020–21/4120, ದಿನಾಂಕ 22.03.2021 ರಂತೆ ಆಹ್ವಾನಿಸಲಾದ ಶಿರಸಿ ತಾಲೂಕಿನ ಶಿರಸಿಯಲ್ಲಿ ತಾಲೂಕ ಪಂಚಾಯತ ಕಟ್ಟಡ ನಿರ್ಮಾಣ (Indent No-81195) ಕಾಮಗಾರಿಯ ಟೆಂಡರನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಗಿನಂತೆ ಟೆಂಡರ ದಿನಾಂಕಗಳನ್ನು ಮರು ನಿಗದಿಗೊಳಿಸಲಾಗಿದೆ.
(1) ಟೆಂಡರ್ ಶೆಡ್ಯೂಲ್ –ಬಿಗಳನ್ನು ಮತ್ತು Technical Bid ನ್ ವೆಬ್‌ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ:29.04.2021 ರ ಸಂಜೆ 16.00 ಗಂಟೆಗೆ (2) Technical Bid ಗಳನ್ನು ತೆರೆಯುವ ದಿನಾಂಕ: 30.04.2021 ಸಂಜೆ 16.30 ಗಂಟೆಗೆ ಹಾಗೂ Financial Bid ಗಳನ್ನು ತೆರೆಯುವ ದಿನಾಂಕ: 04.05.2021 ಬೆಳಿಗ್ಗೆ 11.00 ಗಂಟೆಗೆ. (ಸಾಧ್ಯವಾದಲ್ಲಿ).
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿರಸಿ
DIPR/ADK/MCA/40/21-22 dt.16.4.2021

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಕೊಪ್ಪಳ.
ಸಂಖ್ಯೆ: ಉಗ್ರಾಣ/Covid-19/01/2021–22 ದಿನಾಂಕ: 16.04.2021
ಇ-ಪ್ರೊಕ್ಯೂರಮೆಂಟ್ ಟೆಂಡರ್ ಅಧಿಸೂಚನೆ
ಕೋವಿಡ್–19ಗೆ ಸಂಬಂಧಪಟ್ಟಂತೆ, Drugs, consumable, Lab Reagents and Medical Equipments ಗಳು ತಾಲೂಕಾ ಆಸ್ಪತ್ರೆಗಳಿಗೆ ಸರಬರಾಜು ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯಲಾಗಿದೆ.
1)ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಅವಧಿ : 23.04.2021 ರಂದು ಸಾಯಂಕಾಲ 5–00 ಗಂಟೆಯೊಳಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 26.04.2021 ರಂದು ಬೆಳಿಗ್ಗೆ 11–00 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ: 28.04.2021 ರಂದು ಬೆಳಿಗ್ಗೆ 11–00 ಗಂಟೆಗೆ. E-Mail:dhokoppal@gmail.com
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಅಧಿಕಾರಿಗಳು ಕೊಪ್ಪಳ.
ಡಿಐಪಿಆರ್/ಕೊಪ್ಪಳ/22/ಎಂಸಿಎ/2021–22

भारतीय पर्यटन एवं यात्रा प्रबंध संस्थान
(भारत सरकार के पर्यटन मंत्रालय के अधीन स्वायत्तशासी संस्थान)
केन्द्र: ग्वालियर, भुवनेश्वर, नोएडा, नेल्लोर, गोवा
कैम्प: शिलॉग एवं बोधगया
पर्यटन शिक्षा संस्कृति रक्षा
www.iittm.ac.in
INDIAN INSTITUTE OF TOURISM AND TRAVEL MANAGEMENT
(An Autonomous Body under Ministry of Tourism, Government of India)
Center: Gwalior (H.O.), Bhubaneswar, Noida, Goa and Nellore
Camps: Shillong and Bodh Gaya
ADMISSIONS OPEN
Session 2021-22
• **BBA** (Tourism & Travel)
• **MBA** (Tourism & Travel Management)
For online application & detail information please visit - www.iittm.ac.in
For more details please contact : 9425407607, 9752042246, 8778158261, 9437010180, 7377686582, 9911391880, 7005270172
or Email : admissions@iittm.ac.in
* under collaborative scheme of
INDIRA GANDHI NATIONAL TRIBAL UNIVERSITY
(A Central University established by an Act of Parliament)
"Scholarship Scheme Available" Mob: 7987146651, 8788574474
ATUL

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ
ಐ.ಎಫ್.ಟಿ.ಸಂಖ್ಯೆ: 01/2021–22 ದಿನಾಂಕ: 15.04.2021
ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಕೆಡಬ್ಲ್ಯೂ–1,2&3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗಳಿಗೆ ಒಂದು ಮತ್ತು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ.4.60 ಲಕ್ಷಗಳು ಮತ್ತು ಗರಿಷ್ಠ ಮೊತ್ತ ರೂ.88.48 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ:30.04.2021 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/28/2021–22

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4 ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001. ದೂರವಾಣಿ: 080–22265383 ವೆಬ್‌ಸೈಟ್: www.kiadb.in
ನಂ.: ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇ–ಸರ್ವೀಸ್/696/2021–22 ದಿನಾಂಕ: 17.04.2021
ಕೆಐಎಡಿಬಿಯ ಡೊಮೈನ್ ವೆಬ್‌ಸೈಟ್, ಇ–ಮೇಲ್ ಮತ್ತು ಕ್ಲೌಡ್ ಹೋಸ್ಟಿಂಗ್‌ನ ವಾರ್ಷಿಕ ನಿರ್ವಹಣೆಯ ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
(ಜಿಟಿಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಕೆಐಎಡಿಬಿಯ ಡೊಮೈನ್ ವೆಬ್‌ಸೈಟ್, ಇ-ಮೇಲ್ ಮತ್ತು ಕ್ಲೌಡ್ ಹೋಸ್ಟಿಂಗ್‌ನ ವಾರ್ಷಿಕ ನಿರ್ವಹಣೆ ಸಲಹಾಸೇವೆಗಳನ್ನು [illegible] ಒದಗಿಸಲು ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 04.05.2021ರ ಸಂಜೆ 04:00 ಗಂಟೆವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1 ಕೆ.ಐ.ಎ.ಡಿ.ಬಿ, ಬೆಂಗಳೂರು
ವಾಸಾಸಂಇ/ಬೆಂ/ಎಂಸಿಎ/178/2021–22

ಕರ್ನಾಟಕ ಸರ್ಕಾರ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ,
ಸಂಖ್ಯೆ: ಕೃಮಾಇ/ಕೃಉಮಾಸ(ದಾ)/76–77/2021–22 ದಿನಾಂಕ:09.04.2021
ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ
ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಭದ್ರತಾ / ಸ್ವಚ್ಛತಾ ಏಜೆನ್ಸಿ ನೇಮಕಾತಿಗಾಗಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಇ–ಪೋರ್ಟಲ್‌ನ ಮೂಲಕ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ: 28–04–2021 ರ ಸಂಜೆ 4.00 ಗಂಟೆಗೆ ಇ.ಎಂ.ಡಿ. ಹಾಗೂ ಪ್ರೊಸೆಸಿಂಗ್ ಫೀಯನ್ನು ಇ–ಪೇಮೆಂಟ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಇವರಿಗೆ ಪಾವತಿಸತಕ್ಕದ್ದು, ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ಸಮಯದಲ್ಲಿ (ರಜಾದಿನ ಹೊರತುಪಡಿಸಿ) ಅಥವಾ ವೆಬ್‌ಸೈಟ್ http://eproc.karnataka.gov.in ನಲ್ಲಿ ಹಾಗೂ ದೂರವಾಣಿ ಸಂಖ್ಯೆ: 08192–255044 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ ಇಲ್ಲಿ ಪಡೆಯಬಹುದಾಗಿದೆ.
ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ
ಸಹಿ/–ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ
ವಾಸಾಸಂಇ/ದಾ/ನಂ.44/ಝೇಂಕಾರ್/2021–22

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಉಡುಪಿ
ಸಂ.: ಇಇ/ಆರ್‌ಡಬ್ಲ್ಯೂಎಸ್‌ಎಸ್‌ಡಿ/ಉಡುಪಿ/ಎಂಆರ್‌ಎಫ್‌ಆರ್‌ಎಫ್‌ಪಿ/2020–21/ಅಇ–2/76 ದಿನಾಂಕ: 17.04.2021
REQUEST FOR PROPOSAL ಸಲ್ಲಿಕೆಗೆ ಆಹ್ವಾನ (ಮೂರನೇ ಕರೆ)
ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಉಡುಪಿ, ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕಿನ ನಿಟ್ಟೆ ಗ್ರಾಮದಲ್ಲಿ ಮೆಟೀರಿಯಲ್ ರಿಕವರಿ ಫೆಸಿಲಿಟಿ (MRF)ಯ ನಾನ್ ಬಯೋಡಿಗ್ರೇಡೇಬಲ್ (ಒಣ) ತ್ಯಾಜ್ಯ ಸಂಗ್ರಹಣೆ, ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಸಲಹಾ ಏಜೆನ್ಸಿಗಳಿಂದ ಮೊಹರಾದ ಲಕೋಟೆಯಲ್ಲಿ ಬೇಡಿಕೆ ಪ್ರಸ್ತಾವನೆ (Request For Proposal-RFP)ಯನ್ನು ಆಹ್ವಾನಿಸಲಾಗಿದೆ. ಅರ್ಹತಾ ಮಾನದಂಡಗಳು, ಸಲ್ಲಿಕೆ ಮಾಡಬೇಕಾದ ದಾಖಲೆಗಳು, ಸಂಕ್ಷಿಪ್ತ ಉದ್ದೇಶ ಮತ್ತು ಕೆಲಸದ ವಿವರ ಮತ್ತು ಮೌಲ್ಯಮಾಪನದ ಮಾನದಂಡಗಳನ್ನು ಒಳಗೊಂಡಿರುವ RFP ದಾಖಲೆಗಳನ್ನು ಉಡುಪಿ ಜಿಲ್ಲಾ ಪಂಚಾಯತ್‌ನ ವೆಬ್‌ಸೈಟ್: www.zpudupi.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
RFP ಸಲ್ಲಿಸಲು ಕೊನೆಯ ದಿನಾಂಕ: 27.04.2021, ಸಂಜೆ 3.00 ಗಂಟೆವರೆಗೆ ಆಗಿದ್ದು, ಮೇಲಿನ ಬೇಡಿಕೆ ಪ್ರಸ್ತಾವನೆ (RFP) ಯೊಂದಿಗೆ ರೂ. 3,000/– ಮರುಪಾವತಿಸಬಹುದಾದ EMD ಶುಲ್ಕವನ್ನು FDR payable at Udupi ಮೂಲಕ. "ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಉಡುಪಿ ಇವರ ಹೆಸರಿನಲ್ಲಿ ತೆಗೆದು ಮುಚ್ಚಿದ ಲಕೋಟೆಯಲ್ಲಿ "RFP for Collection of Non-Biodegradable(Dry) waste, Operation and Manage the Material Recovery Facility(MRF) center at Nitte Village in Karkala Taluk of Udupi District" ಎಂಬ ಮೇಲ್ಬರಹದೊಂದಿಗೆ "ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ರಜತಾದ್ರಿ, ಸಿ ಬ್ಲಾಕ್, ಮಣಿಪಾಲ–576104, ಉಡುಪಿ ಜಿಲ್ಲೆ" ಇವರ ವಿಳಾಸಕ್ಕೆ ಗುರುತಿಸಲಾದ ಮೊಹರಾದ ಲಕೋಟೆಯನ್ನು ಸಲ್ಲಿಸುವುದು.
ಸಹಿ/– ಕಾರ್ಯನಿವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ವಾಸಾಇ/ಉಡುಪಿ/ಎಂಸಿಎ/47/21–22 ದಿ: 17.4.21

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.5, ಚಿತ್ರದುರ್ಗ.
Ph/Fax: 08194-230102 E-Mail: eeubp.d5cta@gmail.com
ಕ್ರ.ಸಂ.:ಕಾಇಂ/ವಿಜನಿನಿ/ಭಮೇಯೋ/ವಿ–5/ಚಿ/ಪ್ರಕೃತಿ ವಿಕೋಪ/ಟೆಂಡರ್/2020–21/1ರಿಂದ 3 ದಿನಾಂಕ: 01.04.2021
ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಭದ್ರಾ ಮೇಲ್ದಂಡೆ ಯೋಜನೆಯಡಿ ಪ್ರಕೃತಿ ವಿಕೋಪ ಲೆಕ್ಕಶೀರ್ಷಿಕೆಯ 03 ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ. (1) IMPROVEMENTS TO HALLA NEAR HULEMALALI VILLAGE IN HOLALKERE TALUK CHITRADURGA DISTRICT. Indent No. VJNL/2021-22/FP/WORK_INDENT1659. ಟೆಂಡರ್‌ಗಿಟ್ಟ ಮೊತ್ತ: ರೂ. 260.54 ಲಕ್ಷ. (2) IMPROVEMENTS TO HALLA NEAR MG KATTE VILLAGE IN HOLALKERE TALUK CHITRADURGA DISTRICT. Indent No. VJNL/2021-22/FP/WORK_INDENT1661. ಟೆಂಡರ್‌ಗಿಟ್ಟ ಮೊತ್ತ: ರೂ. 260.75 ಲಕ್ಷ. (3) IMPROVEMENTS TO HALLA NEAR NULENURU VILLAGE IN HOLALKERE TALUK CHITRADURGA DISTRICT. Indent No. VJNL/2021-22/FP/WORK_INDENT1665. ಟೆಂಡರ್‌ಗಿಟ್ಟ ಮೊತ್ತ: ರೂ. 170.74 ಲಕ್ಷ. ಮೇಲ್ಕಂಡ ಕಾಮಗಾರಿಗಳಿಗೆ ದ್ವಿ–ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ದರಗಳ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ: 19.04.2021 ಸಂಜೆ 5.00 ಗಂಟೆಯವರೆಗೆ. (2) ಪ್ರಿ–ಬಿಡ್ ಸಭೆಯನ್ನು ಮುಖ್ಯ ಇಂಜಿನಿಯರ್, ವಿಜನಿನಿ, ಭಮೇಯೋ ವಲಯ ಚಿತ್ರದುರ್ಗ ಕಛೇರಿ ಸಭಾಂಗಣದಲ್ಲಿ ದಿನಾಂಕ: 20.04.2021ರಂದು ಬೆಳಗ್ಗೆ 11.00 ಗಂಟೆಗೆ ನಿಗದಿಪಡಿಸಲಾಗಿದೆ. (3) ಟೆಂಡರ್‌ನ್ನು ದಿನಾಂಕ: 23.04.2021ರಂದು ಸಂಜೆ 4.00 ಗಂಟೆವರೆಗೆ ಸಲ್ಲಿಸಬಹುದಾಗಿದೆ. (4) ತಾಂತ್ರಿಕ ಬಿಡ್ಡುಗಳನ್ನು ದಿನಾಂಕ: 24.04.2021ರಂದು ಸಂಜೆ 04.30 ಗಂಟೆ ನಂತರ ತೆರೆಯಲಾಗುವುದು. (5) ಆರ್ಥಿಕ ಬಿಡ್ಡನ್ನು "ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ" ತೆರೆಯಲಾಗುವುದು. ಟೆಂಡರ್‌ನಲ್ಲಿನ ಮುಂದಿನ ಇತರೆ ಬದಲಾವಣೆ, ಹೆಚ್ಚಿನ ಮಾಹಿತಿ ಹಾಗೂ ವಿವರಗಳನ್ನು www.eproc.karnataka.gov.in ವೆಬ್‌ಸೈಟ್‌ನಿಂದ ಪಡೆಯಲು ತಿಳಿಸಲಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
RO No. 053: DIPR/CTA/MCA/2021-22

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಶಿವಮೊಗ್ಗ
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ
No: EE/RWSS/Dvn/SMG/AE-II/JJM/E-Proc/2021-22/63
Date : 15.04.2021
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)
ಕರ್ನಾಟಕ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ, ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯ 2021–22ನೇ ಸಾಲಿನ ಜಲ ಜೀವನ್ ಮಿಷನ್ ಯೋಜನೆಯಡಿಯಲ್ಲಿ ಮುಂದುವರೆದ ಕಾಮಗಾರಿಗಳಲ್ಲಿ ಪ್ರತಿ ಮನೆ ಮನೆಗಳಿಗೆ ನಳ ಸಂಪರ್ಕದ ಮೂಲಕ ನೀರು ಸರಬರಾಜು ಮಾಡುವ ಅಂದಾಜು ಮೊತ್ತ ರೂ.10.76 ಲಕ್ಷಗಳಿಂದ ರೂ.47.46 ಲಕ್ಷಗಳವರೆಗಿನ ಸಾಗರ ತಾಲ್ಲೂಕಿನ 9 ಕಾಮಗಾರಿಗಳಿಗೆ, ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಅನ್ನು (STANDARD TENDER DOCUMENTS For E-Procurement of work KW-2 & 3)ನ ನಿಬಂಧನೆಗೊಳಪಟ್ಟಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ 2020–2025 ರವರೆಗೆ ನೋಂದಾಯಿಸಿ ಚಾಲ್ತಿಯಲ್ಲಿರುವ (3ನೇ ದರ್ಜೆ ಮತ್ತು ಮೇಲ್ಪಟ್ಟು) ಅಧಿಕೃತ ಗುತ್ತಿಗೆದಾರರಿಂದ ಏಕ ಲಕೋಟೆ ಮತ್ತು ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು Government of Karnataka e-procurement portal website https://www.eproc.karnataka.gov.in ನಲ್ಲಿ ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು.
1) ಇ–ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 23.04.2021, ಸಂಜೆ 5.30 ಗಂಟೆಯವರೆಗೆ. 2) ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ: 26.04.2021ರ ಬೆಳಿಗ್ಗೆ 11.30 ಗಂಟೆ. 3) ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ: 26.04.2021, 27.04.2021ರ ಬೆಳಿಗ್ಗೆ 11.30 ಗಂಟೆ. 4) ಕಾಲಾವಧಿ 60 ದಿನಗಳು.
ನಂತರ ಇನ್ನಿತರೆ ನಿಬಂಧನೆಗಳು, ಫಾರಂ ಫೀ & ಇ.ಎಂ.ಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್ https://www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನವರಿಂದ ಪಡೆಯಬಹುದಾಗಿದೆ.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಗ್ರಾ.ಕು.ನೀ&ನೈ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.94–04 ಝೇಂಕಾರ್/2021–22

ಮಂಗಳೂರು ಮಹಾನಗರ ಪಾಲಿಕೆ
MCC/LEACHATE/SWM/2021-22 ದಿನಾಂಕ: 17–04–2021
ಟೆಂಡರ್ ಪ್ರಕಟಣೆ
E-PROCUREMENT OF KARNATAKA
ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಯನ್ನು ನಿರ್ವಹಿಸುವ ಬಗ್ಗೆ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06–05–2021 ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಮುಖಾಂತರ https://eproc.karnataka.gov.in ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ.ಸಂ.	ಕೆಲಸದ ಹೆಸರು	ಅಂದಾಜು ಮೊತ್ತ ರೂಪಾಯಿ
1	ಮಂಗಳೂರು ಮಹಾನಗರ ಪಾಲಿಕೆಯ ವಾಮಂಜೂರು ಘನತ್ಯಾಜ್ಯ ಸಂಗ್ರಹದ ಸಂಬಂಧಿಸಿದ ಪರಿಸರವನ್ನು ಲಿಚೇಟ್ (Leachate collection) ಸಂಗ್ರಹದ ಮೂಲಕ ಪುನಃಶ್ಚೇತನಗೊಳಿಸುವ ಕಾಮಗಾರಿ. (Indent No. MCC/LEACHATE/SWM/2021-22)	48,60,000-00

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ಮಂಗಳೂರು.

ಯೋಜನಾ ಸಮನ್ವಯಾಧಿಕಾರಿಗಳ ಕಚೇರಿ
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಕೊಡಗು ಜಿಲ್ಲೆ, ಮಡಿಕೇರಿ.
ದೂರವಾಣಿ ಸಂಖ್ಯೆ : 08272–229983
ಟೆಂಡರ್ ಸಂ: ಯೋಸಅ:ಗಿಅಯೋ:ಎ5:ಸಿಆರ್:01:2021–22 ದಿನಾಂಕ: 15–04–2021.
ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮೂಲಕ)
ವಿಷಯ: 2021–22ನೇ ಸಾಲಿಗೆ ಕೊಡಗು ಜಿಲ್ಲೆಯ ಪರಿಶಿಷ್ಟ ವರ್ಗದ ಜೇನುಕುರುಬ, ಎರವ, ಸೋಲಿಗ, ಕುಡಿಯ ಹಾಗೂ ಕಾಡುಕುರುಬ ಜನಾಂಗದವರಿಗೆ ಪೌಷ್ಠಿಕಾಂಶದ ಆಹಾರಗಳನ್ನು ಅನುಷ್ಠಾನಗೊಳಿಸುವ ಸಲುವಾಗಿ ಆಹಾರ ಪದಾರ್ಥಗಳ ಪೂರೈಕೆಗಾಗಿ ಟೆಂಡರ್ ಕರೆಯುವ ಬಗ್ಗೆ.
ಉಲ್ಲೇಖ: 1. ಸರ್ಕಾರದ ಆದೇಶ ಸಂ:ಸಕಇ:207: ಪವಯೋ:2018 ದಿನಾಂಕ: 22–07–2019
2. ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ರವರ ಟಿಪ್ಪಣಿ ಅನುಮೋದನೆ ದಿನಾಂಕ: 12–04–2021.
ಕೊಡಗು ಜಿಲ್ಲೆಯ ಪರಿಶಿಷ್ಟ ವರ್ಗದ ಜೇನುಕುರುಬ, ಎರವ, ಸೋಲಿಗ, ಕುಡಿಯ ಹಾಗೂ ಕಾಡುಕುರುಬ ಜನಾಂಗದವರಿಗೆ ಪೌಷ್ಠಿಕ ಆಹಾರ ಯೋಜನೆಯನ್ನು ಅನುಷ್ಠಾನಗೊಳಿಸಲು ವಿತರಿಸಲು ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಪ್ರತಿ ಕುಟುಂಬಕ್ಕೆ ಶುದ್ಧೀಕರಿಸಿದ 8 ಕೆ.ಜಿ. ಅಕ್ಕಿ, 3 ಕೆ.ಜಿ. ತೊಗರಿಬೇಳೆ, 1 ಕೆ.ಜಿ. ಕಡಲೇಕಾಳು, 1 ಕೆ.ಜಿ. ಕಡಲೇಬೀಜ (ಶೇಂಗಾಬೀಜ) 1 ಕೆ.ಜಿ. ಅಲಸಂದೆ ಕಾಳು, 1 ಕೆ.ಜಿ. ಹುರುಳಿಕಾಳು, 1 ಕೆ.ಜಿ ಹೆಸರುಕಾಳು, 1 ಕೆ.ಜಿ. ಸಕ್ಕರೆ, 1 ಕೆ.ಜಿ. ಬೆಲ್ಲ, 30 ಮೊಟ್ಟೆ, 2 ಲೀ. ಅಡುಗೆ ಎಣ್ಣೆ, ಹಾಗೂ 1/2 ಕೆ.ಜಿ. ನಂದಿನಿ ತುಪ್ಪವನ್ನು 2021–22ನೇ ಸಾಲಿಗೆ ಸರಬರಾಜು ಮಾಡಲು ಅರ್ಹ ವ್ಯಕ್ತಿ/ ಸಂಸ್ಥೆಗಳಿಂದ 'ಇ–ಪ್ರಕ್ಯೂರ್‌ಮೆಂಟ್' (eproc.karnataka.gov.in) ಮೂಲಕ ಟೆಂಡರನ್ನು ಆಹ್ವಾನಿಸಲಾಗಿದ್ದು, ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ದಿ: 15–06–2021 ಕಡೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗಾಗಿ (eproc.karnataka.gov.in) ಹಾಗೂ ಕಚೇರಿಯನ್ನು ಸಂಪರ್ಕಿಸಲು ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಜಿಲ್ಲಾ ಪಂಚಾಯತ್ ಭವನ, ಕೊಡಗು ಜಿಲ್ಲೆ, ಮಡಿಕೇರಿ ರವರು ಕೋರಿರುತ್ತಾರೆ.
ಸಹಿ/– ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಕೊಡಗು ಜಿಲ್ಲೆ, ಮಡಿಕೇರಿ.

ಮೈಸೂರು ಮಹಾನಗರಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಒಳಚರಂಡಿ ವಿಭಾಗ, ವಾಣಿವಿಲಾಸ ಆವರಣ, ಯಾದವಗಿರಿ, ಮೈಸೂರು
ಸಂಖ್ಯೆ: ಮೈನಪಾ/ಕಾಇಂ/ಒಚವಿ/ಟಿಎನ್–1/95/2021–22 ದಿನಾಂಕ: 17–04–2021
ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2021–22ನೇ ಸಾಲಿನ ಸ್ವಚ್ಛ ಭಾರತ್ ವಿಶೇಷ ಅನುದಾನದಡಿಯಲ್ಲಿ ಹಾಗೂ ಮೈಸೂರು ಮಹಾನಗರಪಾಲಿಕೆ ಅನುದಾನದಡಿ 4 (ನಾಲ್ಕು) ಸಂಖ್ಯೆ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ KW–1 ಮತ್ತು KW–2b ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯನ್ನು ದೂರವಾಣಿ ಸಂಖ್ಯೆ: 0821–2414105 ರಿಂದ ಮಾಹಿತಿ ಪಡೆಯಬಹುದು. ನಿಗದಿಪಡಿಸಿರುವ ಇ.ಎಂ.ಡಿ.ಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಯಾವುದಾದರೂ ಒಂದು ರೀತಿಯಲ್ಲಿ ಸಲ್ಲಿಸತಕ್ಕದ್ದು.
ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಕೆಳಕಂಡಂತಿವೆ.
(1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 20–04–2021, ಬೆಳಿಗ್ಗೆ 11.00 ಗಂಟೆ ನಂತರ. (2) ಟೆಂಡರ್ ಬಗ್ಗೆ ವಿಚಾರಣೆ/ ಸ್ಪಷ್ಟೀಕರಣ ಕೋರುವ ದಿನಾಂಕ ಮತ್ತು ಸಮಯ : 27–04–2021, ಸಂಜೆ 4.00 ಗಂಟೆ. (3) ಟೆಂಡರ್ ಸಲ್ಲಿಸುವ ಕೊನೆ ದಿನಾಂಕ ಮತ್ತು ಸಮಯ : 27–04–2021, ಸಂಜೆ 4.00 ಗಂಟೆ. (4) ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ಸಮಯ : 29–04–2021, ಬೆಳಿಗ್ಗೆ 11.00 ಗಂಟೆ.
ಸಹಿ/– ಕಾರ್ಯಪಾಲಕ ಅಭಿಯಂತರು, ಒಳಚರಂಡಿ ವಿಭಾಗ, ಮೈಸೂರು ಮಹಾನಗರಪಾಲಿಕೆ, ಮೈಸೂರು

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ, ಹುಬ್ಬಳ್ಳಿ
ನಂ:ಎಚ್‌ಡಿಎಂಸಿ/ಎಸ್‌ಡಬ್ಲ್ಯೂಎಮ್/74/2021–22 ದಿನಾಂಕ : 15–04–2021
ಅಲ್ಪಾವಧಿ ಇ–ಟೆಂಡರ ಅಧಿಸೂಚನೆ (ಇ–ಪ್ರಕ್ಯೂರಮೆಂಟ್ ಮೂಲಕ ಮಾತ್ರ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತು ನಿರ್ವಹಣಾ ವಿಭಾಗಕ್ಕೆ ಅವಶ್ಯವಿರುವ ಈ ಕೆಳಕಂಡ ವಿವಿಧ ಯಂತ್ರೋಪಕರಣಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999 ಹಾಗೂ ನಿಯಮದನ್ವಯ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ ಪ್ರಕಾರ ದ್ವಿಕೋಟೆ ಪದ್ದತಿಯಿಂದ ಪ್ರತ್ಯೇಕವಾಗಿ ಇ–ಪ್ರೋಕ್ಯೂರಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಪ್ರಸ್ತಾವನೆಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಈ ಮೂಲಕ ಹೊರಡಿಸಿದೆ. ಟೆಂಡರ್ ನಿಯಮಗಳನ್ನು ಒಳಪಟ್ಟಿರುವ ಟೆಂಡರ್ ದಸ್ತಾವೇಜನ್ನು ಅಂತರ್ ಜಾಲದ ಮೂಲಕ ವೆಬ್ ಸೈಟ್ ವಿಳಾಸ http://www.eproc.karnataka.gov.in ರಲ್ಲಿ ಪಡೆಯಬಹುದು. ಸದರಿ ಟೆಂಡರ ದಾಖಲೆಗಳನ್ನು ಇ–ಪ್ರೋಕ್ಯೂರಮೆಂಟ್ ಜಾಲತಾಣದಲ್ಲಿ ದಿನಾಂಕ : 16–04–2021 ರಿಂದ ಪಡೆಯಬಹುದಾಗಿದೆ. ಯಾವುದೇ ತಿದ್ದುಪಡಿ ಹಾಗೂ ಟೆಂಡರ್ ಮುಂದೂಡಿಕೆ ಪ್ರಕಟಣೆಯನ್ನು ಇ–ಪ್ರೊಕ್ಯೂರಮೆಂಟ್‌ನಲ್ಲೇ ಪ್ರಕಟಿಸಲಾಗುವುದು.

Sl.No.	Indent No.	Details
1	DMA/2017-18/IND5778/CALL-5	Supply and Installation Of Baling Machine Unit Of 10 TPH & 5TPH Capacity At Hubli-Dharwad and Supply and Installation Of Shredder Machine Unit Of 10 TPH & 5TPH Capacity At Hubli-Dharwad

ಟೆಂಡರ ವೇಳಾ ಪಟ್ಟಿ : (1) ಸಂಭಾವ್ಯ ಬಿಡ್‌ದಾರರ ಪೂರ್ವಭಾವಿ ಸಭೆ ದಿನಾಂಕ : 22–04–2021 ರಂದು ಮು. 11.00 ಘಂಟೆಯ ನಂತರ (2) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : 29–04–2021 ರಂದು ಸಾ. 23.59.59 ಘಂಟೆಯವರೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 01–05–2021 ರಂದು ಮು: 10.30 ಘಂಟೆಯ ನಂತರ. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 03–05–2021 ರಂದು ಮು: 10.30 ಘಂಟೆಯ ಅಥವಾ ಇತರೆ ಅನುಕೂಲಕರ ದಿನಗಳಲ್ಲಿ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು(ಘವನಿ) ಹು–ಧಾ ಮಹಾನಗರ ಪಾಲಿಕೆ, ಹುಬ್ಬಳ್ಳಿ
ವಾಸಾಸಂಇ/ಧಾ/ಎಂಸಿಎ/44/2021–22

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
'ಸಾರಿಗೆ ಭವನ', ಕೇಂದ್ರ ಕಛೇರಿ, ಕೆ. ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು–560027. ದೂ: 080–22221325
ಸಂಖ್ಯೆ: ಕರಾಸಾ/ಕೇಕ/ಲೆಪ/ಸ್ಥಿತಿ ವಿವರಣೆ/224/2020–21 ದಿನಾಂಕ: 17.04.2021
ಮರು ಟೆಂಡರ್ ಪ್ರಕಟಣೆ
ರೂ.220 ಕೋಟಿ ಅವಧಿ ಸಾಲ ಮಂಜೂರು ಮಾಡಲು ಆಸಕ್ತಿ ವ್ಯಕ್ತಪಡಿಸುವಿಕೆ.
ವಿಷಯ: ಹಿಂಬಾಕಿ ಮೊಬಲಗನ್ನು ಪಾವತಿ ಮಾಡಲು ರೂ.220 ಕೋಟಿ ಸಾಲವನ್ನು ಪಡೆಯುವ ಬಗ್ಗೆ.
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಹಿಂಬಾಕಿ ಪಾವತಿ ಮಾಡುವ ಸಲುವಾಗಿ ರೂ.220 ಕೋಟಿ (ಎರಡು ನೂರ ಇಪ್ಪತ್ತು ಕೋಟಿ ರೂಪಾಯಿಗಳು ಮಾತ್ರ)ಯನ್ನು ಕೆಳಕಂಡ ನಿಬಂಧನೆ ಹಾಗೂ ಷರತ್ತುಗಳಿಗೊಳಪಟ್ಟು ಅವಧಿ ಸಾಲದ ರೂಪದಲ್ಲಿ ಪಡೆಯಲು ಉದ್ದೇಶಿಸಿರುತ್ತದೆ.
1) ಪ್ರಸ್ತಾಪಿತ ಸಾಲದ ಮೊತ್ತವನ್ನು ಒಂದೇ ಕಂತಿನಲ್ಲಿ ಪಡೆಯಲಾಗುವುದು. 2) ಸಾಲದ ಮರುಪಾವತಿಯ ಅವಧಿಯನ್ನು 7 ವರ್ಷಗಳಿಗೆ ನಿಗದಿಪಡಿಸಲಾಗುವುದು. 3) ಸಾಲ ಮರುಪಾವತಿ ಅವಧಿಯು (Moratorium Period) 6 ತಿಂಗಳ ನಂತರ ಪ್ರಾರಂಭವಾಗುವುದು. 4) ಬ್ಯಾಂಕ್/ಹಣಕಾಸು ಸಂಸ್ಥೆಗಳು ಒಂದು ತಿಂಗಳ/ಮೂರು ತಿಂಗಳ/ಅರ್ಧ ವಾರ್ಷಿಕ/ವಾರ್ಷಿಕ ಬ್ಯಾಂಕ್‌ನ MCLR/RLLR ದರಗಳ ಅನ್ವಯ ಆಕರಿಸುವ ಬಡ್ಡಿ ದರದಲ್ಲಿ ಪ್ರಸ್ತಾವನೆಗಳನ್ನು ಸಲ್ಲಿಸುವುದು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಅನುಕೂಲಕರವಾದ ಬಡ್ಡಿ ದರದಲ್ಲಿ ಸಾಲ ಪಡೆಯುವ ಹಕ್ಕನ್ನು ಹೊಂದಿರುತ್ತದೆ. 5) ಅವಧಿಯ ಮುನ್ನ ಸಾಲದ ಮರುಪಾವತಿ ಶುಲ್ಕ Upfront Fee/Processing Fee/ Inspection fee ಗಳನ್ನು ಮನ್ನಾ ಮಾಡತಕ್ಕದ್ದು. 6) ಉದ್ದೇಶಿತ ಸಾಲವನ್ನು ಅವಧಿಪೂರ್ವವಾಗಿ ತೀರುವಳಿ ಮಾಡುವುದು, ಸಾಲದ ನಿಬಂಧನೆಗಳು ಹಾಗೂ ಸಾಲದ ಅವಧಿಯನ್ನು ಬದಲಾಯಿಸುವ ಹಾಗೂ ಯಾವುದೇ ಕಾರಣ ನೀಡದೆ ಟೆಂಡರನ್ನು ರದ್ದುಗೊಳಿಸುವ ಹಕ್ಕನ್ನು ಸಂಸ್ಥೆಯು ಹೊಂದಿರುತ್ತದೆ. 7) ಎಲ್ಲಾ ಷೆಡ್ಯೂಲ್ಡ್ ವಾಣಿಜ್ಯ ಬ್ಯಾಂಕ್‌ಗಳು ಹಾಗೂ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ಅನುಮೋದಿತಗೊಂಡ ಅಧಿಕೃತ ಹಣಕಾಸು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. 8) ಪ್ರಸ್ತಾವನೆಗಳನ್ನು ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು–560027, ಇವರ ವಿಳಾಸಕ್ಕೆ "ರೂ.220 ಕೋಟಿ ಅವಧಿ ಸಾಲ ಮಂಜೂರಾತಿ ಪ್ರಸ್ತಾವನೆ" ಎಂದು ಬರೆದಿರುವ ಮುಚ್ಚಿದ ಲಕೋಟೆಗಳಲ್ಲಿ ಸಲ್ಲಿಸುವುದು. 9) ಪ್ರಸ್ತಾವನೆಯನ್ನು ದಿನಾಂಕ 26.04.2021ರ ಒಳಗಾಗಿ ಸಲ್ಲಿಸತಕ್ಕದ್ದು.
ಸಹಿ/– ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು
ವಾ.ಸಾ.ಸಂ.ಇ/ಬೆಂ.ನಗರ/174/ಆಕಾರ್/2021–22
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಳ್ಳತನ; ಜೈಲಿನಲ್ಲಿದ್ದ ನಾಲ್ವರ ಬಂಧನ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಆರ್.ಕೆ. ಹೆಗ್ಗಡೆ ನಗರದ ಮಹಮ್ಮದ್ ಹುಸೇನ್ (32), ಮೈಸೂರು ರಸ್ತೆಯ ಕಣ್‌ಮಿಣಿಕೆಯ ಅಚ್ಯುತ್‌ಕುಮಾರ್ (33), ಶಾಂಪುರ ಮುಖ್ಯರಸ್ತೆಯ ಅಕ್ಮಲ್ ಬೇಗ್ (32) ಹಾಗೂ ಜೀವನಪಾಳ್ಯ ಟ್ಯಾನರಿ ರಸ್ತೆಯ ಅಮ್ಜದ್ (30) ಬಂಧಿತರು. ಇವರಿಂದ ₹ 30 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ ನಿವಾಸಿಯೊಬ್ಬರ ಮನೆಯಲ್ಲಿ 2017ರ ಸೆಪ್ಟೆಂಬರ್ 29ರಂದು ಕಳ್ಳತನ ನಡೆದಿತ್ತು. ಮನೆ ಬಾಗಿಲು ಮೀಟಿ ತೆರೆದು ಒಳ ನುಗ್ಗಿದ್ದ ಆರೋಪಿಗಳು ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಹಾಗೂ ನಗದು ಕದ್ದುಕೊಂಡು ಪರಾರಿಯಾಗಿದ್ದರು. ಈ ಬಗ್ಗೆ ದೂರು ದಾಖಲಾಗಿತ್ತು.'

'ಪ್ರಕರಣದಲ್ಲಿ ಭಾಗಿಯಾಗಿದ್ದ ಅನುಮಾನದ ಮೇರೆಗೆ ಮಹಮ್ಮದ್ ಹುಸೇನ್‌ನನ್ನು ಏಪ್ರಿಲ್ 3ರಂದು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ಕೃತ್ಯ ಎಸಗಿರುವುದಾಗಿ ತಪ್ಪೊಪ್ಪಿಕೊಂಡಿದ್ದ ಆತ, ಉಳಿದ ಮೂವರ ಹೆಸರು ಬಾಯ್ಬಿಟ್ಟಿದ್ದ' ಎಂದು ತಿಳಿಸಿದರು.

'ಅಚ್ಯುತ್‌ಕುಮಾರ್, ಅಕ್ಮಲ್ ಬೇಗ್ ಹಾಗೂ ಅಮ್ಜದ್ ಪ್ರಕರಣವೊಂದರಲ್ಲಿ ಜೈಲು ಸೇರಿದ್ದರು. ಬಾಡಿ ವಾರೆಂಟ್‌ನಲ್ಲಿ ಅವರನ್ನು ಕಸ್ಟಡಿಗೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು. ಮೂವರ ವಿರುದ್ಧವೂ ಹಲವು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿವೆ' ಎಂದೂ ಪೊಲೀಸರು ಹೇಳಿದರು.

ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳ ಬಂಧನ

ಕಳ್ಳರ ಸುಳಿವು ಕೊಟ್ಟ 'ಸಿಗ್ನಲ್' ಕ್ಯಾಮೆರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿಚಕ್ರ ವಾಹನ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ದಾಸರಹಳ್ಳಿ ಚೊಕ್ಕಸಂದ್ರದ ಗೌಸ್ ಮುದ್ದೀನ್ (24) ಹಾಗೂ ಜಾಲಹಳ್ಳಿ ವೃತ್ತದ ರೋಷನ್ ಪಾಷಾ (23) ಬಂಧಿತರು. ಅವರಿಂದ ₹ 1.50 ಲಕ್ಷ ಮೌಲ್ಯದ 4 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಆಂಧ್ರಹಳ್ಳಿ ಮುಖ್ಯರಸ್ತೆಯಲ್ಲಿರುವ ಬಾರ್ ಆ್ಯಂಡ್ ರೆಸ್ಟೋರೆಂಟ್ ಹತ್ತಿರ ಫೆ. 1ರಂದು ನಿಲ್ಲಿಸಿದ್ದ ದ್ವಿಚಕ್ರ ವಾಹನವನ್ನು ಆರೋಪಿಗಳು ಕಳವು ಮಾಡಿದ್ದರು. ಈ ಬಗ್ಗೆ ವಾಹನ ಮಾಲೀಕ ದೂರು ನೀಡಿದ್ದರು. ತಿಂಗಳಾದರೂ ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ' ಎಂದರು.

ಸಂಚಾರ ನಿಯಮ ಉಲ್ಲಂಘಿಸಿ ಸಿಕ್ಕಿಬಿದ್ದರು: 'ಕದ್ದ ವಾಹನದಲ್ಲೇ ಆರೋಪಿಗಳು ನಗರದಲ್ಲಿ ಸುತ್ತಾಡಿದ್ದರು. ಪೀಣ್ಯ ಸಮೀಪದಲ್ಲಿ ಸಂಚಾರ ಸಿಗ್ನಲ್ ಜಂಪ್ ಮಾಡಿದ್ದರು. ಜೊತೆಗೆ, ವಾಹನದಲ್ಲಿ ಮೂವರು ಹೊರಟಿದ್ದರು. ನಿಯಮ **ಉಲ್ಲಂಘಿಸಿದ್ದ ವಾಹನದ ಸಮೇತ ಆರೋಪಿಗಳ ಫೋಟೊ, ಸಿಗ್ನಲ್‌ನಲ್ಲಿ ಅಳವಡಿಸಿದ್ದ ಕ್ಯಾಮೆರಾದಲ್ಲಿ ಸೆರೆಯಾಗಿತ್ತು'** ಎಂದು ಪೊಲೀಸರು ಹೇಳಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ದ್ವಿಚಕ್ರ ವಾಹನಗಳು

ಒಳ ಉಡುಪಿನಲ್ಲಿದ್ದ ಚಿನ್ನ ಜಪ್ತಿ

ಬೆಂಗಳೂರು: ಒಳ ಉಡುಪಿನಲ್ಲಿ ಬಚ್ಚಿಟ್ಟುಕೊಂಡು ಸಾಗಿಸುತ್ತಿದ್ದ ಚಿನ್ನವನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ದುಬೈನಿಂದ ವಿಮಾನದಲ್ಲಿ ಪ್ರಯಾಣಿಕರೊಬ್ಬರು ಬಂದಿಳಿದಿದ್ದರು. ತಪಾಸಣೆ ವೇಳೆ ಅವರ ಬಳಿ ಚಿನ್ನವಿರುವುದು ತಿಳಿಯಿತು. ಆರಂಭದಲ್ಲಿ ಚಿನ್ನ ಎಲ್ಲಿದೆ ಎಂಬುದು ಗೊತ್ತಾಗಲಿಲ್ಲ. ಒಳ ಉಡುಪು ಪರಿಶೀಲಿಸಿದಾಗ ₹ 16.86 ಲಕ್ಷ ಮೌಲ್ಯದ ಚಿನ್ನದ ಸರ ಹಾಗೂ ಐ-ಫೋನ್ ಸಿಕ್ಕಿತು' ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

'ನಿಯಮ ಉಲ್ಲಂಘಿಸಿದ್ದಕ್ಕಾಗಿ ಮಾಲೀಕರಿಗೆ ಚಲನ್ ಸಮೇತ ನೋಟಿಸ್ ಬಂದಿತ್ತು. ತಮ್ಮ ವಾಹನ ಕಳುವಾಗಿರುವುದಾಗಿ ಸ್ಪಷ್ಟನೆ ನೀಡಿದ್ದ ಮಾಲೀಕ, ಠಾಣೆಗೆ ಮಾಹಿತಿ ನೀಡಿದ್ದರು.'

'ನೋಟಿಸ್ ಸಮೇತ ಸಂಚಾರ ನಿರ್ವಹಣಾ ಕೇಂದ್ರಕ್ಕೆ ಹೋಗಿ ಆರೋಪಿಗಳು ಹಾಗೂ ವಾಹನದ ಫೋಟೊ ಪಡೆಯಲಾಯಿತು. ಸಿಗ್ನಲ್ ಬಳಿಯ ಇತರೆ ಕ್ಯಾಮೆರಾವನ್ನೂ ಪರಿಶೀಲಿಸಿ ಮಾಹಿತಿ ಕಲೆಹಾಕಲಾಯಿತು. ಅದೇ ಸುಳಿವು ಆಧರಿಸಿ ಆರೋಪಿಗಳನ್ನೂ ಬಂಧಿಸಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ಆಟೊ ಅಡ್ಡಗಟ್ಟಿ ₹ 16.60 ಲಕ್ಷ ಸುಲಿಗೆ

ಬೆಂಗಳೂರು: ಭಾರತಿನಗರ ಠಾಣೆ ವ್ಯಾಪ್ತಿಯಲ್ಲಿ ಆಟೊ ಅಡ್ಡಗಟ್ಟಿ ₹ 16.60 ಲಕ್ಷ ಸುಲಿಗೆ ಮಾಡಿದ್ದ ಪ್ರಕರಣ ಸಂಬಂಧ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

'ಡಿ.ಜೆ.ಹಳ್ಳಿಯ ಅಪ್ಸರ್ ಪಾಷಾ (34), ಶಿವಾಜಿನಗರದ ಸೈಯದ್ ತೌಸಿಫ್ (32), ಮೊಹಮ್ಮದ್ ಅಲಿ (30) ಹಾಗೂ ಕೆ.ಜಿ.ಹಳ್ಳಿಯ ಮೊಹಮ್ಮದ್ ಅಜರುಲ್ಲಾ (30) ಬಂಧಿತರು. ಅವರಿಂದ ₹ 4 ಲಕ್ಷ ನಗದು ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಮುನೀರ್, ಟ್ಯಾನರಿ ರಸ್ತೆ ಹಾಗೂ ಡಿ.ಜೆ. ಹಳ್ಳಿ ಬಳಿಯ ಬೀಫ್ ಮಾರಾಟ ಮಳಿಗೆಗಳಿಂದ ₹ 16.60 ಲಕ್ಷ ಸಂಗ್ರಹಿಸಿದ್ದರು. ಅದೇ ಹಣವನ್ನು ತಮ್ಮ ಬಳಿ ಇಟ್ಟುಕೊಂಡು ಸಹೋದರ ಲತೀಫ್ ಆಟೊದಲ್ಲಿ ರಾತ್ರಿ ಮೆಜೆಸ್ಟಿಕ್‌ಗೆ ಹೊರಟಿದ್ದರು. ಬೈಕ್‌ನಲ್ಲಿ ಹಿಂಬಾಲಿಸಿದ್ದ ಆರೋಪಿಗಳು, ಕಾಕ್‌ಬರ್ನ್ ರಸ್ತೆಯಲ್ಲಿ ಆಟೊವನ್ನು ಅಡ್ಡಗಟ್ಟಿದ್ದರು.'

'ಆಟೊ ಚಾಲಕ ಲತೀಫ್ ಮುಖಕ್ಕೆ ಪೆಪ್ಪರ್ ಸ್ಪ್ರೇ ಹೊಡೆದಿದ್ದರು. ಲಾಂಗ್ ತೋರಿಸಿ ಮುನೀರ್ ಅವರನ್ನು ಹೆದರಿಸಿದ್ದರು. ಅವರ ಬಳಿಯ ಹಣ ಸುಲಿಗೆ ಮಾಡಿಕೊಂಡು ಆರೋಪಿಗಳು ಪರಾರಿಯಾಗಿದ್ದರು. ಈ ಬಗ್ಗೆ ಮುನೀರ್ ಠಾಣೆಗೆ ದೂರು ನೀಡಿದ್ದರು' ಎಂದೂ ಪೊಲೀಸರು ತಿಳಿಸಿದರು.

ಮಳಿಗೆ ಕೆಲಸಗಾರನ ಸಂಚು: 'ಆರೋಪಿ ಅಪ್ಸರ್ ಖಾನ್, ಡಿ.ಜೆ.ಹಳ್ಳಿಯ ಮಾಂಸ ಮಾರಾಟ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಬೀಫ್ ಮಾರಾಟ ಮಳಿಗೆಗಳಿಂದ ಮುನೀರ್ ಹಣ ಸಂಗ್ರಹಿಸಿಕೊಂಡು ಹೋಗುವ ಸಂಗತಿ ಆತನಿಗೆ ಗೊತ್ತಿತ್ತು. ಅದೇ ಹಣವನ್ನು ಸುಲಿಗೆ ಮಾಡಲು ಇತರೆ ಆರೋಪಿಗಳ ಜೊತೆ ಸೇರಿ ಸಂಚು ರೂಪಿಸಿದ್ದ' ಎಂದು ಪೊಲೀಸರು ಹೇಳಿದರು.

'ಕೃತ್ಯ ನಡೆದ ಸ್ಥಳದ ಸುತ್ತಮುತ್ತಲಿನ 150ಕ್ಕೂ ಹೆಚ್ಚು ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಯಿತು. ಮೂರು ತಿಂಗಳು ನಿರಂತರವಾಗಿ ತನಿಖೆ ನಡೆಸಿ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ.'

'ಆರೋಪಿಗಳ ಬಳಿ ₹ 4 ಲಕ್ಷ ಮಾತ್ರ ಸಿಕ್ಕಿದೆ. ಉಳಿದ ಹಣವನ್ನು ಇತರೆಡೆ ಖರ್ಚು ಮಾಡಿರುವುದಾಗಿ ಹೇಳುತ್ತಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ಸುದ್ದಿ 2 ನಿಮಿಷ

ಸ್ಕಾರ್ಪಿಯೊ ಪಲ್ಟಿ: ಇಬ್ಬರು ಸ್ಥಳದಲ್ಲೇ ಸಾವು

ಕಾರವಾರ: ತಾಲ್ಲೂಕಿನ ಭೈರಾ ಗ್ರಾಮದ ರಾಜ್ಯ ಹೆದ್ದಾರಿ-34ರಲ್ಲಿ ಶನಿವಾರ ಸ್ಕಾರ್ಪಿಯೊ ಪಲ್ಟಿಯಾಗಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಆರು ಮಂದಿ ಗಾಯಗೊಂಡಿದ್ದಾರೆ.

ಮೃತರನ್ನು ಚಾಲಕ, ಬೆಂಗಳೂರಿನ ಸೈಯದ್ ಮುನೀರ್ ಸೈಯದ್ (35) ಹಾಗೂ ತಾಯವ್ವ (37) ಎಂದು ಗುರುತಿಸಲಾಗಿದೆ. ಗಾಯಗೊಂಡವರೆಲ್ಲರೂ ಬೆಂಗಳೂರಿನ ನಿವಾಸಿಗಳಾಗಿದ್ದಾರೆ.

ಅವರು ತಾಲ್ಲೂಕಿನ ಹಳಗಾದ ಪಾರ್ಶ್ವವಾಯು ಚಿಕಿತ್ಸಾ ಕೇಂದ್ರದಲ್ಲಿ ರೋಗಿಯೊಬ್ಬರಿಗೆ ಚಿಕಿತ್ಸೆ ಕೊಡಿಸಿ ಬೆಂಗಳೂರಿಗೆ ವಾಪಸ್ಸಾಗುತ್ತಿದ್ದರು.

'ಅತೀ ವೇಗದಲ್ಲಿದ್ದ ವಾಹನವನ್ನು ತಿರುವಿನಲ್ಲಿ ನಿಯಂತ್ರಿಸಲಾಗದೇ ಪಲ್ಟಿಯಾಯಿತು. ಅಪಘಾತದ ರಭಸಕ್ಕೆ ಇವರ ತಲೆಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದವು. ಅತಿಯಾದ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟರು' ಎಂದು ಪೊಲೀಸರು ತಿಳಿಸಿದ್ದಾರೆ. ಕದ್ರಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಂಪ್‌ಹೌಸ್‌ನಲ್ಲಿ ಬಚ್ಚಿಟ್ಟಿದ್ದ 117 ಕೆ.ಜಿ ಗಾಂಜಾ ಜಪ್ತಿ

ಬೆಂಗಳೂರು: ಆಂಧ್ರಪ್ರದೇಶದಿಂದ ಗಾಂಜಾ ಖರೀದಿಸಿ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡು ಕೃಷ್ಣಗಿರಿ ಜಿಲ್ಲೆಯ ರಾಧರವಿ ಅಲಿಯಾಸ್ ರವಿ (29) ಹಾಗೂ ಪಳನಿ ವೇಲು ಅಲಿಯಾಸ್ ಪಳನಿ ಬಂಧಿತರು. ಅವರಿಂದ 120 ಕೆ.ಜಿ 750 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು

'ಏಪ್ರಿಲ್ 12ರಂದು ಆರೋಪಿ ರವಿ, ಠಾಣೆ ವ್ಯಾಪ್ತಿಯ ಕಾಲೇಜೊಂದರ ಬಳಿ ಗಾಂಜಾ ಮಾರಲು ಬಂದಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಯಿತು. ಆತನ ಬಳಿ 3 ಕೆ.ಜಿ. 750 ಗ್ರಾಂ ಗಾಂಜಾ ಪತ್ತೆಯಾಯಿತು.'

'ಆಂಧ್ರಪ್ರದೇಶದಿಂದ ಗಾಂಜಾ ತಂದು ಪಳನಿ ಜೊತೆ ಸೇರಿ ನಗರದಲ್ಲಿ ಮಾರಾಟ ಮಾಡುತ್ತಿರುವುದಾಗಿ ರವಿ ಮಾಹಿತಿ ನೀಡಿದ್ದ. ಅದರನ್ವಯ ಪಳನಿಯನ್ನೂ ಬಂಧಿಸಲಾಯಿತು' ಎಂದರು.

'ಹಲವು ವರ್ಷಗಳಿಂದ ಆರೋಪಿಗಳು ಗಾಂಜಾ ಮಾರುತ್ತಿದ್ದರು. ತಮಿಳುನಾಡಿನ ನೇರಳಗಿರಿ ಗ್ರಾಮದ ಜಮೀನೊಂದರ ಪಂಪ್‌ಹೌಸ್‌ನಲ್ಲಿ ಗಾಂಜಾ ಬಚ್ಚಿಟ್ಟಿದ್ದರು. ಈ ಸಂಗತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಹೋಗಿ, ಫಾರ್ಮ್‌ಹೌಸ್‌ನಲ್ಲಿದ್ದ 117 ಕೆ.ಜಿ. ಗಾಂಜಾವನ್ನೂ ಜಪ್ತಿ ಮಾಡಲಾಗಿದೆ' ಎಂದೂ ಪೊಲೀಸರು ತಿಳಿಸಿದರು.

ನಗರದಲ್ಲಿ ಇಂದು

'ನಿಮ್ಮ ಅಡುಗೆ ಮನೆಯೇ ನಿಮ್ಮ ಔಷಧಾಲಯ' ಕುರಿತು ಮಾತುಕತೆ: ಭಾಗವಹಿಸುವವರು–ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹೋಮಿಯೋಪತಿ ವೈದ್ಯರು ಹಾಗೂ ಪ್ರಾಧ್ಯಾಪಕ ಡಾ.ಎನ್ ಮದನ್, ಆಯೋಜನೆ, ಸ್ಥಳ–ರಾಗಿಕಣ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10.30

ಕಾ.ಶ್ರೀ.ನಾಗರಾಜ ಅವರ 'ಧರ್ಮ ಸಂರಕ್ಷಕ ಶ್ರೀಕೃಷ್ಣ' ಪುಸ್ತಕ ಬಿಡುಗಡೆ: ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಉಪನ್ಯಾಸ–ತೇಜಸ್ವಿ ಸೂರ್ಯ, ಸ್ಥಳ–ರಾಷ್ಟ್ರೋತ್ಥಾನ ಯೋಗ ಮತ್ತು ಫಿಟ್ನೆಸ್ ಕೇಂದ್ರ, ಟೆಲಿಫೋನ್ ಎಕ್ಸ್‌ಚೇಂಜ್ ಹಿಂಭಾಗ, ಜಯನಗರ 4ನೇ ಬ್ಲಾಕ್, ಸಂಜೆ 5

ವಿಶ್ವೇಶ್ವರ ಹೆಗಡೆ

83ನೇ ಶ್ರೀರಾಮನವಮಿ ಅಂತರರಾಷ್ಟ್ರೀಯ ಸಂಗೀತೋತ್ಸವ: ಶ್ರೀಮದ್ ವಾಲ್ಮೀಕಿ ರಾಮಾಯಣ ಉಪನ್ಯಾಸ (ಬೆಳಿಗ್ಗೆ 8)–ವ್ಯಾಸರಾಜ ಮಠದ ವಿದ್ಯಾಶ್ರೀಶ ತೀರ್ಥರು, ಸಂಜೆ 6ಕ್ಕೆ ಗಾಯಕ ವಿಜಯ ಪ್ರಕಾಶ್ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ: ಪಿಟೀಲು–ಎಚ್.ಎನ್. ಭಾಸ್ಕರ್, ಮೃದಂಗ–ಕೆ.ಯು.ಜಯಚಂದ್ರ ರಾವ್, ಆಯೋಜನೆ:ಶ್ರೀ ರಾಮಸೇವಾ ಮಂಡಳಿ, (ಆನ್‌ಲೈನ್ ಕಾರ್ಯಕ್ರಮ-live.ramanavami.org)


ವಿಜಯ ಪ್ರಕಾಶ್

ನಿವೃತ್ತಿ ನಂತರ ಪ್ರತಿನಿತ್ಯ ಸ್ವಚ್ಛತಾ ಸೇವೆ • ಉಳ್ಳಾಳ ರಸ್ತೆಯ ಕಸ ಗುಡಿಸುವುದರಲ್ಲೇ ಸಾರ್ಥಕತೆ ಕಂಡ ಜೀವ

'ಪೊರಕೆ ಮಂಜಣ್ಣ'ನ ಪರಿಸರ ಕಾಳಜಿ

• ಜಿ.ಶಿವಕುಮಾರ

ಬೆಂಗಳೂರು: ಮುಂಜಾವಿನಲ್ಲಿ ಉಲ್ಲಾಳ ಉಪನಗರದ ವಿಶ್ವೇಶ್ವರಯ್ಯ ಬಡಾವಣೆಯ 60 ಅಡಿ ರಸ್ತೆಯಲ್ಲಿ ಹಾದು ಹೋಗುವವರಿಗೆ ಪೊರಕೆ ಹಿಡಿದು ರಸ್ತೆಯಲ್ಲಿ ಕಸ ಗುಡಿಸುವ ವ್ಯಕ್ತಿಯೊಬ್ಬರು ಕಣ್ಣಿಗೆ ಬೀಳುತ್ತಾರೆ. ಆ ಹಿರಿಯ ಜೀವದ ಹೆಸರು ಬಿ.ಎಸ್.ಮಂಜುನಾಥ್. 1.5 ಕಿ.ಮೀ. ಉದ್ದದ ಈ ರಸ್ತೆಯನ್ನು ನಿತ್ಯವೂ ಸ್ವಚ್ಛಗೊಳಿಸುವುದು ಅವರ ಕಾಯಕ. ಹೀಗಾಗಿಯೇ ಸುತ್ತಲಿನ ಜನ ಅವರನ್ನು ಪೊರಕೆ ಮಂಜಣ್ಣ ಎಂದು ಪ್ರೀತಿಯಿಂದ ಕರೆಯುತ್ತಾರೆ.

ಮಂಜುನಾಥ್ ಅವರಿಗೆ ಈಗ 62ರ ಹರೆಯ. ಈಗಲೂ ಅವರ ಮನಸ್ಸು ಪರಿಸರ ಸಂರಕ್ಷಣೆಗಾಗಿ ತುಡಿಯುತ್ತಿದೆ. ತನ್ನ ಸುತ್ತಲಿನ ಪ್ರದೇಶ ಸ್ವಚ್ಛವಾಗಿರಬೇಕು, ನೆರೆಹೊರೆಯವರು ಸೇವಿಸುವ ಗಾಳಿ ಪರಿಶುದ್ಧವಾಗಿರಬೇಕು ಎಂಬುದು ಅವರ ಕಾಳಜಿ. ಈ ಕಾರಣದಿಂದಲೇ ಬೆಳಿಗ್ಗೆ ಎದ್ದ ಕೂಡಲೇ ಪೊರಕೆ ಹಿಡಿದು ರಸ್ತೆಗೆ ಇಳಿದುಬಿಡುತ್ತಾರೆ. ರಸ್ತೆಯ ಆಸುಪಾಸಿನಲ್ಲಿ ಬಿದ್ದಿರುವ ಕಸ ಕಡ್ಡಿಗಳನ್ನು ಹೆಕ್ಕುತ್ತಾರೆ. ಉದ್ಯಾನದಲ್ಲಿ ಬೆಳೆದಿರುವ ಗಿಡ-ಗಂಟಿಗಳನ್ನು ಕಿತ್ತೆಸೆಯುತ್ತಾರೆ. ಈ ಕಾರ್ಯಕ್ಕೆ ತಗಲುವ ₹4 ಸಾವಿರ ಮೊತ್ತವನ್ನು ತಮ್ಮ ಕಿಸೆಯಿಂದಲೇ ನೀಡುತ್ತಾರೆ.

ಪ್ರಜಾವಾಣಿ ವಿಶೇಷ

ರಸ್ತೆಯಲ್ಲಿ ಕಸ ಗುಡಿಸುತ್ತಿರುವ ಮಂಜುನಾಥ್


ಬಡಾವಣೆಯ ನಿವಾಸಿಗಳೊಂದಿಗೆ ಉದ್ಯಾನ ಸ್ವಚ್ಛಗೊಳಿಸುತ್ತಿರುವುದು

> **ಮಂಜುನಾಥ್ ಅವರು ಮಾದರಿ ಕೆಲಸ ಮಾಡುತ್ತಿದ್ದಾರೆ. ಇದು ಇತರರಿಗೂ ಪ್ರೇರಣೆಯಾಗಬೇಕು. ಈ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು.**
> **–ವಿ.ಎನ್.ವೀರನಾಗಪ್ಪ,** ಸ್ಥಳೀಯರು

> **ನನ್ನ ಕೆಲಸದಿಂದ ಹಲವರು ಪ್ರೇರಣೆಗೊಂಡು ಸ್ವಚ್ಛತಾ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ. ಇದಕ್ಕೆ ಅಧಿಕಾರಿಗಳೂ ಕೈಜೋಡಿಸಿದರೆ ನಮ್ಮ ಬಡಾವಣೆಯನ್ನು ಮಾದರಿ ಬಡಾವಣೆಯನ್ನಾಗಿ ರೂಪಿಸಬಹುದು.**
> **–ಬಿ.ಎಸ್.ಮಂಜುನಾಥ್**

> **ಮಂಜುನಾಥ್ ಅವರು ಬಹಳ ಬದ್ಧತೆಯಿಂದ ಈ ಕೆಲಸ ಮಾಡುತ್ತಿದ್ದಾರೆ. ಅವರನ್ನು ನೋಡಿ ಇತರರೂ ಕಲಿಯಬೇಕು. ಬಡಾವಣೆಯ ಸ್ವಚ್ಛತೆ ನಮ್ಮೆಲ್ಲರ ಆದ್ಯತೆ. ಇದನ್ನು ಎಲ್ಲರೂ ಅರಿತುಕೊಳ್ಳಬೇಕು.**
> **–ಎಚ್.ಕೆ.ಗೌಡಯ್ಯ,** ಸ್ಥಳೀಯರು

ವಿಶ್ವೇಶ್ವರಯ್ಯ ಬಡಾವಣೆಯ ಮೂರನೇ ಹಂತದಲ್ಲಿ ವಾಸವಿರುವ ಮಂಜುನಾಥ್ ಅವರು ಬಾಪೂಜಿನಗರದಲ್ಲಿರುವ ಸಿದ್ಧಾರ್ಥ ಪ್ರೌಢಶಾಲೆಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಕೆಲಸ ಮಾಡಿದ್ದರು. ಎರಡು ವರ್ಷಗಳ ಹಿಂದೆ ನಿವೃತ್ತರಾಗಿದ್ದರು. 'ನಾನು ಬುದ್ಧ, ಬಸವ ಹಾಗೂ ವಿವೇಕಾನಂದರ ವಿಚಾರಧಾರೆಗಳನ್ನು ಓದಿಕೊಂಡು ಬೆಳೆದವನು. ವಿಶಿಷ್ಟವಾದದ್ದನ್ನೇನಾದರೂ ಮಾಡಬೇಕು, ಸಮಾಜ ಹಾಗೂ ಪ್ರಕೃತಿಗೆ ಏನಾದರೂ ಕೊಡುಗೆ ಕೊಡಬೇಕು ಎಂಬ ಆಸೆ ಎಳವೆಯಲ್ಲೇ ಚಿಗುರೊಡೆದಿತ್ತು. ನಮ್ಮ ಬಡಾವಣೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಗೆ ಬರುತ್ತದೆ. ಇಲ್ಲಿ ಸ್ವಚ್ಛತೆಗೆ ಹೆಚ್ಚು ಒತ್ತು ನೀಡುತ್ತಿರಲಿಲ್ಲ. ರಸ್ತೆಗಳಲ್ಲಿ ರಾಶಿ ರಾಶಿ ಕಸ ಬಿದ್ದಿರುತ್ತಿತ್ತು. ಅದರಿಂದ ದುರ್ನಾತ ಬರುತ್ತಿತ್ತು. ಮಳೆಗಾಲದಲ್ಲಿ ರಸ್ತೆಯಲ್ಲೇ ನೀರು ನಿಂತಿರುತ್ತಿತ್ತು. ಈ ಸಂಬಂಧ ಅಧಿಕಾರಿಗಳ ಗಮನಕ್ಕೆ ತಂದರೂ ಪ್ರಯೋಜನವಾಗಲಿಲ್ಲ. ಹೀಗಾಗಿ ನಾನೇ ಸ್ವಚ್ಛತಾ ಕಾರ್ಯಕ್ಕೆ ಇಳಿದೆ' ಎಂದು ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

'ಮೊದಲು ನಾನೊಬ್ಬನೇ ರಸ್ತೆ ಸ್ವಚ್ಛಗೊಳಿಸುತ್ತಿದ್ದೆ. ಈಗ ಅಂಗವಿಕಲರೊಬ್ಬರು ಜೊತೆಯಾಗಿದ್ದಾರೆ. ಭಾನುವಾರ ಮತ್ತೊಂದಿಷ್ಟು ಮಂದಿ ಕೈಜೋಡಿಸುತ್ತಾರೆ. ಬಿಬಿಎಂಪಿಯ ಇಬ್ಬರು ಪೌರ ಕಾರ್ಮಿಕರೂ ಇರುತ್ತಾರೆ. ಅಂದು ನಾವೆಲ್ಲರೂ ಉದ್ಯಾನ ಸ್ವಚ್ಛಗೊಳಿಸುತ್ತೇವೆ. ಪ್ರತಿ ತಿಂಗಳು ಪಿಂಚಣಿ ಬರುತ್ತದೆ. ಅದರಲ್ಲಿ ತಿಂಗಳಿಗೆ ₹4 ಸಾವಿರ ಮೊತ್ತವನ್ನು ಸ್ವಚ್ಛತಾ ಕಾರ್ಯಕ್ಕೆ ಮೀಸಲಿಡುತ್ತೇನೆ. ಮನೆಯಲ್ಲಿ ಆರಾಮವಾಗಿ ಇರುವಂತೆ ಕುಟುಂಬದವರು ಹೇಳುತ್ತಾರೆ. ಅದಕ್ಕೆ ಮನಸ್ಸು ಒಪ್ಪುವುದಿಲ್ಲ' ಎಂದರು.

'ಬಡಾವಣೆಯಲ್ಲಿರುವ ಖಾಲಿ ಜಾಗವೊಂದರಲ್ಲಿ ತರಕಾರಿ ಬೆಳೆಯುತ್ತೇನೆ. ಅದನ್ನು ನೆರೆಹೊರೆಯವರಿಗೆ ಉಚಿತವಾಗಿ ನೀಡುತ್ತೇನೆ. ಅಲ್ಲಿ ಗಿಡಗಳನ್ನೂ ನೆಟ್ಟು ಪೋಷಿಸುತ್ತಿದ್ದೇನೆ. ಕೆಲವರು ನನ್ನ ಕಾರ್ಯ ಮೆಚ್ಚಿ ಹಣಕಾಸಿನ ನೆರವು ನೀಡಿದ್ದಾರೆ. ಅದನ್ನು ಬಡಾವಣೆಯಲ್ಲಿ ಜಾಗೃತಿ ಫಲಕಗಳನ್ನು ಅಳವಡಿಸಲು ವಿನಿಯೋಗಿಸಿದ್ದೇನೆ. ಯಾವುದೇ ಪ್ರಶಸ್ತಿ ಅಥವಾ ಪುರಸ್ಕಾರದ ಆಸೆಯಿಂದ ಈ ಕೆಲಸ ಮಾಡುತ್ತಿಲ್ಲ' ಎಂದು ಹೇಳಿದರು.

ಕೋವಿಡ್ ನಿರ್ವಹಣೆ: ಪ್ರಧಾನಿ ಸಭೆ

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ 19 ಪ್ರಕರಣಗಳು 1.50 ಕೋಟಿ ದಾಟಿ, 1.75 ಲಕ್ಷಕ್ಕೂ ಹೆಚ್ಚು ಮಂದಿ ಸಾವಿಗೀಡಾಗುತ್ತಿದ್ದಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಆರೋಗ್ಯ ಹರ್ಷವರ್ಧನ್ ಅವರು ಕೋವಿಡ್ ಪ್ರಸರಣ ನಿಯಂತ್ರಣ ಹಾಗೂ ನಿರ್ವಹಣೆಗೆ ರಾಜ್ಯಗಳು ಕೈಗೊಂಡ ಕ್ರಮಗಳನ್ನು ಪರಿಶೀಲಿಸಲು ಶನಿವಾರ ಸಭೆ ನಡೆಸಿದರು.

ಕೊರೊನಾ ವೈರಸ್ ಮಣಿಸಲು ರಾಜ್ಯಗಳೊಂದಿಗೆ ನಿಕಟ ಸಮನ್ವಯ ಸಾಧಿಸಬೇಕು. ಲಸಿಕೆ ಉತ್ಪಾದನೆಯನ್ನು ಹೆಚ್ಚಿಸಲು ರಾಷ್ಟ್ರದ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳಬೇಕು ಎಂದು ಮೋದಿ ಸೂಚಿಸಿದ್ದಾರೆ.

ರೆಮ್‌ಡಿಸಿವಿರ್ ಮತ್ತು ಇನ್ನಿತರ ಔಷಧಿಗಳ ಪೂರೈಕೆಯ ಸ್ಥಿತಿಯನ್ನು ಪರಿಶೀಲಿಸಿದ ಪ್ರಧಾನಿ, ಅನುಮೋದಿತ ವೈದ್ಯಕೀಯ ಆಮ್ಲಜನಕ ಸ್ಥಾವರಗಳ ಸ್ಥಾಪನೆಗೆ ವೇಗ ನೀಡುವಂತೆ ಕರೆಕೊಟ್ಟಿದ್ದಾರೆ.

ಕೋವಿಡ್ ಪರೀಕ್ಷೆ, ಟ್ರ್ಯಾಕಿಂಗ್ ಮತ್ತು ಚಿಕಿತ್ಸೆಗೆ ಪರ್ಯಾಯ ವ್ಯವಸ್ಥೆ ಇಲ್ಲ ಎಂದು ಪುನರುಚ್ಚರಿಸಿದ ಮೋದಿ, ಕೋವಿಡ್ -19 ರೋಗಿಗಳಿಗೆ ಆಸ್ಪತ್ರೆಯಲ್ಲಿ ಹಾಸಿಗೆಗಳ ಲಭ್ಯತೆ ಹೆಚ್ಚಿಸಲು ಅಗತ್ಯವಿರುವ ಎಲ್ಲ ಕ್ರಮ ತೆಗೆದುಕೊಳ್ಳಬೇಕು. ಜನರ ಆರೋಗ್ಯದ ಕಾಳಜಿಗೆ ಸ್ಥಳೀಯ ಆಡಳಿತಗಳು ಸೂಕ್ಷ್ಮತೆಯಿಂದ ಕಾರ್ಯಪ್ರವೃತ್ತವಾಗಬೇಕು ಎಂದು ಸೂಚಿಸಿದ್ದಾರೆ.

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ರಾಜರಾಜೇಶ್ವರಿನಗರ: ವಿವಿಧ ಇಲಾಖೆಯ ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು. ಸಾರ್ವಜನಿಕರು ಹಲವು ವರ್ಷಗಳು ಬಳಕೆ ಮಾಡಿಕೊಳ್ಳುವಂತಾಗಬೇಕು ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಅಧಿಕಾರಿಗಳಿಗೆ ಮತ್ತು ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ದೊಡ್ಡಬಿದರಕಲ್ಲು ವಾರ್ಡ್‌ನ ತುಳಸಿನಗರ ಮತ್ತು ಡಿ ಗ್ರೂಪ್ ಮುಖ್ಯರಸ್ತೆಗೆ ಮತ್ತು ಸುತ್ತಮುತ್ತಲ ಅಡ್ಡರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ಬಿಬಿಎಂಪಿ ಮುಖ್ಯ ಎಂಜಿನಿಯರ್ ವಿಜಯಕುಮಾರ್, ಕಾರ್ಯಪಾಲಕ ಎಂಜಿನಿಯರ್ ಬಿ.ಸಿ.ಲೋಕೇಶ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಚಂದ್ರಶೇಖರ್, ಎಂಜಿನಿಯರ್‌ಗಳಾದ ನಾಗಭೂಷಣ್, ಸಣ್ಣಚಿತ್ತಯ್ಯ, ರಾಜ್ಯ ವಸತಿ ಮಹಾಮಂಡಲದ ನಿರ್ದೇಶಕ ವಿ.ರಘು, ಬಿಜೆಪಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ನಾಗವೇಣಿ, ಪ್ರಧಾನ ಕಾರ್ಯದರ್ಶಿ ತೇಜಸ್ವಿನಿ, ಮುಖಂಡರಾದ ಹೊಸಹಳ್ಳಿ ಸತೀಶ್, ಬಿ.ಪಿ. ಅನಂತರಾಜು ಇದ್ದರು.

ರಸ್ತೆ ಡಾಂಬರೀಕರಣ ಕಾಮಗಾರಿಗೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಚಾಲನೆ ನೀಡಿದರು.

ಮಿನಿ ವ್ಯಾನ್ ಅಪಘಾತ: ಗಾಯ

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ನಗರದ ಮುತ್ತೂರಿನ ಸಮೀಪ ಶನಿವಾರ ಸಂಜೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಮಿನಿವ್ಯಾನ್ ಅಪಘಾತಕ್ಕೆ ಒಳಗಾಗಿದೆ. ವ್ಯಾನಿನಲ್ಲಿದ್ದ ನಾಲ್ಕು ಜನ ಮಹಿಳಾ ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದು ನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಗರದ ಹೊರವಲಯದ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿನ ಬಹುತೇಕ ಕಾರ್ಖಾನೆಗಳಿಗೆ ಕಾರ್ಮಿಕರನ್ನು ಕರೆದೊಯ್ಯುವುದೇ ಖಾಸಗಿ ವಾಹನಗಳು. ಈ ಹಿಂದೆಯು ಕಾರ್ಮಿಕರನ್ನು ಕರೆದೊಯ್ಯುವಾಗ ವ್ಯಾನ್, ಖಾಸಗಿ ಬಸ್‌ಗಳ ಅಪಘಾತಗಳು ನಡೆದಿವೆ.

ಮಾವನ ಕೊಲೆಗೆ ಸುಪಾರಿ: ಸೊಸೆ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಚನ್ನಗಿರಿ ಠಾಣಾ ವ್ಯಾಪ್ತಿಯ ಶ್ರೀನಿವಾಸಪುರದಲ್ಲಿ ಆಸ್ತಿಯ ಸಲುವಾಗಿ ಸೊಸೆಯೇ ಸುಪಾರಿ ನೀಡಿ ಮಾವನ ಕೊಲೆ ಮಾಡಿಸಿದ್ದು, ಸೊಸೆ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ನಿವೃತ್ತ ಶಿಕ್ಷಕ ಚಿಕ್ಯಾನಾಯ್ಕ ಕೊಲೆಯಾದವರು. ಇವರ ಸೊಸೆ ವನಜಾಕ್ಷಿ, ಈಕೆಯ ಪ್ರಿಯಕರ ಮೇಸ್ತ್ರಿ ಹನುಮಂತ ಹಾಗೂ ನಾಗರಾಜ ಬಂಧಿತರು.

ಚಿಕ್ಕನಾಯ್ಕ ಅವರು ಪತ್ನಿ, ಮಕ್ಕಳು ಹಾಗೂ ಸೊಸೆಯೊಂದಿಗೆ ತೋಟ, ಮನೆ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ದೊಡ್ಡ ಮಗ ಮನೋಜ್‌ಗೆ ಮನೆ ಕಟ್ಟಿಸಿಕೊಟ್ಟಿದ್ದು, ಎರಡನೇ ಮಗ ಸುರೇಶ್ ನಾಯ್ಕನಿಗೆ ಮನೆ ಕಟ್ಟಿಸಿಕೊಡಬೇಕು ಎಂದು ಚಿಕ್ಯಾನಾಯ್ಕ ತೀರ್ಮಾನಿಸಿದ್ದರು. ಮನೆ ಕಟ್ಟಿಸಿದರೆ ಯಾವುದೇ ಆಸ್ತಿ ಸಿಗುವುದಿಲ್ಲ ಎಂದು ವನಜಾಕ್ಷಿ ಕೊಲೆ ಮಾಡುವ ತೀರ್ಮಾನಕ್ಕೆ ಬಂದಳು.

ಮೇಸ್ತ್ರಿ ಹನುಮಂತನ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ವನಜಾಕ್ಷಿ ಮಾವನನ್ನು ಕೊಲೆ ಮಾಡಿದರೆ ₹ 6 ಲಕ್ಷ ಕೊಡುವುದಾಗಿ ಹನುಮಂತನಿಗೆ ಸುಪಾರಿ ನೀಡಿದ್ದು, ₹ 1 ಲಕ್ಷವನ್ನು ಮುಂಗಡವಾಗಿ ನೀಡಿದ್ದಳು. ಹನುಮಂತ ತನ್ನ ಜೊತೆ ಕೆಲಸ ಮಾಡುತ್ತಿದ್ದ ನಾಗರಾಜನ ಸಹಾಯ ಪಡೆದು ಏಪ್ರಿಲ್ 4ರಂದು ಸೀರೆ ತುಣುಕಿನಿಂದ ಚಿಕ್ಯಾನಾಯ್ಕ ಅವರ ಕುತ್ತಿಗೆಗೆ ಬಿಗಿದು ಕೊಲೆ ಮಾಡಿ ಸಾಕ್ಷ್ಯ ನಾಶ ಪಡಿಸಿದ್ದರು.

ಬಟ್ಟೆಯಿಂದ ಕುತ್ತಿಗೆಗೆ ಬಿಗಿದು ಸಾಯಿಸಿರುವುದು ಮೃತರ ಶವ ಪರೀಕ್ಷೆ ವೇಳೆ ದೃಢಪಟ್ಟಿದ್ದು, ಇದರ ಬೆನ್ನತ್ತಿದ್ದ ಪೊಲೀಸರು ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದಾಗ ನಿಜ ಬಾಯ್ಬಿಟ್ಟಿದ್ದಾರೆ.

ಸಗಟು ಮಾರುಕಟ್ಟೆಗಳ ಬಂದ್ ಬೇಡ: ವರ್ತಕರ ಸಂಘ ಮನವಿ

ಬೆಂಗಳೂರು:'ಕೊರೊನಾ ನಿಯಂತ್ರಣಕ್ಕಾಗಿ ಜಾರಿ ಮಾಡಿರುವ ರಾತ್ರಿ ಕರ್ಫ್ಯೂದಿಂದ ಸಗಟು ಮಾರುಕಟ್ಟೆಗಳು ಹಾಗೂ ರೈತರಿಗೆ ಯಾವುದೇ ತೊಂದರೆಯಾಗಬಾರದು. ಸೋಂಕು ನೆಪದಲ್ಲಿ ಮಾರುಕಟ್ಟೆ ಬಂದ್ ಮಾಡುವ ನಿರ್ಧಾರಕ್ಕೆ ಬರಬಾರದು' ಎಂದು ಕಲಾಸಿಪಾಳ್ಯ ಮಾರುಕಟ್ಟೆಯ ತರಕಾರಿ ಮತ್ತು ಹಣ್ಣು ಸಗಟು ವರ್ತಕರ ಸಂಘ ಸರ್ಕಾರಕ್ಕೆ ಮನವಿ ಮಾಡಿದೆ.

ಸಂಘದ ಅಧ್ಯಕ್ಷ ಆರ್.ವಿ.ಗೋಪಿ,'ರೈತರು ಬೆಳೆದ ತರಕಾರಿಗಳಿಗೆ ಬೇರೆ ರಾಜ್ಯಗಳಲ್ಲಿ ನಿರ್ಬಂಧ ಇಲ್ಲ. ಯಾವುದೇ ಸಗಟು ಮಾರುಕಟ್ಟೆಗಳನ್ನು ಬಂದ್ ಮಾಡಿಲ್ಲ. ಕೊರೊನಾ ನಿಯಂತ್ರಣಕ್ಕಾಗಿ ಈಗಾಗಲೇ ಮಾರುಕಟ್ಟೆಯಲ್ಲಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಲಾಗುತ್ತಿದೆ. ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸುವಂತೆ ಕ್ರಮ ಕೈಗೊಂಡಿದ್ದೇವೆ' ಎಂದು ತಿಳಿಸಿದರು.

'ಈಗ ಕರ್ಫ್ಯೂ ಇರುವುದರಿಂದ ರಾತ್ರಿ 10 ಗಂಟೆಗೆ ಮಾರುಕಟ್ಟೆ ಮುಚ್ಚಿ, ಬೆಳಿಗ್ಗೆ 5ರಿಂದ ಆರಂಭಿಸಲಾಗುತ್ತಿದೆ. ತರಕಾರಿ ಅಗತ್ಯ ವಸ್ತು. ಬೆಂಗಳೂರಿಗೆ ಮಾರುಕಟ್ಟೆಯಿಂದಲೇ ತರಕಾರಿ ಪೂರೈಕೆಯಾಗುತ್ತಿದೆ. ರೈತರ ಅವಲಂಬಿತ ಮಾರುಕಟ್ಟೆಗೆ ಕೊರೊನಾ ನೆಪದಲ್ಲಿ ಯಾವುದೇ ತೊಂದರೆ ಮಾಡಬಾರದು' ಎಂದು ಮನವಿ ಮಾಡಿದ್ದಾರೆ.

ಕೋವಿಡ್ ಪ್ರಕರಣ ದಿಢೀರ್ ಹೆಚ್ಚಳ • ಯುಪಿಎಚ್‌ಸಿಗಳ ಮುಂದೆ ಸರತಿ ಸಾಲು

ಕೋವಿಡ್ ಪರೀಕ್ಷೆಗೆ ಕಾದು ಹೈರಾಣಾಗುತ್ತಿರುವ ಜನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ದಿಢೀರ್ ಹೆಚ್ಚಳ ಕಂಡ ಬಂದ ಬೆನ್ನಲ್ಲೇ, ಸ್ವತಃ ಮುಂದೆ ಬಂದು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವವರ ಸಂಖ್ಯೆಯೂ ಏರಿಕೆ ಕಂಡಿದೆ. ಬಿಬಿಎಂಪಿ ವ್ಯಾಪ್ತಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (ಯುಪಿಎಚ್‌ಸಿ) ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಜನ ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.

'ನಾನು ಬಂಗಾರಪ್ಪ ಬಡಾವಣೆಯ ಯುಪಿಎಚ್‌ಸಿಗೆ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ತೆರಳಿದ್ದೆ. ಅಲ್ಲಿ 100ಕ್ಕೂ ಅಧಿಕ ಮಂದಿ ಪರೀಕ್ಷೆ ಮಾಡಿಸಿಕೊಳ್ಳಲು ಕಾದಿದ್ದರು. ನನ್ನ ಸರದಿಗಾಗಿ ತಾಸುಗಟ್ಟಲೆ ಕಾಯಬೇಕಾದ ಸ್ಥಿತಿ ಇತ್ತು' ಎಂದು ರಾಜರಾಜೇಶ್ವರಿ ನಗರದ ನಿವಾಸಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಸೋಂಕಿನ ತೀವ್ರ ಲಕ್ಷಣ ಇರುವವರೂ ಪರೀಕ್ಷೆ ಮಾಡಿಸಿಕೊಳ್ಳಲು ಯುಪಿಎಚ್‌ಸಿಗಳಿಗೆ ಬರುತ್ತಾರೆ. ಅವರಿಗೆ ಸೋಂಕು ಬಂದಿರುವ ಸಾಧ್ಯತೆ ಜಾಸ್ತಿ ಇರುತ್ತದೆ. ಇಲ್ಲಿಗೆ ಬರುವವರು ಮಾಸ್ಕ್ ಧರಿಸಿರುತ್ತಾರೆ. ಆದರೂ, ಯುಪಿಎಚ್‌ಸಿ ಕೇಂದ್ರಗಳ ಮೂಲಕ ಸೋಂಕು ಹರಡದಂತೆ ತಡೆಯಲು ಇನ್ನಷ್ಟು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕಾದ ಅನಿವಾರ್ಯ ಇದೆ' ಎಂದು ಅವರು ಅಭಿಪ್ರಾಯಪಟ್ಟರು.

ನಗರದಲ್ಲಿ ಕೋವಿಡ್ ರೋಗಿಗಳ ಸಂಖ್ಯೆ ದಿಢೀರ್ ಹೆಚ್ಚಿದ್ದರಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಹಾಸಿಗೆಗಳ ಕೊರತೆಯೂ ಎದುರಾಗಿದೆ. ಕೋವಿಡ್ ದೃಢಪಟ್ಟು ಗಂಭೀರ ಸಮಸ್ಯೆ ಎದುರಾದರೆ ಸರ್ಕಾರದ ಮೂಲಕ ಹಂಚಿಕೆ ಆಗುವ ಹಾಸಿಗೆಗಳನ್ನು ಪಡೆಯಲು ಸುಲಭವಾಗುತ್ತದೆ ಎಂಬ ಕಾರಣಕ್ಕ ಸೋಂಕು ಲಕ್ಷಣ ಇರುವವರೆಲ್ಲ ಬಿಬಿಎಂಪಿಯ ಯುಪಿಎಚ್‌ಸಿಗಳಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಮುಂದಾಗುತ್ತಿದ್ದಾರೆ.

ಬಿಬಿಎಂಪಿ ಪ್ರತಿ ಯುಪಿಎಚ್‌ಸಿ ವ್ಯಾಪ್ತಿಯಲ್ಲಿ ಕನಿಷ್ಠ 800 ಮಂದಿಗೆ ಕೋವಿಡ್ ಪರೀಕ್ಷೆ ಮಾಡಿಸುವಂತೆ ಗುರಿ ನಿಗದಿ ಪಡಿಸಿದೆ. ಬಸ್‌ನಿಲ್ದಾಣ, ರೈಲು ನಿಲ್ದಾಣ, ಮಾರುಕಟ್ಟೆ, ಮುಂತಾದ ಜನಜಂಗುಳಿ ಇರುವ ಪ್ರದೇಶಗಳಿಗೆ ತೆರಳಿ ಜನರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲು ಪ್ರತಿಯೊಂದು ಯುಪಿಎಚ್‌ಸಿ ವ್ಯಾಪ್ತಿಯಲ್ಲಿ ನಾಲ್ಕೈದು ಸಂಚಾರ ತಂಡಗಳನ್ನು ರಚಿಸಲಾಗಿದೆ. ಪ್ರತಿ ತಂಡದಲ್ಲೂ ಮೂಗಿನ ದ್ರವದ ಮಾದರಿ ಸಂಗ್ರಹಿಸಲು ಒಬ್ಬರು ಹಾಗೂ ಮಾಹಿತಿಯನ್ನು ಸಾಫ್ಟ್‌ವೇರ್‌ನಲ್ಲಿ ಅಳವಡಿಸುವುದಕ್ಕೆ ಒಬ್ಬರು ಸಿಬ್ಬಂದಿ ಇರುತ್ತಾರೆ. ಯುಪಿಎಚ್‌ಸಿಯಲ್ಲೂ ಕೋವಿಡ್ ಪರೀಕ್ಷೆ ನಡೆಸಲಾಗುತ್ತದೆ.

'ಯುಪಿಎಚ್‌ಸಿಗಳಲ್ಲಿ ಮಧ್ಯಾಹ್ನ 2 ಗಂಟೆವರೆಗೆ ಮಾತ್ರ ಪರೀಕ್ಷೆ ನಡೆಸುತ್ತೇವೆ. ಸಂಗ್ರಹಿಸಲಾದ ಮಾದರಿಗಳನ್ನು ಪ್ರಯೋಗಾಲಯಗಳಿಗೆ ಕಳುಹಿಸಲು ಮಧ್ಯಾಹ್ನದ ನಂತರ ವ್ಯವಸ್ಥೆ ಮಾಡುತ್ತೇವೆ. ಒಂದು ವೇಳೆ ಯುಪಿಎಚ್‌ಸಿಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಪರೀಕ್ಷೆ ನಡೆಯದಿದ್ದರೆ ಅಲ್ಲಿನ ಸಿಬ್ಬಂದಿ ಸಂಚಾರ ತಂಡಗಳಿಗೆ ಮಾಹಿತಿ ರವಾನಿಸುತ್ತಾರೆ. ಈ ತಂಡಗಳು ನಿಗದಿತ ಗುರಿ ತಲುಪಲು ಅಗತ್ಯವಿರುವಷ್ಟು ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಬೇಕಾಗುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಬಯಸದ ಸಿಬ್ಬಂದಿಯೊಬ್ಬರು ಮಾಹಿತಿ ನೀಡಿದರು.

'ವಾರದ ಈ ಹಿಂದೆ ಯುಪಿಎಚ್‌ಸಿಗಳಲ್ಲಿ ಸ್ವಯಂಪ್ರೇರಿತವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವವರ ಸಂಖ್ಯೆ ಬಹಳ ಕಡಿಮೆ ಇತ್ತು. ಈಗ ಏಕಾಏಕಿ ಭಾರಿ ಪ್ರಮಾಣದಲ್ಲಿ ಜನ ಬರುತ್ತಿದ್ದಾರೆ. ಇದರ ಜೊತೆ ಕೋವಿಡ್ ಲಸಿಕೆ ಅಭಿಯಾನವನ್ನೂ ಕೈಗೊಳ್ಳಬೇಕಾಗಿದೆ. ಇಲ್ಲಿಗೆ ಎಲ್ಲ ವಯೋಮಾನದವರೂ ಬರುತ್ತಾರೆ. ಅವರಲ್ಲಿ ಕೆಲವರು ಬೇರೆ ಬೇರೆ ರೀತಿಯ ಆರೋಗ್ಯ ಸಮಸ್ಯೆಗಳನ್ನೂ ಹೊಂದಿರುತ್ತಾರೆ. ಅವರು ಕಾಯುವುದಕ್ಕೆ ವ್ಯವಸ್ಥೆ ಒದಗಿಸುವುದು ಹಾಗೂ ಯುಪಿಎಚ್‌ಸಿಗಳ ಮೂಲಕ ಸೋಂಕು ಹರಡದಂತೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದೇ ದೊಡ್ಡ ಸವಾಲಾಗಿದೆ' ಎಂದು ತಿಳಿಸಿದರು.

'ಸದ್ಯಕ್ಕೆ ಕೋವಿಡ್ ಪರೀಕ್ಷೆಗಳನ್ನು ನಡೆಸುವುದಕ್ಕೆ ಕಿಟ್‌ಗಳ ಕೊರತೆ ಇಲ್ಲ' ಎಂದೂ ಅವರು ಮಾಹಿತಿ ನೀಡಿದರು.

ಹೆಗ್ಗನಹಳ್ಳಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ಶನಿವಾರ ಕಂಡು ಬಂದ ಜನಜಂಗುಳಿ

'ಕೋವಿಡ್ ಪರೀಕ್ಷೆ– ಕಟ್ಟೆಚ್ಚರ ವಹಿಸಿ'

'ಕೋವಿಡ್ ಪರೀಕ್ಷಾ ಕೇಂದ್ರಕ್ಕೆ ಬರುವವರಲ್ಲಿ ಕೋವಿಡ್ ಸೋಂಕಿತರು ಅಥವಾ ಸೋಂಕು ಇಲ್ಲದವರೂ ಇರಬಹುದು. ಸುರಕ್ಷತಾ ಕ್ರಮಗಳಬನ್ನು ಸರಿಯಾಗಿ ಪಾಲಿಸದೇ ಹೋದರೆ, ಪರೀಕ್ಷೆ ಮಾಡಿಸಿಕೊಳ್ಳಲು ಬಂದವರು ಸೋಂಕು ತಗುಲಿಸಿಕೊಳ್ಳುವ ಅಪಾಯವೂ ಇದೆ. ಹಾಗಾಗಿ ಇಲ್ಲಿ ಕಟ್ಟೆಚ್ಚರ ವಹಿಸಬೇಕು. ಮಾಸ್ಕ್ ಧರಿಸಿ, ಕೈಗಳನ್ನು ಸ್ಯಾನಿಟೈಸರ್‌ನಿಂದ ತೊಳೆದುಕೊಂಡರಷ್ಟೇ ಸಾಲದು ಅಂತರ ಕಾಪಾಡುವಿಕೆಗೆ ಮಹತ್ವ ನೀಡಬೇಕು. ಅನಗತ್ಯವಾಗಿ ಇಲ್ಲಿನ ಯಾವುದೇ ವಸ್ತುಗಳನ್ನು ಮುಟ್ಟಬಾರದು' ಎಂದು ಬಿಬಿಎಂಪಿ ಸಿಬ್ಬಂದಿಯೊಬ್ಬರು ತಿಳಿಸಿದರು.

ಯುಪಿಎಚ್‌ಸಿಗಳಲ್ಲೂ ಸುರಕ್ಷತಾ ಕ್ರಮಗಳಿಲ್ಲ

ಕೋವಿಡ್ ಹರಡದಂತೆ ತಡೆಯಲು ಸರ್ಕಾರ ರೂಪಿಸಿರುವ ಮಾರ್ಗಸೂಚಿಗಳನ್ನು ಜನ ಪಾಲಿಸದಿರುವುದು ಕೆಲವು ಯುಪಿಎಚ್‌ಸಿಗಳ ಬಳಿ ಕಂಡುಬಂತು. ಅಂತರ ಕಾಪಾಡಿಕೊಂಡು ಸರತಿ ಸಾಲಿನಲ್ಲಿ ನಿಲ್ಲುವುದಕ್ಕೆ ವ್ಯವಸ್ಥೆ ಕಲ್ಪಿಸಿರದ ಕಾರಣ ಜನ ಒತ್ತೊತ್ತಾಗಿ ನಿಂತಿರುವುದು ಕಂಡು ಬಂತು. ಸರದಿ ಸಾಲಿನಲ್ಲಿ ನಿಂತು ಸುಸ್ತಾದವರು ವಿಶ್ರಾಂತಿ ಪಡೆಯುವುದಕ್ಕೆ ಯಾವುದೇ ಆಸನ ವ್ಯವಸ್ಥೆಗಳಿಲ್ಲ.

ವಿಂಧ್ಯಗಿರಿ, ಚಂದ್ರಗಿರಿ ಬೆಟ್ಟಕ್ಕೆ ಪ್ರವೇಶ ನಿರ್ಬಂಧ

ಪ್ರಜಾವಾಣಿ ವಾರ್ತೆ

ಶ್ರವಣಬೆಳಗೊಳ: ಇಲ್ಲಿಯ ವಿಂಧ್ಯಗಿರಿಯ ಬಾಹುಬಲಿಯ ದೊಡ್ಡಬೆಟ್ಟ ಮತ್ತು ಚಂದ್ರಗಿರಿಯ ಚಿಕ್ಕಬೆಟ್ಟಗಳಿಗೆ ಕೊರೊನಾ ವೈರಸ್ ಹರಡುವಿಕೆಯ ತಡೆಯುವ ಉದ್ದೇಶದಿಂದ ಸರ್ಕಾರದ ಸೂಚನೆಯ ಅನುಸಾರ ಪ್ರವಾಸಿಗರಿಗೆ ಮತ್ತು ಭಕ್ತರಿಗೆ ಪ್ರವೇಶವನ್ನು ಶನಿವಾರದಿಂದ (ಏ. 17ರಿಂದ) ಮೇ 15ರವರೆಗೆ ನಿರ್ಬಂಧಿಸಲಾಗಿದೆ.

ಶ್ರೀಕ್ಷೇತ್ರದಲ್ಲಿ ಏ. 25ರಂದು ನಡೆಸಬೇಕಾಗಿದ್ದ ಭಗವಾನ್ ಮಹಾವೀರ ಜಯಂತಿ ಆಚರಣೆಯನ್ನು ಹಾಗೂ ಏ.27ರಂದು ನಡೆಸಲಾಗುತ್ತಿದ್ದ ಭಗವಾನ್ ನೇಮಿನಾಥ ತೀರ್ಥಂಕರರ ಪಂಚಕಲ್ಯಾಣ ಮಹೋತ್ಸವ ಮತ್ತು ರಥೋತ್ಸವವನ್ನು ರದ್ದುಪಡಿಸಲಾಗಿದೆ ಎಂದು ಜೈನ ಮಠದ ಪೀಠಾಧಿಪತಿಗಳಾದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ತಿಳಿಸಿದ್ದಾರೆ.

ಖಾಸಗಿ, ಕೆಎಸ್‌ಆರ್‌ಟಿಸಿ ಚಾಲಕರ ಪೈಪೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಮುಷ್ಕರದ ನಡುವೆಯೂ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್‌ಗಳ ಸಂಚಾರ ಹೆಚ್ಚಳವಾಗುತ್ತಿದ್ದು, ನಿಗಮದ ಬಸ್ ಚಾಲಕರು ಮತ್ತು ಖಾಸಗಿ ಬಸ್ ಚಾಲಕರ ನಡುವೆ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು ಪೈಪೋಟಿ ಶುರುವಾಗಿದೆ.

ಮುಷ್ಕರ ಆರಂಭವಾದ ದಿನದಿಂದ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ನಿಲ್ದಾಣಗಳಲ್ಲಿ ಖಾಸಗಿ ಬಸ್‌ಗಳು ದರ್ಬಾರ್ ಆರಂಭಿಸಿವೆ. ಈಗ ಸಾರಿಗೆ ಸಂಸ್ಥೆ ಬಸ್‌ಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೂ, ನಿಲ್ದಾಣಗಳಲ್ಲಿ ಖಾಸಗಿ ಬಸ್‌ಗಳು ಕಾರ್ಯಾಚರಣೆ ಮುಂದುವರಿದಿದೆ.

ಪ್ರಯಾಣಿಕರ ಸಂಖ್ಯೆ ಕಡಿಮೆ ಇರುವ ಕಾರಣ ಜನರನ್ನು ಹತ್ತಿಸಿಕೊಳ್ಳಲು ಬಸ್‌ಗಳ ಚಾಲಕರ ನಡುವೆ ಜಗಳವೇ ಏರ್ಪಡುತ್ತಿದೆ. ಖಾಸಗಿ ಬಸ್ ಹೋಗುವ ಮಾರ್ಗದಲ್ಲೇ ಹೋಗುವ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದ ಕೂಡಲೇ ಪ್ರಯಾಣಿಕರೆಲ್ಲರೂ ಇಳಿದು ನಿಗಮದ ಬಸ್ ಹತ್ತಿಕೊಳ್ಳುತ್ತಾರೆ. ಇದು ಚಾಲಕರ ನಡುವಿನ ಜಗಳಕ್ಕೆ ಕಾರಣವಾಗುತ್ತಿದೆ.

'ಸಾರಿಗೆ ಸಂಸ್ಥೆ ಬಸ್‌ಗಳೇ ಇಲ್ಲದ ಸಂದರ್ಭದಲ್ಲಿ ನಾವು ಸೇವೆ ಒದಗಿಸಿದ್ದೇವೆ. ಸಂಸ್ಥೆಯ ಬಸ್‌ಗಳು ಬಂದ ಕೂಡಲೇ ನಮ್ಮನ್ನು ಕಡೆಗಣಿಸಲಾಗುತ್ತಿದೆ. ಪ್ರಯಾಣಿಕರನ್ನು ಹತ್ತಿಸಿಕೊಂಡಿರುವ ಖಾಸಗಿ ಬಸ್ ಹೊರಟ ಬಳಿಕವೇ ನಿಗಮದ ಬಸ್‌ಗಳನ್ನು ನಿಲ್ದಾಣಕ್ಕೆ ತರಬೇಕು ಎಂದು ಖಾಸಗಿ ಬಸ್ ಚಾಲಕರು ಮನವಿ ಮಾಡಿದರು.

ಬಿಎಂಟಿಸಿ ಬಸ್ ನಿಲ್ದಾಣದಲ್ಲೂ ಇದೇ ಸ್ಥಿತಿ ಇತ್ತು. ಬಿಎಂಟಿಸಿ ಹಾಗೂ ಖಾಸಗಿ ಬಸ್‌ಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದರೂ, ಪ್ರಯಾಣಿಕರ ಕಡಿಮೆ ಸಂಖ್ಯೆಯಲ್ಲಿ ಇದ್ದರು.

ಮೆಜೆಸ್ಟಿಕ್ ಬಿಎಂಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕಾದಿರುವ ಖಾಸಗಿ, ಬಿಎಂಟಿಸಿ ಬಸ್‌ಗಳು —ಪ್ರಜಾವಾಣಿ ಚಿತ್ರ

386 ನೌಕರರ ವಿರುದ್ಧ ಎಫ್‌ಐಆರ್

ಬಸ್‌ಗಳ ಕಾರ್ಯಾಚರಣೆಗೆ ಅಡ್ಡಿಪಡಿಸಿದ ಕಾರಣಕ್ಕೆ ನಾಲ್ಕೂ ನಿಗಮಗಳ ವ್ಯಾಪ್ತಿಯ ಒಟ್ಟು 368 ನೌಕರರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

97 ಬಸ್‌ಗಳಿಗೆ ಹಾನಿಯಾಗಿದ್ದು, ಈ ಸಂಬಂಧ 85 ಜನರನ್ನು ಬಂಧಿಸಲಾಗಿದೆ. ಎಸ್ಮಾ ಕಾಯ್ದೆಯಡಿಯೂ 180 ಜನರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಈ ಪೈಕಿ 50 ಜನರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ವಿವರಿಸಿದೆ.

ಯೋಧನ ನೆರವು: ಮನೆಗೆ ಮರಳಿದ ವೃದ್ಧೆ

ಬಾಗಲಕೋಟೆ: ತಿರುಪತಿಯಿಂದ ಆಕಸ್ಮಿಕವಾಗಿ ರೈಲು ಹತ್ತಿ ದೆಹಲಿ ತಲುಪಿ, ಕಂಗಾಲಾಗಿದ್ದ ಹುನಗುಂದ ತಾಲ್ಲೂಕಿನ ದಾಸಬಾಳ ಗ್ರಾಮದ ವೃದ್ಧೆ ಶಿವಮ್ಮ ಶೇಖರಗೌಡ ಪಾಟೀಲ (70) ಅವರನ್ನು ಗದುಗಿನ ಯೋಧ ಮುದುಕಯ್ಯ ಹಿರೇಮಠ ಅವರು ಶನಿವಾರ ನಸುಕಿನಲ್ಲಿ ಸುರಕ್ಷಿತವಾಗಿ ಮನೆಗೆ ಕರೆತಂದು ಬಿಟ್ಟಿದ್ದಾರೆ.

ಯುಗಾದಿ ಪಾಡ್ಯಕ್ಕೆಂದು ದಾಸಬಾಳ ಗ್ರಾಮದ ಶಿವಮ್ಮ ಸೇರಿದಂತೆ ಊರಿನ 36 ಮಂದಿ ಮೂರು ಕ್ರೂಸರ್ ವಾಹನಗಳಲ್ಲಿ ಏಪ್ರಿಲ್ 11ರಂದು ತಿರುಪತಿಗೆ ತೆರಳಿದ್ದರು. ಜನಜಂಗುಳಿಯ ನಡುವೆ ಸಿಲುಕಿ ಗುಂಪಿನಿಂದ ಬೇರೆಯಾಗಿದ್ದ ಶಿವಮ್ಮ, ತಿರುಪತಿ ರೈಲು ನಿಲ್ದಾಣಕ್ಕೆ ಬಂದಿದ್ದರು. ಪ್ರತಿ ಭಾನುವಾರ ತಿರುಪತಿ–ದೆಹಲಿ ನಡುವೆ ಸಂಚರಿಸುವ ವೀಕ್ಲಿ ಎಕ್ಸ್‌ಪ್ರೆಸ್ ರೈಲು ಹತ್ತಿ, ಏಪ್ರಿಲ್ 14ರಂದು ರಾತ್ರಿ ದೆಹಲಿಯ ನಿಜಾಮುದ್ದೀನ್ ರೈಲು ನಿಲ್ದಾಣ ತಲುಪಿದ್ದರು.

'ರಜೆ ನಿಮಿತ್ತ ಊರಿಗೆ ಹೊರಟು ನಿಂತಿದ್ದ ಗದುಗಿನ ನಿವಾಸಿ ಭಾರತೀಯ ಸೇನೆಯ ಯೋಧ ಮುದುಕಯ್ಯ ರೈಲು ನಿಲ್ದಾಣದಲ್ಲಿ ನಮ್ಮ ಅಜ್ಜಿಯನ್ನು ನೋಡಿ, ಆಕೆ ಉಟ್ಟಿದ್ದ ಇಳಕಲ್ ಸೀರೆಯಿಂದ ನಮ್ಮ ಭಾಗದವರೇ ಇರಬೇಕು ಎಂದು ಮಾತನಾಡಿಸಿದ್ದಾರೆ. ಕನ್ನಡದಲ್ಲಿ ಮಾತಾಡಿಸುತ್ತಿದ್ದಂತೆಯೇ ಅಜ್ಜಿ ಊರಿನ ವಿವರ ನೀಡಿದರು. ಆಗ ರೈಲ್ವೆ ಪೊಲೀಸರ ನೆರವಿನಿಂದ ನಮ್ಮೂರಿನ ವಿಳಾಸ, ಕುಟುಂಬದ ಮೊಬೈಲ್ ಸಂಖ್ಯೆ ಪಡೆದ ಮುದುಕಯ್ಯ ನಮ್ಮನ್ನು ಸಂಪರ್ಕಿಸಿದರು. ಅಜ್ಜಿಯನ್ನು ಊರಿಗೆ ಕರೆತಂದು ಬಿಟ್ಟರು' ಎಂದು ಶಿವಮ್ಮ ಅವರ ಮೊಮ್ಮಗ ಶರಣಗೌಡ ಪಾಟೀಲ 'ಪ್ರಜಾವಾಣಿ' ಗೆ ತಿಳಿಸಿದರು.

ಮಜ್ಜಿಗೆ ವ್ಯಾಪಾರ ನಗರದ ಮೈಸೂರು ರಸ್ತೆಯ ಸ್ಯಾಟಲೈಟ್ ಬಸ್ ನಿಲ್ದಾಣದಲ್ಲಿ ವ್ಯಕ್ತಿಯೊಬ್ಬರು ಮಜ್ಜಿಗೆ ಮಾರುತಿದ್ದ ದೃಶ್ಯ ಶನಿವಾರ ಕಂಡುಬಂತು ಪ್ರಜಾವಾಣಿ ಚಿತ್ರ: ರಂಜು ಪಿ

ಮೃಗಾಲಯದ ಪ್ರಾಣಿಗಳಿಗೆ ದನದ ಮಾಂಸ

ಕಾನೂನು ಸಡಿಲಿಸಲು ಕೋರಿದ ಮೃಗಾಲಯ ಪ್ರಾಧಿಕಾರ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ರಾಜ್ಯದ ಎಲ್ಲ ಮೃಗಾಲಯಗಳಲ್ಲಿ ಪ್ರಾಣಿಗಳಿಗೆ ಹಿಂದಿನಂತೆ ದನದ ಮಾಂಸ ಪೂರೈಸಲು ಚಿಂತನೆ ನಡೆದಿದೆ. ಇದಕ್ಕೆ ಪೂರಕವಾಗಿ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣೆ ಕಾಯ್ದೆ ಸಡಿಲಗೊಳಿಸಿ, ವಿನಾಯಿತಿ ನೀಡುವಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ' ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಶನಿವಾರ ತಿಳಿಸಿದರು.

ಎಲ್.ಆರ್. ಮಹದೇವಸ್ವಾಮಿ

ತಾಲ್ಲೂಕಿನ ಕಮಲಾಪುರ ಸಮೀಪದ ಅಟಲ್ ಬಿಹಾರಿ ವಾಜಪೇಯಿ ಜೈವಿಕ ಉದ್ಯಾನಕ್ಕೆ ಭೇಟಿ ನೀಡಿದ್ದ ಅವರು, 'ಇಷ್ಟರಲ್ಲೇ ಮೃಗಾಲಯ ಪ್ರಾಧಿಕಾರದ ಸಭೆ ನಡೆಯಲಿದೆ. ಆ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಿ ಮತ್ತೆ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು' ಎಂದು ತಿಳಿಸಿದರು.

'ಕೆಲವು ಕಡೆ ಪ್ರಾಣಿಗಳು ಕೋಳಿಮಾಂಸಕ್ಕೆ ಹೊಂದಿಕೊಂಡಿವೆ. ಕೆಲವೆಡೆ ಹೊಂದಿಕೊಳ್ಳುತ್ತಿವೆ. ಆದರೆ, ದನದ ಮಾಂಸವೇ ಅವುಗಳಿಗೆ ಅಚ್ಚುಮೆಚ್ಚು. 13 ವರ್ಷ ಮೀರಿದ ಹಸುಗಳನ್ನು ಮೃಗಾಲಯಗಳಿಗೆ ಕೊಡಬಹುದು. ಟೆಂಡರ್ ಕರೆದು, ದನದ ಮಾಂಸ ಪೂರೈಕೆಗೆ ವ್ಯವಸ್ಥೆ ಮಾಡಬಹುದು' ಎಂದು ಹೇಳಿದರು.

'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಯೋಜನೆಯಡಿ ರಾಜ್ಯದ ಎಲ್ಲ ಮೃಗಾಲಯಗಳ ನಿರ್ವಹಣೆಗೆ ಶೇ 0.5ರಷ್ಟು ಹಣ ಮೀಸಲಿಡುವಂತೆ ಕೋರಿ ಬೃಹತ್ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ಅವರಿಗೆ ಪತ್ರ ಬರೆದಿದ್ದೇವೆ. ಸದ್ಯದಲ್ಲಿಯೇ ಇದರ ಬಗ್ಗೆ ತೀರ್ಮಾನ ಹೊರಬೀಳಬಹುದು' ಎಂದು ತಿಳಿಸಿದರು.

ಬೇಗ್ ಆಸ್ತಿ ಮುಟ್ಟುಗೋಲಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಎಂಎ ಹಗರಣದಲ್ಲಿ ಮಾಜಿ ಶಾಸಕ ಆರ್.ರೋಷನ್ ಬೇಗ್ ಆಸ್ತಿ ಮುಟ್ಟುಗೋಲು ವಿಷಯದಲ್ಲಿ ಸರ್ಕಾರ ತನ್ನ ನಿರ್ಧಾರ ಮರುಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು' ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ರೋಷನ್ ಬೇಗ್

ಐಎಂಎ ಹಗರಣಗಳ ಕುರಿತು ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

'ರೋಷನ್ ಬೇಗ್ ವಿರುದ್ಧ ಸಿಬಿಐ ನಡೆಸುತ್ತಿರುಗ ತನಿಖೆ ಮುಗಿದಿಲ್ಲ. ಈ ಹಂತದಲ್ಲಿ ಅವರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳಲು ಸಾಧ್ಯವಿಲ್ಲ' ಎಂಬ ಸರ್ಕಾರದ ಹೇಳಿಕೆಗೆ ಪೀಠ ಅಸಮಾಧಾನ ವ್ಯಕ್ತಪಡಿಸಿತು. 'ಈ ಪ್ರಕರಣದಲ್ಲಿ ಸರ್ಕಾರ ತನ್ನ ಅಧಿಕಾರ ಬಳಸುತ್ತಿಲ್ಲ. ರೋಷನ್ ಬೇಗ್ ಮತ್ತು ಐಎಂಎ ನಡುವಿನ ವ್ಯವಹಾರ ಕುರಿತು ಸಿಬಿಐ ತನಿಖೆ ನಡೆಸುತ್ತಿದೆ. ಆಸ್ತಿ ಮುಟ್ಟುಗೋಲಿಗೆ ಸಿಬಿಐ ವರದಿಗಾಗಿ ಕಾಯುವ ಅಗತ್ಯವಿಲ್ಲ' ಎಂದು ಪೀಠ ಹೇಳಿತು.

ಚುನಾವಣಾ ಕರ್ತವ್ಯಕ್ಕೆ ಗೈರು: 29 ಶಿಕ್ಷಕರ ವಿರುದ್ಧ ಪ್ರಕರಣ

ಮಸ್ಕಿ (ರಾಯಚೂರು): ಮಸ್ಕಿ ವಿಧಾನಸಭೆ ಕ್ಷೇತ್ರದ ಉಪಚುನಾವಣೆಯ ಕರ್ತವ್ಯಕ್ಕೆ ಗೈರು ಹಾಜರಾದ 29 ಜನ ಶಿಕ್ಷಕರ ವಿರುದ್ಧ ಮಸ್ಕಿ ಪೊಲೀಸ್ ಠಾಣೆಯಲ್ಲಿ ತಹಶೀಲ್ದಾರರು ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿಕ್ಷಣ ಸಚಿವ ಸುರೇಶ್‌ಕುಮಾರ್ ಸಲಹೆ

'ಜಿಲ್ಲಾಧಿಕಾರಿಗಳು ವಿದ್ಯಾರ್ಥಿಗಳಿಗೆ ಪತ್ರ ಬರೆಯಿರಿ'

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಜಿಲ್ಲಾಧಿಕಾರಿಗಳು ಜಿಲ್ಲೆಯ ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಪತ್ರ ಬರೆದು ಆತ್ಮಸ್ಥೈರ್ಯ ತುಂಬುವ ಶ್ರೇಷ್ಠ ಕಾರ್ಯ ಮಾಡಬೇಕು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಶನಿವಾರ ಸಲಹೆ ನೀಡಿದರು.

ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆ ಸಿದ್ಧತೆ ಕುರಿತು ನಗರದಲ್ಲಿ ಏರ್ಪಡಿಸಿದ್ದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ ಜಿಲ್ಲೆಗಳ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಚಿಕ್ಕಮಗಳೂರು ಜಿಲ್ಲಾಧಿಕಾರಿ ಈ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು. ತುಮಕೂರು ಜಿಲ್ಲೆಯ ಕೊರಟಗೆರೆಯ ಕ್ಷೇತ್ರ ಶಿಕ್ಷಣಾಧಿಕಾರಿ ತಾಲ್ಲೂಕಿನ ಎಲ್ಲ ವಿದ್ಯಾರ್ಥಿಗಳಿಗೆ ಪತ್ರ ಬರೆದಿದ್ದಾರೆ. ಆತ್ಮಸ್ಥೈರ್ಯ ತುಂಬುವ ಹಾಗೂ ಆಹಾರ ಸೇವನೆ, ಅಭ್ಯಾಸ ಕ್ರಮ, ನಿದ್ರೆ, ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಪತ್ರದಲ್ಲಿ ಸಲಹೆಗಳನ್ನು ನೀಡಿದ್ದಾರೆ. ಎಲ್ಲ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇದನ್ನು ಅನುಸರಿಸುವುದು ಒಳಿತು' ಎಂದರು.

'ಒಬ್ಬ ವಿದ್ಯಾರ್ಥಿಯೂ ಪರೀಕ್ಷೆಯಿಂದ ವಂಚಿತವಾಗಬಾರದು ಎಂಬುದು ನಮ್ಮ ಉದ್ದೇಶ. ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆ ಮಾಡುವುದು ಸರ್ಕಾರಕ್ಕೆ ಪ್ರತಿಷ್ಠೆಯಲ್ಲ. ಅದು ಕರ್ತವ್ಯದ ಭಾಗ. 1ರಿಂದ 9ನೇ ತರಗತಿ ವಿದ್ಯಾರ್ಥಿಗಳಿಗೆ ಪರೀಕ್ಷೆ ಮಾಡಬೇಕೇ, ಬೇಡವೇ ಎಂದು ಎರಡು ದಿನಗಳಲ್ಲಿ ನಿರ್ಧಾರ ಪ್ರಕಟಿಸಲಾಗುವುದು' ಎಂದು ಅವರು ಹೇಳಿದರು.

ಎಸ್ಸೆಸ್ಸೆಲ್ಸಿ ಪರೀಕ್ಷೆ ತಯಾರಿ ಮಾರ್ಗದರ್ಶಿ ಪುಸ್ತಕಗಳನ್ನು ಚಿಕ್ಕಮಗಳೂರಿನಲ್ಲಿ ಸಚಿವ ಸುರೇಶ್‌ಕುಮಾರ್ ಬಿಡುಗಡೆ ಮಾಡಿದರು

'ಪ್ರಜಾವಾಣಿ' ಸಂಪಾದಕೀಯ ಪ್ರಸ್ತಾಪ

'ರಾಜ್ಯದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ತೋರಿದ ಶಿಸ್ತು ರಾಜ್ಯದ ಎಲ್ಲ ಹಿರಿಯರಿಗೆ ಮಾದರಿ' ಎಂದು ಕಳೆದ ಬಾರಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬಳಿಕ 'ಪ್ರಜಾವಾಣಿ' ಸಂಪಾದಕೀಯದಲ್ಲಿ ಬರೆದಿದ್ದರು ಎಂದು ಸಭೆಯಲ್ಲಿ ಸಚಿವ ಸುರೇಶ್‌ಕುಮಾರ್ ಪ್ರಸ್ತಾಪಿಸಿದರು.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

SIDDAGANGA SREE SHIVAKUMARA SWAMIJI VIDYA-PEETHA TRUST, #1, 1st Stage, 2nd Phase, Chandra Layout, Bengaluru-560072. Phone: 080-23397600 E-Mail:sskvptrust.2001@gmail.com............ INVITES APPLICATION for I.SSK PU COLLEGE: 1.PRINCIPAL-1st Class in M.Sc /M.Com,B.Ed/ M.Ed.(Ph.D preferred) with 15-20 Years exp. 2.Lecturer in Biology-M.Sc, B.Ed/M.Ed, 3.Lecturer in Business Studies & Accountancy-M.Com,B.Ed/M.Ed, 4.Lecturer in Hindi-MA, B.Ed/M.Ed, 5.Physical Instructor-B.P.Ed/M.P.Ed, 6.Librarian-B.Lib/ M.Lib Science. II.SIDDAGANGA PUBLIC SCHOOl, Vijayanagara, HEAD MISTRESS-Master Degree with B.Ed/M.Ed with 10 Years Exp. as Head Mistress/Assistant Head Mistress. III.SIDDAGANGA PUBLIC SCHOOL, Chandra Layout/Vijayanagara. 1.Nursery Teacher-Any Degree with NTT/ MTT Trained, 2.Mathematics Teacher- M.Sc,B.Ed, 3.Science Teacher-M.Sc,B.Ed, 4.Social-Science Teacher-M.A,B.Ed, 5.English-Teacher-M.A,B.Ed, 6.EVS Teacher-B.Sc,B.Ed, 7.Hindi-Teacher-M.A, B.Ed, 8.Computer Teacher/ ICT Co-ordinator-BCA/MCA/BE, 9.Drawing Teacher-BFA/MFA, 10.Kannada Teacher-B.A/M.A,B.Ed, 11.Maintenance Asst-Any degree with exp.to look after Vehicles, Computers, Electrical gadgets etc. WALK-IN-INTERVIEW through offline/online date will be intimated. Interested Candidates may send their resume, Service & Salary certificates and Testimonials to the ... E-mail:sskvptrust.2001@gmail.com/ personally submit the above details to Trust office on or before 26th April 2021 between 9.00 am to 4.00 pm.

SREE BALAJI VIDYA NIKETHAN(R). Sree Balaji PU College (Aided by the Govt.of Karnataka) 1st Cross, Hanumanthnagar, Bengaluru-19. (Lecturer for Govt.Aided Post) Post: PHYSICAL EDUCATION LECTURER Qualification: M.P.Ed(55% above are eligible) Apply within 21days from the date of publication along with Resume, Passport Size Photo, ID-Proof, Qualification Certificate and Caste Certificate & DD Rs.1000/- in favor of "VICE PRESIDENT SREE BALAJI VIDYA NIKETHAN". Mobile:9986693856 (Principal). Email: as120balaljipucollege@gmail.com Sd/- S.M. Balakrishna Vice President.

SRI K.K EDUCATION CENTRE KADABAGERE, BANGALORE
APPLICATIONS REQUIRED FOR THE POST OF FACULTIES 2021-22
TEACHING STAFF
1. KINDERGARTEN – NTT training with good communication skills
2. PRIMARY TEACHERS * Requirement- English, Hindi, Kannada, Mathematics * Qualifications - Graduate with B.Ed, D.Ed
3. HIGHER PRIMARY AND SECONDARY * Requirement - Science, English & Social * Qualification -Graduate with B.Ed / M.Ed
4. INFORMATION TECHNOLOGY/ COMPUTER - B.Sc., / M.Sc., (comp)/ B C A / MCA
5. PHYSICAL EDUCATION INSTRUCTORS
NON-TEACHING STAFF
6. OFFICE ASSISTANT & RECEPTIONIST * Having excellent communication skills, Be comfortable with the use of technology
Contact no: 7406666583 E-Mail: srikkec@gmail.com

BADARIKASHRAMA VIDYASHALA
A Spacious and modern Equipped CBSE School in the rural area of Madihalli, Turuvekere Tq, Tumkur Dist.
Required Faculties for Nursery to High school:
Qualification: NTT, BA/B.Ed (Eng/ SS), BSc/ B.Ed (Maths, Phy/ Chem-Bio) with Post-graduation. Counsellor (Post-graduation in Psychology) PET (BPEd) Spoken English is required.
Please send resume by 24th April 2021.
Food and accommodation is available at the request of candidate
E-mail: badarik1986@gmail.com Ph.No: 9880194991 / 9741246418

CEO

ELCITA
ELECTRONICS CITY INDUSTRIAL TOWNSHIP AUTHORITY
No. 7 (P), West Phase, Electronics City, Bangalore : 560 100
Website : www.elcita.in Phone : 080-4660 2222
Position : Chief Executive Officer (ELCITA)
ELCITA invites applications from suitable candidates for the position of Chief Executive Officer (ELCITA). Candidate should be Bachelors of Engineering or Master of Business Administration. Should have minimum of 10 years' experience in Managerial and Technical capacity of handling Solid Waste Management/ Liquid Waste Management/ Water Supply Management in Urban Local Bodies in India / SEZ /Industrial Towns/ Facilities run by Industrial Boards anywhere in India/Facilities run by Para Status /State or Union Government in Urban Water Supply and Sewage Board.
Age Limit : 40 to 55 years
Knowledge of Kannada is essential.
For detailed JD refer to: www.elcita.in
Last date for receipt of applications with connected documents is extended up to 5PM on 05-05-2021
e-mail id : elcita_hr@elcita.in

Marketing & Sales

SALES EXECUTIVES for field work around J P Nagar/2 wheeler must/ Salary 12K/ allowance. Call-8088839805

WANTED STORES Incharge. Accounts knowledge with 3 yrs experience. Age No Bar. Everest Agencies, L3, 7th Cross, 26th Main, LIC Housing Colony, JP Nagar, 1-Phase, Bengaluru, Karnataka Ph: 9900054176, 9980096521 Mail: admin@evereststabilizer.com

Engg/ Production Technical

WANTED: WORLD Largest & Most Successful EMS-MNC Company, Whitefield Road, Bangalore. *******FRESHER'S****** ITI or DIPLOMA Electrician, Fitter, Electronics, Electro Mach, 10th,PUC, Degree Attractive Salary, Food, Incentive ESI,PF, Available. Contact: 9901351208 8497801868 9986246788. resume@shabari.co.in

WANTED
REPUTED MANUFACTURERS OF SHEET METAL PRESSED COMPONENTS NEAR TIN FACTORY
REQUIRE SMART AND DYNAMIC
1. GENERAL MANAGER - PRODUCTION SHOULD TAKE INDEPENDENT CHARGE OF PLANNING AND CONTROL
2. TOOL ROOM MANAGER EXPERIENCE IN TOOL DESIGNING AND MANUFACTURING
3. MANAGER - FINANCE GRADUATE WITH TALLY KNOWLEDGE
4. PRODUCTION AND QUALITY SUPERVISORS DME / B.E.
5. STORES INCHARGE
Minimum Experience
1 , 2 & 3 - 8 to 10 Years | 4 & 5 - 6 Years
ATTRACTIVE SALARY OFFERED
Contact: 080 - 28510188
Send your resumes to: ahp@ahppl.com

General

REQUIRED OFFICE Assistant (MALE) Qualification: 12th PassAge: 30-45 years Timings: 8.30am to 7.00pm Basic English & Computer Knowledge required Contact: 9535910010

Accounts & Finance

WANTED GRADUATES 0-5 years experience for outsourced activity in Malleshwaram. Age below 30. Contact: 9900263509

WANTED ACCOUNT ASST. (Male) Tally & GST work, Salary: Negotiable. Email: starsilks@gmail.com

Hotel

REQUIRE FOR Bar & Restaurant Experienced MANAGER, CAPTAIN, CASHIER, ANDHRA STYLE COOK'S, Contact- SIMHA-8867255121.

Wanted

Full Time Home Tutor Wanted
My kids Need a Tutor
Looking for someone to help them advance with good English Grammer
Qualifications: Excellent communication skills, International Language, Expertise in variety of disciplines, Passion for helping others learn & succeed
Location: Nagarbhavi 2nd Stage, Bangalore
Student grade level: UKG and 5th Std
Call: 9900100244

BUSINESS

Business to Business

Business

ESPN GLOBAL, BlackChain Technology invites Retired Bankers & doctors engineers Insurance Advisors, Real Estate consultant. Venue Today Brigade_Road, Nagarjuna_Hotel opposite. Please_contact: 9994065600/ 8610262880

Finance

WE ARRANGE Mortgage, House Purchase, Construction, Site Purchase and Mortgage Loans from Banks. Contact: 9353705002

INVESTORS REQUIRED for Construction of Trade Center of 200000 Square Feet Area. Good Returns Assured. Please contact Promoter 7676770503

FINANCE AVAILABLE Low-Interest Long Duration for Big Projects 100Crore &Above Only:-9538337168 scotinthk@gmail.com

Business Offers

Franchise

ATTENTION : Chartered Accountants, Company Secretary, Professionals,Here Is An Opportunity To Earn Additional 1.00 Lacs Per Month, If You Have YourOwn Space 2000 To 5000 Square Feet In Prime Business Location In Bengaluru, WeOffer Your Association With Us Without Disturbing Your Present Activity. EmailTo : corprentals123@gmail.com For More Details.

Machinery & Tools

ONLINE TENDER for Six Months rate contract: Alloy Steel Magnetic, Non Magnetic Boring,Valves, Non Magnetic, etc., at Rane Engine Valves Ltd., Plot No 36B & 37 , Hirehalli Industrial Area, Tumkur - 572 168. Viewing: 19/04/2021 from 10 a.m. to 4 p.m .Online tender start time: 10 a.m. on 20/04/2021 & end time: 5 p.m. on 20/04/2021.- MURRAY & CO, Chennai -4. Ph: 24995208/ 24995219. Website: www.murrays.in [2]

EDUCATIONAL

Correspondence Courses

METRO EDUCATIONAL SERVICES, JOIN NIOS, SSLC, PUC, Exam Sessions March/ September, Anytime Online Exams also Available, 9341273990.

MATRIMONIAL

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸುಮ ಗೋಪಾಲಕೃಷ್ಣ ದೂರವಾಣಿ: 9886908152

SOCIAL SERVICES

Old Age Home

SUKHSHANTHI LUXURY Retirement Home. Furnished Accommodation with 3 meals, 24x7 Nurse, Ambulance, Library. Rent Rs. 18,890/- pm. Near Sarjapur, Bangalore. Call: 88847-10009/ 080 26629422

Rehabilitation Centre

ANAYA RESIDENTIAL Rehabilitation Centre for Mentally Challenged Girls Contact: 7975180824 / 98941 11590

AUTOMOTIVE

Four Wheelers Selling

Multiple

Canara Bank
Maintenance Cell, GA Wing, Head Office, Bengaluru - 560002
CARS FOR SALE
12 Bank used Cars are available for sale on "As is where is" basis. For further details and other terms and conditions, please visit https://canarabank.com/tenders.aspx. For any clarifications contact 080-22239079 / 22533864 Mob No.7760770011/ 9901950933. Last date for submission of application is 30.04.2021, 5PM -Divisional Manager

PUBLIC NOTICE

PUBLIC NOTICE
This is to inform the General Public that I, **Subhashini Srinivas** W/o Babu Jayaram, aged about 40 years, R/at No.715, 19th Cross, 22nd Main, HSR Layout, 2nd Sector, Bangalore - 560 102, Mobile No:9986159371, is the absolute owner of the house property bearing No.715, 19th Cross, 22nd Main, HSR Layout, 2nd Sector, Bangalore - 560 102, Khatha No.2933/715, Ward No.174, measuring East to West 12.19 meters and North to South 18.29 meters, totally measuring 222.95 Square meters. I had lost/misplaced the original Sale Deed bearing Document No.13548/2002-03, dated 07.01.2003, registered on 22.01.2003 executed by Deputy Secretary, Bangalore Development Authoirty in favour of Smt. Sharadamma W/o Late P. Rangappa Reddy, in respect of above said property. In this regard already I have lodged a police complaint before the HSR Layout Police Station on 12.04.2021. The finder of the said documents may kindly deliver the same to me and the finder will be suitably rewarded through me. In the event if the documents are misused by the finder, the finder will not get any title or interest over the property whatsoever and whoever transacts with such kind of people will not be getting any title through them and the documents will be invalid documents. In the event, if anybody having any objection/claim on basis of the lost document, the same may be raised/lodged before me within seven (7) days from the date of publishing of this public notice. If any objections received after seven (7) days will not be considered.
Subhashini Srinivas
Mobile No. 9986159371
Bangalore, Date: 17-04-2021

PUBLIC NOTICE
This is to inform the General public that our client intends to purchase Vacant Site bearing No.1131, Uttarahalli village and Hobli, Bengaluru South Taluk in the layout formed by the Poorna Pragna House Building Co-operative Society Ltd., PID No.1138/1131, Ward No.184, Uttarahalli, measuring East to West : towards North : 40 feet, towards South : 40 feet, and North to South : towards East : 68.9 feet, towards West : 63.9 feet, in all measuring 2650 sq.ft / 247.33 sq. mtrs and bounded on the East : Site No.1132, West : Site No.1130, North : Road, South : Site No.1129, from its owner Mrs.HEMAMALINI, W/o.C.S.Padmanabhan. Any person/s asserting any kind of right, title, interest or claims of any sort towards the Sale transaction may file their objections or claims with documentary proof thereof with the undersigned within FIVE days from the date of this publication, failing which my clients will proceed to complete the transaction without being liable for any claims put forth thereof.
RAJAGOPALA NAIDU ADVOCATE
No.4, KRISHNARAJA 4th Floor, 50 feet Road Hanumanthnagar, Bengaluru -560019
Mail : rgnkrplawassociates@gmail.com Whats app : 9845012455.
Bengaluru Date: 17/04/2021

PUBLIC NOTICE
This is to inform you that my client B.E.VIJAYA KUMAR alias E. VIJAYA CHANDRA SALA, son of Late B.S.Eraiah. resident of Cottonpet Main Road. Bangalore 560 053, has lost the two bunch of LOCK KEY during his transit near City Civil Court, Bangalore. Police Complaint No KP PS/G.RC 6/2021 and Katha No. 77 & 80.
Sd/-
KARAR AHMED, B.Com, LLB Advocate, Mayo Hall, M.G. Road, Bangalore-560 001 Mobile No. 9845108175, 7892114520 E-mail: kararahmedadvocate@gmail.com

ಹೊಸ ಚೀಟಿಗಳ ಪ್ರಾರಂಭ ಸ್ಥಾಪನೆ : 2001
ಸೀಬಿ ನರಸಿಂಹಸ್ವಾಮಿ ಚಿಟ್ಸ್(ಕ) ಪ್ರೈ.ಲಿ.
ಬೆಂಗಳೂರು | ತುಮಕೂರು | ಮೈಸೂರು | ಹಾಸನ | ರಾಮನಗರ

ಚೀಟಿಯ ಮೊತ್ತ	ತಿಂಗಳು	ತಿಂಗಳ ಕಂತು	ಬಹುಮಾನಿತ ಮೊತ್ತ	3ನೇ ತಿಂಗಳಿನಿಂದ
1 ಲಕ್ಷ	25	4000	70000	3000
2 ಲಕ್ಷ	25	8000	140000	6000
5 ಲಕ್ಷ	25	20000	350000	15000
10 ಲಕ್ಷ	50	20000	700000	15000
10 ಲಕ್ಷ	100	10000	700000	7500
25 ಲಕ್ಷ	100	25000	1750000	18750

ಸಂಪರ್ಕಿಸಿ 7892303484 | 9483247455

ಪ್ರಜಾವಾಣಿ ಭಾನುವಾರದ

ಪುರವಣಿ

ಭಾನುವಾರ, 18 ಏಪ್ರಿಲ್ 2021

ಮುರಿದು ಕಟ್ಟೋಣ ರಂಗದ ಶಿಲ್ಪ

11



12

ಯಕ್ಷ ಜಗತ್ತಿನ ಸವ್ಯಸಾಚಿ

13

ಸಾಹಿತ್ಯದ ಸಂಗ... ಮನುಷ್ಯನಾಗೋದು ಹಿಂಗ!

ಶೂದ್ರ ಶ್ರೀನಿವಾಸ್

ಸಾಹಿತ್ಯದ ಅಂತರಾತ್ಮ ಅತ್ಯಂತ ವ್ಯಾಪಕವಾದದ್ದು. ಒಟ್ಟು ಮನುಕುಲದ ಬೆಳವಣಿಗೆಗೆ ಎಂತೆಂಥದ್ದೋ ಸಾಧ್ಯತೆಗಳನ್ನು ಅದು ದೊರಕಿಸಿಕೊಟ್ಟಿದೆ. ಮನುಷ್ಯ ಮನುಷ್ಯರ ನಡುವೆ, ವಿವಿಧ ಜನಾಂಗಗಳ ಮಧ್ಯೆ ಸಂಬಂಧಗಳ ಬಿಕ್ಕಟ್ಟು ಬಿಗಡಾಯಿಸದಂತೆ ಪರೋಕ್ಷವಾಗಿ ಕೆಲಸ ಮಾಡುತ್ತಿರುವುದು ಕೂಡ ಸಾಹಿತ್ಯವೇ - ಅರ್ಥಾತ್ ಸಾಹಿತ್ಯದ ಕೃತಿಗಳು. ಕೇವಲ ಒಂದು ಭಾಷೆ ಮತ್ತು ಸಂಸ್ಕೃತಿಗೆ ಸೀಮಿತವಾದ ಮಾತು ಇದಲ್ಲ. ಒಟ್ಟು ಜಗತ್ತಿನ ಮಾನವೀಯ ನೆಲೆಗಳಿಗೆ ಸಾಹಿತ್ಯವೇ ವೇದಿಕೆಯಾಗಿದೆ ಎನ್ನುವುದು ಉತ್ಪ್ರೇಕ್ಷಿತವಾದ ಮಾತೇನಲ್ಲ.

> ಮೃದುತ್ವವೆಂಬುದು ಪ್ರೀತಿಯ ಘನವಾದ ರೂಪ. ಸಾಹಿತ್ಯವೆಂಬುದು ಇಂಥ ಮೃದುತ್ವದ ಮೇಲಿನ ನಿರ್ಮಾಣ. ಅದು ಸದಾಕಾಲ ಇನ್ನೊಬ್ಬನಿಗಾಗಿ ಮಿಡಿಯುವ ವಸ್ತು. ಮನುಕುಲದ ಇತಿಹಾಸದಲ್ಲಿ ಮಾನವೀಯ ಅಂತಃಕರಣದ ಹೊನಲೊಂದು ಸದಾ ಹರಿಯುತ್ತಾ ಬಂದಿರುವ ಹಿಂದಿನ ಪ್ರೇರಣೆ ಕೂಡ ಇಂತಹ ಸಾಹಿತ್ಯವೇ ಅಲ್ಲವೇ?

ಎಲ್ಲ ಮಹಾಕಾವ್ಯಗಳು ಅತ್ಯಂತ ಪ್ರಮಾಣಬದ್ಧವಾಗಿ ಪ್ರೇರಕ ಶಕ್ತಿಗಳಾಗಿವೆ. ಹಾಗೆಯೇ ಎಲ್ಲ ಭಾಷೆಗಳ ಮಹಾನ್ ಲೇಖಕರು ಪರಕೀಯರು ಅನ್ನಿಸುವುದೇ ಇಲ್ಲ. ಸಾಹಿತ್ಯಕ್ಕೆ ಆ ವಿಧದ ತಾದಾತ್ಮ್ಯವನ್ನು ಉದ್ದೀಪನಗೊಳಿಸುವ ಶಕ್ತಿ ಸಿದ್ಧಿಸಿದೆ. ಮನಃಸ್ಥಿತಿಗಳ ಸಮನ್ವಯ ಪ್ರಕ್ರಿಯೆಗೂ ಅದು ಪ್ರೇರಣಾಶಕ್ತಿಯಾಗಿದೆ. ಜಗತ್ತಿನ ಉದ್ದಗಲಕ್ಕೂ ಬಹುಮುಖೀ ಸಂಸ್ಕೃತಿಗಳ ಹೆಚ್ಚುಗಾರಿಕೆ ಯಾವ ಯಾವ ರೂಪದಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಅರಿಯಲೂ ಬಾಗಿಲು ತೆರೆದಿದೆ. ಇತಿಹಾಸದ ಉದ್ದಕ್ಕೂ ಇಂಥ ಸಾಹಿತ್ಯದ ಹಿನ್ನೆಲೆಯನ್ನು ಹೊಂದಿರುವ ಮಹಾನ್ ವ್ಯಕ್ತಿಗಳು ನಮ್ಮ ಮುಂದೆ ಪ್ರಾತಃಸ್ಮರಣೀಯರಾಗಿ ಸೂತ್ರಪ್ರಾಯರಂತೆ ಕಾಣಿಸಿಕೊಳ್ಳುತ್ತಿದ್ದಾರೆ. ಇಲ್ಲದಿದ್ದರೆ ಇತಿಹಾಸವೇ ಮರೆಗೆ ಸರಿದು ಬಿಡುತ್ತಿತ್ತು.

ಜನರ ಕ್ರೌರ್ಯ, ಅನಾಗರಿಕತೆ, ನೀಚತನ ಇನ್ನೂ ಏನೇನೋ ಭೀಕರ ಅವಗುಣಗಳನ್ನು ನೋಡಿಕೊಳ್ಳುವುದಕ್ಕೆ ಸಾಹಿತ್ಯ ಕೈಗನ್ನಡಿಯಾಗಿದೆ. ಇಲ್ಲದಿದ್ದರೆ ಪಾಪಲೇಪಿತ ಮನಸ್ಸು ಮತ್ತಷ್ಟು ಅಧೋಗತಿಗೆ ಇಳಿಯುತ್ತಿತ್ತು. ನರಕಸದೃಶ ನಡಾವಳಿಗಳು ವಿಕೃತರೂಪ ಪಡೆಯುತ್ತಲೇ ಇದ್ದವು. ಅಂಥ ಕಹಿ ನೆನಪುಗಳು ಇತಿಹಾಸದ ಉದ್ದಗಲಕ್ಕೂ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ, ಪಾಚಿ ಕಟ್ಟಿಕೊಂಡಂತೆ. ಅಲ್ಲದೆ, ಆ ನೆನಪುಗಳು ತೊಳೆಯಲಾರದಂತೆ ಕಾಡುತ್ತಲೇ ಇವೆ. ಹೀಗೆ ಕಾಡುವುದರಿಂದಲೇ ಅಂತಹ ಪಾಪಪ್ರಜ್ಞೆಯಿಂದ ನಮ್ಮನ್ನು ಪರೋಕ್ಷವಾಗಿ ಮೃದುಗೊಳಿಸಲು ಸಾಧ್ಯವಾಗುತ್ತಿದೆ. ಅಯ್ಯೋ ಹೀಗೆಲ್ಲಾ ನಡೆದು ಹೋಗಿದೆಯಲ್ಲ ಎಂಬುದು ನಮ್ಮನ್ನು ಬಾಧಿಸುತ್ತಲೇ ಬಂದಿದೆ. ಅದರ ಸೂಕ್ಷ್ಮಗಳನ್ನು ಬಿಡಿಸಿ ವ್ಯಾಖ್ಯಾನಿಸುತ್ತ ಬಂದಿರುವುದು ಸಾಹಿತ್ಯ ಕೃತಿಗಳು.

ಹಾಗೆ ನೋಡಿದರೆ ನಮ್ಮ ಮಹಾಕಾವ್ಯಗಳಾದ ಮಹಾಭಾರತ ಮತ್ತು ರಾಮಾಯಣದ ಬಹಳಷ್ಟು ಪಾತ್ರಗಳು ನಿರ್ಣಾಯಕ ಎನ್ನುವ ರೀತಿಯಲ್ಲಿ ಮಾನಸಿಕವಾಗಿ ನಮ್ಮನ್ನು ಬಂಧಿಸಿಟ್ಟಿವೆ. ಬಹುಪಾಲು ಮಂದಿಗೆ ರಾಮ ಮತ್ತು ಕೃಷ್ಣನ ಸ್ಮರಣೆ ನಿರಂತರವಾದದ್ದು. ರಾತ್ರಿ ಹಾಸಿಗೆಗೆ ಹೋಗುವಾಗ, ಬೆಳಿಗ್ಗೆ ಹಾಸಿಗೆ ಬಿಡುವಾಗ ಆ ಸ್ಮರಣೆ ಅವ್ಯಕ್ತ ಚೈತನ್ಯಶೀಲತೆಯನ್ನು ಪಡೆದಿರುತ್ತದೆ. ಯಾಕೆಂದರೆ ರಾಮ ಮತ್ತು ಕೃಷ್ಣ ಮೂಲಭೂತವಾಗಿ ಅತ್ಯಂತ ದುಃಖಿಗಳು. ಆದುದರಿಂದಲೇ ಎಲ್ಲೂ ಭಾವುಕತೆ, ಕೂಗಾಟ ನಮಗೆ ಎದುರಾಗುವುದಿಲ್ಲ. ಎಲ್ಲವನ್ನೂ ತುಂಬಿಕೊಂಡು ಅವರು ಹಸನ್ಮುಖಿಗಳಾಗಿರಲು ಪ್ರಯತ್ನಿಸುವರು. ಸುತ್ತಲೂ ಇದ್ದವರೆಲ್ಲ ಒಂದು ರೀತಿಯಲ್ಲಿ ಎಡಬಿಡಂಗಿಗಳು. ರಾಮ ಮತ್ತು ಕೃಷ್ಣನನ್ನು ಎಳೆದೆಳೆದು ಜಗ್ಗಾಡುತ್ತಾರೆ. ಅಷ್ಟರಮಟ್ಟಿಗೆ ಅವರು ದಂಡಕಾರಣ್ಯದ ದಟ್ಟಣೆಯ ಪಾತ್ರಗಳ ನಡುವೆ ಬದುಕಲೇ ಬೇಕಾಗುತ್ತದೆ.

ದೊಡ್ಡ ಮಹತ್ವ ಇರುವುದರಿಂದಲೇ ಭಾರತದ ಉದ್ದಗಲಕ್ಕೂ ಒಂದಲ್ಲ ಒಂದು ಭಾಷೆಯಲ್ಲಿ ರಾಮಾಯಣ ಮತ್ತು ಮಹಾಭಾರತ ಕುರಿತು ಪ್ರತೀ ದಿವಸ ಒಂದಲ್ಲ ಒಂದು ಕೃತಿ ಬರುತ್ತಲೇ ಇರುತ್ತದೆ. ಮನುಷ್ಯನ ಅರಿವಿನ ದಾಹ ಅಷ್ಟರಮಟ್ಟಿಗೆ ತೀವ್ರವಾಗಿದೆ. ಮರಾಠಿಯ ಬಹುಮುಖ್ಯ ಲೇಖಕಿ ಮತ್ತು ಚಿಂತಕಿ ಐರಾವತಿ ಕರ್ವೆಯವರು 'ಯುಗಾಂತ' ಎಂಬ ಅಪೂರ್ವ ಕೃತಿಯನ್ನು ಬರೆದಮೇಲೆ ಅದರ ಬಗ್ಗೆ ಎದ್ದ ಗಂಭೀರ ಪ್ರಶ್ನೆಗಳಿಗೆ ಉತ್ತರಿಸುತ್ತ: 'ಪ್ರತಿವರ್ಷ ತನ್ನ ಕುರಿತು ಹತ್ತಾರು ಕೃತಿಗಳನ್ನು ಕರೆಸಿಕೊಳ್ಳುವ ಚೈತನ್ಯ ಮಹಾಭಾರತಕ್ಕಿದೆ' ಎಂದಿದ್ದರು.

ಮಹಾಭಾರತಕ್ಕೆ ಇಂಥ ಸಾರ್ವಕಾಲಿಕ ಜೀವನ ಸಂಬಂಧಿ ಮೌಲ್ಯ ಇರುವುದರಿಂದಲೇ ಪೀಟರ್ ಬ್ರೂಕ್ ಎಂಬ ಮಹಾನ್ ನಿರ್ದೇಶಕ ಅಷ್ಟೊಂದು ಮೋಹಿತನಾದದ್ದು. ಆತ ಫ್ರಾನ್ಸ್‌ನ ರಂಗಭೂಮಿ ಹಾಗೂ ಚಲನಚಿತ್ರ ರಂಗದ ಮಹತ್ವದ ನಿರ್ದೇಶಕ. ಇಂಥ ಮೇಧಾವಿ ತನ್ನ ಬದುಕನ್ನೇ ಮಹಾಭಾರತಕ್ಕಾಗಿ ಮುಡಿಪಿಟ್ಟು ಯುರೋಪಿನ ಗಂಭೀರ ಪ್ರೇಕ್ಷಕರಿಗೆ ಹದಿನಾಲ್ಕು ಗಂಟೆಗಳ ನಾಟಕವನ್ನು ಸಿದ್ಧಪಡಿಸಿ ಎಷ್ಟೋ ರಾಷ್ಟ್ರಗಳಲ್ಲಿ ಪ್ರದರ್ಶನ ನೀಡಿದ. ಮಹಾಭಾರತದ ಹೆಚ್ಚುಗಾರಿಕೆಯನ್ನು ಅರ್ಥೈಸಿದ.

ಕಲಾಕೃತಿ: ಅಶೋಕ ಶಟಕಾರ

ಯುದ್ಧಕ್ಕೆ ಹೊರಟ ರಾಮ... ನಿಯೋಗಿ ಬುಕ್ಸ್‌ನ 'ದಿ ರಾಮಾಯಣ'ದ ಚಿತ್ರಕಾರ ಕಂಡಂತೆ

ಭಾರತಕ್ಕೆ ಆ ನಾಟಕವನ್ನು ತಂದಾಗ ಎಂಟು ಗಂಟೆಗಿಳಿಸಿದ್ದ. ಬೆಂಗಳೂರಿನ ಚೌಡಯ್ಯ ಮಂದಿರದಲ್ಲಿ ನಾಟಕ ವೀಕ್ಷಿಸಿದ ಪ್ರಮುಖ ಚಿಂತಕರೆಲ್ಲ ಸಂಭ್ರಮಿಸಿದ್ದರು. ಲಂಕೇಶ್ ಅವರಂತೂ ಎಷ್ಟೊಂದು ಭಾವನಾತ್ಮಕತೆಯಿಂದ ಸ್ಪಂದಿಸಿದ್ದರು. ಈ ಕಾರಣಕ್ಕಾಗಿಯೇ ಅವರು ಒತ್ತಾಯ ಮಾಡಿ ನನ್ನನ್ನು ಬೆಂಗಳೂರು ಸಮೀಪದ ವಿದ್ಯಾನಗರದಲ್ಲಿ ನಡೆದ ಶಿಬಿರಕ್ಕೆ ಕಳಿಸಿದ್ದರು. ಈ ನಾಟಕದ ಮತ್ತೊಂದು ವಿಶೇಷ ಎಂದರೆ ಯಾವ ಪಾತ್ರಕ್ಕೂ ಮೇಕಪ್ ಇರಲಿಲ್ಲ. ಆಯಾ ಪಾತ್ರದ ಸಾಂಸ್ಕೃತಿಕ ಹಿನ್ನೆಲೆಯ ನೆಲೆಯಲ್ಲಿ ಉಡುಪು ಪ್ರಾಧಾನ್ಯ ಪಡೆದಿತ್ತು. ಆದರೆ, ಅದು ಪ್ರಯೋಗದ ದೃಷ್ಟಿಯಿಂದ ದಟ್ಟ ಪ್ರಭಾವವನ್ನು ಬೀರಿತು. ವಿದ್ಯಾನಗರದ ಶಿಬಿರದಲ್ಲಿ ಪೀಟರ್ ಬ್ರೂಕ್‌ನ ಒಂದೊಂದು ಮಾತೂ ಎರಡು ಸಾವಿರ ವರ್ಷಗಳ ಹಿಂದಿನ ವ್ಯಾಸನನ್ನು ಎಷ್ಟೊಂದು ಮಾರ್ಮಿಕವಾಗಿ ವ್ಯಾಖ್ಯಾನಿಸುವ ರೀತಿಯಲ್ಲಿತ್ತು. ಒಂದೊಂದು ಪಾತ್ರದವರೂ ತಮ್ಮ ಅನುಭವವನ್ನು ಎಷ್ಟು ಆಪ್ತವಾಗಿ ತೆರೆದಿಟ್ಟಿದ್ದರು.

ಇಂಥದ್ದೇ ಮಾರ್ಮಿಕವಾದ ಮತ್ತೊಂದು ನೆನಪನ್ನು ಇಲ್ಲಿ ದಾಖಲಿಸಬೇಕು ಅನ್ನಿಸುತ್ತದೆ. ತೆಲುಗಿನ ಅರ್ಥಾತ್ ಭಾರತದ ಚಲನಚಿತ್ರ ಲೋಕದ ಮಹಾನ್ ಕಲಾವಿದರೊಬ್ಬರು ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿ ಅಪೂರ್ವ ಎನ್ನುವ ಒಂದು ಮಾತನ್ನು ಹೇಳಿದ್ದರು: 'ನಾನು ದೇವರನ್ನು ನಂಬುವುದಿಲ್ಲ. ಆದರೆ, ಈ ವಾಲ್ಮೀಕಿ ಎಂಬ ಮಹಾನುಭಾವ ನಮಗೆ ಜೀವನದುದ್ದಕ್ಕೂ ಆಡಿಸಿಕೊಂಡಿರಿ ಎಂದು ರಾಮನನ್ನು ಕೊಟ್ಟು ಹೋಗಿದ್ದಾನೆ. ಏನು ಮಾಡಿದರೂ ಬಿಡಿಸಿಕೊಳ್ಳಲಾಗದಂತೆ'.

ಪಾಕಿಸ್ತಾನದಲ್ಲಿ ಭಾರತದ ಅತ್ಯಂತ ಪ್ರಸಿದ್ಧ ಕಥೆಗಾರ ಎನಿಸಿದ ಇಮ್ತಿಯಾಜ್ ಹುಸೇನ್ ಅವರು ಸುಮಾರು ಎರಡು ದಶಕಗಳ ಹಿಂದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಆಹ್ವಾನದ ಮೇಲೆ ಭಾರತಕ್ಕೆ ಬಂದಿದ್ದರು. ಅದೇ ಸಮಯದಲ್ಲಿ ಬೆಂಗಳೂರಿಗೂ ಬಂದಿದ್ದರು. ಆಗ ಅವರು ಸುಮಾರು ಎರಡು ಗಂಟೆಗಳ ಕಾಲ ತಮ್ಮ ಕಥಾಲೋಕದ ಕುರಿತು ಮಾತನಾಡುವಾಗ ಸ್ಮರಣೀಯ ಎನ್ನಬಹುದಾದ ಒಂದು ಮಾತು ಹೇಳಿದರು: 'ನನ್ನ ಮೇಲೆ ತುಂಬಾ ಪ್ರಭಾವ ಬೀರಿರುವ ಕೃತಿ ತುಳಸೀ ರಾಮಾಯಣ. ಅದರ ಪ್ರಭಾವ ಒಟ್ಟು ನನ್ನೆಲ್ಲ ಕಥೆಗಳಲ್ಲಿ ದಟ್ಟವಾಗಿದೆ. ವಿಭಜನೆಯ ನಂತರ ನಾನು ಪಾಕಿಸ್ತಾನದಲ್ಲಿದ್ದರೂ ಆ ಅಮೂಲ್ಯವಾದ ಪ್ರಭಾವ ನನ್ನನ್ನು ಗಾಢವಾಗಿ ಕಾಡುತ್ತಲೇ ಇದೆ'.

ಈ ರೀತಿಯಲ್ಲಿ ಕಾಡಿಸುವ ಮತ್ತು ಚಿಂತನೆಗೆ ಪ್ರೇರೇಪಿಸುವ ಮಹೋನ್ನತತೆ ರಾಮ ಹಾಗೂ ಕೃಷ್ಣನ ಪಾತ್ರಗಳಿಗೆ ಇದೆ. ಯಾಕೆಂದರೆ ಸಾರ್ವಕಾಲಿಕತೆಯನ್ನು ಪಡೆದಿರುವ ಅಪೂರ್ವ ಸಾಹಿತ್ಯ ಕೃತಿಗಳ ಪ್ರತಿನಿಧಿಗಳು ಅವರು. ಇಂಥ ಚೈತನ್ಯಪೂರ್ಣ ಪಾತ್ರಗಳ ಕುರಿತು ಒಮ್ಮೆ ಯು.ಆರ್.ಅನಂತಮೂರ್ತಿಯವರ ಬಳಿ ಚರ್ಚಿಸುತ್ತಿರುವಾಗ ಅವರು ಟ್ಯಾಗೋರರ ನಾಲ್ಕು ಪಾತ್ರಗಳನ್ನು ಪ್ರಸ್ತಾಪಿಸಿದರು. 'ಗೌತಮ ಬುದ್ಧ, ರಾಜಾರಾಮ್ ಮೋಹನ್ ರಾಯ್, ವಿದ್ಯಾಸಾಗರ್ ಮತ್ತು ಗಾಂಧೀಜಿ ಈ ನಾಲ್ಕು ಪಾತ್ರಗಳು ಟ್ಯಾಗೋರರ ದಟ್ಟ ಚಿಂತನೆಯ ಮೂಲಕ ಮೂಡಿ ಬಂದಿರುವುದರಿಂದ ಅವು ಮತ್ತೆ ಮತ್ತೆ ಓದಲು ನಮ್ಮನ್ನು ಪ್ರೇರೇಪಿಸುತ್ತಲೇ ಇರುತ್ತವೆ. ಇವುಗಳನ್ನು ಓದಿದ ಮೇಲೆ ಅವರ 'ತಪೋವನ' ಎಂಬ ಲೇಖನಕ್ಕೆ ಪ್ರವೇಶ ಮಾಡು' ಎಂದಿದ್ದರು.

ಕಳೆದ ಎರಡು ದಶಕಗಳಿಂದ ನನ್ನಿಂದ ಎಷ್ಟೋ ಬಾರಿ ಓದಿಸಿಕೊಂಡಿರುವ ಲೇಖನಗಳಿವು. ಸಾಹಿತ್ಯಿಕವಾಗಿ ಬಲು ದಟ್ಟವಾದ ಲೇಖನಗಳಿವು. ಇವುಗಳ ಮೂಲಕ ಮನುಕುಲದ ಎಂತೆಂಥ ಏಳು ಬೀಳುಗಳು ನಮಗೆ ಮುಖಾಮುಖಿಯಾಗುತ್ತವೆ, ನಮ್ಮ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳುವುದಕ್ಕೆ ಸಾಕ್ಷೀಭೂತವಾಗುತ್ತವೆ. ಹಾಗೆ ನೋಡಿದರೆ ಟ್ಯಾಗೋರರು ತಮ್ಮ ಎಂಬತ್ತನೆಯ ಹುಟ್ಟುಹಬ್ಬದ ನೆಪದಲ್ಲಿ ಶಾಂತಿನಿಕೇತನದಲ್ಲಿ 'ಕಲ್ಚರಲ್ ಕ್ರೈಸಿಸ್' ಎಂಬ ವಿಷಯ ಕುರಿತು ಮಾಡಿದ ಕೊನೆಯ ಉಪನ್ಯಾಸ ನಮ್ಮ ಮನಸ್ಸನ್ನು ಹಿಡಿದು ಅಲ್ಲಾಡಿಸುವಷ್ಟು ದಟ್ಟವಾಗಿದೆ. ಈ ರೀತಿಯಲ್ಲಿ ನಾವು ಮನೆಯಂಗಳದ ಮಹತ್ವಪೂರ್ಣ ಲೇಖಕರನ್ನು ಪ್ರಾತಃಸ್ಮರಣೀಯರು ಎಂದು ಓದಿಕೊಳ್ಳುವಂತೆ ಜಗತ್ತಿನ ಶ್ರೇಷ್ಠ ಲೇಖಕರನ್ನೂ ಓದಿಕೊಳ್ಳುತ್ತೇವೆ. ಅವ್ಯಕ್ತ ಅನುಭೂತಿಯನ್ನು ಪಡೆಯುತ್ತಾ ಹೋಗುತ್ತೇವೆ.

ನೊಬೆಲ್ ಪ್ರಶಸ್ತಿ ಪಡೆದ ಸಂದರ್ಭದಲ್ಲಿ ಸಾಹಿತಿಗಳು ಮಾಡಿದಭಾಷಣಗಳುಸಾಹಿತ್ಯಕೃತಿಗಳಷ್ಟೇಚಾರಿತ್ರಿಕವಾದುವು. ಈ ದೃಷ್ಟಿಯಿಂದ ರಷ್ಯಾದ ಸೋಲ್ಜೆನಿಟ್ಸನ್, ಚಿಲಿಯ ಪಾಬ್ಲೊ ನೆರೂಡಾ, ಫ್ರಾನ್ಸ್‌ನ ಆಲ್ಬರ್ಟ್ ಕಮೂ ಮುಂತಾದ ಎಷ್ಟೋ ಲೇಖಕರ ನೊಬೆಲ್ ಪ್ರಶಸ್ತಿ ಪಡೆದ ಸಂದರ್ಭದ ಭಾಷಣಗಳೂ ಚಾರಿತ್ರಿಕವಾದಂಥವು. ಅಷ್ಟರಮಟ್ಟಿಗೆ ಇತಿಹಾಸದ, ಸಮಕಾಲೀನ ಸಂದರ್ಭದ ಸಂಗತಿಗಳಿಗೆ ಅವುಗಳು ನಮ್ಮನ್ನು ಮುಖಾಮುಖಿಯಾಗಿಸುತ್ತವೆ.

ಸಾಹಿತ್ಯ ಕೃತಿಗಳ ಕುರಿತು ಐನ್‌ಸ್ಟೀನ್‌ನ ಒಂದು ಮಾತಿದೆ. ಸಾಹಿತ್ಯ ಕೃತಿಗಳ ಓದಿನಿಂದ ವಿಜ್ಞಾನದ ಅರಿವು ಮತ್ತಷ್ಟು ವಿಸ್ತರಿಸಿದೆ ಎಂದು. ಸಾಹಿತ್ಯದ ಓದು ಎಂದರೆ ಪುಸ್ತಕ ಸಂಸ್ಕೃತಿಯನ್ನು ವಿಸ್ತರಿಸುವುದೇ ಆಗಿದೆ. 13ನೇ ಪುಟಕ್ಕೆ...

ಕಲ್ಲಿನ ತಲೆದಿಂಬು & ಡೈನೊಸಾರ್ ಮೊಟ್ಟೆ...

ಮಲ್ಪೆಯ ಸೇಂಟ್ ಮೇರೀಸ್ ದ್ವೀಪದ ಕಲ್ಲುಗಳು

> ಷಡ್ಭುಜಾಕೃತಿಯ ಬಸಾಲ್ಟ್ ಕಲ್ಲುಕಂಬಗಳು, ಡೈನೊಸಾರ್ ಮೊಟ್ಟೆಗಳು, ಪಿಲ್ಲೊ ಲಾವಾಗಳು... ಏನೆಲ್ಲ ಪಳೆಯುಳಿಕೆಗಳು ನಮ್ಮಲ್ಲಿದ್ದರೂ ಯುನೆಸ್ಕೊದಿಂದ ಇದುವರೆಗೂ ಒಂದೇ ಒಂದು ಸ್ಥಳಕ್ಕೂ ಗ್ಲೋಬಲ್ ಜಿಯೊಪಾರ್ಕ್ ಮಾನ್ಯತೆ ಸಿಕ್ಕಿಲ್ಲ. ಏಕೋ?

ಗುರುರಾಜ್ ಎಸ್. ದಾವಣಗೆರೆ

ಭೂಚೈತನ್ಯ ಹಾಗೂ ಜೀವ ವಿಕಾಸದ ಹಲವು ಚಾರಿತ್ರಿಕ ಚಟುವಟಿಕೆಗಳಿಗೆ ಸಾಕ್ಷಿಯಾಗಿ ಪುರಾತನ ಅವಶೇಷಗಳನ್ನು ತನ್ನ ಮಡಿಲಲ್ಲಿ ಇಟ್ಟುಕೊಂಡಿರುವ ನಮ್ಮ ನೆಲ, ಜಗತ್ತಿನ ಭೂಪ್ರದೇಶಗಳಲ್ಲೇ ಅತ್ಯಂತ ಕ್ರಿಯಾತ್ಮಕ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ನಾಲ್ಕೂವರೆ ಸಾವಿರ ಕೋಟಿ ವರ್ಷ ವಯಸ್ಸಿನ ಭೂಮಿಯ ವಿಕಾಸಯಾತ್ರೆಯ ಅನೇಕ ಘಟನೆಗಳಿಗೆ ಸಂಬಂಧಿಸಿದಂತೆ ಕೋಟ್ಯಂತರ ವರ್ಷ ಹಳೆಯದಾದ ಉಡುಪಿಯ ಸೇಂಟ್ ಮೇರೀಸ್ ದ್ವೀಪದ ಷಡ್ಭುಜಾಕೃತಿಯ ಬಸಾಲ್ಟ್ ಕಲ್ಲುಕಂಬಗಳು, ರೈಯೋಲಿಯ ಡೈನೊಸಾರ್ ಮೊಟ್ಟೆಗಳು, ರಾಮಗಡದ ಬೃಹತ್ ಕ್ರೇಟರ್, ಚಿತ್ರದುರ್ಗದ ಪಿಲ್ಲೊ ಲಾವಾಗಳು, ಮಹಾರಾಷ್ಟ್ರದ ಲೋನಾರ್ ಕುಳಿಗಳೆಲ್ಲ ನಮ್ಮ ಭೂರಾಶಿಯಲ್ಲಿ (land mass) ಇವೆ.

ಜೀವವಿಕಾಸದ ಕುರುಹುಗಳಾಗಿ ವಿಶ್ವದ ಅತ್ಯಂತ ಪುರಾತನ ಜೀವಿ ಸಯನೋ ಬ್ಯಾಕ್ಟೀರಿಯಗಳಿಂದಾದ ಸ್ಟ್ರೊಮಾಟೊಲೈಟ್‌ಗಳು ರಾಜಸ್ಥಾನ ಮತ್ತು ಮಧ್ಯಪ್ರದೇಶಗಳಲ್ಲಿ ಇದ್ದುದಕ್ಕೆ ಪಳೆಯುಳಕೆಗಳು ದೊರೆತಿವೆ. ಬೆನ್ನುಮೂಳೆಯ ಪ್ರಾಣಿಗಳು, ಸಾಗರ ಜೀವಿಗಳು ಕೋಟ್ಯಂತರ ವರ್ಷಗಳಿಂದ ನಮ್ಮ ಭೂಪ್ರದೇಶದಲ್ಲೂ ಇದ್ದವು ಎಂಬುದಕ್ಕೆ ಶಿವಾಲಿಕ್ ಪರ್ವತ ಪ್ರದೇಶ, ಕಛ್ ಮತ್ತು ಸ್ಪಿತಿಗಳಲ್ಲಿ ಪುರಾವೆಗಳಿವೆ. ನಾಗರಿಕತೆಯ ನೆನಪಾಗಿ ರಾಜಸ್ಥಾನ, ಆಂಧ್ರಪ್ರದೇಶಗಳಲ್ಲಿ ಸೀಸ, ಬಂಗಾರ, ಸತುಗಳ ಗಣಿಗಾರಿಕೆ ನಡೆಯುತ್ತಿದ್ದುದಕ್ಕೆ ದಾಖಲೆಗಳಿವೆ. ಇವಷ್ಟೇ ಅಲ್ಲದೆ ಲಾಲ್‌ಬಾಗ್‌ನ ಪೆನಿನ್ಸುಲಾರ್ ನೈಸ್ ಶಿಲೆ, ಮೇಕೆದಾಟು, ಉಳವಿಯ ಸಣ್ಣಶಿಲಾಗುಹೆಗಳು, ವಿಶಾಖಪಟ್ಟಣದ ಬೊರ್ರ ಗುಹೆ, ಎರ್ರಮಟ್ಟಿ ದಿಬ್ಬಗಳು ರಾಷ್ಟ್ರೀಯ ಭೂವೈಜ್ಞಾನಿಕ ಸ್ಮಾರಕಗಳಾಗಿವೆ.

ಇಷ್ಟೆಲ್ಲ ಪಳೆಯುಳಿಕೆಗಳು (fossil) ಮತ್ತು ಭೂವೈವಿಧ್ಯಗಳಿದ್ದರೂ, ಯುನೆಸ್ಕೊದಿಂದ ಇದುವರೆಗೂ ಇಲ್ಲಿನ ಒಂದೇ ಒಂದು ಸ್ಥಳಕ್ಕೂ ಗ್ಲೋಬಲ್ ಜಿಯೊಪಾರ್ಕ್ ಮಾನ್ಯತೆ ಸಿಕ್ಕಿಲ್ಲ. ಯುನೆಸ್ಕೊದ ವ್ಯಾಖ್ಯೆಯ ಪ್ರಕಾರ ಅನನ್ಯ ಮತ್ತು ಏಕರೀತಿಯ ವಿನ್ಯಾಸ ಹೊಂದಿರುವ ಭೂರಾಶಿಯು ಚಾರಿತ್ರಿಕ ಭೂವೈಜ್ಞಾನಿಕ ಘಟನೆಗಳಿಗೆ ಸಂಬಂಧ ಹೊಂದಿ, ಒಂಟಿಯಾಗಿದ್ದು, ವಿಶೇಷವಾಗಿ ರಕ್ಷಿಸಲ್ಪಟ್ಟು, ಶಿಕ್ಷಣ ಮತ್ತು ಸುಸ್ಥಿರ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರೆ ಅದು 'ಜಿಯೊ ಪಾರ್ಕ್' ಎನ್ನಿಸಿಕೊಳ್ಳುತ್ತದೆ.

ಕಲ್ಲಿನ ತಲೆದಿಂಬು!

ಚಿತ್ರದುರ್ಗಕ್ಕೆ ಪ್ರವಾಸ ಹೋಗುವವರೆಲ್ಲ ಕಲ್ಲಿನ ಕೋಟೆ, ತುಪ್ಪದ ಕೊಳ, ಓಬವ್ವನ ಕಿಂಡಿಗಳನ್ನು ನೋಡಿಯೇ ಇರುತ್ತಾರೆ. ಹತ್ತಿರದಲ್ಲೇ ಐಮಂಗಲದ ಬಳಿಯ ಮರಡಿಹಳ್ಳಿಗೆ ಹೋಗುವುದಿಲ್ಲ. ಅಲ್ಲೇನಿದೆ ವಿಶೇಷ ಅಂತೀರಾ? 250 ಕೋಟಿ ವರ್ಷಗಳಷ್ಟು ಹಳೆಯ ತಲೆದಿಂಬಿನಾಕಾರದ ಕಲ್ಲುಬಂಡೆಗಳ ರಾಶಿಯೇ ಅಲ್ಲಿದೆ! ಸಮುದ್ರ ತಳದಲ್ಲಿ ಸಿಡಿದ ಜ್ವಾಲಾಮುಖಿಯ ಶಿಲಾರಸ, ಮೇಲೆ ಬರುತ್ತಿದ್ದಂತೆ ದಿಢೀರನೆ ತಣ್ಣಗಾಗಿ ಚಿಕ್ಕ ಚಿಕ್ಕ ತಲೆದಿಂಬಿನ ರೂಪ ಪಡೆದ ಸಾವಿರಾರು ಶಿಲೆಗಳು ಅಲ್ಲಿವೆ. ಪ್ರಕೃತಿಯಲ್ಲಿ ಏಕಕೋಶ ಜೀವಿಗಳು ಹುಟ್ಟಿ, ಫೋಟೋಸಿಂಥೆಸಿಸ್ ಕ್ರಿಯೆ ನಡೆದು ಆಮ್ಲಜನಕದ ಮೊದಲ ಅಣುಗಳು ಸೃಷ್ಟಿಯಾದಾಗ ಈ ಕಲ್ಲಿನ ತಲೆದಿಂಬುಗಳು ರಚನೆಯಾದವಂತೆ!

ಇಡೀ ಜಗತ್ತಿನಲ್ಲಿ ಅತ್ಯಂತ ಸುರಕ್ಷಿತವಾಗಿರುವ ಶಿಲಾರಚನೆ ಇದು ಎನ್ನುವ ಭೂವಿಜ್ಞಾನಿಗಳು ಹಿಂದೆ ಆ ಜಾಗದಲ್ಲಿ ವಿಶಾಲ ಸಾಗರವೇ ಇತ್ತು ಎನ್ನುವುದಕ್ಕೆ ಪುರಾವೆ ನೀಡುತ್ತಾರೆ.

ಮುಂದಿನ ಪುಟಕ್ಕೆ...

ಜಾಹೀರಾತು

ಸೋರಿಯಾಸಿಸ್‌ಗೆ ಇದೆ ಮದ್ದು

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರುವ ಕಾಯಿಲೆಗಳಲ್ಲಿ ಸೋರಿಯಾಸಿಸ್ ಕೂಡ ಒಂದು. ಇದು ಒಬ್ಬರಿಂದ ಇನ್ನೊಬ್ಬರಿಗೆ ಹರಡುವುದಿಲ್ಲ. ಸೋರಿಯಾಸಿಸ್‌ಗೆ ಕಾರಣ ಚರ್ಮದ ತಳದ ಪದರುಗಳ ಜೀವಕೋಶದ ವಿಪರೀತ ವಿಭಜನೆಯಾಗುವುದು. ಈ ಕಾಯಿಲೆ ವಿಶ್ವದ ಶೇ. 2 ರಷ್ಟು ಜನರನ್ನು ಕಾಡುತ್ತಿದೆ. ವಿಶ್ವದಲ್ಲಿ ಸುಮಾರು 125 ದಶಲಕ್ಷ ಜನರು ಈ ಕಾಯಿಲೆಗೆ ತುತ್ತಾಗಿದ್ದಾರೆ. ಇದು ನಮ್ಮ ಶರೀರದಲ್ಲಿ ರೋಗ ನಿರೋಧಕ ಶಕ್ತಿ ಕುಂದಿದಾಗ ಬರುವಂತಹ ಚರ್ಮದ ಸಮಸ್ಯೆ.

ಸಾಮಾನ್ಯವಾಗಿ ಚರ್ಮವು ಹಳೆಯ ಪದರವನ್ನು ತೆಗೆದುಹಾಕಿ ಹೊಸ ಪದರವನ್ನು ರೂಪಿಸಿಕೊಳ್ಳುವುದಕ್ಕೆ ಕೆಲುವು ದಿನಗಳ ಸಮಯ ತೆಗೆದು ಕೊಳ್ಳುತ್ತದೆ .ಆದರೆ, ಈ ಕ್ರಿಯೆ ಸೋರಿಯಾಸಿಸ್ ನಲ್ಲಿ ಬಲುಬೇಗ ಮುಗಿಯುತ್ತದೆ. ಹಾಗೂ ಈ ಸಮಯದಲ್ಲಿ ಉದುರಿ ಹೋಗ ಬೇಕಾದ ಹಳೆಯ ಚರ್ಮದ ಪದರವು ಹಾಗೇ ಉಳಿದು ಹೊಸ ಚರ್ಮದ ಪದರ ರಚನೆ ಯಾಗುತ್ತದೆ.ಇದರಿಂದ ಚರ್ಮದ ಮಡಿಕೆಗಳು ನಿರ್ಮಾಣವಾಗುತ್ತವೆ.
ಇದು ವ್ಯಕ್ತಿಯ ದೈಹಿಕ, ಭಾವನಾತ್ಮಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಪ್ರಭಾವ ಬೀರುತ್ತದೆ.

ಸೋಂಕುಗಳು:–
ಎಚ್ ಐ ವಿ ಯಂತಹ ಸಮಸ್ಯೆಗಳು, ಸ್ಟೆಪ್ಟೋಕೊಕಲ್, ಸ್ಟಾಫಿ ಲೋಕೊಕಲ್ ಸೋಂಕುಗಳು ಇತ್ಯಾದಿ.
ಅತಿಯಾದ ಚಳಿಯ ವಾತಾವರಣ, ದೈಹಿಕ ಗಾಯ ಇತ್ಯಾದಿ ಮಾನಸಿಕ ಒತ್ತಡ, ದೈಹಿಕ ವ್ಯಾಯಾಮದ ಕೊರೆತೆ ದೇಹದ ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುತ್ತವೆ.

ವಿಧಗಳು:–
ಗುಣಲಕ್ಷಣಗಳನ್ನು ಆಧರಿಸಿ ಸೋರಿಯಾಸಿಸ್‌ನ್ನು ಐದು ವಿಧಗಳಾಗಿ ವಿಗಂಡಿಸಬಹುದು. ಪ್ಲೇಕ್ ಸೋರಿಯಾಸಿಸ್, ಗಟ್ಟೇಟ್ ಸೋರಿಯಾಸಿಸ್, ಪುಸ್ಟ್ಯುಲ್ಯರ್ ಸೋರಿಯಾಸಿಸ್, ಇನ್ವರ್ಸ್ ಸೋರಿಯಾಸಿಸ್, ಎರಿಥ್ರೋಡರ್ಮಿಕ್ ಸೋರಿಯಾಸಿಸ್.

ಲಕ್ಷಣಗಳು:–
ತಲೆ, ಮೊಣಕೈ, ಮೊಣಕಾಲು, ಅಂಗೈ, ಪಾದ ಹಾಗೂ ಹೊಟ್ಟೆಯ ಮೇಲ್ಭಾಗದ ಚರ್ಮದ ಮೇಲೆ ಸೋರಿಯಾಸಿಸ್ ಪ್ರಭಾವ ಬೀರುತ್ತದೆ. ಚರ್ಮ ಕೆಂಪಗಾಗಬಹುದು,ಸಾಧಾರಣದಿಂದ ಅತಿ ತೀವ್ರ ತುರಿಕೆ, ಚರ್ಮ ಒಡೆದು ಹೋಗುವುದರಿಂದ ತೀವ್ರವಾದ ನೋವು, ಸೋರಿಯಾಸಿಸ್ ತಲೆಯಲ್ಲಿ ಇದ್ದಾಗ ಹೊಟ್ಟು ಹಾಗೂ ಕೂದಲು ಉದುರುವಿಕೆ, ಅಂಗೈ ಪಾದಗಳಲ್ಲಿನ ಚರ್ಮ ಹೊಟ್ಟಿನ ರೂಪದಲ್ಲಿ ಉದುರುವುದು. ಸೋರಿಯಾಸಿಸ್ ತೀವ್ರವಿದ್ದಾಗ ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಪರಿಣಾಮಗಳು:
ಸೋರಿಯಾಟಿಕ್ ಆರ್ಥ್ರೈಟಿಸ್, ಮಾನಸಿಕ ಅಶಾಂತಿ, ಲವಣಗಳು ಹಾಗೂ ವಿಟಮಿನ್‌ಗಳು ದೇಹದಲ್ಲಿ ಕಡಿಮೆಯಾಗುವುದು ಇತ್ಯಾದಿ.

ರೋಗ ಪತ್ತೆ ಪರೀಕ್ಷೆಗಳು:
ಸಿಬಿಸಿ, ಇಎಸ್‌ಆರ್, ಚರ್ಮದ ಬಯಾಪ್ಸಿ, ಕ್ಷ –ಕಿರಣ (ಸೋರಿಯಾಸಿಸ್‌ನಿಂದ ಕೀಲುಗಳು ನೋವು ಹೆಚ್ಚಾದಾಗ). ಸಾಧಾರಣವಾಗಿ ಚರ್ಮವನ್ನು ಸೂಕ್ಷ್ಮವಾಗಿ ಪರಿಶೀಲಿಸುವದರಿಂದ ಪತ್ತೆ ಹಚ್ಚಬಹುದಾಗಿದೆ.

ಹೋಮಿಯೋಕೇರ್ ಚಿಕಿತ್ಸೆ:–
ಹೋಮಿಯೋಕೇರ್‌ನಲ್ಲಿ ನೀಡುವ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆಯು ರೋಗಿಯ ದೈಹಿಕ, ಸಮಸ್ಯೆಗಳು ಜೊತೆಗೆ ಮಾನಸಿಕ ಬದಲಾವಣೆಗಳು, ಭಾವನಾತ್ಮಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ ನೀಡುವಂತಹುದಾಗಿದೆ. ಇದು ಕೇವಲ ರೋಗ ಲಕ್ಷಣವಷ್ಟೇ ಅಲ್ಲದೆ ರೋಗಿಯ ಸಂಪೂರ್ಣ ಆರೋಗ್ಯಕ್ಕೆ ಕಾರಣವಾಗುತ್ತದೆ. ಈ ರೀತಿಯ ಲಕ್ಷಣಗಳಿಂದ ಬಳಲುತ್ತಿದ್ದ ಅನೇಕರು ಹೋಮಿಯೋಕೇರ್ ಚಿಕಿತ್ಸೆಯಿಂದ ಗುಣಮುಖರಾಗಿದ್ದಾರೆ ಎನ್ನುತ್ತಾರೆ ಈ ಸಂಸ್ಥೆಯ ತಜ್ಞರು.

ಸಂಪರ್ಕ:–
ಹೋಮಿಯೋಕೇರ್ ಇಂಟರ್‌ನ್ಯಾಷನಲ್ **ಕರ್ನಾಟಕದಲ್ಲಿ ಶಾಖೆಗಳು** : ಬೆಂಗಳೂರು (ಜಯನಗರ,ಮಲ್ಲೇಶ್ವರಂ, ಇಂದಿರಾನಗರ, ಎಚ್ ಎಸ್ ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಕಲ್ಬುರ್ಗಿ,ಶಿವಮೊಗ್ಗ,ತುಮಕೂರು, ಹಾಸನ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಪುದುಚೇರಿ.

ಉಚಿತ ಸಮಾಲೋಚನೆಗೆ :
1800 108 1212
(ಟೋಲ್ ಫ್ರೀ) 9550001133

(ಈ ಕ್ಷೇತ್ರದಲ್ಲಿ ತಜ್ಞರ ತಿಳಿವಳಿಕೆಗೆ ಆಧಾರಿತ ಬರಹ)

- **ಕಾರಣಗಳು ?**
  ಅನುವಂಶಿಕ: ಸಂಶೋಧಕರ ಪ್ರಕಾರ ತದ್ರೂಪಿ ಅವಳಿಯರಲ್ಲಿ ಶೇ. 70 ರಷ್ಟು ಕಂಡರೆ ಅವಳಿಯಲ್ಲದ ಜನರಲ್ಲಿ ಶೇ. 30 ರಷ್ಟು ಅಪಾಯ ಕಂಡುಬರುತ್ತದೆ.
- **ಜೀವನಶೈಲಿ:** ಪದೇಪದೇ ಸೋಂಕುಗಳಿಂದ ಮಾನಸಿಕ ಒತ್ತಡ ವಿಪರೀತ ಮದ್ಯಪಾನ ಸೇವನೆ, ಧೂಮಪಾನ ಮತ್ತು ಬೊಜ್ಜು.
- **ಔಷಧಗಳು** : ಕೆಲವು ಔಷಧಿಗಳ ಧೀರ್ಘಕಾಲದ ಸೇವನೆ ಸೋರಿಯಾಸಿಸ್ ಗೆ ಪ್ರೇರೇಪಣೆ ನೀಡುತ್ತದೆ.

ವಿವರಗಳಿಗೆ
ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಮುನ್ನೋಟ 18-04-2021 ರಿಂದ 24-04-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ದವಸಧಾನ್ಯಗಳ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಲಾಭ ಹೆಚ್ಚುತ್ತದೆ. ಮಿತ್ರರೊಡನೆ ಮಾಡುವ ವ್ಯವಹಾರಗಳಲ್ಲಿ ಎಚ್ಚರಿಕೆ ಇರಲಿ, ಅದರಲ್ಲೂ ಬಾಯಿ ಮಾತಿನ ವ್ಯವಹಾರಗಳಲ್ಲಿ ಹಣ ತೊಡಗಿಸುವುದು ಬೇಡ. ಬ್ಯಾಂಕ್ ಸಾಲ ಪಡೆಯುವಾಗ ಸರಿಯಾಗಿ ದಾಖಲೆಗಳನ್ನು ಪರಿಶೀಲಿಸಿರಿ ಇಲ್ಲವಾದಲ್ಲಿ ವಂಚನೆಗೆ ಒಳಗಾಗುವ ಸಾಧ್ಯತೆಗಳಿವೆ. ಆದಾಯ ಮತ್ತು ವೆಚ್ಚಗಳನ್ನು ಸರಿಯಾಗಿ ಹೊಂದಾಣಿಕೆ ಮಾಡಿಕೊಳ್ಳಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಆತ್ಮೀಯರೊಡನೆ ಸಮಾಗಮ ಆಗಲಿದೆ. ಆಭರಣ ವ್ಯಾಪಾರಿಗಳಿಗೆ ವ್ಯಾಪಾರ ಹೆಚ್ಚುತ್ತದೆ. ಹಿರಿಯ ಅಧಿಕಾರಿಗಳಿಗೆ ರಾಜಕೀಯ ಪ್ರೇರಿತವಾದ ವರ್ಗಾವಣೆಗಳು ಇರುತ್ತವೆ. ಸ್ವಂತ ಆರೋಗ್ಯದಲ್ಲಿ ಸ್ವಲ್ಪ ವ್ಯತ್ಯಾಸಗಳಾಗಬಹುದು. ಪ್ರೀತಿ ಪ್ರೇಮದ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದು ಉತ್ತಮ. ನೂತನ ಸ್ನೇಹಿತರ ವಿಷಯದಲ್ಲಿ ಸ್ವಲ್ಪ ಎಚ್ಚರವಾಗಿರಿ. ಬಂಧುವರ್ಗದಿಂದ ಸಾಕಷ್ಟು ಸಹಾಯ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಹೊಸ ವ್ಯವಹಾರಗಳಲ್ಲಿ ಪಾಲುದಾರರೊಂದಿಗೆ ಸಮಾಲೋಚನೆಗಳು ಅಗತ್ಯ, ಇಲ್ಲವಾದಲ್ಲಿ ವ್ಯವಹಾರದಲ್ಲಿ ಹೊಸ ಕಿರಿಕಿರಿಗಳು ಆಗಬಹುದು. ಗೃಹ ನಿರ್ಮಾಣ ಕಾರ್ಯದಲ್ಲಿ ಸಂಬಂಧಿಗಳಿಂದ ಸಾಕಷ್ಟು ಸಹಾಯ ದೊರೆಯುತ್ತದೆ. ನ್ಯಾಯಾಲಯದಲ್ಲಿನ ದಾವೆಗಳು ನಿಮ್ಮ ಪರವಾಗಿ ಆಗತೊಡಗುತ್ತವೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಸ್ವಲ್ಪ ಅನಿಶ್ಚಿತತೆಯನ್ನು ಕಾಣಬಹುದು. ಹಣದ ಒಳಹರಿವು ಸಾಕಷ್ಟಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವ್ಯಾಪಾರ-ವ್ಯವಹಾರಗಳಲ್ಲಿ ವಹಿವಾಟು ಹೆಚ್ಚುತ್ತದೆ. ಉದ್ಯೋಗದಲ್ಲಿದ್ದ ವೃತ್ತಿ ಅಭದ್ರತೆಯು ದೂರವಾಗುತ್ತದೆ. ಸಂಸಾರದಲ್ಲಿ ದಂಪತಿಯ ಮಧ್ಯೆ ಕಾವೇರಿದ ಮಾತುಗಳು ಆಗಬಹುದು, ಶಾಂತವಾಗಿರುವುದು ಉತ್ತಮ. ಆಧ್ಯಾತ್ಮಿಕ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದಿರುವವರಿಗೆ ಉತ್ತಮ ಗುರುಗಳು ದೊರೆಯುವರು. ಹಿರಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ದೈನಂದಿನ ಚಟುವಟಿಕೆಗಳಲ್ಲಿ ಬಹಳ ಉತ್ಸಾಹವನ್ನು ಕಾಣಬಹುದು. ದೇಹದಲ್ಲಿನ ಪಿತ್ತ ಸಮಸ್ಯೆಯನ್ನು ನಿಯಂತ್ರಣ ಮಾಡಿಕೊಳ್ಳುವುದು ಉತ್ತಮ. ಹಿರಿಯ ರಾಜಕೀಯ ನಾಯಕರುಗಳಿಗೆ ಉನ್ನತ ರಾಜಕೀಯ ಹುದ್ದೆಯನ್ನು ಅಲಂಕರಿಸುವ ಭಾಗ್ಯವಿದೆ. ಧನದ ಒಳಹರಿವಿನಲ್ಲಿ ಏರಿಕೆಯನ್ನು ಕಾಣಬಹುದು. ತಂದೆಯಿಂದ ಸಾಕಷ್ಟು ಧನಸಹಾಯಗಳು ಒದಗಿಬರುತ್ತವೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಒಂದುರೀತಿ ಆಲಸಿ ಮನೋಭಾವ ನಿಮ್ಮನ್ನು ಕಾಡುತ್ತದೆ. ವ್ಯವಹಾರದಲ್ಲಿ ಗುಂಪುಗಾರಿಕೆಯಿಂದಾಗಿ ಧನಹಾನಿ ಆಗಬಹುದು. ಅನ್ಯರ ಮೇಲೆ ವಿನಾಕಾರಣ ಸಂಶಯಪಡುವುದು ಅಷ್ಟು ಒಳಿತಲ್ಲ. ಮಕ್ಕಳ ಅಭಿವೃದ್ಧಿಯಲ್ಲಿ ಒಡಕು ಮಾತುಗಳು ಕೇಳಿಬರಬಹುದು. ಯಾರೋ ನಮಗೆ ಸಹಾಯ ಮಾಡುವವರೆಂದು ನಂಬಿ ಕುಳಿತುಕೊಳ್ಳುವುದು ಅಷ್ಟು ಸಮಂಜಸವಲ್ಲ. ಹಿರಿಯರ ಆರೋಗ್ಯದ ಬಗ್ಗೆ ಗಮನಕೊಡಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3
ಮಕ್ಕಳಿಂದ ಅಗೌರವವನ್ನು ಕಾಣಬೇಕಾದೀತು. ರಾಜಕೀಯ ನಾಯಕರು ಬಾಯಿ ತಪ್ಪಿ ಆಡಿದ ಮಾತಿನಿಂದ ಮುಜುಗರಕ್ಕೆ ಒಳಗಾಗುವರು. ವಿದ್ಯಾರ್ಥಿಗಳಿಗೆ ಕಲಿಕೆಗೆ ಉತ್ತಮ ಅವಕಾಶಗಳು ಇರುತ್ತವೆ. ಇಲಾಖೆಯಲ್ಲಿನ ಬಡ್ತಿಯ ಪರೀಕ್ಷೆಗಳನ್ನು ತೆಗೆದುಕೊಳ್ಳುವವರಿಗೆ ಉತ್ತಮ ಫಲಿತಾಂಶವಿರುತ್ತದೆ. ಬಹಳ ದೂರ ಒಬ್ಬರೇ ವಾಹನ ಚಲಾಯಿಸುವುದು ಅಷ್ಟು ಒಳಿತಲ್ಲ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ
ಶತ್ರುಗಳನ್ನು ಮಣಿಸಲು ನೀವು ಹೂಡುವ ತಂತ್ರಗಳು ಸಾಕಷ್ಟು ಫಲ ಕೊಡುತ್ತವೆ. ಹಣದ ಒಳಹರಿವು ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ನಿಮ್ಮ ವಿಶ್ವಾಸಿಗಳಿಗೆ ಅಗತ್ಯವಾಗಿ ಸಹಾಯ ಮಾಡಲೇಬೇಕಾದ ಸಂದರ್ಭ ಬರುತ್ತದೆ. ನಿಮ್ಮಿಂದ ಸಹಾಯ ಪಡೆದ ನಿಮ್ಮ ಬಂಧುಗಳು ಈಗ ನಿಮ್ಮ ವಿರುದ್ಧ ತಿರುಗಿಬೀಳಬಹುದು ಎಚ್ಚರ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಮಕ್ಕಳ ವಿದ್ಯಾಭ್ಯಾಸಕ್ಕೆ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕಾಗಬಹುದು. ಸಾಲ ಕೊಟ್ಟವರು ಎಡೆಬಿಡದೆ ಬಂದು ಕಾಡಬಹುದು. ಉದ್ಯಮಿಗಳು ತಮ್ಮ ಅಧೀನ ನೌಕರರೊಂದಿಗೆ ಉತ್ತಮ ಸಂಬಂಧವನ್ನು ಇಟ್ಟುಕೊಳ್ಳುವುದು ಒಳ್ಳೆಯದು. ಎಲೆಕ್ಟ್ರಿಕಲ್ ಗುತ್ತಿಗೆದಾರರಿಗೆ ಹೊಸ ಗುತ್ತಿಗೆಗಳು ದೊರೆಯುವ ಸಾಧ್ಯತೆಗಳಿವೆ. ಹಿರಿಯರು, ಕಿರಿಯರ ಮೇಲೆ ದ್ವೇಷಗಳನ್ನು ಸಾಧಿಸದೆ ಇರುವುದು ಒಳ್ಳೆಯದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಉದ್ಯೋಗದ ನಿಮಿತ್ತ ದೂರದೂರಿಗೆ ಪ್ರಯಾಣ ಮಾಡಬೇಕಾಗಬಹುದು, ಇದಕ್ಕೆ ಬೇಕಾದ ಅನುಕೂಲಗಳು ಒದಗಿಬರುತ್ತವೆ. ಮಹಿಳೆಯರಿಗೆ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶಗಳು ಸಹ ದೊರೆಯುತ್ತವೆ. ಬೇರೆಯವರ ಥಳುಕಿನ ಮಾತಿಗೆ ಮರುಳಾಗಿ ದೊಡ್ಡ ಮೊತ್ತದ ಬಂಡವಾಳ ಹೂಡಬೇಡಿರಿ. ಹಿರಿಯರ ಸಲಹೆಗಳು ನಿಮಗೆ ಅನುಕೂಲವನ್ನು ಉಂಟುಮಾಡುತ್ತವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಬಂಧು-ಮಿತ್ರರೊಂದಿಗೆ ದೇವತಾ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳಿವೆ. ಆಹಾರ ವ್ಯತ್ಯಾಸದಿಂದ ವಾಯುಪ್ರಕೋಪ ಕಾಡಬಹುದು. ವ್ಯವಹಾರ ನಿಮಿತ್ತ ಪಾಲುದಾರರೊಂದಿಗೆ ಸಾಕಷ್ಟು ಚರ್ಚೆಗಳನ್ನು ಮಾಡಿ ಅಂತಿಮವಾಗಿ ನಿಮ್ಮ ಅಭಿಪ್ರಾಯವನ್ನು ತಿಳಿಸಿ ಎಲ್ಲರ ಮನಗೆಲ್ಲುವಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಸಂಸಾರ ಸಮೇತ ವಿಹಾರಕ್ಕಾಗಿ ಹೋಗಿ ಬರುವಿರಿ. ವಾಹನ ಮಾರಾಟಗಾರರಿಗೆ ವ್ಯವಹಾರ ಹೆಚ್ಚಾಗುವುದು. ಕಂಪ್ಯೂಟರ್ ಬಿಡಿಭಾಗಗಳನ್ನು ತಯಾರಿಸುವವರಿಗೆ ಮತ್ತು ಮಾರುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿಯಾಗಿ ಆದಾಯ ಹೆಚ್ಚುವುದು. ಧನಾದಾಯ ನಿಮ್ಮ ನಿರೀಕ್ಷೆಯ ಮಟ್ಟಕ್ಕೆ ಇರುತ್ತದೆ. ಕೆಲವು ನೇತ್ರ ತಜ್ಞರಿಗೆ ಬೇಡಿಕೆ ಹೆಚ್ಚಾಗಿ ಕೈತುಂಬಾ ಕೆಲಸವಿರುತ್ತದೆ. ಬೆಳ್ಳಿ ವ್ಯಾಪಾರಿಗಳಿಗೆ ವ್ಯವಹಾರ ವೃದ್ಧಿಸುತ್ತದೆ.

ಪದಬಂಧ 2683



ಮೇಲಿನಿಂದ ಕೆಳಕ್ಕೆ
1. ಸಾವಿರ ವರ್ಷಗಳ ಎಣಿಕೆಯ ಅಳತೆ 5
2. ಮಂದಿಯ ಒಪ್ಪಿಗೆಯಿಂದ ಬಂದ ಧರ್ಮ 5
3. ದೊರೆಯ ಬಿಳಿ ಹಕ್ಕಿ ಈಗ ರಸ್ತೆಗಿಳಿದಿದೆ 4
4. ಅಯೋಧ್ಯೆಯ ದೇವಾಲಯ ಸಿರಿಯಿಂದ ಕೂಡಿದೆ 6
5. ದಶರಾಥಾತ್ಮಜನ ಮಂತ್ರ ಮೋಕ್ಷಕ್ಕೆ ದಾರಿ 5
6. ಸಾಗರದ ಅಂಚು; ಕಡಲು ಭೂಮಿಯನ್ನು ಮುಟ್ಟುವ ಸ್ಥಳ 5
11. ಬಾಯನ್ನು ಸಿಹಿಮಾಡುವ ತಿನಿಸು 3
13. ಗುಡಿಸಿ, ಸಾರಿಸಿದ ನಂತರ ಮೂಡುವ ಕಲೆ 3
14. ಒಂದು ಕಡೆ ನೆಲೆಮಾಡದೆ ಊರಿನಿಂದ ಊರಿಗೆ ವಲಸೆಹೋಗುವ ಗುಂಪು 6
15. ಹಾದಿ ಕಾಣದಾದಾಗ ದೇವರನ್ನು ಹೀಗೆ ಕೇಳಬಹುದೆ? 5
16. ಮನೆ ಮಠ ಕಳೆದುಕೊಂಡು ಆಶ್ರಯ ಬಯಸುವವರು 5
17. ಸಂತೋಷ ನೀಡಲು ಹಾರಿ ಬರುವ ಬಹುಮಾನ 5
18. ಈ ಹಳ್ಳದಲ್ಲಿ ಬರೀ ಕೆಂಪು ಮಣ್ಣು 5
20. ದೇವತೆಗಳು ಸೇವಿಸುವ ದ್ರವ 4

ಎಡದಿಂದ ಬಲಕ್ಕೆ
1. ನಾವು ನೀವು ಎಲ್ಲರೂ ಸೇರಿ ಆಗಿರುವ ಬಾಳಿನ ವ್ಯವಸ್ಥೆ 3
3. ಅರಸನಿಗೆ ಸೇರಿದ ಐಶ್ವರ್ಯ 3
5. 'ರಾಜನ' ಪ್ರವೃತ್ತಿ 3
7. ತಾತ್ಕಾಲಿಕ ಹಿಂದಿ ಗದ್ದಲ 3
8. ಯುದ್ಧವೇ ಹೀಗೆ ಅಲ್ಲೋಲ ಕಲ್ಲೋಲ 3
9. ಮಂದವಾದ ದಾರದಲ್ಲಿ ಪೋಣಿಸಬಹುದಾದ ಹೂವು 3
10. ಮಿತವಾಗಿ ನಮಿಸುವವಳು 3
12. ಹೂವಿನ ಗುಚ್ಛದ ದಾನಿ 3
14. ನಡವಳಿಕೆಯ ಪಕ್ವತೆ; ಅಂತಿಮ ಕ್ರಿಯೆ 3
15. ಬೇಡಿದ್ದನ್ನು ಕೊಡುವವಳು 3
17. ಮಹಾನಗರಗಳ ಆಡಳಿತ ವ್ಯವಸ್ಥೆ 3
19. ಬರಿದು ಮಾಡುವ ಅಂಗ್ಲ ಕಳ್ಳತನ 3
20. ಮಾರಿಯಾಗುವ ಆಲಸಿ 3
21. ವಿರಳವಾದ ಹುಟ್ಟು 3
22. ಒಳ್ಳೆಯ ಮಾರ್ಗದರ್ಶಕ 3
23. ಸಲೀಸಾದ ರಾಗ ಹಿಂದುಮುಂದಾಗಿದೆ 3
24. ಚೂರು ಪಾರು ಚಿಂದಿಯನ್ನು ಕೊಂಡು ಮಾರುವವ 3

ಪದಬಂಧ ಉತ್ತರ -2682

ಮೇಲಿಂದ ಕೆಳಕ್ಕೆ
1. ಅಮೃತಸರ 2.ಸಮಾನಧರ್ಮ 3.ನಾಯಿಮರಿ 4.ನವನವೀನ 9.ಗಿಲಕಿ 11.ವಿಕೃತ 12.ವಸುಧಾ 13.ಗಿಡುಗ 14. ಜಾತಿಕಲಹ 15.ಸಕಲಮತ 16.ತುರಗಸೇನೆ 17.ರಂಜನೀಯ

ಎಡದಿಂದ ಬಲಕ್ಕೆ
1.ಅತಿರಸ 3.ನಾಗಾರ್ಜುನ 5.ಮಾವಿನಕಾಯಿ 6.ತಪೋವನ 7.ಮಧುವನ 8.ಧವಳಗಿರಿ 10.ರವಿವರ್ಮ 12.ವನ 13.ಗಿರಾಕಿ 14.ಜಾತ 15.ಸಪ್ತಧಾತು 17.ರಂಗನಾಯಕ 18.ಕಪಿಧ್ವಜ 19.ಲಕ್ಷಭಾಗ 20.ನೀತಿನಿಯಮ 21.ಹರಿಪ್ರಿಯ 22.ತಳಮನೆ

ನಾಟಕವೊಂದರ ಸಿಂಹದ ವೇಷದಲ್ಲಿ ಕೆ.ಪಿ. ಹಾಸ್ಯಗಾರ ಕರ್ಕಿ. ಈ ವೇಷ ನಾಟಕಕ್ಕೆ ನೈಜತೆಯ ಮೆರುಗು ತುಂಬಿತ್ತು

ನಾಟಕಗಳಿಗೆ ಜೀವ ತುಂಬಿದ್ದ ಶಾಂತರೆಡ್ಡಿ, ಬಸಪ್ಪ ಮತ್ತಿತರ ಕಲಾವಿದರು

ಮುರಿದು ಕಟ್ಟೋಣ ರಂಗದ ಶಿಲ್ಪ

ಜಿ.ಎಂ. ಶಿರಹಟ್ಟಿ

ಎಲೆಕ್ಟ್ರಾನಿಕ್ ದೃಶ್ಯ ಮಾಧ್ಯಮದ ವಿರಾಟ ಸ್ವರೂಪ ಪ್ರೇಕ್ಷಕರ ಎದುರು ಇರುವಾಗ, ಟಿ.ವಿ, ಮೊಬೈಲ್‌ನಂತಹ ಚಿಕ್ಕ ಪರದೆ ನಾವಿರುವ ಸ್ಥಳಗಳನ್ನೆಲ್ಲ ಪ್ರವೇಶಿಸಿರುವಾಗ ಅವುಗಳ ನಡುವೆ ವೃತ್ತಿರಂಗಭೂಮಿಯು ಯಶಸ್ಸನ್ನು ಗಳಿಸಲು ಅದು ಹೊಸ ಶೈಲಿಯ ದೃಶ್ಯ ಮಾಧ್ಯಮ ಆಗಿರಬೇಕಾದುದು ಅತ್ಯವಶ್ಯ. ನಾಟಕ ಎನ್ನುವುದು ಯಾವಾಗಲೂ ಸಮಾಜದ ಕನ್ನಡಿ ಎನ್ನುವಾಗ, ವೃತ್ತಿರಂಗಭೂಮಿ ಈಗಿನ ಪ್ರೇಕ್ಷಕರಿಗಾಗಿ ಪ್ರಸ್ತುತ ಸಮಾಜದ ಓರೆಕೋರೆಗಳನ್ನು ಪ್ರಸ್ತುತಪಡಿಸುವ ನೂತನ ಪ್ರಯೋಗಗಳನ್ನು ಅಳವಡಿಸಿಕೊಳ್ಳುವ ಅನಿವಾರ್ಯ ಇದೆ. ಈ ಬದಲಾವಣೆಗೆ ಬೇಕಾಗಿರುವುದು ಹೊಸ ಹೊದಿಕೆಯ ಭಿನ್ನವಾದ ನಾಟಕಗಳ ರಚನೆ.

ನೆನಪಿನಲ್ಲಿ ಉಳಿಯುವ ಸಾಮಾಜಿಕ ಸಂದೇಶದೊಡನೆ ನಮ್ಮ ಬುದ್ಧಿಯನ್ನು ಚಿವುಟುವ ನಾಟಕಗಳ ರಚನೆ ಅಗತ್ಯವಾಗಿದೆ. ಈಗಿನ ಎಲೆಕ್ಟ್ರಾನಿಕ್ ಉಪಕರಣಗಳ ಯುಗದಲ್ಲಿ ವೃತ್ತಿರಂಗಭೂಮಿ ತನ್ನ ರೂಪವನ್ನು ಬದಲಿಸಿಕೊಳ್ಳುವ ಅನಿವಾರ್ಯವೂ ಎದುರಾಗಿದೆ. ನಮ್ಮೆಲ್ಲರಿಗೂ ಗೊತ್ತಿರುವಂತೆ ವೃತ್ತಿರಂಗಭೂಮಿಯ ಪ್ರತಿಯೊಂದು ಪ್ರದರ್ಶನವನ್ನೂ ಪ್ರಯೋಗವೆಂದೇ ಕರೆಯಲಾಗುತ್ತದೆ. ಈ ಪ್ರಯೋಗವನ್ನು ಯಶಸ್ವಿಗೊಳಿಸಲು 'ನಾಂದಿ' ಮತ್ತು 'ಮಂಗಳಾರತಿ'ಯ ನಡುವಿನ ಅಂತರವನ್ನು ಕಾಪಾಡಲು ಈ ವೃತ್ತಿಪರರು ಪಡುವ ಪಾಡು ಹೇಳತೀರದು. ಅಂತಹ ಹೋರಾಟದಲ್ಲಿಯೂ 50-60 ಜನರು ತಮ್ಮ ದೈನಂದಿನ ಸಮಸ್ಯೆಗಳನ್ನು ಮರೆತು ರಂಗಭೂಮಿಯ ಮೇಲೆ ಬಂದು ಪಾತ್ರಗಳಿಗೆ ಪ್ರಾಣತುಂಬಿ ಪ್ರೇಕ್ಷಕರಿಗೆ ಮುದ ನೀಡುತ್ತಿರುವ ಕೆಲಸ ಶ್ಲಾಘನೀಯವಾದುದು. ಇಂತಹ ರಂಗಭೂಮಿಗೆ ಇದೀಗ ನವ್ಯ ಹೊದಿಕೆಯನ್ನು ಹೆಣೆಯಬೇಕಾಗಿದೆ.

ಈ ನಾಟಕಗಳ ಕಥಾವಸ್ತು ಸಂಪೂರ್ಣವಾಗಿ ಸಮಾಜಕ್ಕೆ ಹಿಡಿದ ಕೈಗನ್ನಡಿ ಆಗಿದ್ದರೂ ಅವುಗಳ ರಚನೆ, ನಿರ್ಮಾಣ ಪ್ರಯೋಗಿಸುವ ವಿಧಾನ ಇವು ಈಗಿನ ಬದಲಾದ ಪ್ರೇಕ್ಷಕರ ರುಚಿಗೆ ಅನುಗುಣವಾಗಿವೆಯೇ ಎನ್ನುವುದು ಇಲ್ಲಿನ ಪ್ರಮುಖ ಪ್ರಶ್ನೆ. ವೃತ್ತಿರಂಗಭೂಮಿಯ ಪ್ರತಿಯೊಂದು ಪ್ರಯೋಗ ಒಂದು ಆಹ್ವಾನದಂತಿರುವಾಗ ನಾಟಕ ರಚನೆಗೆ ಹಲವು ಅಂಶಗಳನ್ನು ಗಮನಿಸಬೇಕಾಗುತ್ತದೆ.

ಸಮಕಾಲೀನ ವಿಷಯ ಕುರಿತಾದ ಉತ್ತಮ ಕಥಾವಸ್ತು, ಪರಿಣಾಮಕಾರಿಯಾದ ಉಪಕಥೆ, ನಾಟಕದ ಸೂಕ್ತ ವಿನ್ಯಾಸ, ಪ್ರೇಕ್ಷಕ ಕೇಂದ್ರಿತವಾದ ಸಂಭಾಷಣೆ, ಸಮಾಜದಲ್ಲಿ ಪರಿಚಿತ ಪಾತ್ರಗಳ ರಚನೆ, ಆಡು ಭಾಷೆಯ ಬಳಕೆ, ಸಹನೆಯನ್ನು ಪರೀಕ್ಷಿಸದ ದೃಶ್ಯ ಹಾಗೂ ಮಿತವಾದ ಪ್ರಯೋಗಾವಧಿ ಈ ಅಂಶಗಳು ತುಂಬಾ ಮುಖ್ಯವಾದವು.

ನಾಟಕದ ಆರಂಭಕ್ಕೂ ಮುನ್ನ ಗಜಾನನ ಸ್ತುತಿ

ನಂಬಲು ಸಾಧ್ಯವಾಗುವಂತಹ ಕಥೆ ಇರದಿದ್ದರೆ ನಾಟಕವೇ ಅನಿಸುವುದಿಲ್ಲ. ಕವಿಗಳ ಕಲ್ಪನೆ (ವೃತ್ತಿರಂಗಭೂಮಿಯ ನಾಟಕ ಬರೆಯುವವರಿಗೆ ಕವಿ ಎನ್ನುತ್ತಾರೆ) ಎಲ್ಲವೂ ನಾಟಕವಾಗುವುದಿಲ್ಲ. ಸಾಮಾಜಿಕ ಸಮಸ್ಯೆಗಳು ಈಗಿನ ನಾಟಕಗಳಲ್ಲಿ ಇದ್ದರೂ ಭರ್ಜರಿ ಪ್ರಯೋಗಗಳ ನಡುವೆ ನಾಟಕದ ಮುಖ್ಯ ಸಂದೇಶವೇ ಮರೆಯಾಗಿ ಬಿಡುತ್ತದೆ (ಈಗಿನ ಹಲವು ನಾಟಕಗಳ ಹೆಸರೇ ಬೇರೆ... ನಾಟಕದ ಕಥಾವಸ್ತುವೇ ಬೇರೆ).

ರಂಗಭೂಮಿ

ಪೌರಾಣಿಕ, ಐತಿಹಾಸಿಕ ನಾಟಕಗಳು ಈಗೀಗ ಕಲ್ಪನಾತೀತವಾಗಿ ಅವುಗಳ ಮೇಲಿನ ವಿಶ್ವಾಸ ಕಡಿಮೆ ಆಗುತ್ತಿದೆ. ನಾಟಕ ನೋಡಿದ ಪ್ರತಿಯೊಬ್ಬ ಪ್ರೇಕ್ಷಕನ ಭಾವನೆಗಳಿಗೆ ಎಲ್ಲಿಯೋ ಒಂದೆಡೆ ಅವನ ಮನ ಮುಟ್ಟುವಂತಹ ಕಥಾನಕ ಅವಶ್ಯ. ನೈತಿಕತೆಯ ಪಾಠ ಹೇಳುವುದಕ್ಕಿಂತ ಸಾಮಾಜಿಕ ಜೀವನದ ಮಾರ್ಗ ಅನುಸರಿಸುವ ರೀತಿನೀತಿ ಹೇಳುವ ನಾಟಕಗಳ ಕಥಾವಸ್ತು ಎಲ್ಲರಿಗೂ ಗ್ರಹ್ಯವಾಗುತ್ತದೆ. ಇಂತಹ ಕಥಾವಸ್ತು ಅಥವಾ ನೈಜ ಘಟನೆಗಳತ್ತ ಗಮನ ಹರಿಸಬೇಕು (ವೃತ್ತಿರಂಗ ಭೂಮಿಯ ನಾಟಕಗಳಲ್ಲಿ ನೈಜ ಘಟನೆಗಳನ್ನು ಒಳಗೊಂಡ ಕಥಾನಕಗಳು ಕಡಿಮೆ). ಸಮಾಜದಲ್ಲಿ ಈಗಿರುವ ಆದರ್ಶ ವ್ಯಕ್ತಿಯೊಬ್ಬ ನಮ್ಮ ನಾಟಕದ ಕಥಾವಸ್ತು ಆಗಬೇಕು. ಈಗಿನ ಘಟನೆಗಳು ನಮ್ಮ ಚಿಂತನೆಗೆ ಒಳಪಡಬೇಕು. ಇದು ನಮ್ಮ ಕಥೆಯಾಗಬೇಕು.

ಕಥಾವಸ್ತುವಿನಲ್ಲಿ ಬರುವ ಪಾತ್ರಗಳಿಗೆ ಸಂಬಂಧಿಸಿ ಉಪಕಥೆಗಳನ್ನು ಸೇರಿಸುವುದು ಅತಿಮುಖ್ಯ. ಕುಟುಂಬದಲ್ಲಿರುವ ಪ್ರತಿಯೊಬ್ಬ ವ್ಯಕ್ತಿ ತನ್ನ ವ್ಯವಹಾರದಲ್ಲಿ, ಸಂಬಂಧಗಳಲ್ಲಿ ಒಂದಿಲ್ಲ ಒಂದು ರೀತಿಯ ಭಾಗವಾಗಿರುತ್ತಾನೆ. ಅಂತಹ ಭಾಗಗಳ ಉಪಕಥೆಗಳು ಕಥೆಯ ಹಂದರಕ್ಕೆ ಮತ್ತಷ್ಟು ನೈಜತೆಯನ್ನು ತರಬಲ್ಲವು.

ಪ್ರಯೋಗಕ್ಕೆ ಹೋಗುವ ಮುನ್ನ ನಾಟಕದ ಹಂದರವನ್ನು ಹಾಕಬೇಕು (ಡಿಸೈನಿಂಗ್). ಇದನ್ನು ಒಟ್ಟಾಗಿ ಓದಿದಾಗ ನಾವು ನೋಡುವ ನಾಟಕ ಸಂಪೂರ್ಣವಾಗಿ ಹೇಗೆ ಕಾಣಬಹುದು ಎಂಬುದರ ಅರಿವಾಗುತ್ತದೆ. ಆದ್ದರಿಂದ ಬರೆದುದನ್ನು ಹಲವು ಬಾರಿ ಓದಬೇಕು. ಬೇರೆಯವರಿಗೆ ಕೇಳಿಸಬೇಕು. ಆಗ ನಾಟಕದ ಒಂದು ವಿನ್ಯಾಸ ಕೊನೆಗೆ ರೂಪುಗೊಳ್ಳುತ್ತದೆ. ನೋಡುತ್ತಾ ಬರೆದು, ನಂತರ ಬರೆದಂತೆ ನೋಡಬೇಕಾದುದು ನಾಟಕದ ವಿನ್ಯಾಸಕ್ಕೆ ಅತ್ಯವಶ್ಯ.

ಪ್ರೇಕ್ಷಕನಾಗಿ ಬರೆದಾಗ ನೋಡಿ ತಿಳಿದುಕೊಳ್ಳುವ ಸಹಜಸ್ಥಿತಿ ಉಂಟಾಗುತ್ತದೆ. ಹೇಳುವವನು ಮೊದಲು ಕೇಳುವವನಾಗಬೇಕು ಎಂಬಂತೆ ಈ ನಾಟಕಗಳನ್ನು ಬರೆಯುವವನು ಕೊನೆಯ ಸಾಲಿನ ಪ್ರೇಕ್ಷಕನಾಗಬೇಕು. ಕಥಾವಸ್ತು ಆಯ್ಕೆ ಮಾಡುವಾಗ, ಪಾತ್ರಗಳನ್ನು ನಿರ್ಮಿಸುವಾಗ, ಭಾಷೆಯನ್ನು ಬಳಸುವಾಗ, ಪಾತ್ರಗಳ ಚಲನವಲನ ನಿರ್ಧರಿಸುವಾಗ ಹಾಗೂ ದೃಶ್ಯಗಳನ್ನು ಚಿತ್ರಿಸುವಾಗ ಇವೆಲ್ಲ ಯಾರಿಗಾಗಿ? ಯಾರ ಎದುರು? ಇವುಗಳನ್ನು ನೋಡುವವರ್ಯಾರು? ಇವುಗಳನ್ನು ನೋಡಿ ಅವರು ಅರ್ಥೈಸಿಕೊಳ್ಳಲು ಸಾಧ್ಯವೇ? ತನಗಾದ ಅನುಭವ, ಪ್ರೇಕ್ಷಕನಿಗೆ ಆದೀತೆ? ಈ ಪ್ರಶ್ನೆಗಳಿಗೆ ಬರೆಯುವವನು ಸರಿಯಾದ ಉತ್ತರ ಪಡೆದರೆ ಆಗ ಯಶಸ್ಸಿನ ಮೊದಲ ಮೆಟ್ಟಲು ಹತ್ತಿದಂತೆ.

ನಾವು ದಿನವೂ ನೋಡುವ, ಭೇಟಿ ಆಗುವ ಸಂಬಂಧಗಳ, ವ್ಯವಹಾರಗಳ ಪಾತ್ರಗಳು ಪರಿಚಿತವಾಗಿರಬೇಕು. ಇವರ್‍ಯಾರು ಎಂಬ ಪ್ರಶ್ನೆ ಉದ್ಭವಿಸದೆ ಇವರು ನಮ್ಮವರು ಎಂಬ ಉದ್ಗಾರ ನೋಡುವವನಿಂದ ಹೊರಡಬೇಕು. ಇಂತಹ ಪಾತ್ರಗಳು ನೋಡುವವನಿಗೆ ಬಹಳ ಹತ್ತಿರವಾಗುತ್ತವೆ.

ಆಡು ಭಾಷೆಯ ಉಪಯೋಗ ಅತ್ಯಂತ ಅವಶ್ಯ. ದಿನವೂ ನಮ್ಮ ದೈನಂದಿನ ಜೀವನದಲ್ಲಿ ಆಡಿ, ಕೇಳಿದ ಭಾಷೆ ನಾಟಕದಲ್ಲಿನ ಪಾತ್ರಗಳ ಭಾಷೆಯಾಗಿರಬೇಕು. ಶಬ್ದಗಳು ಪರಿಚಿತವಾಗಿರಬೇಕು. ದ್ವಂದ್ವಾರ್ಥಗಳುಳ್ಳ ಶಬ್ದಗಳನ್ನು ಪ್ರಯೋಗಿಸಲೇಬಾರದು. ಅಶ್ಲೀಲ ಉಚ್ಚಾರಣೆಯ ಶಬ್ದಗಳುಳ್ಳ ವಾಕ್ಯಗಳನ್ನು ರಚಿಸಲೇಬಾರದು. ಪಾತ್ರಗಳ ಗಾಂಭೀರ್ಯಕ್ಕೆ ತಕ್ಕಂತೆ ಭಾಷೆಯ ಪ್ರಯೋಗ ಆಗಬೇಕು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಹೀಗೆ ಯಾವುದೇ ನಾಟಕವಾಗಲಿ, ಯಾವುದೇ ಪಾತ್ರವಾಗಲಿ ಅವುಗಳ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವ ಭಾಷೆ ಉಪಯೋಗಿಸಬೇಕು.

ರಂಗದ ಮೇಲೆ ಎಷ್ಟೇ ಸಹಜತೆ ತರಲು ಪ್ರಯತ್ನಿಸಿದರೂ, ಆ ದೃಶ್ಯದ ನಂತರ ಅದು ನಾಟಕವೆಂಬ ಮಾತು ಆ ನೈಜತೆಯನ್ನು ಮರೆಮಾಚುತ್ತದೆ. ಅಸಾಧ್ಯವಾದ ದೃಶ್ಯಗಳಿಂದ ನಾಟಕವನ್ನು ತುಂಬಬಾರದು. ದೃಶ್ಯಗಳು ಪಾತ್ರಗಳ ಸುತ್ತಮುತ್ತಲಿನ ಪರಿಸರವನ್ನು ಚಿತ್ರಿಸುವಂತಿರಬೇಕೇ ಹೊರತು ಕಲ್ಪನಾತೀತವಾಗಿರಬಾರದು.

ನಾಟಕ ಬರೆಯುವಾಗ ಅದರ ಅವಧಿಯನ್ನು ಮುಂದಿಟ್ಟುಕೊಂಡು ಅದನ್ನು ರಚಿಸುವ ಅವಶ್ಯಕತೆಯಿಲ್ಲ. ಕಥಾವಸ್ತುವಿನ ವಿವರಣೆ, ಅದರ ಪ್ರಾರಂಭ, ಅಂತ್ಯದವರೆಗೆ ಅದರ ಕಥನ ನಡೆಯಬೇಕು. ನಾಟಕದ ವಸ್ತುವನ್ನು ಅನವಶ್ಯಕವಾಗಿ ವಿಸ್ತರಿಸಬಾರದು. ಹೆಚ್ಚಿನ ಅವಧಿಯ ನಾಟಕಗಳು ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳುವಲ್ಲಿ ವಿಫಲವಾಗುತ್ತವೆ. ಆದ್ದರಿಂದ ಕಥೆಯ ವಿಸ್ತಾರಕ್ಕೆ ಅನುಗುಣವಾದ ಅವಧಿಯನ್ನು ಅನುಸರಿಸುವುದು ಉತ್ತಮ. ಇಂತಹ ಹಲವು ಅಂಶಗಳು ನಾಟಕ ರಚನೆಯಲ್ಲಿ ಇದ್ದರೂ ಇನ್ನೂ ಒಂದೆರಡು ಅಂಶಗಳನ್ನು ಸೇರಿಸಬಹುದು.

ನಾಟಕವನ್ನು ಬರೆದ ಮೇಲೆ ಕಂಪನಿ ನಾಟಕದ ಮಾಲೀಕ, ಮುಖ್ಯ ಪಾತ್ರಧಾರಿ, ಸಂಗೀತ ನಿರ್ದೇಶಕ ಹಾಗೂ ಸ್ನೇಹಿತರ ಎದುರಿಗೆ ಓದಬೇಕು (ಟೇಬಲ್ ರೀಡಿಂಗ್). ಆಗ ಈ ನಾಟಕ ಜನರಿಗೆ ಎಷ್ಟರ ಮಟ್ಟಿಗೆ ತಲುಪಬಹುದೆಂಬ ಮನವರಿಕೆಯಾಗುತ್ತದೆ. ಒಂದು ನಾಟಕ, ಅದರ ಕಂಪನಿಯ ಹೆಸರು, ಅದರಲ್ಲಿ ಅಭಿನಯಿಸುವ ನಟ ನಟಿಯರು ಬಹಳಷ್ಟು ದಿನ ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯಬೇಕಾದರೆ ನಾಟಕದ ಕಥಾವಸ್ತು ಮುಖ್ಯ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನೂರೈವತ್ತು ವರ್ಷಗಳಷ್ಟು ಇತಿಹಾಸ ಹೊಂದಿರುವ ವೃತ್ತಿರಂಗಭೂಮಿ ಜೀವಂತವಾಗಿ ಉಸಿರಾಡಬೇಕಾದರೆ ಅದರ ಶಿಲ್ಪವನ್ನು ಮುರಿದು ಕಟ್ಟುವುದು ಇಂದಿನ ತುರ್ತು ಎಂಬುದನ್ನೂ ಮರೆಯಬಾರದು. ❖

ಕಲ್ಲಿನ ತಲೆದಿಂಬು...

...ಹಿಂದಿನ ಪುಟದಿಂದ

ಸ್ಥಳೀಯರಿಗೇ ಗೊತ್ತಿರದ ಈ ಜಾಗಕ್ಕೆ ಹೊರಗಿನ ಅನೇಕರು ಭೇಟಿ ನೀಡಿ ಭೂಮಿಚರಿತ್ರೆಯ ಅನೇಕ ರಹಸ್ಯಗಳನ್ನು ಅರಿಯಲು ಪ್ರಯತ್ನಿಸುತ್ತಾರೆ. ಇದರ ಮಹತ್ವವನ್ನರಿತ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ, ಮರಡಿಹಳ್ಳಿಯ ದಿಂಬಿನಾಕಾರದ ಕಲ್ಲುಗಳನ್ನು 'ಪಿಲ್ಲೊಲಾವ' ಎಂದು ಕರೆದು, ಅವುಗಳಿರುವ ಪ್ರದೇಶಕ್ಕೆ ಭೂವೈಜ್ಞಾನಿಕ ವಿಸ್ಮಯ ತಾಣ ಎಂಬ ಮಾನ್ಯತೆಯನ್ನು ನೀಡಿದೆ.

ಡೈನೊಸಾರ್ ಮೊಟ್ಟೆ: ಅವು ಎಂಬತ್ತರ ದಶಕದ ಆರಂಭದ ದಿನಗಳು. ಗುಜರಾತ್‌ನ ಮಹಿಸಾಗರ್ ಜಿಲ್ಲೆಯ ರೈಯೋಲಿಯಲ್ಲಿ ಉತ್ಖನನಕ್ಕೆ ಬಂದ ಭೂ ವಿಜ್ಞಾನಿಯೊಬ್ಬ ಬಾಯಾರಿಕೆ ನೀಗಿಕೊಳ್ಳಲು ಹತ್ತಿರದ ಗುಡಿಸಲಿನ ಬಳಿ ಹೋಗಿ ಕುಡಿಯಲು ನೀರು ಕೇಳಿದ. ಕಟ್ಟೆಯ ಕಲ್ಲಿನ ಮೇಲೆ ಕೆಂಪು ಮೆಣಸಿನ ಚಟ್ನಿ ಅರೆಯುತ್ತಿದ್ದ ಕಾಶೀಬಾಯಿ 'ಇದೋ ಬಂದೆ' ಎಂದು ಒಳಗಿನಿಂದ ನೀರು ತಂದು ಕೊಟ್ಟಳು. ಅಷ್ಟರಲ್ಲಿ ವಿಜ್ಞಾನಿಯ ಗಮನ ಚಟ್ನಿ ರುಬ್ಬಲು ಬಳಸುತ್ತಿದ್ದ ರುಬ್ಬು ಕಲ್ಲಿನ ಮೇಲೆ ಹರಿದಿತ್ತು. ಅದರ ಆಕಾರ, ಗಾತ್ರಗಳು ಸಾಮಾನ್ಯ ರುಬ್ಬುಗುಂಡಿಗಿಂತ ಭಿನ್ನವಾಗಿದ್ದವು. ಇದೆಲ್ಲಿ ಸಿಕ್ಕಿತು? ಎಂದಾಗ ಊರ ದೇವಸ್ಥಾನದ ಹತ್ತಿರ ಬಾವಿ ಅಗೆಯುತ್ತಿದ್ದಾಗ ಇಂಥ ಅನೇಕ ಗುಂಡುಗಳು ಸಿಕ್ಕಿದ್ದವು, ಚಟ್ನಿ ಅರೆಯಲು ಸರಿಯಾಗಿದೆ ಎಂದು ನಾನೂ ಎರಡನ್ನು ತಂದೆ' ಎಂದಳು. ಅದನ್ನು ಕೈಯಲ್ಲಿ ಹಿಡಿದು ಪರೀಕ್ಷಿಸಿದಾಗ, ಮೇಲುನೋಟಕ್ಕೆ ಅದು ಸಾಮಾನ್ಯ ಕಲ್ಲಲ್ಲ ಎಂದು ವಿಜ್ಞಾನಿಗೆ ತಿಳಿಯಿತು. ಒಂದನ್ನು ಲ್ಯಾಬಿಗೆ ತಂದು ಪರೀಕ್ಷಿಸಿದಾಗ ಗೊತ್ತಾಗಿದ್ದು ಅದು ಎಂಟೂವರೆ ಕೋಟಿ ವರ್ಷಗಳ ಹಳೆಯ ಡೈನೊಸಾರ್ ಮೊಟ್ಟೆ ಎಂದು!

ಬೆರಗಾದ ಕಾಶೀಬಾಯಿ, 'ಇದು ನಮ್ಮ ಹಳ್ಳಿಯ ಪ್ರತೀ ಮನೆಯಲ್ಲೂ ಇದೆ, ಕೆಲವರು ಇದನ್ನು ದೇವರಂತೆ ಪೂಜಿಸುತ್ತಾರೆ' ಎಂದಳು. ದಂಗಾಗುವ ವಿಜ್ಞಾನಿ, ಭೂ ವಿಜ್ಞಾನಿಗಳ ದೊಡ್ಡ ತಂಡವನ್ನೇ ಕರೆಸಿಕೊಂಡು ವ್ಯವಸ್ಥಿತವಾಗಿ ವರ್ಷಗಟ್ಟಲೇ ನೆಲ ಅಗೆದು ಡೈನೊಸಾರ್‌ನ ಅಸ್ಥಿಪಂಜರ, ಎಲುಬು, ಮೊಟ್ಟೆಗಳನ್ನು ಸಂಗ್ರಹಿಸಿದ. ಸತತ ಸಂಶೋಧನೆಯ ನಂತರ ದೊರೆತ ಮೊಟ್ಟೆಗಳು ಮಾಂಸಾಹಾರಿ ಜಾತಿಯ ರಾಜಾಸಾರಸ್ ನಾರ್ಮಡೆನ್ಸಿಸ್ ಎಂಬ ಡೈನೊಸಾರಸ್‌ನವು ಎಂದು ಖಚಿತಗೊಂಡಿತು.

30 ಅಡಿ ಎತ್ತರದ ದೈತ್ಯ ಸರೀಸೃಪದ, 8.5 ಕೋಟಿ ವರ್ಷಗಳಷ್ಟು ಹಳೆಯ ಒಂದು ಸಾವಿರ ಮೊಟ್ಟೆಗಳು ಇದುವರೆಗೆ ಸಿಕ್ಕಿವೆ. ಹಿಂದೆ ಆ ಭಾಗವನ್ನಾಳುತ್ತಿದ್ದ ನವಾಬ್ ಮೊಹಮದ್ ಸಲಾಬತ್ ಖಾನ್‌ರ ಮಗಳು ಆಲಿಯಾಳ ಒತ್ತಾಯದಿಂದ ಈಗ ರೈಯೋಲಿಯಲ್ಲಿ 25 ಸಾವಿರ ಚದರ ಅಡಿಯ ಡೈನೊಸಾರ್ ಪಳೆಯುಳಿಕೆ ಪಾರ್ಕ್ ತಲೆ ಎತ್ತಿದೆ. ಹತ್ತು ಗ್ಯಾಲರಿಗಳಿವೆ. ಟೈಂ ಮೆಶೀನ್ ಕೂಡಾ ಇದ್ದು ನೀವು ಕೋಟ್ಯಂತರ ವರ್ಷ ಹಿಂದಕ್ಕೆ ಚಲಿಸಿ, ಡೈನೊಸಾರ್‌ಗಳನ್ನು ನೋಡಿದ ಕಾಲ್ಪನಿಕ ಅನುಭವ ಪಡೆದುಕೊಳ್ಳುವ ವಿಶೇಷ ವ್ಯವಸ್ಥೆಯೂ ಇದೆ.

ರಾಮಗಡದ ಮಹಾಕುಳಿ: 16.5 ಕೋಟಿ ವರ್ಷಗಳ ಹಿಂದೆ ರಾಜಸ್ಥಾನದ ವಿಂಧ್ಯ ಪರ್ವತ ಪ್ರದೇಶದ ಬರನ್ ಜಿಲ್ಲೆಯಲ್ಲಿ ಬಿದ್ದ ಉಲ್ಕಾಶಿಲೆಯೊಂದು ಮೂರೂವರೆ ಕಿಲೊಮೀಟರ್ ವ್ಯಾಸ ಮತ್ತು 200 ಮೀಟರ್ ಆಳದ ಕುಳಿಯೊಂದನ್ನು ಸೃಷ್ಟಿಸಿತ್ತು. 1869ರಲ್ಲಿ ಪ್ರಥಮವಾಗಿ ಇದನ್ನು ಪತ್ತೆಮಾಡಿದ ಭಾರತೀಯ ಭೂ ಸರ್ವೇಕ್ಷಣಾ ಸಂಸ್ಥೆಯ ವಿಜ್ಞಾನಿಗಳು ಈ ಜಾಗಕ್ಕೆ 2016ರಲ್ಲಿ ಭೂವೈಜ್ಞಾನಿಕ ಸ್ಮಾರಕ ಎಂಬ ಮಾನ್ಯತೆ

ಗುಜರಾತಿನ ರೈಯೋಲಿಯಲ್ಲಿ ಸಿಕ್ಕ ಡೈನೊಸಾರ್ ಮೊಟ್ಟೆಗಳ ಅವಶೇಷಗಳು

ನೀಡಿದ್ದಾರೆ. ಈ ಜಾಗದಲ್ಲೀಗ ಒಂದು ಕಿಲೋಮೀಟರ್ ಉದ್ದ ಮತ್ತು 250 ಮೀಟರ್ ಅಗಲದ ವಿಶಾಲ ಕೆರೆ ಮತ್ತು ಹತ್ತನೆಯ ಶತಮಾನದಲ್ಲಿ ನಿರ್ಮಾಣಗೊಂಡ ಖಜುರಾಹೊ ಶಿಲ್ಪ ಮಾದರಿಯ ಶಿವನ ದೇವಾಲಯವೂ ಇದೆ. ರಾಜಸ್ಥಾನ ರಾಜ್ಯದ ಉದಯಪುರ ಜಿಲ್ಲೆಯ ಝುವರ್‌ನಲ್ಲಿ ಪ್ರಪಂಚದ ಅತ್ಯಂತ ಹಳೆಯ ಸತುವಿನ ಕುಲುಮೆಗಳಿದ್ದವು ಎಂಬುದಕ್ಕೆ ಖಚಿತ ಪಳೆಯುಳಿಕೆ ಸಿಕ್ಕಿದೆ.

ಜಿಯೊಪಾರ್ಕ್ ಉಗಮ: ಯುನೆಸ್ಕೊ ತನ್ನ ನೇತೃತ್ವದಲ್ಲಿ 2004ರಲ್ಲಿ ಯುರೋಪ್ ಸಮುದಾಯದ 17 ಮತ್ತು ಚೀನಾದ ಎಂಟು ಭೂಪ್ರದೇಶಗಳಿಗೆ ಜಿಯೊಪಾರ್ಕ್ ಮಾನ್ಯತೆ ನೀಡಿ ಗ್ಲೋಬಲ್ ಜಿಯೊಪಾರ್ಕ್ ನೆಟ್‌ವರ್ಕ್ (ಜಿಜಿಎನ್) ಸ್ಥಾಪಿಸಿದೆ. ಅದು ಗುರುತಿಸಿರುವ 25 ಭೂಪ್ರದೇಶಗಳು ಗ್ಲೋಬಲ್ ಜಿಯೊ ಪಾರ್ಕ್ ಎಂದರೆ ಹೇಗಿರಬೇಕು ಎಂಬುದಕ್ಕೆ ಮಾದರಿಯಾಗಿವೆ ಹಾಗೂ ಅಲ್ಲಿರುವ ವ್ಯವಸ್ಥೆ, ನಿರ್ವಹಣೆ ಮತ್ತು ಗುಣಮಟ್ಟಗಳು ಬೇರೆ ಭೂರಚನೆಗಳಿಗೂ ಇದ್ದರೆ ಅವುಗಳನ್ನು 'ಗ್ಲೋಬಲ್ ಜಿಯೊಪಾರ್ಕ್' ಎಂದು ನಾಮಕರಣ ಮಾಡಲಾಗುತ್ತದೆ ಎಂದು ತಿಳಿಸಲಾಗಿತ್ತು. ಇದಾದ ಹನ್ನೊಂದು ವರ್ಷಗಳ ನಂತರ ಯುನೆಸ್ಕೊದ 195 ಸದಸ್ಯ ರಾಷ್ಟ್ರಗಳು ಸಭೆ ಸೇರಿ, ಒಮ್ಮತದ ನಿರ್ಣಯ ಮಾಡಿ ಜಿಯೊಪಾರ್ಕ್‌ಗಳನ್ನು 'ಯುನೆಸ್ಕೊ ಗ್ಲೋಬಲ್ ಜಿಯೊ ಪಾರ್ಕ್' (ಯುಜಿಜಿಪಿ) ಎಂದು ಕರೆದವು.

ಈಗ ಜಗತ್ತಿನಾದ್ಯಂತ 44 ದೇಶಗಳ 161 ಭೂರಚನೆಗಳಿಗೆ ಯುನೆಸ್ಕೊ ಗ್ಲೋಬಲ್ ಜಿಯೊಪಾರ್ಕ್ ಸ್ಥಾನ ನೀಡಲಾಗಿದೆ. ಚೀನಾದ 41 ಜಾಗಗಳು, ಸ್ಪೇನ್‌ನ 15, ಇಟಲಿ, ಜಪಾನ್‌ನ ತಲಾ 9, ಫ್ರಾನ್ಸ್‌ನ 7, ಕೊರಿಯಾದ 4 ಮತ್ತು ಚಿಕ್ಕ ದೇಶಗಳಾದ ವಿಯೆಟ್ನಾಂ, ಥಾಯ್ಲೆಂಡ್‌ಗಳ ಕೆಲ ಜಾಗಗಳಿಗೂ ಜಿಯೊಪಾರ್ಕ್ ಮಾನ್ಯತೆ ದೊರಕಿದೆ.

ಆದರೆ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ಪ್ರಕಾರ ನಮ್ಮಲ್ಲಿ ಜಿಯೊಪಾರ್ಕ್ ಮಾನ್ಯತೆ ಪಡೆಯಬಲ್ಲ 32 ವಿವಿಧ ಭೂವೈಜ್ಞಾನಿಕ ಸ್ಮಾರಕಗಳಿವೆ. ಇದುವರೆಗೆ ಒಂದಕ್ಕೂ ಸಿಕ್ಕಿಲ್ಲ.

ಯಾವುದೇ ದೇಶದ ವಿಶೇಷ ಭೂರಚನೆಗೆ ವಿಶ್ವ ಮಾನ್ಯತೆ ಪಡೆಯಲು ಕೆಲವು ಕಟ್ಟುನಿಟ್ಟಿನ ನಿಬಂಧನೆಗಳಿವೆ. ಅದರ ನಿರ್ವಹಣೆಗೆ ಕಾನೂನಾತ್ಮಕವಾಗಿ ಸ್ಥಾಪಿಸಲ್ಪಟ್ಟ ಸಂಸ್ಥೆ ಇರಬೇಕು. ಪ್ರತ್ಯೇಕ ವೆಬ್‌ಸೈಟ್ ಇದ್ದು ಕಾರ್ಪೊರೇಟ್ ಗುರುತು ಹೊಂದಿರಬೇಕು. ರಕ್ಷಣೆ - ಸಂರಕ್ಷಣೆಗೆ ಪ್ರತ್ಯೇಕವಾಗಿ ಹಣ ಎತ್ತಿಟ್ಟಿರಬೇಕು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಇಡೀ ವ್ಯವಸ್ಥೆಯಲ್ಲಿ ಸ್ಥಳೀಯ ಜನಸಮುದಾಯದ ಸಹಭಾಗಿತ್ವ ಇರಲೇಬೇಕು. ಪ್ರದೇಶಕ್ಕೆ ಹೊಂದಿಕೊಂಡ ಬುಡಕಟ್ಟು, ಸಮುದಾಯಗಳ ಪಾರಂಪರಿಕ ಉತ್ಪನ್ನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಇರಬೇಕು. ಉಸ್ತುವಾರಿಗೆ ಸ್ಥಳೀಯ ಶಾಲೆ, ಉದ್ಯಮ, ವಿಶ್ವವಿದ್ಯಾಲಯವನ್ನು ಒಳಗೊಂಡ ಸಮಿತಿ ರಚಿಸಿಕೊಂಡು ಪ್ರವಾಸಿಗರಿಂದ ಬರುವ ಹಣವನ್ನು ಜಿಯೋಪಾರ್ಕ್‌ನ ಅಭಿವೃದ್ಧಿಗೆ ಬಳಸಬೇಕು. ಆಯಾಸ್ಥಳದ ಪ್ರತಿರೂಪದ ಮಿನಿಯೇಚರ್‌ಗಳನ್ನು ತಯಾರಿಸಿ ಮಾರಬೇಕು. ಸಾಧ್ಯವಿರುವ ಜಾಗಗಳಲ್ಲಿ ಮ್ಯೂಸಿಯಂ ಸ್ಥಾಪಿಸಬೇಕು.

ಇದನ್ನು ಕಾರ್ಯರೂಪಕ್ಕೆ ತರಲು ಲಖನೌದಲ್ಲಿರುವ ಸೊಸೈಟಿ ಆಫ್ ಅರ್ಥ್ ಸೈಂಟಿಸ್ಟ್ಸ್ ಸಂಸ್ಥೆ ವಿಸ್ತೃತ ಕಾರ್ಯಯೋಜನೆ ಸಿದ್ಧಪಡಿಸಿ ಕಳೆದ ವರ್ಷವೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದೆ. ಭೂವೈಜ್ಞಾನಿಕ ವೈವಿಧ್ಯದ ಅರಿವಿನ ಕೊರತೆಯಿಂದ ಅನೇಕ ಪ್ರಾಕೃತಿಕ ಅದ್ಭುತಗಳು ಅಭಿವೃದ್ಧಿಯ ಹೊಡೆತಕ್ಕೆ ಸಿಕ್ಕು ನಾಶವಾಗಿವೆ. ಅಪರೂಪದ ಪುರಾತನ ಅವಶೇಷಗಳ ಪ್ರಾಮುಖ್ಯತೆಯನ್ನು ಅರಿತು, ರಕ್ಷಿಸಿ ಅವುಗಳಿಗೆ ಅಂತರರಾಷ್ಟ್ರೀಯ ಮನ್ನಣೆ ಪಡೆಯಲು ಸಶಕ್ತ ಶಾಸನವನ್ನು ರೂಪಿಸಬೇಕಿದೆ. ಇವುಗಳಿಂದ ಭೂಮಿ ವಿಕಾಸದ ಚರಿತ್ರೆಯನ್ನು ಪುನರ್ ಸೃಷ್ಟಿಸಲು ಸಾಧ್ಯವಿದೆ. ❖

ನಾಡಿನ ಅಧ್ಯಾತ್ಮ ಪರಂಪರೆಯ ದರ್ಶನ

ಎಸ್. ನಟರಾಜ ಬೂದಾಳು

ವಿಮರ್ಶೆ

ಭಾರತೀಯ ಜೀವನಕ್ರಮವನ್ನು ದೈವಮಾರ್ಗಕ್ಕೆ ಸರಿಸಾಟಿಯಾಗಿ ಪ್ರಭಾವಿಸಿದ ಮಾರ್ಗವೆಂದರೆ ಅದು ಗುರುಮಾರ್ಗ. ಇವುಗಳ ನಡುವೆ ಅಲ್ಲಲ್ಲಿ ಅನ್ಯೋನ್ಯ ಸಾಹಚರ್ಯವಿದ್ದರೂ ಗುರುಮಾರ್ಗವು ನಿರ್ಣಾಯಕವಾಗಿ ತನ್ನ ತಾತ್ವಿಕತೆಯನ್ನು ಅಲಾಯಿದ ಉಳಿಸಿಕೊಂಡು ಬಂದಿದೆ. ಶ್ರಮಣಧಾರೆಗಳು ಎಂದು ಗುರುತಿಸುವ ಜೈನ, ಬೌದ್ಧ, ಸಿದ್ಧ, ನಾಥ, ವಚನ, ಅವಧೂತ, ಸೂಫಿ, ಆರೂಢ, ಅಚಲ, ಶಾಕ್ತ ಮತ್ತು ಅನೇಕ ತತ್ವಪದ ಪರಂಪರೆಗಳೆಲ್ಲ ಗುರುಮಾರ್ಗಗಳೇ ಆಗಿವೆ.

ಕರ್ನಾಟಕದಲ್ಲಿ ಈ ಎಲ್ಲ ಪಂಥಗಳೂ ಸಾವಿರಾರು ವರುಷಗಳಿಂದ ಸಮೂಹಗಳನ್ನು ಬಾಳಿಸುತ್ತ ಬಂದಿವೆ. ಅವೆಲ್ಲ ಈಗಲೂ ಜೀವಂತವಾಗಿವೆ. ಪ್ರಸ್ತುತ 'ಕರ್ನಾಟಕ ಗುರುಪಂಥ' ಕೃತಿಯು ಶ್ರಮಣಧಾರೆಗಳ ಸಂಗಮಭೂಮಿಯಾದ ತತ್ವಪದಗಳ ಆವರಣಗಳನ್ನು ಮುನ್ನೆಲೆಯಲ್ಲಿ ಇಟ್ಟುಕೊಂಡು ನಡೆಸಿದ ಜೀವಂತ ದರ್ಶನಗಳ ಅಧ್ಯಯನವಾಗಿದೆ.

ಕನ್ನಡದ ಅನುಭಾವಿ ಪಂಥಗಳ ತಾತ್ವಿಕತೆ, ಅವುಗಳ ಅಭಿವ್ಯಕ್ತಿ ಮತ್ತು ಜೀವನಕ್ರಮಗಳ ಜೊತೆಗೆ ಗಾಢವಾದ ಸಂಬಂಧವಿದೆ. ಈ ಮೂರೂ ಎಳೆಗಳನ್ನು ಜಗ್ಗಿ ಮಾತನಾಡಿಸಿದರೆ ಮಾತ್ರ ಅಲ್ಲಿಂದ ಉತ್ತರ ದೊರಕುತ್ತದೆ. ಅದು ನಿರಂತರ ಎಚ್ಚರದಲ್ಲಿಯೇ ಸಾಗುವ ಯಾನ. ನಿಂತು ಮಾತನಾಡುವವರು ಅಲ್ಲಿ ಯಾರೂ ಸಿಗುವುದಿಲ್ಲ. ತತ್ವಯಾನಿಗಳಿಗೆ ಮಾತ್ರ ಸಹಪ್ರಯಾಣ. ನೆರವಿಗೆ ಸಾಧಕ ಸಂಹಿತೆಯೋ ತತ್ವಸಂಹಿತೆಯೋ ಇರಬೇಕು. ಅದು ಬಹುಪಾಲು ಕತ್ತಲ ಜಗತ್ತಿನಲ್ಲಿ ಅನಾವರಣವಾಗುವ ಅರಿವಿನ ಬೆಳಕು. ಹಾಗಾಗಿ ಈ ಕೃತಿಯ ಮೂಲಕ ಕನ್ನಡದ ಒಳಜಗತ್ತೊಂದು ಶೈಕ್ಷಣಿಕ ಆವರಣವನ್ನು ಪ್ರವೇಶಿಸಿದೆ. ಇದರಿಂದ ನಮ್ಮ ಸಾಂಸ್ಕೃತಿಕ ಲೋಕ ಮತ್ತಷ್ಟು ವಿಸ್ತಾರವಾಗಿದೆ. ಈವರೆಗೆ ಹೊರಗೇ ಉಳಿದಿದ್ದ ದೇಸಿ ಅನುಭಾವ, ಕಾವ್ಯ, ಕಾವ್ಯ ಮೀಮಾಂಸೆ, ಮತ್ತು ಜೀವನಕ್ರಮಗಳು ಒಳ ಬರಲಾರಂಭಿಸಿವೆ. ಮರೆವಿಗೆ ಸಂದಿದ್ದ ನಮ್ಮದೇ ಹೊಸ ಮಗ್ಗುಲುಗಳನ್ನು ಮರುಜೋಡಿಸಿಕೊಳ್ಳಲು ಸಾಧ್ಯವಾಗಿದೆ. ಈ ಹಾದಿಯ ಒಂದು ಮಹತ್ವದ ಮೈಲುಗಲ್ಲಾಗಿ ಈ ಕೃತಿ ಹೊರಬಂದಿದೆ.

ಕರ್ನಾಟಕ ಗುರುಪಂಥ
ಲೇ: ರಹಮತ್ ತರೀಕೆರೆ
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪು: 316 ₹300

ಕರ್ನಾಟಕದ ಉದ್ದಗಲಕ್ಕೂ ಹರಡಿಕೊಂಡಿರುವ ಗುರುಮಾರ್ಗದ ಅಧ್ಯಯನ ಗಂಭೀರ ಸವಾಲುಗಳನ್ನು ಒಡ್ಡುತ್ತದೆ. ಕರ್ನಾಟಕದ ವೈದಿಕ-ಅವೈದಿಕ ಧಾರೆಗಳ ಆಳವಾದ ಅರಿವನ್ನು ಬೇಡುತ್ತದೆ. ತತ್ವ, ನಾದ, ಲಯ, ಆಚರಣೆ, ಅನ್ನಾಹಾರ, ಗುಹ್ಯ ಮತ್ತು ವಿಕ್ಷಿಪ್ತ ನಡವಳಿಕೆ, ಇವೆಲ್ಲವುಗಳನ್ನೂ ಮೀರಿದ ಲೋಕಾನುಕಂಪ ಇತ್ಯಾದಿಗಳನ್ನು ಒಂದು ಕ್ಯಾನ್ವಾಸಿಗೆ ತಂದು ನಿರ್ವಹಿಸುವ ಸಂಶೋಧನೆ ಅಪಾರವಾದ ಸಾಮರ್ಥ್ಯವನ್ನು ಬೇಡುತ್ತದೆ. ಲೇಖಕರು ಈ ಹಾದಿಯ ದೀರ್ಘಕಾಲದ ಪಯಣಿಗರಾದ ಕಾರಣ ಇದು ಸಾಧ್ಯವಾಗಿದೆ.

ಭಾರತದ ತತ್ವ ನಕಾಶೆಯ ಬಹುಭಾಗವನ್ನು ರೂಪಿಸಿರುವ ನಾಥ, ಸಿದ್ಧ, ಬೌದ್ಧ, ಸೂಫಿ, ಆರೂಢ, ಆಜೀವಿಕ, ಅಚಲ ಮುಂತಾದ ಪಂಥಗಳನ್ನು ಕಾಲುದಾರಿಗಳೆಂದು ಕರೆದು, ಸಣ್ಣಪುಟ್ಟ ಪಂಥಗಳನ್ನು ಪ್ರಧಾನವೆಂದು ಗುರುತಿಸಿಕೊಳ್ಳುವ ಸಾಂಸ್ಕೃತಿಕ ರಾಜಕಾರಣಕ್ಕೆ ಸಾವಿರಾರು ವರ್ಷಗಳ ಸಂಘರ್ಷಾತ್ಮಕ ಇತಿಹಾಸವಿದೆ. ಈ ಹೊತ್ತಿನ ಅಧ್ಯಯನಗಳಿಗೆ ಇದು ತೀವ್ರವಾದ ಬಿಕ್ಕಟ್ಟನ್ನು ಒಡ್ಡುತ್ತಿದೆ. ಅವುಗಳನ್ನು ಮುಖಾಮುಖಿಯಾಗಿಸದೆ ಮುಂದುವರಿಯಲಾಗದು.

'ಕರ್ನಾಟಕ ಗುರುಪಂಥ' ಶೂದ್ರ ಅಧ್ಯಾತ್ಮದ ಒಂದು ವಿಸ್ತರಣೆ. ಈ ನೆಲದ ಶೂದ್ರ ಅಧ್ಯಾತ್ಮ ಆಚರಣಾಪ್ರಧಾನವಾದುದು. ಅನ್ವಯಗೊಳ್ಳದ ತಾತ್ವಿಕತೆಯನ್ನು ಅದು ಮುಖ್ಯವೆಂದು ಪರಿಗಣಿಸುವುದಿಲ್ಲ. ಅಂತಹ ಆಚರಣಾ ಲೋಕಕ್ಕೆ ಅಕ್ಕರೆಯಿಲ್ಲದೆ ಹೋಗಲಾಗದು. ಈ ನೆಲದ ಜೀವಸತ್ವವಾದ ಬಹುತ್ವದ ಬಗೆಗೆ ವಿಶ್ವಾಸವಿರುವವರಿಗೆ ಮಾತ್ರ ಸಾಧ್ಯವಾಗುವ ಇಂತಹ ಪ್ರವೇಶಗಳು ಅಲ್ಲಿಂದ ಮಹತ್ವದ ಸಾಂಸ್ಕೃತಿಕ ಸಂವಿಧಾನಗಳನ್ನು ಹೊರತರುತ್ತವೆ. ಕರ್ನಾಟಕದ ನಾಥ, ಸೂಫಿ ಪಂಥಗಳ ಅಧ್ಯಯನಗಳೂ ನಮ್ಮ ಸಾಂಸ್ಕೃತಿಕ ಸಂವಿಧಾನದ ಬೇರೆ ಬೇರೆ ಅಧ್ಯಾಯಗಳೆಂದು ಭಾವಿಸಬಹುದಾಗಿದೆ.

ನಾವು ಕಳೆದುಕೊಂಡಿದ್ದ ದಾರಿಯೊಂದು ಮತ್ತೆ ತೆರೆದುಕೊಂಡಿದೆ. ಕರ್ನಾಟಕದ ಉದ್ದಗಲಕ್ಕೂ ಗುರುಗದ್ದುಗೆಗಳಿವೆ. ಶಿರಡಿಯಿಂದ ಕಡಕೋಳ ಮಡಿವಾಳಪ್ಪ, ಚಿಕ್ಕನಾಯಕನಹಳ್ಳಿಯ ತಾತಯ್ಯ ಮತ್ತು ಪಕ್ಕದಲ್ಲೇ ಇರುವ ಚಿಕ್ಕೇನಹಳ್ಳಿಯ ಮಾಲಿಂಗಪ್ಪತಾತನ ಗದ್ದುಗೆವರೆಗೆ ಅದರ ವಿಸ್ತಾರವಿದೆ. ಇವುಗಳಿಗೆ ಎಲ್ಲ ಸಮೂಹಗಳು ಭಿನ್ನಭೇದವಿಲ್ಲದೆ ನಡೆದುಕೊಳ್ಳುತ್ತವೆ. ಧರ್ಮ, ಕಾಲ-ದೇಶ ಮುಕ್ತರಾದ ಗುರುಮಾರ್ಗಿಗಳನ್ನು ಸೀಮಿತ ಭೌಗೋಳಿಕ ದೃಷ್ಟಿಯಿಂದಾಗಲೀ, ಪಾಂಥಿಕ ದೃಷ್ಟಿಯಿಂದಾಗಲೀ ನೋಡುವುದು ಸಾಧುವಲ್ಲ. ಸಮೂಹವು ಇಂತಹವುಗಳಿಂದ ಮುಕ್ತವಾಗಿಯೇ ಅವರನ್ನು ನೋಡಿದೆ. ಲೇಖಕರು ಈ ಕಾಲುದಾರಿಯನ್ನು ದೀರ್ಘಕಾಲದಿಂದ ಸವೆಸಿದ್ದಾರೆ.

ಇದು ಅನೇಕ ಜ್ಞಾನ ಶಿಸ್ತುಗಳನ್ನು ದುಡಿಸಿಕೊಂಡಿರುವ ಅಧ್ಯಯನ. ಇಲ್ಲಿ ಕಸುಬು, ತತ್ವಶಾಸ್ತ್ರ, ಸಂಗೀತ, ಧ್ಯಾನ, ಸಮಾಜೋಧಾರ್ಮಿಕ ಚಳವಳಿ, ಭಾಷೆ ಮತ್ತು ಸಾಮಾಜಿಕ ಚಲನೆಯ ಸ್ವರೂಪ ಪರಸ್ಪರ ಗಾಢವಾಗಿ ಹೆಣೆದುಕೊಂಡಿವೆ. ತತ್ವ, ಸಾಧಕ ನಡೆ ಮತ್ತು ಆಚರಣೆಗಳು ಬೆರೆತಿರುವ ಲೋಕ. ನಿರಂತರ ಚಲನಶೀಲವಾಗಿರುವ ಸಂಸ್ಕೃತಿಯ ಅಧ್ಯಯನಕ್ಕೆ ಅಗತ್ಯವಾದ ಬಹುಮುಖಿ ನೋಟಕ್ರಮವನ್ನು ಅನ್ವಯಿಸಿಕೊಳ್ಳದೆ ಮುಂದಡಿ ಇಡಲಾಗದು. ಈ ಹೊತ್ತಿನ ತುರ್ತಿಗೆ ಈ ಧಾರೆಗಳು ಹೇಗೆ ಪ್ರಸ್ತುತವಾಗುತ್ತವೆ ಎನ್ನುವ ಪ್ರಶ್ನೆಯನ್ನು ಅಂಗೈಯಲ್ಲೇ ಇಟ್ಟುಕೊಂಡಿರುವ ಈ ಅಧ್ಯಯನ ಎದುರಿನ ಮತ್ತು ತನ್ನ ಮಿತಿಗಳೆರಡನ್ನೂ ಕಾಣಿಸಿದೆ.

ಈ ಕೃತಿಯ ಓದು ಒಂದು ಸಂಗತಿಯನ್ನು ಅರಿವಿಗೆ ತರುತ್ತದೆ. ನಮ್ಮ ಶೈಕ್ಷಣಿಕ ಆವರಣಗಳು ರೂಢಿಸಿಕೊಟ್ಟಿರುವ ಓದಿನ ಮಾದರಿಗಳನ್ನು ಪಕ್ಕಕ್ಕಿಟ್ಟು ನಮ್ಮದೇ ಆದ ಓದಿನ ಕ್ರಮಗಳನ್ನು ಒದಗಿಸಿಕೊಂಡರೆ ಮಾತ್ರ ಗುರುಮಾರ್ಗಗಳು ತೆರೆದುಕೊಳ್ಳುತ್ತವೆ. ಅದು ಸರಳ ಸಂಗತಿಯಲ್ಲ. ಹೋಗಹೋಗುತ್ತಲೇ ಕೇಳಿಕೊಂಡು ಹೋಗುವ ದಾರಿ. ಸಾಧಕ ಸಂಹಿತೆ ಅಥವಾ ತತ್ವಸಂಹಿತೆಯ ಊರುಗೋಲು ಬೇಕಾಗುತ್ತದೆ.

ಗುರುಪಂಥಗಳಿಗೆ ತೀವ್ರತರವಾದ ಬಿಕ್ಕಟ್ಟುಗಳಿವೆ. ಮಹಾವ್ಯಾಖ್ಯಾನಗಳ ಮೂಲಕ ಪ್ರಮಾಣಗಳನ್ನು ನಿರ್ಮಿಸಿಕೊಂಡಿರುವ ವೈದಿಕ ಇತ್ಯಾದಿ ಧರ್ಮಗಳ ಪಾಂಥಿಕತೆಯನ್ನು ಎದುರುಹಾಕಿಕೊಳ್ಳುವ ಅನಿವಾರ್ಯ ಒಂದಾದರೆ, ಜಾತಿ, ವರ್ಣ, ಲಿಂಗ ತಾರತಮ್ಯಗಳನ್ನು ಉಸಿರಾಡುತ್ತಿರುವ ಸಮೂಹಗಳ ನಡುವೆ ಅವುಗಳನ್ನು ತ್ಯಜಿಸಿ ಸಾಮರಸ್ಯದ ಬಾಳುವೆಯೊಂದನ್ನು ಮುಂದಿಡುವ ಜವಾಬ್ದಾರಿಯನ್ನೂ ಅವು ನಿರ್ವಹಿಸಬೇಕಿದೆ. ಸಾಂಸ್ಕೃತಿಕ ವಸಾಹತುಶಾಹಿ ಮತ್ತು ಅದರ ಅಡಿಯಾಳಾಗಿರುವ ಅಧಿಕಾರ ಕೇಂದ್ರಗಳು ಈ ಆವರಣಗಳಿಗೆ ನುಗ್ಗಿ ತಮ್ಮ ಆಧಿಪತ್ಯ ಸ್ಥಾಪಿಸುತ್ತವೆ. ನಮ್ಮ ಆವರಣಗಳು ನಮ್ಮ ಕೈತಪ್ಪುತ್ತಿವೆ. ಅವು ಉಳಿಯಬೇಕಿದೆ. ನಮ್ಮ ನಿಜ ಆವರಣಗಳಿಗೆ ಕರೆದೊಯ್ಯುವ ಇಂತಹ ಅಧ್ಯಯನಗಳು ಕನ್ನಡ ವಿಶ್ವವಿದ್ಯಾಲಯದ ಮಹತ್ವವನ್ನು ಹೆಚ್ಚಿಸುತ್ತವೆ. ❖

ಕಥೆ
ನಂದಿನಿ ಹೆದ್ದುರ್ಗ
ಅವರು ಬರೆದ ಕಥೆ
ಚಕ್ರಬಂಧ



ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ
ಮಂಜುಳಾ ಸಿ.ಎಸ್.
ಅವರು ಬರೆದ ಕವಿತೆ
ಕಣ್ಣೆವೆಯ ತಪ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಕನ್ನಡದ ಶಾಸ್ತ್ರ ಕೃತಿಗಳು ಇಂಗ್ಲಿಷ್‌ಗೆ

ಪುರುಷೋತ್ತಮ ಬಿಳಿಮಲೆ

ಒಳನೋಟ

ಬೇರೆ ಭಾಷೆಗಳಿಂದ ಕೃತಿಗಳು ಅನುವಾದಗೊಂಡು ಕನ್ನಡಕ್ಕೆ ಬಂದಷ್ಟು ಸಂಖ್ಯೆಯಲ್ಲಿ ಕನ್ನಡದಿಂದ ಬೇರೆ ಭಾಷೆಗಳಿಗೆ ಅನುವಾದಗೊಂಡು ಹೋಗದಿರುವುದರಿಂದ ಕನ್ನಡದ ಮಹತ್ವ ಕನ್ನಡೇತರರಿಗೆ ತಿಳಿಯದೇ ಹೋಗಿದೆ. ಇದನ್ನು ಗಮನದಲ್ಲಿರಿಸಿಕೊಂಡು ನಾನು ಜೆಎನ್‌ಯು ಕನ್ನಡ ಪೀಠದಿಂದ ಕವಿರಾಜಮಾರ್ಗ (The way of the King of poets), ವಡ್ಡಾರಾಧನೆ (Veneration to the elders) ಮತ್ತು ಗದಾಯುದ್ಧದ (The duel of the Maces) ಜೊತೆಗೆ ಇತರ ಕೆಲವು ಕೃತಿಗಳನ್ನು ವಿದ್ವಾಂಸರಿಂದ ಅನುವಾದಿಸಿ ದೆಹಲಿಯ ಮಹತ್ವದ ಪ್ರಕಾಶಕರ ಮೂಲಕ ಪ್ರಕಟಿಸಿದೆ. ರೌಟ್ಲೆಜ್ ಇದೀಗ ಅವುಗಳನ್ನು ಮರುಮುದ್ರಣ ಮಾಡಿದೆ.

ಈ ಕೃತಿಗಳು ದೇಶ ವಿದೇಶಗಳ ವಿದ್ವಾಂಸರ ಗಮನ ಸೆಳೆದಿವೆ. ಆದರೂ ಈ ನಿಟ್ಟಿನಲ್ಲಿ ನಾವು ಚಲಿಸಬೇಕಾದ ಹಾದಿ ಬಹಳ ದೂರ. ಯಾಕೋ ನಮ್ಮ ಅನುವಾದದ ಕೆಲಸಗಳು ಸೃಜನಶೀಲ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿವೆ. ಕನ್ನಡದಲ್ಲಿ ಸೃಜನೇತರ ಪ್ರಕಾರಗಳಿಗೆ ಸೇರಿದ ಮಹತ್ವದ ಕೃತಿಗಳು ಹಲವಿವೆ. ಸಮುದಾಯಗಳನ್ನು ಆಧರಿಸಿ ನಾಡಿನ ಚರಿತ್ರೆಯನ್ನು ಬರೆಯಬಹುದೆಂದು ತೋರಿಸಿದ ಶಂ.ಬಾ. ಜೋಶಿ, ಬಾಳ್ವೆಯೇ ಬೆಳಕು ಬರೆದ ಶಿವರಾಮ ಕಾರಂತ, ವಿಚಾರ ಕ್ರಾಂತಿಗೆ ಆಹ್ವಾನ ನೀಡಿದ ಕುವೆಂಪು, ದೇಸಿ ಆಕರಗಳ ಮೂಲಕವೇ ಸಂಶೋಧನೆಗೆ ಹೊಸ ಹಾದಿ ತೋರಿಸಿದ ಎಂ.ಎಂ. ಕಲಬುರ್ಗಿ ಮೊದಲಾದವರೆಲ್ಲಾ ಕನ್ನಡದೊಳಗೇ ಉಳಿದುಬಿಟ್ಟರು.

ಕನ್ನಡವನ್ನು ಶಾಸ್ತ್ರಕಾರರು ಕೂಡ ಗಮನಾರ್ಹವಾಗಿ ಬೆಳೆಸಿದ್ದಾರೆ ಎಂಬುದನ್ನು ಕನ್ನಡಿಗರೇ ಮರೆತಿರುವ ಕಾಲವಿದು. ಒಂದನೆಯ ನಾಗವರ್ಮನ ಛಂದೋಂಬುಧಿ, ಎರಡನೆಯ ನಾಗವರ್ಮನ ಕಾವ್ಯಾವಲೋಕನ, ಕವಿಕಾಮನ ಶೃಂಗಾರ ರತ್ನಾಕರ, ಸಾಳ್ವನ ರಸರತ್ನಾಕರ, ಭಟ್ಟಾಕಳಂಕನ ಶಬ್ದಾನುಶಾಸನ, ಮಂಗರಾಜನ ಖಗೇಂದ್ರ ಮಣಿದರ್ಪಣ, ರಾಜಾದಿತ್ಯನ ವ್ಯವಹಾರಗಣಿತ ಮೊದಲಾದುವು ಮಹತ್ವದ ಶಾಸ್ತ್ರ ಕೃತಿಗಳಾಗಿವೆ. ಈ ಎಲ್ಲಾ ಕೃತಿಗಳಿಗೆ ಶಿಖರ ಪ್ರಾಯವಾಗಿರುವುದು ಕೇಶಿರಾಜನು 1260ರ ಸುಮಾರಿನಲ್ಲಿ ರಚಿಸಿದ ಶಬ್ದಮಣಿದರ್ಪಣ.

ಇಂಥ ಕೃತಿಗಳು ಸಾಮಾನ್ಯವಾಗಿ ವಿಮರ್ಶಕರ ಮತ್ತು ಅನುವಾದಕರ ಕಣ್ಣಿಗೆ ಬೀಳುವುದಿಲ್ಲ. ಶಾಸ್ತ್ರ ಕೃತಿಗಳಿಗೆ ಆರೋಪಿಸಲಾದ ಕ್ಲಿಷ್ಟತೆಯೇ ಅದಕ್ಕೆ ಮುಖ್ಯಕಾರಣ. ಕನ್ನಡದ ಪುಣ್ಯ, ಇಂಥ ಕೃತಿಗಳ ಬಗ್ಗೆ ಕರಾರುವಾಕ್ಕಾಗಿ ಮಾತಾಡಬಲ್ಲ ಹಂಪ ನಾಗರಾಜಯ್ಯ, ಟಿ.ವಿ. ವೆಂಕಟಾಚಲ ಶಾಸ್ತ್ರಿ, ಆರ್. ವಿ.ಎಸ್ ಸುಂದರಂ, ಬಿ.ಎ. ವಿವೇಕ ರೈ ಮೊದಲಾದ ಕೆಲವರಾದರೂ ಹಿರಿಯರು ನಮ್ಮ ನಡುವೆ ಇದ್ದಾರೆ. ಅಂಥವರ ತಿಳಿವಳಿಕೆಗಳ ಪೂರ್ಣ ಪ್ರಯೋಜನ ಪಡೆಯುವ ವಿವೇಕವನ್ನು ಕನ್ನಡಿಗರು ತ್ವರಿತವಾಗಿ ತೋರಿಸಬೇಕಾಗಿದೆ.



A Handbook of Kannada prosody
ಲೇ: ಬಿ.ಎ. ವಿವೇಕ ರೈ
ಪು: 100 ₹150



The Ocean of Prosody
ಲೇ: ಆರ್.ವಿ.ಎಸ್. ಸುಂದರಂ, ಅಮ್ಮೆಲ್ ಶೇರೋನ್
ಪು: 220 ₹300

ಎರಡೂ ಪುಸ್ತಕಗಳ ಪ್ರಕಾಶಕರು: ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ

ಮೇಲಿನ ಮಾತಿಗೆ ಅಪವಾದವೆಂಬಂತೆ ಕನ್ನಡ ಛಂದಸ್ಸಿನ ಬಗೆಗೆ ಆಂಗ್ಲ ಭಾಷೆಯಲ್ಲಿ ಇದೀಗ ಎರಡು ಪುಸ್ತಕಗಳು ಪ್ರಕಟವಾಗಿವೆ. ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರವು ಈ ಎರಡೂ ಕೃತಿಗಳನ್ನು ಪ್ರಕಟಿಸಿ ಉಪಕಾರ ಮಾಡಿದೆ.

ಇದರಲ್ಲಿ ಮೊದಲನೆಯದಾದ A Handbook of Kannada prosodyಯನ್ನು ಸಿದ್ಧಪಡಿಸಿದವರು ಕಾವ್ಯಶಾಸ್ತ್ರ ಪರಿಣತರಾದ ವಿವೇಕ ರೈ. ಕನ್ನಡ ಛಂದಸ್ಸಿನ ಬಗೆಗೆ ಇದೊಂದು ಉಪಯುಕ್ತ ಕೈಪಿಡಿ. ಕನ್ನಡೇತರರು ಕನ್ನಡ ಛಂದಸ್ಸಿನ ಗುಣಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗುವ ಹಾಗೆ ಉಚಿತವಾದ ಉದಾಹರಣೆಗಳ ಮೂಲಕ ಅವುಗಳನ್ನು ವಿವರಿಸಲಾಗಿದೆ. ಇದನ್ನು ಬರೆಯಲು ರೈ ಅವರು ನಾಗವರ್ಮನ ಛಂದೋಂಬುಧಿಯನ್ನು (10ನೇ ಶತಮಾನ) ಪ್ರಮುಖ ಆಧಾರವಾಗಿ ಬಳಸಿಕೊಂಡಿದ್ದಾರೆ. ಹಳಗನ್ನಡ ಮತ್ತು ನಡುಗನ್ನಡದ ಪ್ರಮುಖ ಮತ್ತು ಜನಪ್ರಿಯವಾದ ಛಂದೋರೂಪಗಳು ಈ ಕೈಪಿಡಿಯಲ್ಲಿ ಸ್ಥಾನ ಪಡೆದಿವೆ.

ಉದಾಹರಿತ ಪದ್ಯಗಳ ಮೂಲ ಪಠ್ಯಗಳನ್ನೂ, ಅವುಗಳ ಇಂಗ್ಲಿಷ್ ಅನುವಾದವನ್ನೂ ಕೊಟ್ಟದ್ದರಿಂದಾಗಿ ಅನುಮಾನಕ್ಕೆ ಎಡೆಯಿಲ್ಲದಂತೆ ಇವುಗಳನ್ನು ಓದಿಕೊಳ್ಳಬಹುದು. ತಾಂತ್ರಿಕಪದಗಳನ್ನು ಅನುವಾದದಲ್ಲಿ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಮಾತ್ರಾಗಣ, ಅಂಶಗಣ, ಕಂದ, ರಗಳೆ, ಷಟ್ಪದಿ, ವಚನಗಳನ್ನು ಇಂಗ್ಲಿಷಿನಲ್ಲಿ ಸುಲಭವಾಗಿ ಅರ್ಥಮಾಡಿಕೊಳ್ಳುವಂತೆ ವಿವರಿಸುವ ಕೆಲಸ ಸುಲಭವಲ್ಲ. ಕಳೆದ ಕೆಲವು ವರ್ಷಗಳಿಂದ ಯುರೋಪಿನ ಹಲವು ವಿದ್ಯಾರ್ಥಿಗಳಿಗೆ ಕನ್ನಡ ಕಲಿಸುತ್ತಿರುವ ರೈಯವರು 'ಕಷ್ಟ', 'ಅರ್ಥವಾಗುವುದಿಲ್ಲ' ಎಂಬಿತ್ಯಾದಿ ಆರೋಪಗಳಿಗೆ ಗುರಿಯಾಗಿರುವ ಛಂದಸ್ಸನ್ನು ಎಷ್ಟು ಸರಳವಾಗಿ ಮತ್ತು ಸಂಶಯಗಳಿಗೆ ಎಡೆಯಿಲ್ಲದಂತೆ ಬರೆಯಬಹುದು ಎಂದು ತೋರಿಸುವ ಹಾಗೆ ಈ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ರೈ ಅವರ ಅನುಭವವು ಇಲ್ಲಿ ಅವರ ಸಹಾಯಕ್ಕೆ ಬಂದದ್ದಲ್ಲದೆ, ಕನ್ನಡೇತರರಿಗೆ ಉಪಯುಕ್ತವಾಗುವ ಹಾಗೆ ಮಾಡಿದೆ.

ಇಂಗ್ಲಿಷಿನಲ್ಲಿ ಪ್ರಕಟವಾದ ಇನ್ನೊಂದು ಕೃತಿ The Ocean of Prosodyಯು ನಾಗವರ್ಮನ ಛಂದೋಂಬುಧಿಯ ಅನುವಾದ. ಹಿರಿಯ ವಿದ್ವಾಂಸರಾದ ಆರ್. ವಿ.ಎಸ್. ಸುಂದರಂ ಮತ್ತು ಸಂಶೋಧಕಿ ಅಮ್ಮೆಲ್ ಶೇರೋನ್ ಈ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿದ್ದಾರೆ. ಕನ್ನಡ, ತೆಲುಗು, ಸಂಸ್ಕೃತ ಗೊತ್ತಿರುವ ಸುಂದರಂ ಮತ್ತು ಇಂಗ್ಲಿಷ್ ಚೆನ್ನಾಗಿ ಗೊತ್ತಿರುವ ಶೇರೋನ್ ಜೊತೆಯಾಗಿ ಮಾಡಿರುವ ಈ ಅನುವಾದವು ಕನ್ನಡವನ್ನು ಜಾಗತಿಕಗೊಳಿಸುವ ನಿಟ್ಟಿನಲ್ಲಿ ಹಾಕಿದ ಮಹತ್ವದ ಹೆಜ್ಜೆ.

ಛಂದೋಂಬುಧಿಯನ್ನು ಇಂಗ್ಲಿಷಿಗೆ ಅನುವಾದಿಸಲು ಸಾಕಷ್ಟು ತಯಾರಿ ಬೇಕೆಂಬುದು ನಿರ್ವಿವಾದ. ಬಾಣಭಟ್ಟನ ಅಮೋಘವಾದ ಗದ್ಯವನ್ನು ಓದಿ, ಕರ್ನಾಟಕ ಕಾದಂಬರಿಯಂಥ ಮಹಾಕಾವ್ಯವನ್ನು ಬರೆದ ಒಂದನೆಯ ನಾಗವರ್ಮನ (10ನೇ ಶತಮಾನ) ಪ್ರತಿಭೆ ಬಹಳ ವಿಶಿಷ್ಟವಾದುದು. ಆ ಕಾಲದಲ್ಲಿ ನಡೆಯುತ್ತಿದ್ದ ಕನ್ನಡ ಮತ್ತು ಸಂಸ್ಕೃತಗಳ ನಡುವಣ ಸಂಘರ್ಷ ಮತ್ತು ಹೊಂದಾಣಿಕೆಗಳನ್ನು ನಾಗವರ್ಮ ಸೂಕ್ಷ್ಮವಾಗಿ ಗ್ರಹಿಸಿ, ಛಂದಸ್ಸಿಗೆ ಅನ್ವಯವಾಗುವಂತೆ ಛಂದೋಂಬುಧಿ ಬರೆದ. ಇದರ ಜೊತೆಗೆ ಅವನು ಕನ್ನಡಕ್ಕೆ ಸಹಜವಾದ ಛಂದೋ ರೂಪಗಳನ್ನೂ ಗ್ರಹಿಸಿಕೊಳ್ಳಬೇಕಾಗಿತ್ತು. ಅಂಶ ಗಣಪ್ರಧಾನವಾದ ಈ ರೂಪಗಳಿಗೆ ಹಾಡುವಿಕೆ ಮುಖ್ಯವಾದ್ದರಿಂದ ಅದಕ್ಕೆ ಸಂಗೀತವೂ ಸೇರಿಕೊಂಡಿತ್ತು.

ನಾಗವರ್ಮನು ಅಕ್ಕರ ತ್ರಿಪದಿ, ಏಳೆ, ಚೌಪದಿ, ಛಂದೋವತಂಸ, ಅಕ್ಕರಿಕೆ, ಮದನವತಿ, ಗೀತಿಕೆ, ಉತ್ಸಾಹ, ಮತ್ತು ಷಟ್ಪದಿಗಳನ್ನು ಛಂದೋಂಬುಧಿಯಲ್ಲಿ ವಿವರಿಸುತ್ತಾನೆ. ಹೀಗಾಗಿ ಅನುವಾದಕನಿಗೆ ಸಂಸ್ಕೃತ ಛಂದಸ್ಸಿನ ಜೊತೆಗೆ ದ್ರಾವಿಡ ಚಂದಸ್ಸಿನ ಗುಣಗಳೂ ತಿಳಿದಿರಬೇಕಾಗುತ್ತದೆ. ಬಹುಭಾಷಾ ವಿದ್ವಾಂಸರಾದ ಸುಂದರಂ ಅವರಿಗೆ ಇವೆಲ್ಲವೂ ತಿಳಿದಿರುವುದರಿಂದಲೇ ಛಂದೋಂಬುಧಿಯ ಎಲ್ಲ ಆರು ಅಧಿಕರಣಗಳನ್ನು ಅವರಿಗೆ ಸುಲಭವಾಗಿ ಅನುವಾದ ಮಾಡಲು ಸಾಧ್ಯವಾಗಿದೆ. ಅನುವಾದದಲ್ಲಿ ಮೂಲ ಪಠ್ಯದ ಜೊತೆಗೆ ಲಿಪ್ಯಂತರ ಮತ್ತು ಅನುವಾದವನ್ನೂ ಕೊಡಲಾಗಿದೆ.

ಈ ಎರಡೂ ಪುಸ್ತಕಗಳು ಕನ್ನಡದ ಸಮಕಾಲೀನ ಅಗತ್ಯವೊಂದನ್ನು ಸಮರ್ಥವಾಗಿ ಪೂರೈಸಿವೆ. ಪುಸ್ತಕಗಳು ಕನ್ನಡೇತರರಿಗೆ ತಲುಪಬೇಕಾಗಿರುವುದರಿಂದ ಪುಸ್ತಕದ ಮುದ್ರಣವು ಅಂತರರಾಷ್ಟ್ರೀಯ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಬಹಳ ಅಗತ್ಯ. ❖

'ವನ್ಯಲೋಕ'ದ ಸಂಘರ್ಷಮಯ ಸ್ಥಿತಿಯ ಚಿತ್ರಣ

ಎಸ್. ರವಿಪ್ರಕಾಶ್

ಅವಲೋಕನ

'ನಾವು ಸೋಲುವ ಯುದ್ಧದಲ್ಲಿ ಹೋರಾಡುತ್ತಿದ್ದೇವೆ. ಆದರೆ, ನಾವಿನ್ನೂ ಸೋತಿಲ್ಲ' ಎಂಬ ಅಡಿ ಸಾಲನ್ನು ಒಳಗೊಂಡ 'ವನ್ಯಲೋಕದಲ್ಲಿ ನಾಲ್ಕು ಹೆಜ್ಜೆಗಳು' ಕೃತಿ ಅರಣ್ಯ, ವನ್ಯಜೀವಿ, ಮಲೆನಾಡಿನ ಈಗಿನ ಸಂಘರ್ಷಮಯ ಸ್ಥಿತಿ, ಅಸ್ಪಷ್ಟ ಹಾಗೂ ನಿರಾಶಾದಾಯಕ ಭವಿಷ್ಯದ ಮೇಲೆ ಬೆಳಕು ಚೆಲ್ಲಿದೆ. ಅಳಿದುಳಿದ ಕಾಡು ಮತ್ತು ವನ್ಯಜೀವಿಗಳನ್ನು ಉಳಿಸಿಕೊಳ್ಳಲು ಸಾಧ್ಯತೆ ಇದ್ದ ಡಾ.ಮಾಧವ ಗಾಡ್ಗೀಳ್ ವರದಿಯ ಶಿಫಾರಸುಗಳನ್ನು ಸಾರಾಸಗಟು ಕಸದ ಬುಟ್ಟಿಗೆ ಎಸೆದು, ಅದಕ್ಕೆ ಪರ್ಯಾಯವಾಗಿ ರೂಪುಗೊಂಡ ಡಾ.ಕಸ್ತೂರಿ ರಂಗನ್ ವರದಿಯನ್ನೂ ಪಶ್ಚಿಮಘಟ್ಟ ಪ್ರದೇಶ ಹೊಂದಿರುವ ಎಲ್ಲ ರಾಜ್ಯಗಳು ತಿರಸ್ಕರಿಸಿವೆ. ವರದಿಯನ್ನು ಯಾವುದೇ ಕಾರಣಕ್ಕೂ ಜಾರಿ ಮಾಡಬಾರದು ಎಂದು ರಾಜಕಾರಣಿಗಳು ತೋಳೇರಿಸಿ ನಿಂತಿರುವ ಕಾಲಘಟ್ಟದಲ್ಲಿ ಈ ಕೃತಿ ಹೊರಬಂದಿದೆ.

ಇದು ಪತ್ರಕರ್ತ ಮಾಕೋನಹಳ್ಳಿ ವಿನಯ್ ಮಾಧವ್ ಅವರ ವನ್ಯಜೀವಿ/ಪರಿಸರ ವರದಿಗಾರಿಕೆಯ ಸಂದರ್ಭದಲ್ಲಿ ಎದುರಿಸಿದ ಸವಾಲುಗಳು ಮತ್ತು ಪತ್ರಿಕಾ ಓದುಗರಿಗೆ ವಿವರಿಸಲಾಗದ ತಾಕಲಾಟ, ಸಂಘರ್ಷಗಳ ಒಳನೋಟವಿರುವ ಕೃತಿ. ಅಲ್ಲದೆ, ಮಲೆನಾಡಿನ ಭಾಗವೂ ತ್ವರಿತ ನಗರೀಕರಣಕ್ಕೆ ಒಗ್ಗಿಕೊಂಡ ನಂತರ ನಾಗಾಲೋಟದಲ್ಲಿ ಸಾಗುತ್ತಿರುವ ಬದಲಾವಣೆಗಳು, ಕೃಷಿ, ಪರಿಸರ, ಅಭಿವೃದ್ಧಿ ಮತ್ತು ವ್ಯವಸ್ಥೆ ಒಂದನ್ನೊಂದು ನುಂಗುತ್ತಾ ಸಾಗಿರುವ ಕಟುವಾಸ್ತವವನ್ನು ಕಟ್ಟಿಕೊಟ್ಟಿದ್ದಾರೆ. ವನ ಮತ್ತು ಅಲ್ಲಿನ ಜೀವಿಗಳನ್ನು ಉಳಿಸಿಕೊಳ್ಳಲು ಚಿಣ್ಣಪ್ಪ ಅವರಂತಹ ಕೆಲವೇ ವ್ಯಕ್ತಿಗಳು ವೈಯಕ್ತಿಕ ನೆಲೆಯಲ್ಲಿ ಹೋರಾಡುತ್ತಿರುವುದನ್ನು ದಾಖಲಿಸುತ್ತಾ, ಆ ಹಾದಿ ಎಷ್ಟು ಕಠಿಣ ಎಂಬುದನ್ನೂ ಕಟ್ಟಿಕೊಡಲಾಗಿದೆ.

'ಭೂಮಿಗೆ ನಿಜಕ್ಕೂ ಗಂಡಾಂತರ ಇರೋದು ಯಾವ ಜೀವಿಯಿಂದ ಎಂದರೆ ನಿಸ್ಸಂಶಯವಾಗಿ ಅದು ಮಾನವ ಎಂದೇ ಹೇಳಬಹುದು. ಧರೆಯಲ್ಲಿ ಎಲ್ಲ ಸಹಜೀವಿಗಳ ನಾಶಕ್ಕೆ ಮಾನವನೇ ಕಾರಣ. ನಾಶ ಹೀಗೆಯೇ ಮುಂದುವರಿದರೆ, ಮಾನವನನ್ನು ಹೊರತುಪಡಿಸಿ ಇತರೆಲ್ಲ ಜೀವಿಸಂಕುಲವೇ ನಾಶವಾಗಿ ಹೋಗುವ ದಿನ ಬಂದರೂ ಅಚ್ಚರಿ ಇಲ್ಲ' – ಹೀಗೆಂದು ಭವಿಷ್ಯ ನುಡಿದವರು ಸ್ಟ್ಯಾನ್‌ಫರ್ಡ್ ವಿಶ್ವವಿದ್ಯಾಲಯದ ಜೀವಶಾಸ್ತ್ರ ಪ್ರೊಫೆಸರ್ ರೊಡಾಲ್ಫ್ ಡಿರ್ಜೊ. ಮಲೆನಾಡು ಮತ್ತು ಇತರ ಅರಣ್ಯ ಪ್ರದೇಶಕ್ಕೆ ಅವರ ಮಾತು ಯಥಾವತ್ತಾಗಿ ಅನ್ವಯವಾಗುತ್ತದೆ.

ಮಾನವನು ಅರಣ್ಯವನ್ನು ಕಬಳಿಸುತ್ತ ತನ್ನ ಆಧಿಪತ್ಯ ಸ್ಥಾಪಿಸುತ್ತಾ ಹೋದಂತೆ, ಜೀವಜಾಲದ ವೈವಿಧ್ಯ ಸರಪಳಿಗಳೂ ನಾಶವಾಗುತ್ತಾ ಹೋದವು. ಅದು ಆಫ್ರಿಕಾ ಖಂಡದಲ್ಲಿ ಆಗಿರಬಹುದು, ನಮ್ಮ ಪಕ್ಕದ ಮಲೆನಾಡೂ ಆಗಿರಬಹುದು. ಬಹುತೇಕ ಅಪಾಯಕಾರಿ ಕಾಯಿಲೆಗಳ ವೈರಸ್ ಅಥವಾ ರೋಗಾಣುಗಳು ಹಬ್ಬಿದ್ದು, ಅರಣ್ಯ ನಾಶ ಮತ್ತು ವನ್ಯಜೀವಿಗಳ ಮಾರಣ ಹೋಮದಿಂದ ಎಂಬುದು ಸಾಬೀತಾಗಿದೆ.

ಮಾನವ ಇವುಗಳಿಂದ ಪಾಠ ಕಲಿತಂತಿಲ್ಲ. ಪ್ರತಿಯೊಂದು ಜೀವಿಯೂ ತನ್ನದೇ ಆದ ಶಿಸ್ತುಬದ್ಧ ಜೀವನವನ್ನು ರೂಪಿಸಿಕೊಂಡಿರುತ್ತದೆ. ಅಂತಹ ನಡವಳಿಕೆ ವಂಶವಾಹಿನಿ ಮೂಲಕ ಬಳುವಳಿಯಾಗಿಯೇ ಬಂದಿರುತ್ತದೆ. ಆ ನಿಸರ್ಗ ನಿಯಮವನ್ನು ಹೊಸಕಿ ಹಾಕುತ್ತಿರುವವರು ನಾವು, ಅಂದರೆ ಮಾನವರು. ಮಾನವ ಕೇಂದ್ರಿತ ಮತ್ತು ಭೌತಿಕವಾದದ ಆವಾಹನೆ ಮಾಡಿಕೊಂಡ ಪರಿಣಾಮ ತೋಟಕ್ಕೆ ಆನೆಗಳು/ಹುಲಿ ಬಂದರೆ ಗುಂಡಿಕ್ಕಿ ಕೊಲ್ಲಿ ಎನ್ನುವ ರಾಜಕಾರಣಿಗಳು ಮಲೆನಾಡು–ಕೊಡಗು ಭಾಗದಲ್ಲಿ ಹುಟ್ಟಿಕೊಂಡಿದ್ದಾರೆ. 'ಅರಣ್ಯ ಉಳಿಸಿಕೊಳ್ಳುವುದು ನಮಗೆ ಗೊತ್ತು. ಯಾರ ಪಾಠವೂ ಅಗತ್ಯವಿಲ್ಲ' ಎಂಬ ಮಾತುಗಳನ್ನು ಹೇಳುತ್ತಲೇ ಪರಿಸರ, ವನ್ಯಜೀವಿಗಳ ನಿಸರ್ಗ ನಿಯಮದಲ್ಲಿ ಹಸ್ತಕ್ಷೇಪ ಮಾಡುತ್ತ, ನಾಶಕ್ಕೂ ಕಾರಣವಾಗುತ್ತಿರುವುದನ್ನು ಸೂಚ್ಯವಾಗಿ ಹೇಳಿದ್ದಾರೆ ವಿನಯ್.

ದಕ್ಷಿಣ ಭಾರತದ ಗಜಪಥಗಳ ವಿವರ, ಅವುಗಳನ್ನು ಮಾನವರು ಅತಿಕ್ರಮಿಸಿದ ಬಳಿಕ ಜೈವಿಕವಾಗಿ ಮತ್ತು ಮಾನಸಿಕವಾಗಿ ಅವುಗಳಲ್ಲಿ ಆಗಿರುವ ಏರುಪೇರನ್ನು ಕೃತಿಯಲ್ಲಿ ದಾಖಲಿಸಲಾಗಿದೆ. ಕುವೆಂಪು, ಕಾರಂತ, ಕೆದಂಬಾಡಿ ಜತ್ತಪ್ಪ ರೈ, ತೇಜಸ್ವಿ ಕೃತಿಗಳಲ್ಲಿನ ವಿವರಗಳು ಪಶ್ಚಿಮಘಟ್ಟದ ರಮ್ಯಲೋಕ ತೆರೆದಿಡುತ್ತವೆ. ಆದರೆ, ಪಶ್ಚಿಮಘಟ್ಟ ಈಗ ಹಾಗೆ ಉಳಿದಿಲ್ಲ. ಕಾಡು, ವನ್ಯಜೀವಿಗಳನ್ನು ಅವುಗಳ ಪಾಡಿಗೆ ಬಿಟ್ಟುಬಿಡೋಣ, ಅತಿಕ್ರಮಣ ನಿಲ್ಲಿಸೋಣ ಎಂಬ ಮನಃಸ್ಥಿತಿಯವರೂ ಅಪರೂಪದ ಜೀವಿಗಳಾಗಿದ್ದಾರೆ ಎಂಬುದು ಕಟುಸತ್ಯ. ಇರುವ ಕಾಡನ್ನು ಹರಿದು ಹಂಚಿಬಿಡೋಣ ಎಂಬ ಮನಃಸ್ಥಿತಿ ಆಳುವ 'ಪ್ರಭು'ಗಳದ್ದು. ಇದರ ಸುತ್ತಲೂ ಹಲವು ಹಿತಾಸಕ್ತಿಗಳು, ಮಾಫಿಯಾಗಳು ಮತ್ತು ಅಜೆಂಡಾಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಕೃತಿ ತೆರೆದಿಟ್ಟಿದೆ. ವನ್ಯಲೋಕಕ್ಕೂ ಅಲ್ಲಿನ ಜೀವಿಗಳಿಗೂ 'ಪ್ರಜ್ಞೆ' (consciousness) ಇದೆ ಎಂಬುದನ್ನು ಮರೆಯಬಾರದು ಎನ್ನುವ ಸಂದೇಶವೊಂದು ಕೃತಿಯುದ್ದಕ್ಕೂ ಅಂತರ್ಗಾಮಿಯಾಗಿ ಹರಿಯುತ್ತದೆ. ❖



ವನ್ಯಲೋಕದಲ್ಲಿ ನಾಲ್ಕು ಹೆಜ್ಜೆಗಳು
ಲೇ: ಮಾಕೋನಹಳ್ಳಿ ವಿನಯ್ ಮಾಧವ್
ಪ್ರ: ಸಾವಣ್ಣ ಎಂಟರ್‌ಪ್ರೈಸಿಸ್
ಸಂ: 90363 12786
ಪು: 208 ₹200

ತಾಜ್ ಮಹಲ್ ಅಲ್ಲ!

ಬೀಬಿ ಕಾ ಮಕ್ಬರಾ

ಶ್ರೀರಂಜನ್

ಪ್ರವಾಸ

ಜಗತ್ಪ್ರಸಿದ್ಧ ತಾಜ್ ಮಹಲ್ ಇದಲ್ಲ. ನಕಲಿ ಎನ್ನುವುದಕ್ಕಿಂತ ಸಣ್ಣ ತಾಜ್ ಮಹಲ್ ಎನ್ನುವ (ಗಾತ್ರದಲ್ಲಿ ತಾಜ್ ಮಹಲ್‌ನ ಅರ್ಧದಷ್ಟಿದೆ). ಆಗ್ರಾದಿಂದ ಬಹಳ ದೂರ ಮಹಾರಾಷ್ಟ್ರದ ಔರಂಗಾಬಾದ್‌ನಲ್ಲಿರುವ ಇದನ್ನು ಬೀಬಿ ಕಾ ಮಕ್ಬರಾ ಎನ್ನುತ್ತಾರೆ (ದಖ್ಖನ್‌ನ ತಾಜ್ ಎಂದೂ ಕರೆಯುವುದುಂಟು). ತಾಜ್ ಮಹಲ್‌ನೊಂದಿಗಿರುವ ಹೋಲಿಕೆ ಮತ್ತು ವ್ಯತ್ಯಾಸದಿಂದಾಗಿ ಕಣ್ಣಿಗೆ ರಾಚುತ್ತದೆ. ಔರಂಗಜೇಬ್ 1660ರಲ್ಲಿ ತನ್ನ ಮೊದಲ ಹಾಗೂ ಮುದ್ದಿನ ಮಡದಿ ದಿಲ್ರಸ್ ಬಾನು ಬೇಗಮ್‌ಳ ನೆನಪಿಗಾಗಿ ಈ ಮಹಲ್ ಕಟ್ಟಿದ. ದಿಲ್ರಸ್ ಬಾನು ಕೂಡ ತನ್ನ ಅತ್ತೆ ಮುಮ್ತಾಜ್‌ಳಂತೆ ತನ್ನ ಮಗುವಿನ (ಐದನೆಯ) ಜನನದಲ್ಲಿ ತೀರಿಕೊಂಡಳು. ಬೀಬಿ ಕಾ ಮಕ್ಬರಾವನ್ನು ಕಟ್ಟಿದ ಮುಖ್ಯ ಶಿಲ್ಪಿ ಅತಾ-ಉಲ್ಲಾ, ತಾಜ್ ಮಹಲ್ ಕಟ್ಟಿದ ಉಸ್ತಾದ್ ಅಹ್ಮದ್ ಲಾಹೋರಿಯ ಮಗನಾಗಿದ್ದ. ಶಹಜಹಾನನಂತೆ ಔರಂಗಜೇಬನಿಗೆ ಇಂತಹ ಯಾವುದೇ ಕೆಲಸಗಳಲ್ಲಿ ಆಸಕ್ತಿಯಿರಲಿಲ್ಲ. ಒಟ್ಟಿನಲ್ಲಿ ಹಣಕಾಸಿನ ಮತ್ತು ಮಹತ್ವಾಕಾಂಕ್ಷೆಯ ಕೊರತೆಯಿಂದಾಗಿ ಬೀಬಿ ಕಾ ಮಕ್ಬರಾ, ತಾಜ್ ಮಹಲ್‌ನ ಭವ್ಯತೆಯಿಂದ ದೂರ ಉಳಿಯಿತು. ಈ ಸ್ಮಾರಕದ ನಿರ್ಮಾಣಕ್ಕೆ ಒಟ್ಟು ಖರ್ಚಾಗಿದ್ದು 6,68,203 ರೂಪಾಯಿ ಹಾಗೂ ಏಳು ಆಣೆ! ಕಟ್ಟಡಕ್ಕೆ ಅಗತ್ಯವಾದ ನುಣುಪಾದ ಕಲ್ಲುಗಳನ್ನು 300 ಬಂಡಿಗಳಲ್ಲಿ ತರಿಸಲಾಯಿತಂತೆ. ಇರಾನ್‌ನ ಸಫಾವಿದ್ ರಾಜ್ಯದ ರಾಜಕುಮಾರಿಯಾಗಿದ್ದ ದಿಲ್ರಸ್ ಬಾನು, ಗುಜರಾತ್‌ಗೆ ವೈಸ್‌ರಾಯ್ ಆಗಿ ನೇಮಕಗೊಂಡಿದ್ದ ತಂದೆ ಮಿರ್ಜಾ ಬಡಿ ಉಲ್ ಜಮನ್ ಸಫವಿ ಜತೆ ಭಾರತಕ್ಕೆ ಬಂದಳು. ಔರಂಗಜೇಬ್‌ನ ಕೈಹಿಡಿದಿದ್ದಳು. ಪ್ರವಾಸಿಗರ ನಿರ್ಲಕ್ಷ್ಯಕ್ಕೆ ಒಳಗಾಗಿದ್ದರೂ ಬೀಬಿ ಕಾ ಮಕ್ಬರಾಕ್ಕೆ ಒಬ್ಬ ಸಾಮಾನ್ಯ ನೋಡುಗನನ್ನೂ ಬೆರಗುಗೊಳಿಸುವ ಸಾಮರ್ಥ್ಯವಿದೆ. ಹರಿಯುತ್ತಿದ್ದ ಸಮಯದ ಝರಿಯೊಂದು ಕಲ್ಲುಗೋಡೆಗಳಲ್ಲಿ ಸ್ತಬ್ಧವಾಗಿ ಮೆಲುಗುಡುತ್ತಿರುವುದು ಆ ಸಮಾಧಿಯೊಳಗಿನ ಮೌನದಲ್ಲಿ ನಿಮಗೆ ಕೇಳಿಸಿದರೂ ಕೇಳಿಸೀತು. ❖





ಯಕ್ಷ ಜಗತ್ತಿನ ಸವ್ಯಸಾಚಿ

ಚಂದ್ರಹಾಸ ಹಿರೇಮಳಲಿ

ಬಡಗುತಿಟ್ಟಿನ ಯಕ್ಷಗಾನವನ್ನು ಪ್ರಸಿದ್ಧರ ಚರಿತ್ರೆಯ ಪ್ರಸಂಗಗಳೊಂದಿಗೆ ಬೆಸೆದು ಉತ್ತರ ಕರ್ನಾಟಕ ಹಾಗೂ ಹಳೆಯ ಮೈಸೂರು ಪ್ರಾಂತ್ಯಗಳಲ್ಲೂ ಜನಪ್ರಿಯರಾದವರು ಶಿವಮೊಗ್ಗ ಡಿವಿಎಸ್ ಶಿಕ್ಷಣ ಸಂಸ್ಥೆಯ ಸಂಸ್ಕೃತ ಉಪನ್ಯಾಸಕ ವಿದ್ವಾನ್ ದತ್ತಮೂರ್ತಿ ಭಟ್.

12ನೇ ಶತಮಾನದ ಶರಣ ಚಳವಳಿಯ ರೂವಾರಿ ಜಗಜ್ಯೋತಿ ಬಸವೇಶ್ವರರ ಜೀವನ ಚರಿತ್ರೆಯನ್ನು ಯಕ್ಷಗಾನದ ಮೂಲಕ ಪ್ರಸ್ತುತಪಡಿಸಿ ಉತ್ತರ ಕರ್ನಾಟಕದಲ್ಲಿ ಹೊಸ ಅಲೆ ಸೃಷ್ಟಿಸಿದ್ದಾರೆ. ಅಸಮಾನತೆ, ಜಾತಿ ವ್ಯವಸ್ಥೆ, ಮೌಢ್ಯಗಳ ವಿರುದ್ಧ, ಧರ್ಮದ ಕಟ್ಟುಪಾಡುಗಳ ವಿರುದ್ಧ ಹೊಸ ಭಾಷ್ಯ ಬರೆದ ಶರಣರ ಬದುಕಿನ ಪ್ರಸಂಗಗಳನ್ನು ಒಳಗೊಂಡ ಯಕ್ಷಗಾನ ಪ್ರಸಂಗ 257 ಪ್ರದರ್ಶನ ಕಂಡಿದೆ. ಅದೇ ರೀತಿ ನಾಥ ಪರಂಪರೆಯ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದ ಆದಿಚುಂಚನಗಿರಿ ಕ್ಷೇತ್ರದ ಕಥಾನಕವನ್ನು ಯಕ್ಷಗಾನಕ್ಕೆ ಅಳವಡಿಸಿ, ಹಳೆಯ ಮೈಸೂರು ಪ್ರಾಂತ್ಯಗಳ ಜನರನ್ನು ಯಕ್ಷಗಾನದತ್ತ ಸೆಳೆದಿದ್ದಾರೆ. ಇದುವರೆಗೂ ಆದಿಚುಂಚನಗಿರಿ ಪ್ರಸಂಗ 68 ಪ್ರದರ್ಶನಗಳನ್ನು ಪೂರೈಸಿದೆ.

> ಬಸವೇಶ್ವರರ ಜೀವನ ಚರಿತ್ರೆಯನ್ನು ಯಕ್ಷರಂಗಕ್ಕೆ ತಂದ ದತ್ತಮೂರ್ತಿ ಭಟ್ ಅವರದು ಬಹುಮುಖ ಪ್ರತಿಭೆ. ಈ ಪ್ರಸಂಗ ದ್ವಿಶತಕ ಬಾರಿಸಿ ಮುಂದೆ ಹೊರಟಿದೆ. ಯಕ್ಷಗಾನದಲ್ಲಿ ಹೊಸ ಪ್ರಯೋಗಗಳನ್ನು ಮಾಡಲು ಭಟ್ಟರ ಮನಸ್ಸು ಸದಾ ತುಡಿಯುತ್ತದೆ...

12ನೇ ಶತಮಾನದ ಪ್ರಸಿದ್ಧ ವಚನಕಾರ್ತಿ ಅಕ್ಕಮಹಾದೇವಿ. ಶಿವಮೊಗ್ಗ ಜಿಲ್ಲೆಯ ಉಡುತಡಿಯ ಅಕ್ಕ ಲೌಕಿಕ ಜೀವನ ತೊರೆದು ಅಲೌಕಿಕದತ್ತ ಸಾಗಿದವರು. ಮಲ್ಲಿಕಾರ್ಜುನನನ್ನೇ ತನ್ನ ಪತಿ ಎಂದು ಘೋಷಿಸಿಕೊಂಡು ಹುಟ್ಟುಡುಗೆಯಲ್ಲೇ ಅನುಭವ ಮಂಟಪದತ್ತ ಪಯಣ ಬೆಳೆಸಿದ್ದರು. ಅವರ ವಚನಗಳು ಇಂದಿಗೂ ಸಮಾಜದ ಡೊಂಕು ತಿದ್ದುವಂತಹ ಕಾಲಾತೀತ ಗುಣವನ್ನು ಹೊಂದಿದಂಥವು. ಅಂಥ ಅಕ್ಕ ಮಹಾದೇವಿಯ ಚರಿತ್ರೆಯನ್ನು ಯಕ್ಷಗಾನಕ್ಕೆ ಅಳವಡಿಸಿರುವುದು ಅವರ ಪ್ರವೃತ್ತಿಯ ಕ್ರಿಯಾಶೀಲತೆಗೆ ಸಾಕ್ಷಿ. ಈ ಪ್ರಸಂಗ ಈಗಷ್ಟೆ ಆರಂಭವಾಗಿದ್ದು, ಎರಡು ಪ್ರದರ್ಶನ ಕಂಡಿದೆ. ದಾಸಶ್ರೇಷ್ಠ ಕನಕದಾಸರ ಕಥಾ ಪ್ರಸಂಗವನ್ನೂ ಯಕ್ಷಗಾನಕ್ಕೆ ಅಳವಡಿಸುವ ಕೆಲಸ ಸದ್ದಿಲ್ಲದೇ ಸಾಗಿದೆ.

ಬಹುತೇಕ ಪ್ರಸಂಗಗಳಲ್ಲಿ ಸ್ವತಃ ದತ್ತಮೂರ್ತಿ ಭಟ್ಟರೇ ಅಭಿನಯಿಸಿರುವುದು ವಿಶೇಷ. ಅವರು ಆವಾಹಿಸಿಕೊಂಡ ಹನುಮಂತ, ಅಶ್ವತ್ಥಾಮ, ರಾಮ, ಈಶ್ವರ, ಗವಿ ಗಂಗಾಧರೇಶ್ವರ, ಬಸವೇಶ್ವರ, ಕೌಶಿಕ, ಕನಕದಾಸರ ಪಾತ್ರಗಳು ಯಕ್ಷಗಾನ ರಂಗಭೂಮಿಯ ಪ್ರೇಕ್ಷಕರ ಹೃದಯ ಗೆದ್ದಿವೆ.

ಯಕ್ಷಗಾನ ಕಲಾವಿದರಾಗಷ್ಟೇ ಅಲ್ಲದೆ ಯಕ್ಷಗಾನ ಅಕಾಡೆಮಿ ಸದಸ್ಯರಾಗಿ, ದಕ್ಷಿಣ ಭಾರತ ಸಾಂಸ್ಕೃತಿಕ ಸಮಿತಿಯ ನಿರ್ದೇಶಕರಾಗಿ, ಪದವಿಪೂರ್ವ ಶಿಕ್ಷಣ ಮಂಡಳಿ ಸಂಸ್ಕೃತ ಭಾಷಾ ವಿಷಯದ ಪಠ್ಯಪುಸ್ತಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಅನುಭವ ಅವರಿಗಿದೆ. ಪ್ರಖರ ವಾಗ್ಮಿ, ನಿರೂಪಕ, ಸಂಘಟಕ, ನಾಟ್ಯಶ್ರೀ ಕಲಾ ತಂಡದ ಸಂಚಾಲಕರಾಗಿಯೂ ಛಾಪು ಮೂಡಿಸಿದ್ದಾರೆ. ಅವರ ಸೇವೆಗೆ ಹಲವು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ. 'ಯಕ್ಷ ಭೂಷಣ' 'ಕರ್ನಾಟಕ ಸೇವಾ ರತ್ನ' 'ಪರೋಪಕಾರ ಪುರಂದರ' 'ಯಕ್ಷ ಬಸವ ರತ್ನ' 'ಅಭಿನವ ಅಶ್ವತ್ಥಾಮ' ಪ್ರಶಸ್ತಿಗಳಿಗೆ ಪುರಸ್ಕೃತರಾಗಿದ್ದಾರೆ.

ದತ್ತಮೂರ್ತಿ ಭಟ್

'ಬಾಲ್ಯ ಕಳೆದ ಸಾಗರ ತಾಲ್ಲೂಕು ತಾಳಗುಪ್ಪ ಸಮೀಪದ ಬಂಜಗಾರುವಿನಲ್ಲಿ ನೋಡುತ್ತಿದ್ದ ಯಕ್ಷಗಾನ ಪ್ರದರ್ಶನಗಳಿಂದ ಪ್ರಭಾವಿತನಾಗಿ 15ನೇ ವಯಸ್ಸಿಗೆ ಬಣ್ಣ ಹಚ್ಚಿದ್ದೆ. ಅಲ್ಲಿಂದ ಆರಂಭವಾದ ಪಯಣ ಇಂದಿಗೂ ಮುಂದುವರಿದಿದೆ. ಬಸವೇಶ್ವರರ ಚರಿತ್ರೆ ಇಷ್ಟೊಂದು ಪ್ರದರ್ಶನಗಳನ್ನು ಕಂಡಿರುವುದು ದಾಖಲೆ. ಉತ್ತರ ಕರ್ನಾಟಕದ ಜನರನ್ನು ಆ ಮೂಲಕ ತಲುಪಿದ ಸಂತಸವಿದೆ. ಆದಿಚುಂಚನಗಿರಿ ಮಹಾತ್ಮೆ ಹಳೆ ಮೈಸೂರು ಪ್ರಾಂತ್ಯದ ಜನರ ಮನ್ನಣೆ ಗಳಿಸಿದೆ. ಉಪನ್ಯಾಸಕ ವೃತ್ತಿಯ ಜತೆಗೆ ಪ್ರವೃತ್ತಿಯ ಕನಸುಗಳನ್ನು ಮೂರು ದಶಕಗಳಿಂದ ವಿಶ್ರಮಿಸದೇ ಪಸರಿಸಿರುವೆ' ಎಂದು ನಡೆದ ಹಾದಿಯ ನೆನಪುಗಳನ್ನು ಮೆಲುಕು ಹಾಕುತ್ತಾರೆ.

'ಪತ್ನಿ ಸುಜಾತಾ ಭಟ್ ಸಹಕಾರವಿಲ್ಲದೇ ವೃತ್ತಿಯ ಜತೆ ಪ್ರವೃತ್ತಿಯ ಕನಸು ಚಿಗುರೊಡೆಸುವುದು ಸಾಧ್ಯವಿರಲಿಲ್ಲ. ಮಗಳು ನವ್ಯಾ ಭಟ್ ಗಾಯನದ ಜತೆ ಯಕ್ಷಗಾನದಲ್ಲೂ ಹೆಜ್ಜೆ ಮೂಡಿಸುತ್ತಿದ್ದಾರೆ. ನಾಡಿನ ಹಲವು ಮಠಾಧೀಶರು, ಜನಪ್ರತಿಧಿಗಳು, ಅಧಿಕಾರಿಗಳು ಸಂಘಸಂಸ್ಥೆಗಳ ಸಹಕಾರ ಇಂತಹ ಪ್ರಯೋಗಗಳ ಸಾಕಾರಕ್ಕೆ ನೆರವಾಗಿದೆ' ಎಂದು ವಿನಯದಿಂದ ಸ್ಮರಿಸುತ್ತಾರೆ ದತ್ತಮೂರ್ತಿ ಭಟ್.

ಅವರ ಹಲವು ಯಕ್ಷಗಾನ ಕಥಾ ಪ್ರಸಂಗಗಳು ಪ್ರದೇಶ, ಜಾತಿ, ಧರ್ಮರಹಿತವಾಗಿ ಅಪಾರ ಜನಮನ್ನಣೆ ಗಳಿಸಿವೆ. ಸ್ವಾರ್ಥ, ಮೋಸ, ವಂಚನೆ ವಿರುದ್ಧ ಸದಾ ಧ್ವನಿ ಎತ್ತುವ ಅವರು ನೇರ, ನಿಷ್ಠುರವಾದಿಗಳು. ತಮಗೆ ಒಪ್ಪದ ಯಾವುದೇ ವಿಷಯ, ವ್ಯಕ್ತಿತ್ವವನ್ನು ಖಂಡಿಸುವ, ತಾವು ನಂಬಿದ ತತ್ವ, ಸಿದ್ಧಾಂತ ಬಿಟ್ಟುಕೊಡದ ಅಪರೂಪದ ಕಲಾವಿದ ಎಂಬ ಹಿರಿಮೆಯೂ ಅವರದಾಗಿದೆ.

ಸಾಹಿತ್ಯದ ಸಂಗ...

ಕಲೆ: ಅಶೋಕ ಶಟಕಾರ

...10ನೇ ಪುಟದಿಂದ

ಕಮೂವಿನ 'ಪ್ಲೇಗ್' ಕಾದಂಬರಿಯ ಕೊನೆಯಲ್ಲಿ ಕೆಲವು ಅರ್ಥಪೂರ್ಣ ಸಾಲುಗಳಿವೆ. ಪ್ಲೇಗ್ ಕಡಿಮೆಯಾಗುವ ಸಂದರ್ಭ. ಬೀದಿಗಳಲ್ಲಿ, ರಸ್ತೆಗಳಲ್ಲಿ, ಮನೆಗಳ ಮುಂದೆ ಇಲಿಗಳು ನಿಧಾನವಾಗಿ ಸಂಭ್ರಮದಿಂದ ಓಡಾಡಲು ಶುರುಮಾಡುವವು. ಜನ ಶುಭಸೂಚಕ ಎಂದು ತಿಳಿದು ಸಂತೋಷವಾಗಿ ಬೀದಿಗಿಳಿಯುವರು. ಆದರೆ, ದಾರ್ಶನಿಕ ವ್ಯಕ್ತಿತ್ವದ ಡಾ.ರಿಯೂ ಯೋಚಿಸುವುದೇ ಬೇರೆ. ಈ ರೋಗ ಪೂರ್ತಿ ಸಾಯುವುದಿಲ್ಲ. ಎಲ್ಲೆಲ್ಲೋ ಅವಿತುಕೊಂಡಿರುತ್ತದೆ. ಯಾವಾಗ ಬೇಕಾದರೂ ದಾಳಿ ಮಾಡಬಹುದು. ಇದು ಪುಸ್ತಕ ಓದುವವರಿಗೆ ಮಾತ್ರ ತಿಳಿಯಲು ಸಾಧ್ಯ. ಯಾಕೆಂದರೆ ಜಗತ್ತಿನಲ್ಲಿ ಅರಿಯುವ ಸಾಧ್ಯತೆ ಇರುವುದು ಪುಸ್ತಕ ಸಂಸ್ಕೃತಿಗೆ ಮಾತ್ರ ಎಂದು.

ಪ್ರಸಿದ್ಧ ಮಕ್ಕಳ ಲೇಖಕ ರಸ್ಕಿನ್ ಬಾಂಡ್ ಅವರ ಉಪನ್ಯಾಸವಿತ್ತು, ಕೆಲವು ವರ್ಷಗಳ ಹಿಂದೆ ಬೆಂಗಳೂರಿನ ಫೋರಮ್ ಬುಕ್‌ಹೌಸ್‌ನಲ್ಲಿ. ಮಕ್ಕಳು ಕಿಕ್ಕಿರಿದು ತುಂಬಿದ್ದರು. ಅವರ ಪೋಷಕರ ಜೊತೆ ಆಗ ರಸ್ಕಿನ್ ಬಾಂಡ್, 'ಶಿಕ್ಷಣ ಪಡೆದವರು ವಾರಕ್ಕೆ ಒಂದು ಪುಸ್ತಕ ಓದದೇ ಹೇಗೆ ಇರ್ತಾರೋ ಗೊತ್ತಿಲ್ಲ. ನಾನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ' ಎಂದಿದ್ದರು. ನೈಪಾಲ್ ಅವರಿಗೆ ನೊಬೆಲ್ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅದೇ ಫೋರಮ್ ಹೌಸ್‌ನಲ್ಲಿ ನಡೆದ ಸಂವಾದದ ನಡುವೆ ಉತ್ತರಿಸುತ್ತ ಅವರು, 'ನನ್ನ ದೋಷಗಳನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗುವುದು ಉತ್ತಮ ಕೃತಿಗಳ ಓದಿನಿಂದ' ಎಂದಿದ್ದರು. ಅಂದು ಸಭಿಕರ ನಡುವೆ ಪ್ರಸಿದ್ಧ ಚಿಂತಕ, ಲೇಖಕ ರಾಮಚಂದ್ರ ಗುಹಾ ಅವರೂ ಇದ್ದರು.

ನಮ್ಮ ನಿಜಲಿಂಗಪ್ಪ ಅವರು ತುಂಬಾ ಓದುತ್ತಿದ್ದರು. ಒಮ್ಮೆ ಅವರನ್ನು ನೋಡಲು ಜಿ.ಎಸ್.ಶಿವರುದ್ರಪ್ಪ ಮತ್ತು ನಾನು ಹೋದಾಗ ತಮ್ಮ ತೊಂಬತ್ತರ ವಯಸ್ಸಿನಲ್ಲಿ ಓದುತ್ತ ಕೂತಿದ್ದರು, ಮೆಲುದನಿಯಲ್ಲಿ ಸಂಗೀತವನ್ನು ಆಲಿಸುತ್ತ. ಅದರ ಬಗೆಗಿನ ನಮ್ಮ ಪ್ರಶ್ನೆಗೆ ಉತ್ತರಿಸುತ್ತ, 'ಓದಬೇಕಪ್ಪ, ಓದೇ ನಮ್ಮನ್ನು ಕಾಪಾಡೋದು' ಎಂದಿದ್ದರು.

ಈ ನೆಲೆಯಲ್ಲಿ ನಮ್ಮ ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್, ಕಡಿದಾಳ್ ಮಂಜಪ್ಪ ಮುಂತಾದ ಕೆಲವರು ಪುಸ್ತಕ ಪ್ರೇಮಿಗಳಾಗಿದ್ದರು. ನಮ್ಮ ಹಳೆಯ ತಲೆಮಾರಿನ ಬಹುಪಾಲು ರಾಷ್ಟ್ರೀಯ ನಾಯಕರು ಗಾಢವಾದ ಪುಸ್ತಕ ಪ್ರೇಮಿಗಳಾಗಿದ್ದರು. ಎಲ್ಲಾ ಪಕ್ಷಗಳಲ್ಲೂ ಅಂಥ ನಾಯಕರು ಇದ್ದರು.

ಒಬಾಮ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ಮುನ್ನ ತಮ್ಮ ಆಪ್ತ ಸಹಾಯಕರಿಗೆ ಸೂಚಿಸಿದ್ದು ತಾವು ಓದಬೇಕಾದ ಅತ್ಯುತ್ತಮ ಹತ್ತು ಪುಸ್ತಕಗಳನ್ನು ಹೆಸರಿಸಿ ಎಂದು. ಈ ಹತ್ತು ಪುಸ್ತಕಗಳಲ್ಲಿ ಗಾಂಧೀಜಿಯವರನ್ನು ಕುರಿತ ಪುಸ್ತಕವೂ ಇತ್ತು. ಇರಲಿ, ಹೀಗೇ ಪ್ರಸ್ತಾಪಿಸುತ್ತ ಹೋಗಬಹುದು, ಮನುಕುಲದ ಕಲ್ಯಾಣವೇ ಮುಖ್ಯ ಎಂಬ ಕಾರಣಕ್ಕಾಗಿ.

ಕೊನೆಗೆ ಪೋಲಿಷ್ ಭಾಷೆಯ ನೊಬೆಲ್ ಪ್ರಶಸ್ತಿ ಪುರಸ್ಕೃತೆ ಓಲ್ಗಾ ತುಕಾಜುಕ್ ಅವರ ಮಾತು ನೆನಪಿಸಿಕೊಳ್ಳುವೆ. ಅದು ಹೀಗಿದೆ: 'ಮೃದುತ್ವವೆಂಬುದು ಪ್ರೀತಿಯ ಘನವಾದ ರೂಪ. ಅದು ಇನ್ನೊಂದು ಜೀವಿಯ ಆಳವಾದ ಭಾವನಾತ್ಮಕ ಕಾಳಜಿ, ಅದರ ದೌರ್ಬಲ್ಯ, ಯಾತನೆ, ಸ್ವಭಾವಗಳನ್ನು ಕಾಣಬಲ್ಲುದು. ಅದು ವಿಶ್ವವನ್ನು ಪರಸ್ಪರ ಸಂಬಂಧಿತ, ಜೀವಂತ ಮೊತ್ತವಾಗಿ ಕಾಣುವ ಪರಿ. ಸಾಹಿತ್ಯವೆಂಬುದು ಇಂಥ ಮೃದುತ್ವದ ಮೇಲಿನ ನಿರ್ಮಾಣ. ಅದು ಇನ್ನೊಬ್ಬನಿಗಾಗಿ ಮಿಡಿಯುವ ವಸ್ತು.'

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮೂವತ್ತೇಳರ ಮೋಜು

1. 37 x 3 = 111
37x6 = 222
37x9 = 333
37x12 = 444
37x15 = 555
37x18 = 666
37x21 = 777
37x24 = 888
37x27=999

2. ಲೆಕ್ಕ ಮಾಡು ಇಂದಿನ ದಿನಾಂಕ ನೋಡು

204669
x9

ಮಜ ಮಜ ಮಜಕೂರದ ಏಪ್ರಿಲ್ 11ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದಕ್ಕ ಚುಕ್ಕ ಕೊಕ್ಕರೆ ಕಥೆಯ

ಮುಯ್ಯಿಗೆ ಮುಯ್ಯಿ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಒಂದು ಕಾಡಿನ ಮಧ್ಯೆ ಹರಿಯುತ್ತಿದ್ದ ನದಿ ದಂಡೆಯ ಮೇಲೆ ಕೊಕ್ಕರೆಯೊಂದು ಬಿಡಾರ ಹೂಡಿತ್ತು. ಆಹಾರ ಹುಡುಕಿಕೊಂಡು ಬಂದ ಬಳಿಕ ನದಿ ದಂಡೆಯಲ್ಲೇ ಹೆಚ್ಚಿನ ಸಮಯ ಕಳೆಯುತ್ತಿತ್ತು

ಅದೇ ಕಾಡಿನಲ್ಲಿ ನರಿಯೊಂದು ಇತ್ತು. ಹುಲಿ-ಸಿಂಹಗಳು ಬೇಟೆಯಾಡಿ ಉಳಿಸಿಹೋದ ಶೇಷವನ್ನು ತಿಂದು, ನೀರು ಕುಡಿಯಲು ಅದೇ ನದಿಯತ್ತ ಬರುತ್ತಿತ್ತು. ಆಗ ಕೊಕ್ಕರೆಯ ಸ್ನೇಹ ಸಂಪಾದಿಸಿತು

ಕೊಕ್ಕರೆಗೆ ಹೇಗಾದರೂ ಮಾಡಿ ಗೇಲಿಮಾಡಿ, ಕಾಡಿಸಬೇಕು ಎಂದು ಹೊಂಚು ಹಾಕಿದ ನರಿ, ತನ್ನ ಎಂದಿನ ಬುದ್ಧಿ ತೋರಿಸಿತು. ಕೊಕ್ಕರೆಗೆ ಒಮ್ಮೆ ತನ್ನ ಮನೆಗೆ ಊಟಕ್ಕೆ ಬರುವಂತೆ ಆಹ್ವಾನ ನೀಡಿತು

ಕೊಕ್ಕರೆ ಊಟಕ್ಕೆ ಬಂತು. ಎರಡು ತಟ್ಟೆಯಲ್ಲಿ ಘಮಘಮಿಸುವ ಗಸಗಸೆ ಪಾಯಸ ತಂದಿಟ್ಟ ನರಿ ತಿನ್ನು ಎಂದಿತು. ಉದ್ದ ಚುಂಚಿನ ಕೊಕ್ಕರೆಗೆ ಪಾಯಸ ತಿನ್ನಲಾಗಲಿಲ್ಲ. ಎಲ್ಲವನ್ನೂ ನರಿಯೇ ತಿಂದಿತು

ಮುಯ್ಯಿ ತೀರಿಸಿಕೊಳ್ಳಬೇಕು ಎಂದು ನಿರ್ಧರಿಸಿದ ಕೊಕ್ಕರೆ, ನರಿಯನ್ನು ಊಟಕ್ಕೆ ಕರೆಯಿತು. ತಾನೂ ಪಾಯಸ ಮಾಡಿ ಸಣ್ಣ ಬಾಯಿಯ ಹೂಜಿಯಲ್ಲಿ ತಿನ್ನಲು ಕೊಟ್ಟಿತು. ನರಿಯ ಮುಖ ಅದರಲ್ಲಿ ಹೋಗಲಿಲ್ಲ

ಹೂಜಿಯಲ್ಲಿದ್ದ ಪಾಯಸವನ್ನು ಚುಂಚಿನಿಂದ ಪೂರ್ತಿಯಾಗಿ ತಾನೇ ತಿಂದ ಕೊಕ್ಕರೆ ನರಿಗೆ ಪಾಠ ಕಲಿಸಿತು. ನರಿಗೂ ತಾನು ಮಾಡಿದ ತಪ್ಪಿನ ಅರಿವಾಯಿತು. ಮುಂದೆ ಎರಡೂ ಗೆಳೆತನದಿಂದ ಬಾಳಿದವು

ಶಬ್ದಗಳಲ್ಲಿ ಸರಸ...

ಪದಶೋಧ

ಇಲ್ಲಿ ಕೊಟ್ಟಿರುವ ಶಬ್ದಗಳಲ್ಲಿ ಒಂದು ವಿಶಿಷ್ಟ ಕ್ರಮದಲ್ಲಿ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಡಾ.ಶಿವರಾಮ ಕಾರಂತರ ಒಂದು ಸಾಹಿತ್ಯ ಕೃತಿಯ ಹೆಸರನ್ನು ಹುಡುಕಿಕೊಡಿ.

1. ಸಾಮೂಹಿಕ ಲಗ್ನ
2. ಕಲೆಯ ಗುರುತು
3. ಅಜ್ಜಿಯ ಔಷಧಿ
4. ಯಶಸ್ಸಿನ ಹಾದಿ
5. ಅಂಕದ ಪರದೆ
6. ನಗಾರಿ ವಾದನ
7. ಹಸುವಿನ ಹಾಲು
8. ಗಣತಿ ಕೆಲಸ
9. ತೆಳುವಾದ ಬಟ್ಟೆ

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಜಿಲ್ಲೆಗಳಿಗೂ ಆ ಜಿಲ್ಲೆಯಲ್ಲಿರುವ ಒಂದು ತಾಲ್ಲೂಕಿನ ಹೆಸರಿಗೂ ಹೊಂದಿಸಿರಿ

1.	ಕೋಲಾರ	A.	ಮದ್ದೂರು
2.	ತುಮಕೂರು	B.	ಕುಂದಾಪುರ
3.	ಚಿತ್ರದುರ್ಗ	C.	ಗುಡಿಬಂಡೆ
4.	ಶಿವಮೊಗ್ಗ	D.	ಚಳ್ಳಕೆರೆ
5.	ದಾವಣಗೆರೆ	E.	ಗುಬ್ಬಿ
6.	ಮೈಸೂರು	F.	ಮಡಿಕೇರಿ
7.	ಮಂಡ್ಯ	G.	ನಂಜನಗೂಡು
8.	ಕೊಡಗು	H.	ಹರಿಹರ
9.	ಹಾಸನ	I.	ಸಾಗರ
10.	ಉಡುಪಿ	J.	ಕಡೂರು
11.	ಚಿಕ್ಕಮಗಳೂರು	K.	ಅಥಣಿ
12.	ಬೆಳಗಾವಿ	L.	ಬೀಳಗಿ
13.	ವಿಜಯಪುರ	M.	ಕುಂದಗೋಳ
14.	ಬಾಗಲಕೋಟೆ	N.	ಇಂಡಿ
15.	ಧಾರವಾಡ	O.	ನರಗುಂದ
16.	ಗದಗ	P.	ಗಂಗಾವತಿ
17.	ಹಾವೇರಿ	Q.	ಮಾನ್ವಿ
18.	ಕಲಬುರ್ಗಿ	R.	ಬ್ಯಾಡಗಿ
19.	ರಾಯಚೂರು	S.	ಸೇಡಂ
20.	ಕೊಪ್ಪಳ	T.	ಅರಸೀಕೆರೆ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಸೊ	ಶು	ರ	ಹ	ಗ
ಟ	ಟೆ	ಗು	ಟಿ	ಧ

○	ಂ	○	ನೇಗಿಲು
○	ಂ	○	ಒಂದು ಖಾರದ ಸಸ್ಯದ ಬೇರು
○	ಂ	○	ಋಣ
○	ಂ	○	ನಡು
○	ಂ	○	ಪರಿಮಳ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1. ಚಂದ್ರ 2. ಸಂಪು 3. ಹಂಚು 4. ಕೊಂಚ 5. ತಂಗಿ

ಟ್ವೆಂಟಿ–20 ಮ್ಯಾಚ್

1-D, 2-E, 3-B, 4-G, 5-A, 6-H, 7-F, 8-C, 9-I, 10-T, 11-J, 12-L, 13-O, 14-K, 15-M, 16-N, 17-P, 18-R, 19-S, 20-Q.

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು


ಉದಾತ್ತ ನಿಗಳೆ, ಬೆಂಗಳೂರು

ಉಜ್ಮಾ ಕೌಸರ್, ಮಧುಗಿರಿ

ಸುಬ್ರಹ್ಮಣ್ಯ ಬನ್ನಿಗಿಡದ, ನರಗುಂದ

ಪ್ರಬುದ್ಧ ನಾಯಕರ ಮುಖಾಮುಖಿ: ಕೆಕೆಆರ್‌ಗೆ ಬ್ಯಾಟಿಂಗ್ ವೈಫಲ್ಯದ ಚಿಂತೆ

ಆರ್‌ಸಿಬಿಗೆ 'ಹ್ಯಾಟ್ರಿಕ್' ಕನಸು

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರು –ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಸತತ ಎರಡು ಪಂದ್ಯಗಳಲ್ಲಿ ಅಧಿಕಾರಯುತ ಜಯ ಸಾಧಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಹ್ಯಾಟ್ರಿಕ್ ಜಯದ ಕನಸಿನೊಂದಿಗೆ ಭಾನುವಾರ ಕಣಕ್ಕೆ ಇಳಿಯಲಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಬಗಳಕ್ಕೆ ಏಯಾನ್ ಮಾರ್ಗನ್ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಎದುರಾಳಿ. ಈ ಪಂದ್ಯ ಕ್ರಿಕೆಟ್ ಲೋಕದ ಇಬ್ಬರು ಪ್ರಬುದ್ಧ ಮತ್ತು ಚಾಣಾಕ್ಷ ನಾಯಕರ ನಡುವಿನ ಹಣಾಹಣಿಯೂ ಆಗಲಿದೆ. ಎರಡು ಪಂದ್ಯಗಳಲ್ಲಿ ಛಲ ಬಿಡದೆ ಕಾದಾಡಿ ಗೆದ್ದಿರುವುದು ಬೆಂಗಳೂರು ತಂಡದ ಆತ್ಮಸ್ಥೈರ್ಯ ಹೆಚ್ಚಿಸಿದೆ. ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯ ಕೋಲ್ಕತ್ತ ಪಾಳಯದಲ್ಲಿ ಚಿಂತೆಗೆ ಕಾರಣವಾಗಿದೆ.

ಮೊದಲ ಪಂದ್ಯದಲ್ಲಿ 10 ರನ್‌ಗಳಿಂದ ಹೈದರಾಬಾದ್ ವಿರುದ್ಧ ಜಯ ಗಳಿಸಿದ್ದ ಕೋಲ್ಕತ್ತ ನೈಟ್ ರೈಡರ್ಸ್ ಮುಂಬೈ ಎದುರಿನ ಎರಡನೇ ಪಂದ್ಯದಲ್ಲಿ ಗೆಲುವಿನ ಹಾದಿಯಲ್ಲಿತ್ತು. ಆದರೆ ಕೊನೆಯ ಓವರ್‌ಗಳಲ್ಲಿ ಮುಗ್ಗರಿಸಿ 10 ರನ್‌ಗಳಿಂದ ಸೋಲಿಗೆ ಶರಣಾಗಿತ್ತು.

ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳ ವೈಫಲ್ಯದಿಂದಾಗಿ ಕೋಲ್ಕತ್ತ ತಂಡ ಮುಂಬೈ ಎದುರು ಸೋತಿತ್ತು. ತಂತ್ರಗಳನ್ನು ಹೂಡುವಲ್ಲಿ ಮತ್ತು ಆಟಗಾರರನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಸರಿಯಾದ ನಿರ್ಧಾರ ತೆಗೆದುಕೊಳ್ಳಬಲ್ಲ ಏಯಾನ್ ಮಾರ್ಗನ್ ಲೋಪಗಳನ್ನು ಸರಿಪಡಿಸಿ ಗೆಲುವಿನ ಹಾದಿಯಲ್ಲಿ ತಂಡವನ್ನು ಕರೆದೊಯ್ಯಲು ಪ್ರಯತ್ನಿಸಲಿದ್ದಾರೆ.

ತಂಡದ ಆಲ್‌ರೌಂಡರ್ ಆ್ಯಂಡ್ರೆ ರಸೆಲ್ ಡೆತ್ ಓವರ್‌ಗಳಲ್ಲಿ ಬೌಲಿಂಗ್ ಮಾಡುವ ಹೊಸ ಹೊಣೆಯನ್ನು ಹೊತ್ತುಕೊಂಡಿದ್ದು ಯಶಸ್ಸು ಸಾಧಿಸಿದ್ದಾರೆ. ಎರಡು ಪಂದ್ಯಗಳಲ್ಲಿ ಒಟ್ಟು ಆರು ವಿಕೆಟ್ ಉರುಳಿಸಿದ್ದಾರೆ. ಆದರೆ ಬ್ಯಾಟಿಂಗ್‌ನಲ್ಲಿ ಅವರಿಂದ ನಿರೀಕ್ಷಿತ ಸಾಮರ್ಥ್ಯ ಕಂಡುಬರುತ್ತಿಲ್ಲ. ಉಪನಾಯಕ ದಿನೇಶ್ ಕಾರ್ತಿಕ್ ಕೂಡ ವೈಫಲ್ಯ ಕಂಡಿದ್ದಾರೆ. ಹೀಗಾಗಿ ಈಗ ಒತ್ತಡದಲ್ಲಿದ್ದಾರೆ. ನಿತೀಶ್ ರಾಣಾ ಅವರು ಅಮೋಘ ಬ್ಯಾಟಿಂಗ್ ಮಾಡಿದ್ದು ಅವರ ಆರಂಭಿಕ ಜೊತೆಗಾರ ಶುಭಮನ್ ಗಿಲ್ ಗಮನ ಸೆಳೆಯಲು ವಿಫಲರಾಗಿದ್ದಾರೆ.

ಯಾವುದೇ ಬೌಲರ್‌ಗಳನ್ನು ನಿರ್ದಯವಾಗಿ ದಂಡಿಸಬಲ್ಲ ಬ್ಯಾಟಿಂಗ್ ಪಡೆ ಆರ್‌ಸಿಬಿಯಲ್ಲಿದೆ. ವಿರಾಟ್ ಕೊಹ್ಲಿ, ಎಬಿ ಡಿವಿಲಿಯರ್ಸ್, ಗ್ಲೆನ್ ಮ್ಯಾಕ್ಸ್‌ವೆಲ್, ದೇವದತ್ತ ಪಡಿಕ್ಕಲ್ ಮುಂತಾದವರನ್ನು ನಿಯಂತ್ರಿಸಲು ಕುಲದೀಪ್ ಯಾದವ್ ಮತ್ತು ಹರಭಜನ್ ಸಿಂಗ್ ಬೆವರು ಸುರಿಸಬೇಕಾದೀತು. ಆರ್‌ಸಿಬಿ ಬೌಲರ್‌ಗಳಾದ ಶಹಬಾಜ್ ಅಹಮ್ಮದ್ ಮತ್ತು ಹರ್ಷಲ್ ಪಟೇಲ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಮುಂಬೈ ಮತ್ತು ಸನ್‌ರೈಸರ್ಸ್ ತಂಡಗಳನ್ನು ನಿಯಂತ್ರಿಸುವಲ್ಲಿ ಇವರಿಬ್ಬರು ಪ್ರಮುಖ ಪಾತ್ರ ವಹಿಸಿದ್ದರು.

ಬೆಂಗಳೂರು ಬಳಗ ಸೇರಿದ ಸ್ಯಾಮ್ಸ್: ಆಸ್ಟ್ರೇಲಿಯಾದ ಆಲ್‌ರೌಂಡರ್ ಡ್ಯಾನಿಯಲ್ ಸ್ಯಾಮ್ಸ್ ಶನಿವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬಯೊಬಬಲ್ ಸೇರಿಕೊಂಡರು. ಕೋವಿಡ್–19 ಸೋಂಕಿಗೆ ಒಳಗಾಗಿದ್ದ ಅವರು ಗುಣಮುಖರಾದ ನಂತರ ಒಂದು ವಾರದಲ್ಲಿ ಎರಡು ಬಾರಿ ಆರ್‌ಟಿ–ಪಿಸಿಆರ್ ಪರೀಕ್ಷೆಗೆ ಒಳಗಾಗಿದ್ದರು. ಎರಡೂ ಪರೀಕ್ಷೆಗಳ ವರದಿ ನೆಗೆಟಿವ್ ಬಂದ ಕಾರಣ ತಂಡ ಸೇರಿದ್ದಾರೆ.

ಡೆಲ್ಲಿ –ಪಂಜಾಬ್ ಮುಖಾಮುಖಿ: ಭಾನುವಾರ ರಾತ್ರಿ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯಲಿರುವ ಮತ್ತೊಂದು ಹಣಾಹಣಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಪಂಜಾಬ್ ಕಿಂಗ್ಸ್ ತಂಡಗಳು ಮುಖಾಮುಖಿಯಾಗಲಿದ್ದು ಎರಡೂ ತಂಡಗಳಲ್ಲಿ ಸ್ಫೋಟಕ ಬ್ಯಾಟ್ಸ್‌ಮನ್‌ಗಳು ಮತ್ತು ಪರಿಣಾಮಕಾರಿ ಬೌಲರ್‌ಗಳು ಇರುವುದರಿಂದ ಪಂದ್ಯ ರೋಮಾಂಚಕಾರಿಯಾಗುವ ನಿರೀಕ್ಷೆ ಇದೆ.

ಮುಖಾಮುಖಿ ಪಂದ್ಯಗಳು 26

ಕೋಲ್ಕತ್ತ ಗೆಲುವು	14
ಬೆಂಗಳೂರು ಜಯ	12

	ಗರಿಷ್ಠ ಮೊತ್ತ	ಕನಿಷ್ಠ ಮೊತ್ತ
ಕೋಲ್ಕತ್ತ	222	84
ಬೆಂಗಳೂರು	213	49

ಪಂದ್ಯ ಆರಂಭ ಮಧ್ಯಾಹ್ನ 3.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಡಿಸೆಂಬರ್‌ನಲ್ಲಿ ರಣಜಿ ಟೂರ್ನಿ

ನವದೆಹಲಿ (ಪಿಟಿಐ): ದೇಶಿ ಕ್ರಿಕೆಟ್ ಟೂರ್ನಿಗಳನ್ನು ಸೆಪ್ಟೆಂಬರ್ ತಿಂಗಳಲ್ಲಿ ಆರಂಭಿಸಲು ನಿರ್ಧರಿಸಿರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಡಿಸೆಂಬರ್‌ನಲ್ಲಿ ರಣಜಿ ಟ್ರೋಫಿ ಟೂರ್ನಿಯನ್ನು ಆಯೋಜಿಸಲು ತೀರ್ಮಾನಿಸಿದೆ. ಸೈಯದ್ ಮುಷ್ತಾಕ್ ಅಲಿ ಟಿ20 ಟೂರ್ನಿಯೊಂದಿಗೆ ದೇಶಿ ಕ್ರಿಕೆಟ್‌ಗೆ ಚಾಲನೆ ಸಿಗಲಿದೆ.

ಕೋವಿಡ್–19ರಿಂದಾಗಿ ಕಳೆದ ವರ್ಷ ರಣಜಿ ಟ್ರೋಫಿ ಟೂರ್ನಿಯನ್ನು ರದ್ದು ಮಾಡಲಾಗಿತ್ತು. ಈ ವರ್ಷ ದುಲೀಪ್ ಟ್ರೋಫಿ, ದೇವಧರ್ ಟ್ರೋಫಿ ಮತ್ತು ಇರಾನಿ ಕಪ್ ಟೂರ್ನಿಗಳನ್ನು ಕೈಬಿಡಲು ನಿರ್ಧರಿಸಲಾಗಿದೆ. ಮಹಿಳೆಯರ ಐದು ಟೂರ್ನಿಗಳನ್ನು ಕೂಡ ನಡೆಸದೇ ಇರಲು ನಿರ್ಧರಿಸಲಾಗಿದೆ.

ಶುಕ್ರವಾರ ವರ್ಚುವಲ್ ಆಗಿ ನಡೆದ ಅಪೆಕ್ಸ್ ಸಮಿತಿಯ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದಿದ್ದು ತಾತ್ಕಾಲಿಕ ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗಿದೆ. 23 ವರ್ಷದೊಳಗಿನ ಪುರುಷ ಮತ್ತು ಮಹಿಳೆಯರ ಟೂರ್ನಿಗಳನ್ನು ಮತ್ತು 19 ವರ್ಷದೊಳಗಿನವರ ಟೂರ್ನಿಯನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಈ ಟೂರ್ನಿಗಳು ಕಳೆದ ವರ್ಷ ನಡೆದಿರಲಿಲ್ಲ.

ಸೆಪ್ಟೆಂಬರ್ ತಿಂಗಳಲ್ಲಿ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ, ನವೆಂಬರ್‌ನಲ್ಲಿ ವಿಜಯ್ ಹಜಾರೆ ಏಕದಿನ ಟೂರ್ನಿ, ಡಿಸೆಂಬರ್‌ನಲ್ಲಿ ರಣಜಿ ಟ್ರೋಫಿ ಪ್ರಥಮ ದರ್ಜೆ ಟೂರ್ನಿ ನಡೆಯಲಿದೆ. 23 ವರ್ಷದೊಳಗಿನ ಪುರುಷರ ಏಕದಿನ ಟೂರ್ನಿ ಅಕ್ಟೋಬರ್‌ನಲ್ಲಿ, ಸಿ.ಕೆ.ನಾಯ್ಡು ಟ್ರೋಫಿ ಟೂರ್ನಿ ಡಿಸೆಂಬರ್‌ನಲ್ಲಿ, 19 ವರ್ಷದೊಳಗಿನ ಬಾಲಕರ ವಿನೂ ಮಂಕಡ್ ಏಕದಿನ ಟೂರ್ನಿ ಅಕ್ಟೋಬರ್‌ನಲ್ಲಿ, ಏಕದಿನ ಚಾಲೆಂಜರ್ ಮತ್ತು ಕೂಚ್ ಬೆಹಾರ್ ಟೂರ್ನಿ ನವೆಂಬರ್‌ನಲ್ಲಿ ನಡೆಯಲಿದೆ. 16 ವರ್ಷದೊಳಗಿನ ಬಾಲಕರ ವಿಜಯ್ ಮರ್ಚಂಟ್ ಟ್ರೋಫಿ ಅಕ್ಟೋಬರ್‌ನಿಂದ ಡಿಸೆಂಬರ್ ವರೆಗೆ ನಡೆಯಲಿದೆ.

ಮಹಿಳೆಯರ ಟಿ20 ಲೀಗ್ ಅಕ್ಟೋಬರ್‌ನಲ್ಲಿ, ಏಕದಿನ ಲೀಗ್ ನವೆಂಬರ್‌ನಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

ದಾಖಲೆ ಬರೆದ ಮೀರಾಗೆ ಕಂಚು

ಮೀರಾಬಾಯಿ

ತಾಷ್ಕಂಟ್ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್ ಮೀರಾಬಾಯಿ ಚಾನು ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ ವಿಶ್ವ ದಾಖಲೆ ಬರೆದು ಇಲ್ಲಿ ನಡೆಯುತ್ತಿರುವ ಏಷ್ಯನ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದರು. ಒಟ್ಟು 205 ಕೆಜಿ ಭಾರ ಎತ್ತಿದ ಅವರು ಒಲಿಂಪಿಕ್ಸ್ ಟಿಕೆಟ್ ಕೂಡ ಗಿಟ್ಟಿಸಿಕೊಂಡರು.

ಸ್ನ್ಯಾಚ್‌ನಲ್ಲಿ 86 ಕೆಜಿ ಎತ್ತಿದ ಚಾನು ಅವರು ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ 119 ಕೆಜಿ ಎತ್ತಿದರು. ಈ ಹಿಂದಿನ ವಿಶ್ವ ದಾಖಲೆ 118 ಕೆಜಿ ಆಗಿತ್ತು. ಕಳೆದ ವರ್ಷ ನಡೆದ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ 49 ಕೆಜಿ ವಿಭಾಗದಲ್ಲಿ 203 ಕೆಜಿ ಎತ್ತಿದ್ದ ಅವರು ಜೀವನಶ್ರೇಷ್ಠ ಸಾಧನೆ ಮಾಡಿದ್ದರು. ಈಗ ಅದನ್ನೂ ಉತ್ತಮಪಡಿಸಿಕೊಂಡಿದ್ದಾರೆ.

ಸ್ನ್ಯಾಚ್‌ನಲ್ಲಿ ವಿಶ್ವ ದಾಖಲೆ ಬರೆದ ಚೀನಾದ ಹೊವ್ ಜಿಹುಯಿ ಒಟ್ಟು 213 ಕೆಜಿ ಎತ್ತಿ ಚಿನ್ನದ ಪದಕ ಗಳಿಸಿದರು. ಜಿಯಾಂಗ್ ಹುಯಿವಾ 207 ಕೆಜಿ ಸಾಮರ್ಥ್ಯದೊಂದಿಗೆ ಬೆಳ್ಳಿ ಪದಕ ಗಳಿಸಿದರು.

ಹಾಕಿ: ತರಬೇತಿ ಪುನರಾರಂಭ

ಬೆಂಗಳೂರು: ಟೋಕಿಯೊ ಒಲಿಂಪಿಕ್ಸ್‌ಗೆ ಸಜ್ಜಾಗುತ್ತಿರುವ ಭಾರತ ಮಹಿಳಾ ಹಾಕಿ ತಂಡದ ಆಟಗಾರ್ತಿಯರು ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರಕ್ಕೆ ಭಾನುವಾರ ಆಗಮಿಸಲಿದ್ದಾರೆ. ತರಬೇತಿ ಆರಂಭಕ್ಕೂ ಮೊದಲು 25 ಆಟಗಾರ್ತಿಯರ ತಂಡವು ಕಡ್ಡಾಯ ಕ್ವಾರಂಟೈನ್‌ಗೆ ಒಳಗಾಗಬೇಕಿದೆ.

ಟಿ20 ವಿಶ್ವಕಪ್: ಪಾಕ್ ಆಟಗಾರರಿಗೆ ವೀಸಾ

ನವದೆಹಲಿ (ಪಿಟಿಐ): ಭಾರತದಲ್ಲಿ ಅಕ್ಟೋಬರ್ ತಿಂಗಳಲ್ಲಿ ನಡೆ ಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಪಾಕಿಸ್ತಾನ ತಂಡದ ಆಟಗಾರರಿಗೆ ವೀಸಾ ನೀಡಲು ಸರ್ಕಾರ ಒಪ್ಪಿಕೊಂಡಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಶುಕ್ರವಾರ ನಡೆದ ಅಪೆಕ್ಸ್ ಸಮಿತಿ ಸಭೆಯಲ್ಲಿ ಮಂಡಳಿಯ ಕಾರ್ಯದರ್ಶಿ ಜಯ್ ಶಾ ಈ ವಿಷಯವನ್ನು ಘೋಷಿಸಿದ್ದಾರೆ. ದೇಶದ ಒಂಬತ್ತು ಕ್ರೀಡಾಂಗಣಗಳಲ್ಲಿ ಪಂದ್ಯಗಳು ನಡೆಯಲಿದ್ದು ಅಹಮದಾಬಾದ್‌ನ ನರೇಂದ್ರ ಮೋದಿ ಅಂಗಣ ಫೈನಲ್ ಹಣಾಹಣಿಗೆ ಆತಿಥ್ಯ ವಹಿಸಲಿದೆ ಎಂದು ಶಾ ತಿಳಿಸಿದ್ದಾರೆ.

ಬೆಂಗಳೂರು, ದೆಹಲಿ, ಮುಂಬೈ, ಚೆನ್ನೈ, ಕೋಲ್ಕತ್ತ, ಹೈದರಾಬಾದ್, ಧರ್ಮಶಾಲಾ ಮತ್ತು ಲಖನೌದಲ್ಲಿ ಪಂದ್ಯಗಳು ನಡೆಯಲಿವೆ.

ಮುಂಬೈಗೆ ಮಣಿದ ಸನ್‌ರೈಸರ್ಸ್

ಚೆನ್ನೈ (ಪಿಟಿಐ): ವೇಗ ಮತ್ತು ಸ್ಪಿನ್ ದಾಳಿಯ ಮೂಲಕ ಎದುರಾಳಿಗಳನ್ನು ಕಂಗೆಡಿಸಿದ ಮುಂಬೈ ಇಂಡಿಯನ್ಸ್ ತಂಡ ಮತ್ತೊಂದು ಅಮೋಘ ಜಯ ಸಾಧಿಸಿತು. ಸತತ ಮೂರು ಪಂದ್ಯಗಳನ್ನು ಸೋತ ಸನ್‌ರೈಸರ್ಸ್ ಹೈದರಾಬಾದ್ ನಿರಾಸೆಗೆ ಒಳಗಾಯಿತು.

ಶನಿವಾರ ರಾತ್ರಿ ಇಲ್ಲಿ ನಡೆದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ 13 ರನ್‌ಗಳಿಂದ ಡೇವಿಡ್ ವಾರ್ನರ್ ಬಳಗದ ವಿರುದ್ಧ ಗೆಲುವು ಸಾಧಿಸಿತು.

ರೋಹಿತ್ ಶರ್ಮಾ

151 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಪರ ಆರಂಭಿಕ ಜೋಡಿ ವಾರ್ನರ್ (36; 34ಎ, 2 ಬೌಂ, 2 ಸಿ) ಮತ್ತು ಜಾನಿ ಬೆಸ್ಟೊ (43; 22ಎ, 3 ಬೌಂ, 4 ಸಿ) 67 ರನ್‌ಗಳನ್ನು ಸೇರಿಸಿದ್ದರು. ಇವರಿಬ್ಬರ ವಿಕೆಟ್ ಉರುಳಿದ ನಂತರ ಯಾರಿಗೂ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲು ಆಗಲಿಲ್ಲ. ಮನೀಷ್ ಪಾಂಡೆ ಸೇರಿದಂತೆ ಏಳು ಮಂದಿ ಎರಡಂಕಿ ಮೊತ್ತವನ್ನೂ ದಾಟಲಾಗದೆ ವಾಪಸಾದರು. ವಿಜಯಶಂಕರ್ (28) ಅವರ ಏಕಾಂಗಿ ಹೋರಾಟಕ್ಕೆ ಫಲ ಸಿಗಲಿಲ್ಲ.

ಮಿಂಚಿದ ಕ್ವಿಂಟನ್–ರೋಹಿತ್: ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಮುಂಬೈ ಪರ ಆರಂಭಿಕ ಜೋಡಿ ಕ್ವಿಂಟನ್ ಡಿಕಾಕ್ (40; 39 ಎಸೆತ, 5 ಬೌಂಡರಿ) ಮತ್ತು ರೋಹಿತ್ ಶರ್ಮಾ (32; 25 ಎ, 2 ಬೌಂ, 2 ಸಿಕ್ಸರ್) ಮೊದಲ ವಿಕೆಟ್‌ಗೆ 33 ಎಸೆತಗಳಲ್ಲಿ 55 ರನ್ ಸೇರಿಸಿದರು. ಎರಡು ಓವರ್‌ಗಳ ಅಂತರದಲ್ಲಿ ಇವರಿಬ್ಬರು ವಾಪಸಾದರು. ನಂತರ ಬಂದ ಬ್ಯಾಟ್ಸ್‌ಮನ್‌ಗಳು ರನ್ ಗಳಿಸಲು ಪರದಾಡಿದರು. ಐದನೇ ಕ್ರಮಾಂಕದ ಕೀರನ್ ಪೊಲಾರ್ಡ್ (35; 22 ಎ, 1 ಬೌಂ, 3 ಸಿ) ಅಂತಿಮ ಓವರ್‌ಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿ ತಂಡ ಸವಾಲಿನ ಮೊತ್ತ ಗಳಿಸಲು ನೆರವಾದರು.

ಸ್ಕೋರ್‌ಕಾರ್ಡ್

ಮುಂಬೈ ಇಂಡಿಯನ್ಸ್ 5ಕ್ಕೆ 150 (20 ಓವರ್‌ಗಳಲ್ಲಿ)

ಕ್ವಿಂಟನ್ ಡಿ ಕಾಕ್ ಸಿ ಜೆ.ಸುಚಿತ್ (ಬದಲಿ) ಮುಜೀಬ್ ಉರ್ ರಹಮಾನ್	40
ರೋಹಿತ್ ಶರ್ಮಾ ಸಿ ವಿರಾಟ್ ಸಿಂಗ್ ಬಿ ವಿಜಯಶಂಕರ್	32
ಸೂರ್ಯಕುಮಾರ್ ಯಾದವ್ ಸಿ ಮತ್ತು ಬಿ ವಿಜಯಶಂಕರ್	10
ಇಶಾನ್ ಕಿಶನ್ ಸಿ ಜಾನಿ ಬೆಸ್ಟೊ ಬಿ ಮುಜೀಬ್ ಉರ್ ರಹಮಾನ್	12
ಕೀರನ್ ಪೊಲಾರ್ಡ್ ಔಟಾಗದೆ	35
ಹಾರ್ದಿಕ್ ಪಾಂಡ್ಯ ಸಿ ವಿರಾಟ್ ಸಿಂಗ್ ಬಿ ಖಲೀಲ್ ಅಹಮ್ಮದ್	7
ಕೃಣಾಲ್ ಪಾಂಡ್ಯ ಔಟಾಗದೆ	3
ಇತರೆ (ಲೆಗ್ ಬೈ 6, ನೋಬಾಲ್ 1, ವೈಡ್ 4)	11

ವಿಕೆಟ್ ಪತನ: 1-55 (ರೋಹಿತ್ ಶರ್ಮಾ, 6.3), 2-71 (ಸೂರ್ಯಕುಮಾರ್, 8.3), 3-98 (ಕ್ವಿಂಟನ್ ಡಿಕಾಕ್, 13.5), 4-114 (ಇಶಾನ್ ಕಿಶನ್, 16.5), 5-131 (ಹಾರ್ದಿಕ್ ಪಾಂಡ್ಯ, 18.4)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–45–0, ಖಲೀಲ್ ಅಹಮ್ಮದ್ 4–0–24–1, ಮುಜೀಬ್ ಉರ್ ರಹಮಾನ್ 4–0–29–2, ಅಭಿಷೇಕ್ ಶರ್ಮಾ 1–0–5–0, ವಿಜಯಶಂಕರ್ 3–0–19–2, ರಶೀದ್ ಖಾನ್ 4–0–22–0

ಸನ್‌ರೈಸರ್ಸ್ ಹೈದರಾಬಾದ್ 137 (19.4 ಓವರ್‌ಗಳಲ್ಲಿ)

ಡೇವಿಡ್ ವಾರ್ನರ್ ರನ್ ಔಟ್ (ಹಾರ್ದಿಕ್ ಪಾಂಡ್ಯ)	36
ಜಾನಿ ಬೆಸ್ಟೊ ಹಿಟ್ ವಿಕೆಟ್ ಬಿ ಕೃಣಾಲ್ ಪಾಂಡ್ಯ	43
ಮನೀಷ್ ಪಾಂಡೆ ಸಿ ಕೀರನ್ ಪೊಲಾರ್ಡ್ ಬಿ ರಾಹುಲ್ ಚಾಹರ್	2
ವಿರಾಟ್ ಸಿಂಗ್ ಸಿ ಸೂರ್ಯಕುಮಾರ್ ಯಾದವ್ ಬಿ ರಾಹುಲ್ ಚಾಹರ್	11
ವಿಜಯಶಂಕರ್ ಸಿ ಸೂರ್ಯಕುಮಾರ್ ಯಾದವ್ ಬಿ ಜಸ್‌ಪ್ರೀತ್ ಬೂಮ್ರಾ	28
ಅಭಿಷೇಕ್ ಶರ್ಮಾ ಸಿ ಆ್ಯಡಂ ಮಿಲ್ನೆ ಬಿ ರಾಹುಲ್ ಚಾಹರ್	2
ಅಬ್ದುಲ್ ಸಮದ್ ರನ್ ಔಟ್ (ಹಾರ್ದಿಕ್ ಪಾಂಡ್ಯ)	7
ರಶೀದ್ ಖಾನ್ ಎಲ್‌ಬಿಡಬ್ಲ್ಯು ಬಿ ಟ್ರೆಂಟ್ ಬೌಲ್ಟ್	0
ಭುವನೇಶ್ವರ್ ಕುಮಾರ್ ಬಿ ಟ್ರೆಂಟ್ ಬೌಲ್ಟ್	1
ಮುಜೀಬ್ ಉರ್ ರಹಮಾನ್ ಔಟಾಗದೆ	1
ಖಲೀಲ್ ಅಹಮ್ಮದ್ ಬಿ ಟ್ರೆಂಟ್ ಬೌಲ್ಟ್	1
ಇತರೆ (ಲೆಗ್ ಬೈ 3, ವೈಡ್ 2)	5

ವಿಕೆಟ್ ಪತನ: 1-67 (ಜಾನಿ ಬೆಸ್ಟೊ, 7.2), 2-71 (ಮನೀಷ್ ಪಾಂಡೆ, 8.6), 3-90 (ಡೇವಿಡ್ ವಾರ್ನರ್, 11.3), 4-102 (ವಿರಾಟ್ ಸಿಂಗ್, 14.1), 5-104 (ಅಭಿಷೇಕ್ ಶರ್ಮಾ, 14.5), 6-129 (ಅಬ್ದುಲ್ ಸಮದ್, 17.4), 7-130 (ರಶೀದ್ ಖಾನ್, 17.6), 8-134 (ವಿಜಯಶಂಕರ್, 18.5), 9-135 (ಭುವನೇಶ್ವರ್ ಕುಮಾರ್, 19.1), 10-137 (ಖಲೀಲ್ ಅಹಮ್ಮದ್, 19.4).

ಬೌಲಿಂಗ್: ಟ್ರೆಂಟ್ ಬೌಲ್ಟ್ 3.4–0–28–3, ಜಸ್‌ಪ್ರೀತ್ ಬೂಮ್ರಾ 4–0–14–1, ಆ್ಯಡಂ ಮಿಲ್ನೆ 3–0–33–0, ಕೃಣಾಲ್ ಪಾಂಡ್ಯ 3–0–30–1, ರಾಹುಲ್ ಚಾಹರ್ 4–0–19–3, ಕೀರನ್ ಪೊಲಾರ್ಡ್ 2–0–10–0

ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 13 ರನ್‌ಗಳ ಜಯ

ರಿಜಿಜುಗೆ ಸೋಂಕು

ಕಿರಣ್ ರಿಜಿಜು

ನವದೆಹಲಿ (ಪಿಟಿಐ): ಕೇಂದ್ರ ಕ್ರೀಡಾ ಸಚಿವ ಕಿರಣ್ ರಿಜಿಜು ಅವರಿಗೆ ಕೋವಿಡ್–19 ಇರುವುದು ದೃಢಪಟ್ಟಿದೆ. ಟ್ವಿಟರ್‌ನಲ್ಲಿ ಈ ವಿಷಯ ತಿಳಿಸಿರುವ ಅವರು ಸಂಪೂರ್ಣ ಆರೋಗ್ಯವಾಗಿದ್ದೇನೆ ಎಂದಿದ್ದಾರೆ.

'ಸತತ ಪರೀಕ್ಷೆಗಳ ನಂತರ ಕೋವಿಡ್ ಇರುವುದು ಖಚಿತಪಟ್ಟಿದೆ. ವೈದ್ಯರ ಸಲಹೆಯನ್ನು ಪಾಲಿಸುತ್ತಿದ್ದು, ಕ್ವಾರಂಟೈನ್ ಆಗಿದ್ದೇನೆ. ನನ್ನ ಸಂಪರ್ಕಕ್ಕೆ ಬಂದವರು ಪರೀಕ್ಷೆಗೆ ಒಳಗಾಗಬೇಕು' ಎಂದು ಟ್ವಿಟರ್‌ನಲ್ಲಿ ರಿಜಿಜು ಬರೆದುಕೊಂಡಿದ್ದಾರೆ.

ಟೆನಿಸ್: ಏಷ್ಯಾ–ಒಷಾನಿಯಾ ಗುಂಪಿನಲ್ಲೇ ಉಳಿದ ಭಾರತ

ಜುರ್ಮಲಾ, ಲಾಟ್ವಿಯಾ (ಪಿಟಿಐ): ಭಾರತದ ಅಂಕಿತಾ ರೈನಾ ಅವರು ಲಾಟ್ವಿಯಾ ಎದುರು ನಡೆಯುತ್ತಿರುವ ಬಿಲಿ ಜೀನ್ ಕಿಂಗ್ ಕಪ್ ವಿಶ್ವ ಗುಂಪಿನ ಪ್ಲೇ ಆಫ್ ಟೆನಿಸ್ ಟೂರ್ನಿಯ ಮೂರನೇ ಸಿಂಗಲ್ಸ್ ಪಂದ್ಯದಲ್ಲಿ ಸೋಲು ಅನುಭವಿಸಿದರು. ಗೆಲ್ಲಲೇಬೇಕಿದ್ದ ಈ ಪಂದ್ಯದಲ್ಲಿ ಭಾರತದ ಆಟಗಾರ್ತಿಯು 0–6, 6–7ರಿಂದ ಅನಸ್ತೇಸಿಯಾ ಸೆವಾಸ್ಟೊವಾ ಎದುರು ಎಡವಿದರು. ಇದರೊಂದಿಗೆ ಟೂರ್ನಿಯಲ್ಲಿ 0–3 ಹಿನ್ನಡೆ ಕಂಡ ಭಾರತ ತಂಡವು ಏಷ್ಯಾ ಒಷಾನಿಯಾ ಗುಂಪಿನಲ್ಲೇ ಉಳಿಯಿತು.

ಟೂರ್ನಿಯ ಇತಿಹಾಸದಲ್ಲಿ ಭಾರತ ಮೊದಲ ಬಾರಿಗೆ ಪ್ಲೇ ಆಫ್‌ನಲ್ಲಿ ಆಡುವ ಅವಕಾಶ ಗಿಟ್ಟಿಸಿತ್ತು.

ಕರ್ಮನ್ ಕೌರ್ ಥಂಡಿ ಅವರು ಶುಕ್ರವಾರ ರಾತ್ರಿ ನಡೆದ ಸಿಂಗಲ್ಸ್ ಹಣಾಹಣಿಯಲ್ಲಿ ಅವರು 4–6, 0–6ರಿಂದ ಅನಸ್ತೇಸಿಯಾ ಸೆವಾಸ್ಟೊವಾ ಎದುರು ಎಡವಿದ್ದರು.

ಏಷ್ಯನ್ ಕುಸ್ತಿ: ರವಿ ದಹಿಯಾಗೆ ಚಿನ್ನ

ರವಿ ದಹಿಯಾ

ಆಲ್ಮಾಟಿ, ಕಜಕಸ್ತಾನ (ಪಿಟಿಐ): ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ ಭಾರತದ ಪೈಲ್ವಾನ್ ರವಿ ದಹಿಯಾ, ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಆದರೆ ಮೊಣಕೈ ಗಾಯದ ಹಿನ್ನಲೆಯಲ್ಲಿ ಫೈನಲ್‌ನಿಂದ ಹಿಂದೆ ಸರಿದ ಬಜರಂಗ್ ಪೂನಿಯಾ ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು.

ರವಿ, ಈ ಆವೃತ್ತಿಯಲ್ಲಿ ಫ್ರೀಸ್ಟೈಲ್ ವಿಭಾಗದಲ್ಲಿ ಭಾರತಕ್ಕೆ ಮೊದಲ ಚಿನ್ನ ಗಳಿಸಿಕೊಟ್ಟರು. 57 ಕೆಜಿ ವಿಭಾಗದ ಫೈನಲ್‌ನಲ್ಲಿ ಅವರು ಇರಾನ್‌ನ ಅಲಿರೆಜಾ ನೊರ್ಸತೊಲಾಹ್ ಅವರನ್ನು ಸುಲಭವಾಗಿ ಮಣಿಸಿದರು.

65 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಬಜರಂಗ್ ಅವರು ಕ್ವಾರ್ಟರ್‌ಫೈನಲ್ ಪಂದ್ಯದಲ್ಲೇ ಗಾಯದಿಂದ ಬಳಲಿದ್ದರು.

ಚಿನ್ನದ ಪದಕದ ಸುತ್ತಿನಲ್ಲಿ ಅವರು, ಜಪಾನ್‌ನ ತಕುಟೊ ಒಟೊಗುರಾ ಎದುರು ಸೆಣಸಬೇಕಿತ್ತು.

ಸೆಮಿಫೈನಲ್‌ನಲ್ಲಿ ಬಜರಂಗ್, ಮಂಗೋಲಿಯಾದ ಬಿಲ್ಗೂನ್ ಸರ್ಮಾಂದಕ್ ಅವರನ್ನು ಮಣಿಸಿದ್ದರು.

70 ಕೆಜಿ ವಿಭಾಗದಲ್ಲಿ ಕರಣ್, ನರಸಿಂಗ್ ಪಂಚಮ್ ಯಾದವ್ (79 ಕೆಜಿ) ಹಾಗೂ ಸತ್ಯವರ್ತ್ ಕಡಿಯಾನ್ (97 ಕೆಜಿ ವಿಭಾಗ) ಅವರು ಕಂಚಿನ ಪದಕಗಳಿಗೆ ಮುತ್ತಿಟ್ಟರು.

ಇದರೊಂದಿಗೆ ಶನಿವಾರ ಕಣದಲ್ಲಿದ್ದ ಭಾರತದ ಐದೂ ಮಂದಿ ಪೈಲ್ವಾನರು ಪದಕಗಳನ್ನು ಕೊರಳಿಗೇರಿಸಿಕೊಂಡರು.